FINANCIAL BUSINESS

Discussion and voting on Demands for grants for 83-84

Demand No. 31 Urban Development, Demand No. 32 compensation and grants to corporation and Municipalties Demand No. 26, Tourism Information and Publicity.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ನಾನು ನಗರಾಭಿವೃದ್ಧಿ ಬೇಡಿಕೆಯ ಮೇಲೆ ಮಾತನಾಡುತ್ತೇನೆ. ಮುಖ್ಯವಾಗಿ ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಸಣ್ಣ ನಗರವಾಗಲೀ, ದೊಡ್ಡ ನಗರವಾಗಲೀ ಚೊಕ್ಕಟವಾಗಿಡತಕ್ಕ ಜವಾಬ್ದಾರಿ ಈ ಇಲಾಖೆಯ ಮೇಲಿದೆ. ಬೆಂಗಳೂರಿನಲ್ಲಿ, ರಾಜ್ಯ ರಾಜಧಾನಿಯಲ್ಲಿ ಈ ವ್ಯವಸ್ಥೆ ಅತಿಮುಖ್ಯವಾಗಿರಬೇಕು. ಬೆಂಗಳೂರು ನಗರ ವ್ಯವಸ್ಥಿತವಾದ ರೀತಿಯಲ್ಲಿ ಬೆಳೆಯಬೇಕು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದು ಸರಿಯಾಗಿ ಬೆಳೆದಿಲ್ಲ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಅನೇಕರು ಮಾತನಾಡಿದ್ದಾರೆ. ಹಿಂದೆ ಒಂದು ಕಾಲದಲ್ಲಿ ಇದು ಒಂದು ರೀತಿಯಾಗಿತ್ತು, ಈಗ ಮಧ್ಯಮ ಆದಾಯದವರು ಮನೆಗಳನ್ನು ಕಟ್ಟುವುದಕ್ಕೆ ಮುಂದೆ ಬಂದು ಅನೇಕ ಕಡೆಗಳಲ್ಲಿ ಮನೆಗಳು ಆಗಿವೆ. ದೊಡ್ಡ ದೊಡ್ಡ ನಗರಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ಬರುತ್ತವೆ, ಅನೇಕ ಶ್ರೀಮಂತರು ಇತ್ತೀಚೆಗೆ ಇಲ್ಲಿಗೆ ಬಂದು ನೆಲಸಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇನ್ನೊಂದು ಕಡೆಗಳಲ್ಲಿ ಬಡವರು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ಜೋಪಡಿಗಳನ್ನು ಹಾಕಿಕೊಂಡು ಜೀವನ ಮಾಡುತ್ತಿದ್ದಾರೆ. ಜೀವನದಲ್ಲಿ ಈ ರೀತಿ ತಾರತಮ್ಯ ಹೆಚ್ಚಾಗಿ ಇರುವುದನ್ನು ನಾವು ಬಾಂಬೆ ಮುಂತಾದ ದೊಡ್ಡ ನಗರಗಳಲ್ಲಿ ನೋಡುತ್ತೇವೆ ಅಲ್ಲಿರತಕ್ಕ ಬಂಡವಾಳ ಶಾಹಿಗಳು ಸಮಾಜದಲ್ಲಿ ಒಂದು ರೀತಿಯ ಜೀವನ ಮಾಡುತ್ತಾರೆ. ಆದರೆ ಬಡವರ ಜೀವನ ಒಂದು ರೀತಿಯಲ್ಲಿರುತ್ತದೆ. ಈ ಒಂದು ಅಂತರವನ್ನು ಸರಿಪಡಿಸತಕ್ಕ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ನಾನು ಈ ಒಂದು ಎಕಾಲಬಿಕಲ್ ಪಾಯಿಂಟ್ ಆಫ್ ವ್ಯೂ ಇಟ್ಟುಕೊಂಡು ಇದನ್ನು ಮಾತನಾಡುತ್ತಿಲ್ಲ, ಈ ಒಂದು ತಾರತಮ್ಯವನ್ನು ಸರಿಪಡಿಸುವುದಕ್ಕೆ ತಾವು ಸರಿಯಾದ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡಬೇಕು. ಈ ದಿಸೆಯಲ್ಲಿ ಹಲವಾರು ಸಂಸ್ಥೆಗಳು ಏನು ಇವೆ ಅವುಗಳು ಇದಕ್ಕೆ ಸಂಬಂಧಪಟ್ಟ ಯೊಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸ್ವಲ್ಪಮಟ್ಟಿಗಾದರೂ ಪ್ರಯತ್ನ ಮಾಡಿವೆಯೇ ಎಂದು ನಾವು ವಿಚಾರ ಮಾಡಬೇಕಾಗಿದೆ. ನಿಮ್ಮ ಶಾಖೆಯಲ್ಲಿ ಹಲವಾರು ಸಂಘ ಸಂಸ್ಥೆಗಳು ಸೇರಿಕೊಂಡಿವೆ. ಬೆಂಗಳೂರು ಸಿಟಿ ಕಾರ್ಪೊರೇಷನ್, ಮುನಿಸಿಪಾಲಿಟಿಗಳು, ಇನ್ನೊಂದು ಕಡೆ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ಸ್, ಮತ್ತೆ ಸ್ಲಂ ಕ್ಲಿಯರೆನ್ಸ್ ಬೋರ್ಡ್, ಕರ್ನಾಟಕ ವಾಟರ್ ಸಪ್ಲೈ ಬೋರ್ಡ್. ವಾಟರ್ ಸಪ್ಲೈ ಬೋರ್ಡ್ ಮುಂತಾದ ಸಂಸ್ಥೆಗಳೆಲ್ಲಾ ಸೇರಿಕೊಂಡಿವೆ. ಇವೆಲ್ಲವೂ ಮುಖ್ಯವೇ ಕಾಲದ ಮಿತಿ ಇರುವುದರಿಂದ ಇವೆಲ್ಲದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮ ಸ್ನೇಹಿತರಾದ ಮಾನ್ಯ ರಾಂದೇವ್ ಮುಂತಾದವರು ಬೆಂಗಳೂರು ಸಿಟಿ ಕಾರ್ಪೊರೇಷನ್ ಬಗ್ಗೆ ಮಾತನಾಡಿದರು. ನಾನೂ ಅದರ ಮೇಲೆ ಆಮೇಲೆ ಮಾತನಾಡುತ್ತೇನೆ. ಮೊದಲು ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಬೇಕಾಗಿದೆ ಇವತ್ತಿನ ದಿವಸ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯ ಗುರಿಗಳು ಏನು ಎಂಬುದನ್ನು ಹೇಳಿದ್ದೀರಿ. ಇದರಲ್ಲಿ ಹೇಳಿರುವಂತೆ ಮಾರ್ಪಾಟಾಗಿರುವಂಥ ಗುರಿಗಳನ್ನು ನೋಡಬೇಕಾಗಿದೆ. ಇದನ್ನು ತಾವು ಪ್ರಿಂಟ್ ಮಾಡಿ ಕೊಟ್ಟಿದ್ದೀರಿ. ಇದರಲ್ಲಿ ಹೀಗಿದೆ.

"The main functions of BDA are (i) Land acquisition, (ii) Planning and Area Development which includes planning of Roads and construction of bridges, slum

---

† ಈ ಚಿನ್ಹೆ ಸಂಬಂದ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

clearance, providing civic amenities, etc., (iii) Housing, both residential and industrial, (iv) Public electricity, etc., in Bangalore Metropolitan area on 'No Profit and No Loss' basis''.

ಇಷ್ಟು ನಿಮ್ಮ ಅಬ್ಜೆಕ್ಟೀವ್ ಎಂದು ಹೇಳಿದ್ದೀರಿ. ಆಮೇಲೆ ಇದನ್ನು ಕರೆಕ್ಷನ್ ಮಾಡಿ ಹೇಳಿದ್ದೀರಿ. ಅದು ಹೀಗಿದೆ.

''The main functions of the BDA are, it is a planning authority for Bangalore metropolitan area and also taken up development works such as formation of layouts and construction of houses.''

ಎಂದು ಮಾತ್ರ ಹೇಳಿದ್ದೀರಿ. ಇದರಲ್ಲಿ ಎರಡನೆಯದನ್ನು ಒಪ್ಪಿಕೊಂಡರೆ ಕೆಲವು ವಿಷಯಗಳನ್ನು ಕೈಬಿಟ್ಟಿದ್ದೀರಿ, ಕೆಲವನ್ನು ಬಹಳ ವಿಶಾಲ ಮಾಡಿದ್ದೀರಿ. ಕೈಬಿಟ್ಟಿರುವುದು ಎಂದರೆ, 'no profit no loss basis' ಎನ್ನುವುದನ್ನು ಕೈಬಿಟ್ಟಿದ್ದೀರಿ. ಎಂದರೆ ಇನ್ನು ಮೇಲೆ ಪ್ರಾಫಿಟ್ ಮೇಲೆ ಮಾಡಬೇಕು ಎನ್ನುವ ಅಭಿಪ್ರಾಯ ಇರುವ ಹಾಗೆ ಕಾಣುತ್ತದೆ. Main functions of the BDA. ಎಂದು ಹಾಕಿಬಿಟ್ಟು instead of that read this ಎಂದರೆ ಬೇರೆ ಏನು ಅರ್ಥ ವಾಗುತ್ತದೋ ಗೊತ್ತಿಲ್ಲ, ಬೇರೆ ಏನಾದರೂ ವ್ಯಾಖ್ಯಾನ ಇದ್ದರೆ ಹೇಳಿಬಿಡಿ. ಪ್ಲಾನ್ ಮಾತ್ರ ಮಾಡುತ್ತೀರಿ, ಯಾವ ರೀತಿ ಕಟ್ಟಡಗಳನ್ನು ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿದ್ದೀರಿ, ಇದರಿಂದ ಪ್ಲಾನ್ ಮಾತ್ರ ಮಾಡಿದರೆ ಸಾಕು ಎನ್ನುವ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗುತ್ತದೆ. ಇವೆಲ್ಲಾ ಕೆಲಸಗಳನ್ನು ಮಾಡಬೇಕು ಎಂದು ಇಟ್ಟುಕೊಂಡರೂ ಸಹ ಬಿ.ಡಿ.ಎ. ಈ ಎಲ್ಲಾ ಕೆಲಸಗಳನ್ನು ಮಾಡಿದೆಯೇ. ಈಗಿನ ಸರ್ಕಾರವನ್ನು ತೆಗಳುತ್ತಾ ಇದ್ದೇನೆ ಎಂದು ತಾವು ಭಾವಿಸಿ ಕೂಡದು, ತಾವು ಈಗತಾನೇ ಬಂದಿದ್ದೀರಿ. ಬಿ.ಡಿ.ಎ. ನಲ್ಲಿ ಮುಖ್ಯವಾಗಿ ಮಾಡಬೇಕಾಗಿರುವ ಕೆಲಸಗಳನ್ನು ಮಾಡಿಲ್ಲ ಎನ್ನುವುದು ನನ್ನ ಅನುಭವ. ಏಕೆಂದರೆ ನನಗೆ ಅಲ್ಲಿ ಹಿಂದೆ ಮೆಂಬರ್‌ಷಿಪ್ ಇತ್ತು, ನಂತರ ಮೆಂಬರ್‌ಷಿಪ್ ಕಿತ್ತುಹಾಕಿದರು ೧೦ ವರ್ಷಗಳಾಯಿತು, ಈಗ ಮತ್ತೆ ಮೆಂಬರ್ ಆಗಿದ್ದೇನೆ ನನ್ನ ಅನುಭವದ ಮಾತು ಏನೆಂದರೆ; ಮುಖ್ಯವಾಗಿ ಸಾಮಾನ್ಯ ಜನಗಳಿಗೆ ೨೦X೩೦ ಸೈಟುಗಳನ್ನು ಮಾಡಿಕೊಡುವುದು, ಹೆಚ್ಚು ಸೈಟುಗಳನ್ನು ಮಾಡಿ ಶ್ರೀಮಂತರಿಗೆ ದೊಡ್ಡ ದೊಡ್ಡವರಿಗೂ ಸಹ ೯೦X೧೦೦ ಸೈಟುಗಳನ್ನು ಮಾಡಲಿ, ಅವರೂ ಬದುಕಬೇಕಲ್ಲವೇ. ಆದಷ್ಟು ಸಾಮಾನ್ಯ ಜನರಿಗೆ ಬೇಕಾಗುವಂಥ ೩೦X೪೦, ೪೦X೬೦ ಸೈಟುಗಳನ್ನು ಮಾಡಿದರು. ಮೂಲಭೂತವಾಗಿ ಎಕನಾಮಿಕಲಿ ವೀಕರ್‌ಸೆಕ್ಷನ್‌ಗೆ ಸೈಟುಗಳನ್ನು ಕೊಡುವುದರ ಕಡೆ ಗಮನ ಹರಿಸಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇದನ್ನು ನಿಮ್ಮ ಅಂಕಿಅಂಶಗಳೂ ಸಹ ತೋರಿಸುತ್ತವೆ. ಇದರಲ್ಲಿ ನೀವು ಹೇಳಿದ್ದೀರಿ. ಪ್ಲಾನ್ ಟಾರ್ಗೆಟ್ ಏನಿತ್ತು ಅದಕ್ಕೂ ನೀವು ಕೊಟ್ಟಿರುವುದಕ್ಕೂ ಅಜಗಜಾಂತರ ವ್ಯತ್ಯಾಸ ವಿದೆ. ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಬಹಳ ಕಡಿಮೆ ಸೈಟುಗಳನ್ನು ಮಾಡಿದ್ದೀರಿ, ಇವತ್ತಿನ ಪ್ರಮಾಣದಲ್ಲಿ ಅವರಿಗೆ ಎಷ್ಟು ಬೇಕೋ ಅಷ್ಟನ್ನು ಮಾಡಿಲ್ಲ. ಶ್ರೀಮಂತರಿಗೆ ಕೊಡುವಂಥ ಸೈಟುಗಳನ್ನು ಜಾಸ್ತಿ ಮಾಡಿದಿರಿ, ಅದನ್ನು ಕಂಪೇರ್ ಮಾಡಿದರೆ ಸರಿಹೋಗುವುದಿಲ್ಲ. ಬೆಂಗಳೂರಿನಲ್ಲಿ ಅಂತಹ ಸೈಟುಗಳನ್ನು ವೀಕರ್ ಸೆಕ್ಷನ್‌ಗೆ ಕೊಡುವುದರಲ್ಲಿ ಸಂಪೂರ್ಣ ವೈಫಲ್ಯತೆಯನ್ನು ಬಿ.ಡಿ.ಎ. ಮಾಡಿದೆ ಮಧ್ಯಮ ವರ್ಗದವರಿಗೂ ಇದೇ ಗತಿ ಆಗಿದೆ. ಮಧ್ಯಮ ವರ್ಗದವರು ೩೦ ಸಾವಿರ ಜನ ಡಿಪಾಸಿಟ್‌ನ್ನು ಕಟ್ಟಿದ್ದಾರೆ, ಅವರಲ್ಲಿ ಅನೇಕರಿಗೆ ಸೈಟುಗಳು ಸಿಕ್ಕಿಲ್ಲ, ಅವರು ೮-೧೦-೧೨ ಸಲ ಅಪ್ಲಿಕೇಷನ್‌ಗಳನ್ನು ಹಾಕಿಕೊಂಡರೂ ದುಡ್ಡು ಮಾತ್ರ ತೆಗೆದುಕೊಳ್ಳುತ್ತಾರೆ, ಸೈಟು ಮಾತ್ರ ಮಾತ್ರ ವಿತರಣೆಯಾಗಿಲ್ಲ. ಮೂರನೆಯದು, ಮನೆಗಳನ್ನು ಕಟ್ಟಿಸುವುದರ ಕಡೆ ಗಮನ ಹರಿಸಬೇಕು, ಇದು ಸೆಕೆಂಡರಿಯಾಗುತ್ತದೆ. ಮೂಲಭೂತವಾಗಿ, ಲೇಔಟ್ ಮಾಡುವುದು, ಒಳಚರಂಡಿ ಮಾಡುವುದು, ನೀರು, ಲೈಟು, ರೋಡ್ಸ್, ಡ್ರೈನೇಜ್ ಮಾಡಿ ಸಾಮಾನ್ಯ ಜನರಿಗೆ ಸೈಟುಗಳನ್ನು ಮಾಡಿಕೊಡುವುದು, ಆಮೇಲೆ ಮನೆಗಳನ್ನು ಕಟ್ಟಿಸಿಕೊಡುವುದು ಎಂದು ನನಗನ್ನಿಸುತ್ತದೆ. ಈಗ ಇದನ್ನು ಸ್ವಲ್ಪ ಮಟ್ಟಿಗೆ ತಿರುಗು ಮುರುಗು ಮಾಡಿದಹಾಗೆ ಆಗುತ್ತದೆ, ಅದು ಆಗಕೂಡದು ಎಂದು ಕಳಕಳಿಯಿಂದ ಕೇಳಿಕೊಳ್ಳಬೇಕಾಗಿದೆ. ಇದರಲ್ಲಿ ಮುಖ್ಯವಾಗಿ ಮಾಡಬೇಕಾದ ಕೆಲಸ ನಡೆದಿಲ್ಲ. ಇವತ್ತು ಬಿ.ಡಿ.ಎ. ಹೆಸರು ಏನಿದೆ ಅದು ಕೆಸರಿನಲ್ಲಿದೆ. ಅದು ನಾಮಾವಶೇಷವಾಗಿ ಹೋಗಿಬಿಟ್ಟಿತು ಅದಕ್ಕೆ ಪುನರ್ಜನ್ಮ ಕೊಡುವುದಕ್ಕೆ ಒಳ್ಳೆಯ ಚೇರ್ಮನನ್ನು ನೇಮಕ ಮಾಡಿದ್ದೀರಿ. ಶ್ರೀಮಾನ್

ಬಸವಯ್ಯನವರು ಸಾಕಷ್ಟು ಅನುಭವವಿರುವಂಥವರು, ಪ್ರಾಮಾಣಿಕವಾದ ವ್ಯಕ್ತಿ, ಅವರನ್ನು ಛೇರ್ಮನ್ನರನ್ನಾಗಿ ನೇಮಕ ಮಾಡಿದ್ದೀರಿ ಬಹಳ ಸಂತೋಷ. ಅವರಿಂದ ಇದಕ್ಕೆ ಪುನರ್ಜನ್ಮ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟೊಂದು ಕೊಂಪೆ, ಉಳುಕು, ಕೊಳಕು, ದುರ್ನಾತ ಇರುವಂಥ ಬಿ.ಡಿ.ಎ. ಏಳಬೇಕಾದರೆ ಒಂದೇ ಸಲ ಅದನ್ನು ಮೇಲೆತ್ತುವುದಕ್ಕೆ ಸಾಧ್ಯವೇ ಎನ್ನುವುದು ಅನುಮಾನ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಹೆಸರು ಏನಿದೆ ಅದು ನನ್ನ ಅಭಿಪ್ರಾಯದಲ್ಲಿ ಭ್ರಷ್ಟಾಚಾರ ಡೆವೆಲಪ್‌ಮೆಂಟ್ ಅಥಾರಿಟಿ ಎಂದು. ಇದು ನಿಜವಾಗಲೂ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿ ಆಗಿಲ್ಲ ಎಂದು ಹೇಳಬೇಕಾಗಿದೆ. ಇದಕ್ಕೆ ಎರಡು ಮೂರು ನಿದರ್ಶನಗಳಿವೆ. ನನ್ನ ಹತ್ತಿರ ೧೦೦-೧೫೦ ಲೆಟರ್ಸ್ ಇದೆ, ಫೈಲ್ ಇದೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಎರಡು, ಮೂರು, ಕ್ಲಾಸಿಕ್ ಇನ್‌ಸ್ಟೆನ್ಸ್‌ಸನ್ನು ಹೇಳುತ್ತೇನೆ. ಶ್ರೀಮತಿ ಸರೋಜಮ್ಮ ಬಿ.ಇ.ಎಲ್.ನಲ್ಲಿ ಆರ್ಡಿನರಿ ಎಂಪ್ಲಾಯಿ. ಅವರಿಗೆ ಗೋಕುಲ ಫಸ್ಟ್ ಸ್ಟೇಜ್, ಫಸ್ಟ್ ಫೇಸ್‌ನಲ್ಲಿ ಜುಲೈ ೧೯೭೬ರಲ್ಲಿ ಒಂದು ಸೈಟ್ ಅಲಾಟ್ ಮಾಡಿದರು. ಆಮೇಲೆ ಬಿ.ಡಿ.ಎ. ನವರೇ ಅದನ್ನು ಕ್ಯಾನ್ಸಲ್ ಮಾಡಿದರು. ಪಾಲಿ ಕರಿಗೂ ನಮಗೂ ಏನೋ ತಾಪತ್ರಯ ಎಂದು ಕ್ಯಾನ್ಸಲ್ ಮಾಡಿದರು. ಗೋಕುಲ, ಫಸ್ಟ್ ಸ್ಟೇಜ್, ಫಸ್ಟ್ ಫೇಸ್‌ನಲ್ಲಿ ಎಲ್ಲಾ ದೊಡ್ಡ ದೊಡ್ಡ ವ್ಯಕ್ತಿಗಳೇ ಇರುವುದು, ಎಂ.ಎಸ್. ರಾಮಯ್ಯ ಅಂಡ್ ಕಂಪೆನಿ, ಮುಂತಾದ ದೊಡ್ಡ ದೊಡ್ಡವರು ಇದ್ದಾರೆ, ಅವರ ಪ್ರಭಾವವೂ ಇದೆ. ಅವರೆಲ್ಲಾ ಏನು ತಕರಾರು ಹೂಡಿದರೋ ಏನೋ ಒಟ್ಟಿನಲ್ಲಿ ಅದನ್ನು ಕ್ಯಾನ್ಸಲ್ ಮಾಡಿದರು. ಇವರು ಹಣ ಕಟ್ಟಿದ್ದರು. ಆ ಹಣ ವಾಪಸ್ ಮಾಡಲಿಲ್ಲ ೮ ವರ್ಷಗಳ ನಂತರ ಅಂದರೆ ೧೯೭೭ರಲ್ಲಿ ಆರ್.ಪಿ.ಸಿ. ಲೇಔಟ್‌ನಲ್ಲಿ ಸೈಟ್ ಕೊಟ್ಟರು, ಅದಕ್ಕೆ ಹೈಯರ್ ರೇಟ್ ಕೊಡಬೇಕು ಎಂದು ಹೇಳಿದರು. ಅವರು ಬಡ ಕಾರ್ಮಿಕರು ದಯಮಾಡಿ ರೇಟನ್ನು ಕಡಿಮೆ ಮಾಡಿಕೊಳ್ಳಿ ಎಂದು ಹೇಳಿದರು, ಈ ಬಗ್ಗೆ ಚರ್ಚೆ ನಡೆಯುತ್ತಿತ್ತು, ಮಾಡಿಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದರು, ೧೯೭೯ರಲ್ಲಿ ಮಾಡಿಕೊಡಲಿಲ್ಲ, ಸೈಟುಗಳನ್ನು ಬೇರೆ ಒಬ್ಬರಿಗೆ ಕೊಟ್ಟರು. ಇವರು ಸಾಮಾನ್ಯ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಈ ರೀತಿ ಬೇಕಾದಷ್ಟು ನಿದರ್ಶನಗಳಿವೆ ಇದು ಏನು ತೋರಿಸುತ್ತದೆ ಎಂದರೆ ಸಾಮಾನ್ಯ ಜನಗಳಿಗೆ ಸೈಟುಗಳನ್ನು ಕೊಡದೆ ಬೇರೆಯವರಿಗೆ ಕೊಟ್ಟಿದ್ದಾರೆ ಅಂದರೆ ಅಲ್ಲಿ ಕರಾಮತ್ ನಡೆದಿರಬೇಕು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಭ್ರಷ್ಟಾಚಾರಕ್ಕೆ ಇದು ಒಂದು ನಿರ್ದಶನ. ಇನ್ನೊಂದು ನಿರ್ದಶನ ಕೊಡುತ್ತೇನೆ ಮೊಲ್ಮಟ್ಟಕ್ಕೆ ಬರೋಣ, ಇನ್ನೊಬ್ಬರು ರಾಮಚಂದ್ರರಾಜು, ಸೀನಿಯರ್ ಸೈಂಟಿಫಿಕ್ ಆಫೀಸರ್ ಎನ್ನುವವರು ಅನೇಕ ವರ್ಷಗಳಿಂದ ಇವರು ನಗರದಲ್ಲಿದ್ದಾರೆ. ಅವರು ೧೯೭೬ ರಿಂದ ಐದಾರು ಸಲ ಅಟೆಂಪ್ಟ್ ಮಾಡಿದ್ದಾರೆ, ಪ್ರತಿಯೊಂದು ಸಲವೂ ಬಿ.ಡಿ.ಎ. ಯಿಂದ ದುಡ್ಡು ಕಳುಹಿಸಿ ಎಂದು ಬಂದಿದೆ, ಇವರೂ ಐದಾರು ಸಾರಿ ಕಳಿಸಿದ್ದಾರೆ, ೧೯೭೯ರಲ್ಲಿ ೨೦ ಸಾವಿರ ರೂಪಾಯಿಗಳ ಡಿಪಾಸಿಟ್ ಕೊಡಿ, ನಿಮಗೆ ರಾಜಮಹಲ್ ವಿಲಾಸ್ ಸೆಕೆಂಡ್ ಸ್ಟೇಜಿನಲ್ಲಿ ಕೊಡುತ್ತೇವೆ ಎಂದು ಬಂದಿದೆ. ನಂತರ ಫಸ್ಟ್ ಫೆಬ್ರುವರಿ ೧೯೮೩ರಲ್ಲಿ ಎಂದರೆ ತಾವು ಬಂದಮೇಲೆ ಆಗಿರುವುದು, ಕಮಿಷನರು ನಿಮಗೆ ಏಪ್ರಿಲ್‌ನಲ್ಲಿ ಪಾಸಿಟೀವಾಗಿ ಕೊಡುತ್ತೇವೆ ಎಂದು ಲೆಟರ್ ಕಳಿಸಿದ್ದಾರೆ. ಈ ಡೇಟನ್ನು ತಾವು ಗಮನಿಸಬೇಕು, ತಾವು ಬಂದಮೇಲೆ ಬಂದಿರುವುದು. ಈ ಲೆಟರ್ ಇದೆ, ನಾನು ಅದನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿಯವರೆಗೆ ಪಾಸಿಟೀವ್ ಆಗಿ ಆಗಿಲ್ಲ, ಅದರ ಬದಲು ನೆಗೆಟಿವ್ ಆಗಿ ಆಗುತ್ತಿದೆ. ತಿರುಗಿ ತಿರುಗಿ ಚಪ್ಪಲಿ ಸವೆದಿದೆ, ಆದರೂ ಏನು ಮಾಡಬೇಕೆಂದು ಗೊತ್ತಿಲ್ಲ. ಒಂದೇ ಸೈಟನ್ನು ಇಬ್ಬರು ಮೂವರಿಗೆ ಅಲಾಟ್ ಮಾಡಿದ್ದಾರೆ ಆ ವಿಚಾರಗಳಿಗೆ ಈಗ ಹೋಗುವುದಿಲ್ಲ ಇನ್ನೊಂದು ಏನಾಗಿದೆ ಎಂದರೆ, ಒಂದು ಸೈಟನ್ನು ಯಾರಿಗೋ ಅಲಾಟ್ ಮಾಡಿದ್ದಾರೆ, ಅಲಾಟ್ ಮಾಡಿದ ಸೈಟನ್ನು ನೋಡುವುದಕ್ಕೆ ಹೋದರೆ ಅಲ್ಲಿ ಆಗಲೇ ಯಾರೋ ಮನೆ ಕಟ್ಟಿದ್ದಾರೆ. ಏಕೆಂದರೆ ಅದನ್ನು ಯಾರಿಗೋ ಅಲಾಟ್ ಮಾಡಿದ್ದಾರೆ. ಆ ವಿವರ ಎಲ್ಲಾ ನನ್ನ ಹತ್ತಿರ ಇದೆ, ಆದರೆ ಈಗ ವೇಳೆ ಇಲ್ಲದಿರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಇದೊಂದು ಕರ್ಮಕಾಂಡ. ಇಲ್ಲಿ ಬಡವರಿಗೆ ಸೈಟು ಸಿಗಬೇಕಾದರೆ ಬಹಳ ಕಷ್ಟ. ಕಾಶ್ಮೀರದವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಬಾಂಬೆಯವರಿಗೆ ಸದಾಶಿವನಗರದಲ್ಲಿ ಸೈಟುಗಳು ಸಿಗುತ್ತವೆ. ಆದರೆ ಬೆಂಗಳೂರಿನಲ್ಲಿರವವರು ಸೈಟುಗಳು ಬೇಕೆಂದರೆ ಲಂಚ ಕೊಡಬೇಕು. ಬೆಂಚು, ಖುರ್ಚಿ, ಮೇಜುಗಳಿಗೆ ಲಂಚಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದರೆ ಮೊಯಿಲಿಯವರು ತಪ್ಪು ತಿಳಿದುಕೊಳ್ಳಬಾರದು. ಹಿಂದಿನ ಸರ್ಕಾರದವರು ಇದ್ದಾಗ ೨೨೬ ಸ್ಪೇರ್ ಸೈಟುಗಳನ್ನು ಯಾರಿಗೋ ಕೊಟ್ಟಿದ್ದರು, ೧೫೦೦ ಸೈಟುಗಳನ್ನು ಅನೇಕರಿಗೆ ಕೊಟ್ಟಿದ್ದಾರೆ.........

ಶ್ರೀ ಎಂ. ವೀರಪ್ಪಮೊಯಿಲಿ.—ಅದರಲ್ಲಿ ತಪ್ಪಿಲ್ಲ ಮತ್ತು ತಪ್ಪು ತಿಳಿದುಕೊಳ್ಳುವ ಪ್ರಶ್ನೆಯೇ ಇಲ್ಲ. ಯಾರ್‍ಯಾರು ತಪ್ಪು ಕೆಲಸ ಮಾಡಿದ್ದಾರೋ ಅವರು ಅದರ ಫಲವನ್ನು ಅವರು ಉಣ್ಣಲೇ

ಬೇಕು. ತಪ್ಪಿದ್ದರೆ ಅದರ ಬಗ್ಗೆ ವಿಚಾರಣೆ ಮಾಡಿ ಶ್ವೇತ ಪತ್ರವನ್ನು ತನ್ನಿ, ಅದು ಜನಗಳಿಗೆ ಗೊತ್ತಾಗಲಿ. ಆ ಬಗ್ಗೆ ಇದುವರೆಗೆ ಏಕೆ ಸುಮ್ಮನಿದ್ದೀರಿ? ತಪ್ಪು ಎಂದು ಹೇಳಿ ಗೂಬೆ ಕೂರಿಸುವುದು ಸರಿಯಲ್ಲ. ವಿಚಾರ ಹೊರಬರಲಿ, ತನಿಖೆ ಮಾಡಿ. ಇದುವರೆಗೆ ತನಿಖೆ ಮಾಡದೆ ಏತಕ್ಕೆ ಸುಮ್ಮನಿದ್ದೀರಿ ? ಇಲ್ಲಿಗೆ ನೀವು ಅಧಿಕಾರಕ್ಕೆ ಬಂದು ೯ ತಿಂಗಳಾಯಿತು. ಆದರೂ ಇಲ್ಲಿಯು ವರೆಗೆ ನೀವು ವಿಚಾರಣೆ ಮಾಡಲಿಲ್ಲವೆಂದರೆ ನಿಮ್ಮ ಸರ್ಕಾರದ ಮೇಲೆ ನಮಗೆ ಅನುಮಾನ ಬರುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮೊಯಿಲಿಯವರು ಹೇಳಬೇಕಾದ ವಿಷಯ. ತಪ್ಪು ತಿಳಿದು ಕೊಳ್ಳಕೂಡದು ಎಂದು ಏತಕ್ಕೆ ಹೇಳಿದೆ ಎಂದರೆ ಟೀಕೆ ಮಾಡಿದರೆ ತೊಂದರೆ ಏನು ಇಲ್ಲವೆಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಅದೊಂದು ಮಾತ್ರ ಉಳಿದಿದೆ. ನಾನು ನೋಡಿದ ಹಾಗೆ ಇದು ವರೆಗೆ ಶ್ವೇತ ಪತ್ರವನ್ನು ತರಬೇಕೆಂದು ಹೇಳಿ ತರದೇ ಇರುವುದು ತಪ್ಪು, ನಿಜ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟು ಹೊತ್ತಿಗೆ ತರಬೇಕಾಗಿತ್ತು, ಏತಕ್ಕೆ ತಂದಿಲ್ಲವೆಂದು ಗೊತ್ತಿಲ್ಲ. ಶ್ವೇತ ಪತ್ರದ ಡ್ರಾಫ್ಟ್ ಎಲ್ಲ ಸಿದ್ಧವಾಗಿದೆ, ಆದರೆ ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಬರಬೇಕಲ್ಲ. ಅದಕ್ಕೋಸ್ಕರ ಇದು ಬರುವುದರಲ್ಲಿ ತಡವಾಗಿರಬಹುದು. ನಾನು ಆಗಲೇ ಹೇಳಿದ ಹಾಗೆ ೨೨೬ ಮತ್ತು ೧೪೦೦ ಸೈಟುಗಳನ್ನು ಕೊಡುವ ಬಗ್ಗೆ ಬೇಕಾದಷ್ಟು ಅವ್ಯವಹಾರಗಳು ನಡೆದಿವೆ, ಅಕ್ರಮ ಗಳು ನಡೆದಿವೆ. ಆದ್ದರಿಂದ, ಈಗಲೂ ಶ್ವೇತ ಪತ್ರವನ್ನು ಬಿಡುಗಡೆ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಏನೇ ಅವ್ಯವಹಾರ ನಡೆದಿರಲಿ, ಅಂಥ ಅವ್ಯವಹಾರ ನಡೆಸಿದವರನ್ನು ಹ್ಯಾಂಗ್ ಮಾಡಬೇಕು. ಇಲ್ಲದಿದ್ದರೆ ತಪ್ಪಾಗುತ್ತದೆ. ಮುಂದೆ ಸೈಟುಗಳನ್ನು ಕೊಡುವಾಗ ಸಿಸ್ಟಮ್ಯಾಟಿಕ್ ಆಗಿ ಕೊಡಬೇಕು.

— ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಗ ಯಾರ್ಯಾರು ಸದಸ್ಯರಿದ್ದರು.

ಶ್ರೀ ಎಂ. ವೀರಪ್ಪಮೊಯಿಲಿ.—ಒಬ್ಬರು ಮಂತ್ರಿಗಳು ಇದ್ದರು. ಆದ್ದರಿಂದ ಯಾರು ತಪ್ಪು ಮಾಡಿದ್ದಾರೆಂಬುದನ್ನು ವಿಚಾರ ಮಾಡಬೇಕು. ಒಬ್ಬ ತಪ್ಪು ಮಾಡಿರಬಹುದು. ಆದರೆ ಯಾರು ವಿಚಾರಣೆ ಮಾಡಬೇಕು, ಯಾರನ್ನು ಬಿಡಬೇಕೆಂಬ ಸಮಸ್ಯೆ ಬಂದಿರಬಹುದು. ಇಲ್ಲದಿದ್ದರೆ ವಿಚಾರಣೆ ಮಾಡುವುದಕ್ಕೆ ಇಷ್ಟು ದಿವಸ ಏತಕ್ಕೆ ಬೇಕು ?

ಶ್ರೀ ಎಂ. ಚಂದ್ರಶೇಖರ್.—ಆ ಒಂದು ತೀರ್ಮಾನಕ್ಕೆ ಯಾರು ಯಾರು ಬದ್ಧರಾಗಿದ್ದರೋ ಅವರೆಲ್ಲ ಜವಾಬ್ದಾರರು ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾರೋ ಒಬ್ಬರನ್ನು ಹಿಲ್ಡ್ ಮಾಡುವುದಕ್ಕೆ ತಪ್ಪು ಮಾಡದೆ ಇದ್ದವನನ್ನು ಸಿಕ್ಕಿಸುವುದು ಅಲ್ಲ. ಜನತಾ ಪಕ್ಷದ ಅಥವಾ ನಮ್ಮ ಪಕ್ಷದ ಸದಸ್ಯರಾಗಿರಬಹುದು. ನಮ್ಮಲ್ಲಿ ಒಬ್ಬರು ಬಿಡಿಎ ಸದಸ್ಯರಾಗಿ ಕೆಲಸ ಮಾಡಿದರೆ ನಿಮ್ಮ ಹಾಗೆ ಸಿಕ್ಕಿಹಾಕಿಕೊಳ್ಳುವುದಿಲ್ಲ.

ಉಪಾಧ್ಯಕ್ಷರು.—ತಪ್ಪು ಮಾಡಿದರೂ ಸಿಕ್ಕಿಹಾಕಿಕೊಳ್ಳುವುದಿಲ್ಲವೆ ?

ಶ್ರೀ ಎಂ. ಎಸ್. ಕೃಷ್ಣನ್.—ತಪ್ಪು ಮಾಡುವುದಿಲ್ಲ, ಮಾಡುವುದಕ್ಕೆ ಹೋಗುವುದಿಲ್ಲ. ನಾವು ಮಾಡಿದರೆ, ಬೇರೆ ರಾಜಕೀಯ ತಪ್ಪುಗಳನ್ನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಪಟೇಲರು ಉತ್ತರಿಸುವಾಗ ತಪ್ಪು ಮಾಡಿದರೂ ಸಿಕ್ಕಿ ಹಾಕಿಕೊಳ್ಳುತ್ತಾರೆ, ತಪ್ಪು ಮಾಡದಿದ್ದರೂ ಸಿಕ್ಕಿಹಾಕಿಕೊಳ್ಳುತ್ತಾರೆಂದು ಹೇಳಿದರಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅದು ನಿಮಗೆ ಅಪ್ಲೈ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಪ್ಪು ಮಾಡುವಾಗ ಮೈಗೆ ಎಣ್ಣೆ ಹಚ್ಚಿಕೊಳ್ಳುವುದು.

ಶ್ರೀ ಎಂ. ಎಸ್. ಕೃಷ್ಣನ್.—ಆ ಚಾಳಿ ನನಗೆ ಗೊತ್ತಿಲ್ಲ. ಅಂಥ ಜಾತಿ ನಮ್ಮದಲ್ಲ, ನಮ್ಮದು ಕಮ್ಯುನಿಸ್ಟ್ ಜಾತಿ. ಆದ್ದರಿಂದ, ಸೈಟುಗಳನ್ನು ವಿತರಣೆ ಮಾಡುವ ವಿಷಯದಲ್ಲಿ ಒಂದು ಯೋಜನೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಈ ಹಿಂದೆ ಪತ್ರಿಕೆಯಲ್ಲಿ ಲಾಟರಿ ಸಿಸ್ಟಂ ಅನ್ನು ಜಾರಿಗೆ ತರುತ್ತೇವೆಂಬ ವಿಚಾರ ಬಂತು. ಅದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಿದ್ದೇವೆ. ಲಾಟರಿ ಸಿಸ್ಟಂ ಅನ್ನು ಮಾತ್ರ ತಂದರೆ ಸಾಲದು ಅದರ ಜೊತೆಗೆ ೧೦–೧೫ ಸಾರಿ

ಯಾರು ಅರ್ಜಿ ಹಾಕಿದ್ದಾರೆ ಅದನ್ನು ಪರಿಗಣಿಸಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದವರನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಅನೇಕ ಕ್ಲಿಯರ್ ಇನ್‌ಸ್ಟಾನ್ಸಸ್ ಅನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇದರ ಬಗ್ಗೆ ಮೇಲ್ಮನೆಯಲ್ಲೂ ಚರ್ಚೆಯಾಗಿದೆ. ಇವತ್ತಿನ ದಿವಸ ಸೆಲ್ಫ್ ಫೈನಾನ್ಸಿಂಗ್ ಹೌಸಿಂಗ್ ಸ್ಕೀಂ ಎಂದು ಮಾಡಿದ್ದಾರೆ. ಈ ಸ್ಕೀಂ ಪ್ರಕಾರ, ಕಡಿಮೆ ವರಮಾನ, ಮಧ್ಯಮ ವರಮಾನ ಮತ್ತು ಹೆಚ್ಚಿನ ವರಮಾನದವರಿಗೆ ಎಂದು ಬೇರೆ ಬೇರೆ ನಮೂನೆಯ ಮನೆಗಳನ್ನು ಕಟ್ಟಿಸುತ್ತಾರೆ. ಇದನ್ನೆಲ್ಲಾ ಕಟ್ಟಿಸುವ ವ್ಯವಸ್ಥೆಯ ಬಗ್ಗೆ ಒಂದು ದೊಡ್ಡ ಕಥೆಯಿದೆ. ಇದನ್ನು ದೊಡ್ಡ ದೊಡ್ಡ ೩ ಜನ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ರಶ್ಮಿ ಕನ್‌ಸ್ಟ್ರಕ್ಷನ್, ಕೋಡೆ ಕನ್‌ಸ್ಟ್ರಕ್ಷನ್ ಮತ್ತು ರಾವ್ ಕನ್‌ಸ್ಟ್ರಕ್ಷನ್ ಎಂದು ಮೂರು ಮಂದಿ ಕಂಟ್ರಾಕ್ಟರುಗಳು ಇದರ ಚರಿತ್ರೆಯನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತೇನೆ. ಇದರ ಬಗ್ಗೆ ಚರ್ಚೆ ಮಾಡಲು ನನಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಸಾಕಷ್ಟು ಅವಕಾಶ ಇದೆ. ಆದರೆ ಈಗ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರದೆ ಹೋದರೆ ತಪ್ಪಾಗುತ್ತದೆ. ಈಗ ೧೦ ಸಾವಿರ ಮನೆಗಳನ್ನು ಎಂ. ಇ. ಜಿ. ಮತ್ತು ಎಲ್. ಐ. ಜಿ. ಗ್ರೂಪಿಗೆ ಕಟ್ಟಿಸಬೇಕೆಂದು ಹೊರಟಿರುವುದು ಒಳ್ಳೆಯ ಉದ್ದೇಶ ಇದು ೧೯೮೭ರ ಜನವರಿಯಲ್ಲಿ ತೀರ್ಮಾನವಾಗಿರುವುದು. ಮೇನಲ್ಲಿ ೭೫೫೮ ಮನೆಗಳನ್ನು ೮೪.೫೩ ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಿಸುವುದಕ್ಕೆ ಒಪ್ಪಿದರು ನಂದಿನಿ ಲೇಔಟ್, ಬಿ.ಟಿ.ಎಂ. ರಾಜಮಹಲ್ ವಿಲಾಸ್ ತಾವರೆಕೆರೆ ಲೇಔಟ್ ಮತ್ತು ಬನ್ನೇರುಘಟ್ಟ ಈ ನಾಲ್ಕು ಕಡೆಗಳಲ್ಲಿ ಮನೆಗಳನ್ನು ಕಟ್ಟುವುದಾಗಿ ತೀರ್ಮಾನಿಸಿ ೩ ಕಡೆ ಕೆಲಸ ತೆಗೆದುಕೊಂಡರು. ಅದನ್ನು ೩ ಜನ ಕಂಟ್ರಾಕ್ಟರಿಗೆ ಕೊಟ್ಟರು ಅವರಿಗೆ ಕೆಲಸ ಕೊಟ್ಟದ್ದು ಜನವರಿಯಲ್ಲಿ ಅದಕ್ಕೆಸೀಲ್ ಹಾಕಿದ್ದು ಈಗ ಕೊನೆಗೆ ಅಪ್ರೂವಲ್ ಮಾಡಿದ್ದು ಇವರು ಬಂದಮೇಲೆ. ಇದೆಲ್ಲ ಆಗುವುದಕ್ಕೆ ಕಾರಣ ಇಷ್ಟೆ.ಮೊದಲು ಫರ್ಸ್ಟ್ ಗ್ರೇಡ್ ಕಂಟ್ರಾಕ್ಟಗಳನ್ನು ಕರೆದರು, ನೆಗೋಷಿಯೇಟ್ ಮಾಡಿದರು. ಆ ಮೇಲೆ ಅವರನ್ನು ಕೈ ಬಿಟ್ಟರು. ನಂತರ ಸೆಕೆಂಡ್ ಗ್ರೇಡ್ ಕಂಟ್ರಾಕ್ಟರನ್ನು ಕರೆಯೋಣವೆಂದು ಚರ್ಚೆ ಮಾಡಿ ಕೊನೆಗೆ ಅವರನ್ನೂ ಕೈಬಿಟ್ಟರು. ಆ ಮೇಲೆ ಆ ಇಬ್ಬರೂ ಬೇಡ ಪ್ಯಾಕೇಜ್ ಮಾಡೋಣವೆಂದು ೩ ಜನ ಕಂಟ್ರಾಕ್ಟರುಗಳಿಗೆ ಆ ಕೆಲಸವನ್ನು ಕೊಟ್ಟರು. ಇದು ಬಹಳ ಕ್ಲಿಷ್ಟಕರವಾದ ವಿಚಾರ, ಇದು ಸುಮಾರು ೩೬ ಕೋಟಿ ರೂಪಾಯಿಗಳ ವ್ಯವಹಾರ. ಇದರಲ್ಲಿ ಬಹಳ ಅಕ್ರಮ ವ್ಯವಹಾರ ನಡೆದಿದೆ. ಕರಪ್ಷನ್ ನಡೆದಿದೆ. ನೆಪೋಟಿಸಂ ನಡೆದಿದೆ. ಪ್ರೊಸೀಜರಲ್ ಸರಿಯಾಗಿಲ್ಲ. ತತ್ವಶಃ ಈ ವ್ಯವಹಾರ ಸರಿಯಾಗಿಲ್ಲ. ಮೆರಿಟ್ ಮೇಲೂ ಇದು ಸರಿಯಾಗಿಲ್ಲ. ೨೩ನೇ ಜನವರಿ ೧೯೮೩ರಲ್ಲಿ ಕೊಡಬೇಕೆಂದು ಇವರಿಗೆ ಕಾಂಟ್ರಾಕ್ಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಮಾರ್ಚ್ ೨೫ಕ್ಕೆ ಎಕ್ಸ್‌ಪೈರಿ ಆಗಬೇಕಾಗಿತ್ತು, ಎಕ್ಸ್‌ಪೈರಿ ಆದರೆ ಮತ್ತೆ ಪೆನಾಲ್ಟಿ ಕೊಡಬೇಕು, ಇದು ಸರಿಯಾದುದಲ್ಲ ಎಂಬ ದೃಷ್ಟಿಯಿಂದಲೋ ಏನೋ ಈಗ ಬಂದಂಥ ಹೊಸ ಮಂಡಳಿಯವರು ಅದನ್ನು ಒಪ್ಪಿಕೊಂಡು ಅವರಿಗೆ ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಯಾರು ಇದನ್ನು ಮಾಡಿದ್ದರೂ ಕೂಡ ಯೋಜನೆ ಮಾಡಿ ಕೊಡಬೇಕಾಗಿತ್ತು. ಆ ರೀತಿಯಾಗಿ ಯೋಜನೆ ಮಾಡಿಕೊಟ್ಟಿಲ್ಲ ಎಂಬುದು ನನ್ನ ಟೀಕೆ. ಹಿಂದೆ ಮಾಡಿದವರೆಲ್ಲಾ ಹಣ ಮಾಡಿಕೊಂಡಿದ್ದಾರೆ ಎಂಬ ಆಪಾದನೆ ಇದೆ, ಇದಲ್ಲದೆ ೧೭೮ ಅಪಾದನೆಗಳು ಅವರ ಮೇಲಿದೆ. ಅದನ್ನು ರುಜುವಾತು ಮಾಡುವುದು, ಬಿಡುವುದು ಮಂತ್ರಿಗಳಿಗೆ ಬಿಟ್ಟಿದೆ. ಆದರೆ ಜನತಾ ಪಕ್ಷದ ಸರ್ಕಾರ ಆ ಅಪಾದನೆಯನ್ನು ಏತಕ್ಕೆ ಹೊತ್ತುಕೊಳ್ಳಬೇಕಾಗಿತ್ತು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸುಮ್ಮನೆ ಇದ್ದಿದ್ದರೆ ಟೆಂಡರ್ ಕ್ಯಾನ್ಸಲ್ ಆಗುತ್ತಿತ್ತು. ಪೆನಾಲ್ಟಿ ಕೊಡಬೇಕೇ ಬೇಡವೇ ಎಂಬುದನ್ನು ಸರ್ಕಾರ ತೀರ್ಮಾನ ಮಾಡಬಹುದಾಗಿತ್ತು. ರಶ್ಮಿ ಕನ್‌ಸ್ಟ್ರಕ್ಷನ್‌ನವರು ಸರ್ಕಾರವನ್ನು ಬಂದು ಕತ್ತಿನ ಪಟ್ಟಿ ಹಿಡಿಯುವುದಕ್ಕಾಗುತ್ತಿತ್ತೆ? ಏನೂ ಇಲ್ಲ. ಅವರು ಕೋಟ್ಯಾಧೀಶ್ವರರು. ಅವರಿಗೆ ಏತಕ್ಕೆ ಮಣಿದಿರಿ? ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಆ ಬಗ್ಗೆ ನೋಡುತ್ತಿದ್ದಾರೆ. ಅವರು ಅದರ ಬಗ್ಗೆ ವಿವರವನ್ನು ಆದಷ್ಟು ಬೇಗ ಕೊಟ್ಟರೆ ವಿವರಗಳು ಹೊರಬರುತ್ತವೆ. ಈ ಪ್ಯಾಕೇಜ್ ಡೀಲ್ ಸರಿಯಾದುದಲ್ಲ. ಬಿ.ಡಿ.ಎ. ಸದಸ್ಯನಾಗಿ ನಾನಂತೂ ಆ ಬಗ್ಗೆ ಡಿಸೆಂಟಿಂಗ್ ನೋಟ್ ಕೊಟ್ಟಿದ್ದೇನೆ. ಮುಂದೆ ಏನಾಗುತ್ತದೋ ನೋಡೋಣ. ಈ ಸರ್ಕಾರ ಬಂದಮೇಲೆ ನಡೆದಿರುವ ವ್ಯವಹಾರ ಇನ್ನೊಂದಿದೆ. ಅದು ರೆವಿನ್ಯೂ ಸೈಟ್‌ದಾರರ ವಿಷಯ. ಚಿಕ್ಕಮಾರೇನಹಳ್ಳಿ ವಿಚಾರ ಎಂದು ಹೇಳಿದರೆ ಎಲ್ಲರಿಗೂ ಗೊತ್ತಾಗುತ್ತದೆ. ನಾನು ವಿಸ್ತಾರವಾಗಿ ಅದನ್ನು ಹೇಳಬೇಕಾಗಿಲ್ಲ. ಚಿಕ್ಕಮಾರೇನಹಳ್ಳಿಯಲ್ಲಿ ಬುಲ್ಡೋಜರ್ ಉಪಯೋಗಿಸಿ ಮನೆಗಳನ್ನು ಕೆಡವಿದ್ದುದು ಸರಿಯೇ ಎಂದು ಕೇಳಿದರೆ ಸರಿ ಎಂದು ಮಂತ್ರಿಗಳು ಹೇಳಿದ್ದಾರೆ. ಬಿ.ಡಿ.ಎ. ಜಾಗದಲ್ಲಿ ಅಕ್ರಮವಾಗಿ ಕಟ್ಟಿಕೊಂಡಿದ್ದಾರೆ, ನಮ್ಮ ಜಾಗಕ್ಕೆ ಬೇರೆಯವರು ಬಂದರೆ ಹೇಗೆ ಬಿಡುವುದಕ್ಕಾಗುತ್ತದೆ, ಸರ್ಕಾರಕ್ಕೆ ಶಕ್ತಿ ಇದೆ, ಉರುಳಿಸೋಣ ಎಂಬ ಮನೋಭಾವ, ಧೋರಣೆ ಏನಿದೆ ಅದು ನನಗಂತೂ ಸರಿಯಾಗಿ ಕಾಣುವುದಿಲ್ಲ. ಬರೀ ಕಾನೂನನ್ನು ಮಾತ್ರ ನೋಡುವುದು

ಸರಿಯಾದುದಲ್ಲ. ಈ ಪರಿಸ್ಥಿತಿ ಬರುವುದಕ್ಕೆ ಯಾರು ಕಾರಣರು ಎಂಬುದನ್ನು ನೋಡಬೇಕು. ಈ ಪರಿಸ್ಥಿತಿಗೆ ಬಿ. ಡಿ. ಎ. ಕಾರಣ. ಅವ್ಯವಹಾರ ಮಾಡಿದ ಅಧಿಕಾರಿಗಳು ಕಾರಣ. ಬೆಂಗಳೂರಿನಲ್ಲಿ ಕೆಲವು ದಳ್ಳಾಳಿಗಳಿದ್ದಾರೆ. ಆವತ್ತಿನ ದಿವಸ ಅವರು ಕಾಂಗ್ರೆಸ್ಸಿಗೆ ಓಟು ಹಾಕಿದರು, ಇವತ್ತು ನಿಮ್ಮ ಹಿಂದೆ ಓಡಾಡುತ್ತಿದ್ದಾರೆ. ನೀವು ಅವರಿಗೆ ಮಣಿಯುತ್ತೀರಿ ಎಂದು ಹೇಳುವುದಕ್ಕಾಗುವುದಿಲ್ಲ.

(ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕೈ ಅಲ್ಲಾಡಿಸಿ ಇಲ್ಲ ಎಂದು ಸೂಚಿಸಿದರು.)

ಶ್ರೀ ಎಂ. ಎಸ್. ಕೃಷ್ಣನ್.—ಸುಮ್ಮನೆ ಕೈ ಅಲ್ಲಾಡಿಸಿದರೆ ಆಗುವುದಿಲ್ಲ. ಅವು ತಿಮಿಂಗಲಗಳು. ನಿಮ್ಮನ್ನು ನುಂಗಿಹಾಕುತ್ತವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ನಮಗೆ ಓಟು ಹಾಕಲಿಲ್ಲ. ಕೆಲಸ ಮಾಡಿದ್ದು ಅವರ ಪರವಾಗಿ, ಓಟು ಹಾಕಿದ್ದೂ ಅವರಿಗೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ನನಗೆ ಗೊತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಅವರು ಕೆಲಸ ಮಾಡಿದ್ದೂ ನಿಮಗೆ, ಓಟು ಹಾಕಿದ್ದೂ ನಿಮಗೆ. ನೀವು ಸೋತಮೇಲೆ ಅವರ ಕಡೆ ಹೋಗಿದ್ದಾರೆ. ಗೆದ್ದ ಎತ್ತಿನ ಬಾಲ ಹಿಡಿಯುವ ಜನ ಅವರು.

ಶ್ರೀ ದೊಡ್ಡಬೋರೇಗೌಡ.—ನಿಮ್ಮ ಸರ್ಕಾರ ಬಂದರೆ ಅವರು ನಿಮ್ಮ ಹಿಂದೆ ಇರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಸರ್ಕಾರ ಬಂದರೆ ಅವರನ್ನು ಪಬ್ಲಿಕ್‌ನಲ್ಲಿ ಗುಂಡಿಟ್ಟು ಸಾಯಿಸುತ್ತೇವೆ. ಹೇಳಿ ಹೇಳಿ ಈ ತರಹದ ಜನರನ್ನು ಬೆಳೆಸುವ ಪ್ರಜಾಪ್ರಭುತ್ವ ಇದು. ಬಂಡವಾಳಶಾಹಿ ಪ್ರಜಾಪ್ರಭುತ್ವ. ಅದರ ಬಗ್ಗೆ ಕೆದಕಬೇಡಿ. ಒಟ್ಟಿನಲ್ಲಿ ರೆವಿನ್ಯೂ ಸೈಟ್‌ದಾರರ ಮನೆಗಳ ಮೇಲೆ ಬುಲ್ಡೋಜರ್ ಉಪಯೋಗಿಸಿರುವುದು ಸರಿಯಾದುದಲ್ಲ, ಈ ಪರಿಸ್ಥಿತಿ ಬಿಗಡಾಯಿಸಿದೆ. ಚಿಕ್ಕಮಾರೇನಹಳ್ಳಿ ಒಂದೇ ಅಲ್ಲ. ಬೆಂಗಳೂರಿನ ಸುತ್ತ ಮುತ್ತ ಸಾವಿರಾರು ಎಕರೆ ಪ್ರದೇಶದಲ್ಲಿ ಈ ತರಹ ಮನೆಗಳಿವೆ. ಅಲ್ಲಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಅದಕ್ಕೆ ಸರಿಯಾದ, ವ್ಯವಸ್ಥಿತವಾದ ದಾರಿ ಕಂಡುಹಿಡಿಯಬೇಕು. ಈ ವಿಷಯದಲ್ಲಿ ಬಿ. ಟಿ. ಸೋಮಣ್ಣನವರಿಗೆ ಶಹಬಾಸ್‌ಗಿರಿ ಕೊಡಬೇಕಾಗಿದೆ. ಅವರಿದ್ದಾಗ ಇದೇ ತರಹ ಪರಿಸ್ಥಿತಿ ಬಂದಿತ್ತು. ಮನೆಗಳನ್ನು ಒಡೆಯಬೇಕು ಎಂದು ಯೋಚನೆ ಮಾಡಿದಾಗ ನಾನು ಹೇಳಿದೆ ಒಡೆಯಬೇಡಿ ಅದಕ್ಕೆ ಬೇರೆ ತರಹ ಪ್ಲಾನ್ ಮಾಡಿ ಎಂದು. ಅದಕ್ಕೆ ಇಂಗ್ಲೀಷಿನಲ್ಲಿ ''As is where is plan'' ಎಂದು ಹೇಳುತ್ತಾರೆ. ಈ ರೀತಿ ಮಾಡಿ ಸೈಟುಗಳ ಮಧ್ಯೆ ಮನೆ ಬಂದರೆ ಅವರಿಗೆ ಪಕ್ಕದ ಸೈಟ್ ಕೊಡಿ, ರೋಡ್ ಮಧ್ಯೆ ಮನೆ ಬಂದರೆ ಬೇರೆ ಸೈಟ್ ಕೊಡಿ, ಅವರು ಅಲ್ಲಿ ಮನೆ ಕಟ್ಟಿಕೊಳ್ಳಲಿ, ಮತ್ತೆ ಅವರು ಡೆವಲಪ್ಮೆಂಟ್ ಚಾರ್ಜ್ ಕೊಟ್ಟು ಒಳಚರಂಡಿ ನೀರಿನ ವ್ಯವಸ್ಥೆಯನ್ನು ಪಡೆದುಕೊಳ್ಳಲಿ ಎಂದು ಹೇಳಿದ ಮೇಲೆ ಮಾನ್ಯ ಸೋಮಣ್ಣನವರು ಒಪ್ಪಿಕೊಂಡರು. ಅದೇರೀತಿ ರಾಜಾಜಿನಗರದಲ್ಲಿ ವೆಸ್ಟ್ ಆಫ್ ಕಾರ್ಡ್ ರೋಡಿನಲ್ಲಿ, ನಾಗಪುರ ಲೇಔಟ್‌ನಲ್ಲಿ ಮಾಡಿದರು. ಅವರು ಕಾಂಗ್ರೆಸ್ಸಿನವರು ಎಂದು ಶಹಬಾಸ್‌ಗಿರಿ ಕೊಡುತ್ತೇನೆಂದು ತಿಳಿದುಕೊಳ್ಳಬೇಡಿ. ಒಳ್ಳೆಯ ಕೆಲಸ ಮಾಡಿದಾಗ ಮೆಚ್ಚಬೇಕಾಗುತ್ತದೆ. ಈಗ ಈ ಸರ್ಕಾರ ಮಾಡಿರುವುದು ಒಳ್ಳೆಯದಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂಥದ್ದು. ಈ ರೀತಿ ಕೆಟ್ಟ ಹೆಸರನ್ನು ಸರ್ಕಾರ ತೆಗೆದುಕೊಳ್ಳಬಾರದು. ಒಳ್ಳೆಯ ಕೆಲಸಗಳಿಗೆ ನಾವು ಸಪೋರ್ಟ್ ಮಾಡುತ್ತೇವೆ. ಇದು ಕೆಟ್ಟ ಕೆಲಸವಾಗಿರುವುದರಿಂದ ಟೀಕೆ ಮಾಡಬೇಕಾಗಿದೆ. ಮುಂದೆ ಆ ರೀತಿ ಮಾಡಬೇಡಿ. ಮಾನವೀಯತೆಯ ದೃಷ್ಟಿಯಿಂದ ಇದನ್ನು ಬಗೆಹರಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇನ್ನು ಮುಂದಾದರೂ ಮನೆಗಳನ್ನು ಉರುಳಿಸುವುದಕ್ಕೆ ಹೋಗಬೇಡಿ. ಬಿ.ಡಿ.ಎ. ಇರುವುದು ಮನೆಗಳನ್ನು ಕಟ್ಟಿಸುವುದಕ್ಕೇ ಹೊರತು ಉರುಳಿಸುವುದಕ್ಕಲ್ಲ. ಇನ್ನೊಂದು ವಿಷಯ ಹೇಳಿದರೆ ಶಾಸಕರಾರೂ ತಪ್ಪು ತಿಳಿದುಕೊಳ್ಳಬಾರದು. ಈ ಮನೆಯಲ್ಲಿರುವ ಹಾಲಿ ಶಾಸಕರು ಮತ್ತು ಮಾಜಿ ಶಾಸಕರು ಯಾರೂ ತಪ್ಪು ತಿಳಿದುಕೊಳ್ಳಬಾರದು. ಶಾಸಕರದೊಂದು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯನ್ನು ಬೆಂಗಳೂರಿನಲ್ಲಿ ಮಾಡಿದ್ದಾರೆ. ಆ ಸೊಸೈಟಿಯಲ್ಲಿ ಸದಸ್ಯರಾಗಿರುವ ಶಾಸಕರಿಗೆ ಸೈಟುಗಳನ್ನು ಕೊಡಬೇಕೆಂದು ಹಿಂದೆ ಬಿ. ಡಿ. ಎ. ತೀರ್ಮಾನ ಮಾಡಿ ೧೨೦ ಜನರಿಗೆ ಸೈಟುಗಳನ್ನು ಕೊಟ್ಟಿದೆ. ಮತ್ತೆ ಬೇರೆಯವರಿಗೆ ಕೊಡಬೇಕೆಂದು ಹೊರಟಿದೆ. ನನಗನ್ನಿಸುವುದು ಇದು ನ್ಯಾಯವಲ್ಲ. ಶಾಸಕರ ಬಗ್ಗೆ ನನಗೆ ಗೌರವವಿದೆ.

ಶ್ರೀ ದೊಡ್ಡಬೋರೇಗೌಡ.—ಅದರಲ್ಲಿ ನಿಮ್ಮ ಹೆಸರು ಇಲ್ಲವೆ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ಯಾರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ೧೦೦ ರೂಪಾಯಿಗಳನ್ನು ಕೊಟ್ಟರೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಆದರೆ ನನ್ನ ಹೆಸರು ಅದರಲ್ಲಿಲ್ಲ.

ಶ್ರೀ ಎಂ. ರಘುಪತಿ.—ಕೃಷ್ಣನ್ ಅವರೇ......

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಹೆಸರಿದೆಯೆ?

ಶ್ರೀ ಎಂ. ರಘುಪತಿ.—ಇಲ್ಲ. ನಾನು ಹಿಂದೆ ವಿಧಾನ ಪರಿಷತ್ತಿನಲ್ಲಿ ಸದಸ್ಯನಾಗಿದ್ದಾಗ ಈ ಸ್ಕೀಮ್ ಬೇಡ ಎಂದು ಪ್ರಬಲವಾಗಿ ವಿರೋಧ ಮಾಡಿದ್ದೇನೆ. ನನಗೆ ಸೈಟೂ ಬೇಕಾಗಿಲ್ಲ, ಅದನ್ನು ತೆಗೆದುಕೊಳ್ಳುವುದಕ್ಕೂ ಹೋಗುವುದಿಲ್ಲ.

ಒಬ್ಬ ಸದಸ್ಯರು.—ನಿಮಗೆ ಮದುವೆಯೇ ಬೇಕಾಗಿಲ್ಲ, ಸೈಟ್ ತೆಗೆದುಕೊಂಡು ಏನು ಮಾಡುತ್ತೀರಿ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಘುಪತಿಯವರಿಗೆ ಏನೇನು ಬೇಕೋ ಅದೇ ಇಲ್ಲದೇ ಇರುವಾಗ ಸೈಟ್ ತೆಗೆದುಕೊಂಡು ಏನು ಮಾಡುತ್ತೀರಿ? ನಾನು ಹೇಳುವುದು ಏನೆಂದರೆ ಇದು ನ್ಯಾಯವಾದುದಲ್ಲ. ಬಿ.ಡಿ.ಎ. ಕಾನೂನು ಪ್ರಕಾರ ಯಾರು ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದಾರೋ ಅಂಥವರಿಗೆ ಸೈಟ್ ಕೊಡಬೇಕೆಂದಿದೆ. ಬೀದರ್‌ನಲ್ಲಿ, ಗುಲ್ಬರ್ಗದಲ್ಲಿ ವಾಸಿಸುವವರಿಗೆ ಕೊಡಬೇಕೆಂಬುದು ಸರಿಯಲ್ಲ.

ಉಪಾಧ್ಯಕ್ಷರು.—ಅವರು ಬೆಂಗಳೂರಿನಲ್ಲೇ ವಾಸ ಮಾಡಿದರೆ?

ಶ್ರೀ ಎಂ. ಎಸ್. ಕೃಷ್ಣನ್.—ಜನ ಅವರನ್ನು ಆರಿಸಿ ಕಳುಹಿಸಿರುವುದು ಅಲ್ಲಿ ಕೆಲಸ ಮಾಡುವುದಕ್ಕೆ. ಇಲ್ಲಿ ಅಲ್ಲ. ಒಂದು ವೇಳೆ ಶಾಸಕತ್ವದ ಅವಧಿ ಮುಗಿದ ಮೇಲೆ ಬೆಂಗಳೂರಿನಲ್ಲಿ ವಾಸಿಸಬೇಕೆಂದರೆ ಎಲ್ಲರಂತೆ ಅವರೂ ಅಪ್ಲಿಕೇಷನ್ ಹಾಕಿಕೊಂಡು ಬಿ. ಡಿ. ಎ. ರೂಲ್ಸ್ ಪ್ರಕಾರ ಸೈಟ್ ತೆಗೆದುಕೊಳ್ಳಲಿ. ಬೇಡ ಎಂದು ಹೇಳುವುದಿಲ್ಲ. ಕಾರ್ಮಿಕವರ್ಗ, ಬಂಡವಾಳಶಾಹಿ ವರ್ಗದ ತರಹ ಎಂ. ಎಲ್. ಎ. ವರ್ಗ ಎಂದು ಮಾಡುವುದು ಸರಿಯಲ್ಲ. ಸ್ಪೆಷಲ್ಲಾಗಿ ಶಾಸಕರಿಗೆ ಸೈಟುಗಳನ್ನು ಕೊಟ್ಟರೆ ಜನ ನೋಡಿ ನಗುತ್ತಾರೆ. ಚಪ್ಪಲಿ ತೆಗೆದುಕೊಂಡು ಜನ ಹಾರ ಹಾಕಬಹುದು. ಆದ್ದರಿಂದ ಹುಷಾರಾಗಿರಿ ಎಂದು ಹೇಳುತ್ತಿದ್ದೇನೆ. ಇತ್ತೀಚೆಗೆ ಬಿ.ಡಿ.ಎ. ಯಿಂದ ಇಬ್ಬರು ಅಧಿಕಾರಿಗಳನ್ನು ಕಿತ್ತುಹಾಕಿದ್ದಾರೆ. ಒಬ್ಬರು ಫೈನಾನ್ಸ್ ಮೆಂಬರ್ ಆಗಿದ್ದವರು, ಇನ್ನೊಬ್ಬರು ಕಮಿಷನರ್ ಆಗಿದ್ದವರು.

ಶ್ರೀ ಎಂ. ಚಂದ್ರಶೇಖರ್.—ನಾಲ್ಕು ಜನರು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಕಣ್ಣಿಗೆ ಬಿದ್ದಿದ್ದು ಇಬ್ಬರು, ಅಕ್ರಮ ವ್ಯವಹಾರಗಳಿಗೆ ಅಡ್ಡಿಪಡಿಸಿದರು ಎಂದು ಫೈನಾನ್ಸ್ ಮೆಂಬರ್ ಅನ್ನು ತೆಗೆದಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಅದು ನಿಜವೋ ಅಲ್ಲವೋ ಗೊತ್ತಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಯಾರೂ ತಪ್ಪು ಮಾಡದೇ ಇರುವುದಿಲ್ಲ. ಎಲ್ಲರೂ ಮಾಡುತ್ತಾರೆ. ನನಗೆ ತಿಳಿದಿರುವ ಮಟ್ಟಿಗೆ ಕಮಿಷನರ್ ಚೆನ್ನಾಗಿ ವಿಷಯ ತಿಳಿದುಕೊಂಡಿರುವವರು. ಅವರು ಹಿಂದಿನ ವ್ಯವಹಾರಗಳಲ್ಲಿ ಭಾಗಿಯಾಗಿದ್ದರೂ ಆಗಿರಬಹುದು. ಅದೂ ಬೇರೆಯವರ ಒತ್ತಡಕ್ಕೆ ಮಣಿದು ಆಗಿರಬಹುದು ಎಂದು ತಿಳಿದುಬಂದಿದೆ. ಅದನ್ನು ತಾವು ಎಗ್ಸಾಮಿನ್ ಮಾಡಿ. ಅದನ್ನು ಬಿಟ್ಟು ಈ ರೀತಿ ಕ್ರಮ ತೆಗೆದುಕೊಂಡರೆ ಯಾವ ಅಧಿಕಾರಿಯೂ ಧೈರ್ಯವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಅಧ್ಯಕ್ಷರೇ, ಇನ್ನು ಕಾರ್ಪೊರೇಷನ್ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಕಾರ್ಪೊರೇಷನ್ ಬಿ.ಡಿ.ಎ. ಗಿಂತಾ ಒಂದು ಹೆಜ್ಜೆ ಮುಂದೆ ಹೋಗಿ ಉತ್ತಮ ಕೆಲಸ ಮಾಡಿದೆ. ಇವತ್ತು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಟ್ಟು ಕಾರ್ಪೊರೇಷನ್‌ನ ಎಲೆಕ್ಷನ್ ಮಾಡಿದಿರಿ. ಇದು ಒಳ್ಳೆಯ ಕೆಲಸವಾಗಿದ್ದು ಇದಕ್ಕೆ ನನ್ನ ಅಭಿನಂದನೆಯನ್ನು ಜನತಾ ಪಕ್ಷಕ್ಕೆ ಸಲ್ಲಿಸುತ್ತೇನೆ, ಮಾನ್ಯ ಮೊಯಿಲಿಯವರ ಪಕ್ಷ ಅನೇಕ ವರ್ಷಗಳಿಂದ ಮಾಡದೇ ಇದನ್ನು ಜನತಾ ಪಕ್ಷ ಮಾಡಿದೆ. ಇವತ್ತು

ಬೆಂಗಳೂರು ನಗರ ಬೆಳೆಯುತ್ತಿದ್ದು, ನಗರದ ಒಳಗಡೆ ೧೨-೧೪ ಅಂತಸ್ತುಗಳ ಕಟ್ಟಡಗಳು ಏಳುತ್ತಿರುವುದನ್ನು ನೋಡುತ್ತಿದ್ದೇವೆ. ಇವುಗಳು ಏಳುವುದಕ್ಕೆ ಹಿಂದಿನ ಸರ್ಕಾರ ಅವಕಾಶ ಮಾಡಿಕೊಟ್ಟಿದ್ದರೂ ಇವುಗಳು ಏಳದಂತೆ ತಾವು ಬಂದ ಮೇಲೆ ನಿಲ್ಲಿಸಬೇಕಾಗಿತ್ತು, ಆದರೆ ನಿಲ್ಲಿಸಿಲ್ಲ ಎಂಬುದೇ ನನ್ನ ಟೀಕೆ. ಈವತ್ತು ಒಂದು ಸ್ಕ್ವಯರ್ ಫೂಟ್‌ಗೆ ೬ ರೂಪಾಯಿಗಳಂತೆ ಸೈಟನ್ನು ಕೊಟ್ಟು ಬಿಟ್ಟರೆ ಯಾವ ಸೈಡ್‌ಬ್ಯಾಕ್, ಯಾವ ಫ್ಲೋರ್ ಏರಿಯಾ, ಯಾವ ಜೋನಲ್ ರೆಗ್ಯುಲೇಷನ್ನೂ ಅಡ್ಡಿ ಬರುವುದಿಲ್ಲ. ಈ ೬ ರೂಪಾಯಿಗಳಂತೆ ಕೊಟ್ಟರೆ ಎಲ್ಲಾ ಮಾಫಿ ಮಾಡಿ ಲೈಸೆನ್ಸ್ ಕೊಡುತ್ತಾರೆ ಎಂದರೆ ಎಲ್ಲಾ ಲೆಕ್ಕ ತೆಗೆದುಕೊಂಡರೆ ಎಷ್ಟು ಆಗುತ್ತದೆ ಸ್ವಾಮಿ ? ಇದು ವರ್ತಮಾನ ಇರುವುದರಿಂದ ಈ ಬಗ್ಗೆ ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಕಪಾಲಿ ಚಿತ್ರಮಂದಿರದ ಪಕ್ಕದಲ್ಲಿ ಆದ ಹಾಗೆ ಬೇರೆ ಕಡೆ ಆಗುವುದರಲ್ಲಿ ಸಂದೇಹವಿಲ್ಲ. ಇನ್ನು ತಾವು ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳಿದ್ದೀರಿ. ತಾವು ಏನು ಪುಟ ೫ ರಲ್ಲಿ ಹೇಳಿದ್ದೀರಿ ಅವುಗಳಲ್ಲಿ ಮುಕ್ಕಾಲು ಭಾಗ ನಡೆದಿಲ್ಲ. ಯಾಕೆ ಈ ರೀತಿ ಹೇಳಬೇಕು ? ನಡೆಯದೇ ಇರುವ ಕೆಲಸ ನಡೆದಿದೆಯೆಂದು ಏಕೆ ಒಪ್ಪಿಕೊಳ್ಳುತ್ತೀರಿ. ಏನು ಇವುಗಳನ್ನು ಮನಸ್ಸಿನಲ್ಲಿ ತೆಗೆದುಕೊಂಡಿದ್ದೀರೋ, ಕಾರ್ಯಗತ ಮಾಡಬೇಕೆಂದು ತೆಗೆದುಕೊಂಡಿದ್ದೀರೋ ? ಇಲ್ಲಿ ನೀವು, ''ಟೇಕನ್ ಅಪ್'' ಎಂದಿದ್ದೀರಿ. ಮಲ್ಲೇಶ್ವರದಲ್ಲಿ ಮತ್ತು ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮಾಡಿದ್ದೇವೆಂದಿದ್ದೀರಿ. ನಾನು ಅದನ್ನು ನೋಡಿಯೇ ಇಲ್ಲ. ಮಹಾಲಕ್ಷ್ಮಿ ಲೇಔಟ್‌ನಲ್ಲಿ ಈಜುಕೊಳದ ಕೆಲಸ ಏನು ಆಗುತ್ತಿದೆಯೋ ಗೊತ್ತಿಲ್ಲ. ಅಲ್ಲಿ ಹುಲ್ಲು ಕೀಳುವ ಕೆಲಸ ನಡೆಯುತ್ತಿದೆ. ಇನ್ನು ರಸ್ತೆ ಆಸ್‌ಫಾಲ್ಟಿಂಗ್ ಬಗ್ಗೆ ಹೇಳಿದ್ದೀರಿ. ಮೊನ್ನೆ ಮಳೆ ಬಂದು ರಸ್ತೆಯಲ್ಲಿ ಪಾಟ್ ಹೋಲ್ಸ್ ಬಿದ್ದು ಅದನ್ನು ತುಂಬಲು ಕಾಂಟ್ರಾಕ್ಟರ್ಸ್ ಕೊಟ್ಟು ಅವರು ಸಿಕ್ಕಾಪಟ್ಟೆ ದುಡ್ಡು ಮಾಡಿದ್ದಾರೆಂದು ವರ್ತಮಾನ ಇದೆ. ಈ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಕ್ಷೇತ್ರದಲ್ಲಿ ವೆಟರ್ನರಿ ಹಾಸ್ಪಿಟಲ್‌ಗೆ ಜಾಗ ಕೊಡಬೇಕೆಂದು ಕೇಳಿದ್ದೆ. ಇನ್ನೂ ಕೊಟ್ಟಿಲ್ಲ. ಅದನ್ನು ಕೊಡಿಸಬೇಕೆಂದು ಹೇಳುತ್ತೇನೆ. ಇವತ್ತು ಬಿ.ಡಿ.ಎ. ಮತ್ತು ಬಿ.ಸಿ.ಸಿ. ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯವರಲ್ಲಿ ಸರಿಯಾದ ಕೋಆರ್ಡಿನೇಷನ್ ಇಲ್ಲ. ಒಬ್ಬರು ಒಂದು ರೀತಿ ಮಾಡಿದರೆ ಇನ್ನೊಬ್ಬರು ಇನ್ನೊಂದು ರೀತಿ ಮಾಡುತ್ತಾರೆ. ಬಿ.ಡಿ.ಎ. ನವರು ಹಾಗೂ ಬಿ.ಸಿ.ಸಿ.ನವರು ಹಣ ಕೊಟ್ಟರೆ ನಾವು ಕೆಲಸ ತೆಗೆದುಕೊಳ್ಳುತ್ತೇವೆಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರು ಹೇಳುತ್ತಾರೆ. ೨೫ ಪರ್ಸೆಂಟ್ಸ್ ಕೊಡುತ್ತೇವೆ ರಿವಾಲ್ವಿಂಗ್ ಫಂಡ್ ರೀತಿಯಲ್ಲಿ ಮಾಡಿಕೊಳ್ಳಿ ಎಂದು ಹೇಳಿದರೂ ಅವರು ವಿಚಾರ ಮಾಡುವುದಿಲ್ಲ. ಈಗ ಏನಾದರೂ ವ್ಯವಸ್ಥೆ ಮಾಡಿದ್ದರೇನೋ ಕೆಲಸ ನಡೆಯುತ್ತಿದೆ. ಇವತ್ತು ರಸ್ತೆ ದೀಪಗಳ ಬಗ್ಗೆ ಕೆ. ಇ. ಬಿ. ಯವರು ವಹಿಸಿಕೊಂಡಿರುವುದರಿಂದ ಬಹಳ ಅವ್ಯವಸ್ಥೆ ಆಗಿದೆ. ಆದ್ದರಿಂದ ಇದನ್ನು ತಾವೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಆಕ್ಟ್ರಾಯ್ ತೆಗೆದಿರುವುದರಿಂದ ಡಿಮ್ಯಾಂಡ್ ಅಂಡ್ ಕಲೆಕ್ಷನ್‌ನಲ್ಲಿ ಬಹಳ ವ್ಯತ್ಯಾಸ ಇದೆ. ಇದು ಎಲ್ಲಾ ಮುನಿಸಿಪಾಲಿಟಿಯಲ್ಲೂ ಆಗಿದೆ. ಕಲೆಕ್ಷನ್ ಆದಮೇಲೆ ಏನು ಬ್ಯಾಲೆನ್ಸ್ ಹಣವನ್ನು ತಾವು ಕೊಡುತ್ತಿದ್ದೀರಿ ಅದನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ ? ಅವನ್ನು ಪೂರ್ತಿ ಕೊಡುತ್ತಿದ್ದೀರಾ ? ಇವತ್ತು ಕಾವೇರಿ ೨ನೇ ಹಂತದ ಯೋಜನೆ ಆಗಿದ್ದು ೩ನೇ ಹಂತದ ಯೋಜನೆಗೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೀರಿ. ಇದರಲ್ಲಿ ತಾವು ಸ್ವಲ್ಪ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಒಬ್ಬ ದೊಡ್ಡ ಎಂಜಿನಿಯರ್ ನಮ್ಮ ಬೆಂಗಳೂರು ನಗರದಲ್ಲಿ ಇದ್ದಾರೆ. ಅವರು ದೆಹಲಿ ವಾಟರ್ ಸಪ್ಲೈನಲ್ಲಿ ಮುಖ್ಯ ಎಂಜಿನಿಯರ್ ಆಗಿದ್ದವರು. ಬೆಂಗಳೂರಿಗೆ ನೀರು ಸರಬರಾಜು ಮಾಡುವ ಬಗ್ಗೆ ಚಿಕ್ಕಮಗಳೂರಿನ ಯಗಚಿಹೊಳೆ ರಿಸರ್ವಾಯರ್‌ನಿಂದ ನೀರು ತಂದರೆ ತಾವು ಏನು ಅಂದಾಜು ಮಾಡಿದ್ದೀರಿ ಅದರಲ್ಲಿ ಅರ್ಧದಷ್ಟು ಹಣ ಉಳಿತಾಯವಾಗುತ್ತದೆಂದು ಅವರು ಹೇಳಿದ್ದಾರೆ. ಯಗಚಿ ಪ್ರಾಜೆಕ್ಟ್ ಬೆಂಗಳೂರಿನ ಮಟ್ಟಕ್ಕಿಂತ ೧೦೦೩ ಅಡಿ ಎತ್ತರದಲ್ಲಿದ್ದು ಇದರಲ್ಲಿ ಕಾವೇರಿಯಲ್ಲಿರುವಂತೆ ನೀರು ಪಂಪ್ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಇವತ್ತು ಕಾವೇರಿ ನೀರು ತರಬೇಕಾದರೆ ೯೩೦ ಅಡಿಗಳವರೆಗೆ ನೀರನ್ನು ಎತ್ತರಕ್ಕೆ ಪಂಪ್ ಮಾಡಬೇಕಾಗುತ್ತದೆ. ಈ ಬಗ್ಗೆ ಅವರು ಮ್ಯಾಪ್ ಕೊಟ್ಟಿದ್ದಾರೆ. ಅದನ್ನು ತಮಗೆ ಕೊಡುತ್ತೇನೆ. ತಾವು ಈ ಬಗ್ಗೆ ಆಲೋಚನೆ ಮಾಡಿಯೆಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪಿ. ಗಂಗಾಧರಪ್ಪ (ತಿಪಟೂರು).—ಅಧ್ಯಕ್ಷರೇ, ಈ ದಿವಸ ಡಿಮ್ಯಾಂಡ್ ಸಂಖ್ಯೆ ೩೧-೩೨-೨೬ ಇವುಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಾವು ನಗರದ ನೀರು ಸರಬರಾಜು ಬಗ್ಗೆ, ಸ್ವಚ್ಛತೆಯ ಬಗ್ಗೆ ವಸತಿ ಬಗ್ಗೆ ಆಗಾಗ ಮಾತನಾಡುತ್ತಿರುತ್ತೇವೆ. ನೀರಿನ ವ್ಯವಸ್ಥೆ ಬಗ್ಗೆ ಹೇಳುವುದಾದರೆ ಮುನಿಸಿಪಾಲಿಟಿಗಳಲ್ಲಿ ಹಾಕಿರುವ ಬೋರ್‌ವೆಲ್‌ಗಳು ಕೆಟ್ಟುಹೋಗಿದ್ದು ಆ ಬಗ್ಗೆ ಅಧಿಕಾರಿಗಳು ನಿಗಾ ವಹಿಸದೇ ಇದ್ದು, ನಂತರ ಸಾರ್ವಜನಿಕರು ಕಂಪ್ಲೇಂಟ್ ಕೊಟ್ಟಮೇಲೆ ಅಧಿಕಾರಿಗಳು ಬಂದು ನೋಡುತ್ತಾರೆ. ಎಲ್ಲಿ ಪಂಪ್‌ಸೆಟ್ಟುಗಳು ಕೆಟ್ಟುಹೋಗುತ್ತವೆ ಅವನ್ನು ತಕ್ಷಣ ಅಧಿಕಾರಿಗಳು ನೋಡಿ ರಿಪೇರಿ ಮಾಡಿಸಬೇಕಾಗುತ್ತದೆ. ಇನ್ನು ಏರ್ ಕಂಪ್ರೆಷನ್ ನಂತಹ ಓಬಿರಾಯನ ಪದ್ಧತಿಯಲ್ಲಿ ನೀರನ್ನು ಎತ್ತುತ್ತಿರುವುದರಿಂದ ಇದರಲ್ಲಿ ಸಾಕಷ್ಟು ವಿದ್ಯುತ್ ಉಪಯೋಗವಾಗುತ್ತಿದೆ. ಆದ್ದರಿಂದ ಬೇರೆ ಆಧುನಿಕ ರೀತಿಯಲ್ಲಿ ನೀರನ್ನು ಮೇಲೆತ್ತುವ ವ್ಯವಸ್ಥೆ ಆಗಬೇಕಾಗಿದೆ. ಹಿಂದೆ, ಕುಡಿಯಲು ನೀರು ಕೊಡಿ ಎಂದರೆ ನೀರು ಕುಡಿಸುತ್ತಾರೆ ಎಂದು ಹೇಳುತ್ತಿದ್ದರು. ಆ ರೀತಿ ಆಗಬಾರದು. ಇವತ್ತು ಕುಡಿಯಲು ನೀರು ಕೊಡಬೇಕೇ ಹೊರತು ನೀರು ಕುಡಿಸೋ ವ್ಯವಸ್ಥೆ ಆಗಬಾರದು. ಇನ್ನು ನಗರಗಳನ್ನು ಸ್ವಚ್ಛವಾಗಿಡುವ ಜನರ ಸ್ವಚ್ಛತೆಯ ಬಗ್ಗೆ ನಾವು ನೋಡಬೇಕಾಗುತ್ತದೆ. ನಗರದ ಕಸ ಗುಡಿಸುವ ಸ್ವೀಪರ್ಸ್ ಏನಿದ್ದಾರೆ ಅವರು ಓಬಿರಾಯನ ಕಾಲದಿಂದಲೂ ಗುಡಿಸಲುಗಳಲ್ಲೇ ವಾಸ ಮಾಡುತ್ತಿದ್ದಾರೆ ಅವರ ಗುಡಿಸಲುಗಳು ಆಗಾಗ ಅಗ್ನಿಗೆ ಆಹುತಿಯಾಗಿ ಅವರು ಮನೆಮಠ ಕಳೆದುಕೊಳ್ಳುತ್ತಲೇ ಬಂದಿದ್ದಾರೆ. ಆದ್ದರಿಂದ ಇವರಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಆಗಬೇಕೆಂಬ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮುಖಾಂತರ ತರಬಯಸುತ್ತೇನೆ. ಆಕ್ಟ್ರಾಯಿ ಸಿಬ್ಬಂದಿಗೆ ಕೆಲಸ ಇಲ್ಲದೆ, ತೂಗಡಿಸುವವರಿಗೆ ಹಾಸಿಗೆ ಕೊಟ್ಟಂತಾಗಿದೆ. ಆಕ್ಟ್ರಾಯಿ ಹೋದ ಮೇಲೆ ಯಾವ ಕೆಲಸವೂ ಇಲ್ಲ, ಚೀಫ್ ಆಫೀಸರ್ ಕಳುಹಿಸಿಕೊಟ್ಟರೆ ಉಂಟು ಇಲ್ಲದೇ ಇದ್ದರೆ ಏನೂ ಇಲ್ಲ. ಒಬ್ಬರು ಮಾಡುವಂಥ ಕೆಲಸಕ್ಕೆ ಆರು ಜನ ಹೋಗುತ್ತಾರೆ. ತಿಪಟೂರಿನಲ್ಲಿ ಸುಮಾರು ೩೦ ಜನ ಆಕ್ಟ್ರಾಯಿ ಸಿಬ್ಬಂದಿ ಇದೆ, ಇವರನ್ನು ಬೇರೆ ಕಡೆಗೆ ಕಳುಹಿಸಿಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವರನ್ನು ಕಳುಹಿಸಿಕೊಡುವುದರಿಂದ ಮುನಿಸಿಪಾಲಿಟಿ ಮೇಲಿನ ಹೊರೆ ತಪ್ಪುತ್ತದೆ. ಮನೆ ಕಂದಾಯ ಬಗ್ಗೆ ಹೇಳುವುದಾದರೆ ಎಷ್ಟೋ ಮನೆಗಳು ತೆರಿಗೆ ವ್ಯಾಪ್ತಿಯೊಳಗೆ ಬಂದಿಲ್ಲ. ಅಧಿಕಾರಿಗಳು ಕಂಡರೂ ಕಾಣದ ಹಾಗೆ ಇರುತ್ತಾರೆ. ಕಳೆದ ಹತ್ತಾರು ವರ್ಷಗಳಿಂದ ದೊಡ್ಡ ದೊಡ್ಡ ಮನೆಗಳಿಗೆ ಕಡಿಮೆ ಕಂದಾಯ ಹಾಕತಕ್ಕಂಥದ್ದು, ಜೊತೆಗೆ ಕಂದಾಯ ವಸೂಲು ಮಾಡದೇ ಇರುವಂಥದ್ದು ಇದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದಿಂದ ಕೊಂಡುಕೊಂಡ ಕಟ್ಟಡಗಳು ರೆಕಾರ್ಡ್‌ನಲ್ಲಿ ಮಾತ್ರ ಟೇಕ್ ಓವರ್ ಮತ್ತು ಹ್ಯಾಂಡ್ ಓವರ್ ಎಂದು ಹೇಳುತ್ತಾರೆ, ನಾನು ಅದನ್ನು ಹ್ಯಾಂಗ್‌ಓವರ್ ಎಂದು ಹೇಳುತ್ತೇನೆ. ಈ ಒಂದು ಕೆಲಸ ಮಂದಗತಿಯಿಂದ ನಡೆಯುತ್ತಿದೆ. ತಿಪಟೂರಿನಲ್ಲಿ ೧೯೭೭ನೇ ಇಸವಿಯಲ್ಲಿ ತಾಲ್ಲೂಕು ಆಫೀಸ್ ಕಟ್ಟಡ ತೆಗೆದುಕೊಂಡಿದ್ದರೂ ಅದಕ್ಕೆ ಸಂಬಂಧಪಟ್ಟ ಫೈಲ್ ಎಲ್ಲಿದೆ ಎಂದು ಟ್ರೇಸ್ ಮಾಡುವುದೇ ಕಷ್ಟವಾಗಿದೆ. ಇಂತಹ ವ್ಯವಸ್ಥೆಯನ್ನು ಸರ್ಕಾರದವರು ತಪ್ಪಿಸಬೇಕು. ಕೆ.ಎಸ್.ಆರ್.ಟಿ.ಸಿ. ಇನ್ನಿತರೆ ಸಂಘಸಂಸ್ಥೆಗಳಿಗೆ ಜಮೀನು ಕೊಡಬೇಕಾದರೆ ೧೯ ಪ್ರಶ್ನೆಗಳು ಇರುತ್ತವೆ. ಇದಕ್ಕೆ ಉತ್ತರ ಕೊಡಬೇಕಾದರೆ ಐ.ಎ.ಎಸ್. ಅಧಿಕಾರಿಗಳನ್ನೇ ಕೂರಿಸಬೇಕು. ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಹೋದ ಫೈಲು ವಾಪಸ್ಸು ಬರಬೇಕಾದರೆ ಮೂರು ತಿಂಗಳು ಆಗುತ್ತದೆ. ವಿನಾಕಾರಣ ಆಗುವ ವಿಳಂಬವನ್ನು ತಪ್ಪಿಸಿ, ಆದಷ್ಟು ಜಾಗ್ರತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಮುನಿಸಿಪಾಲಿಟಿಯವರು ಜಮೀನಿನ ಬೆಲೆ ಜಾಸ್ತಿಯಾದಾಗ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋಗುತ್ತಾರೆ. ಕಡಿಮೆ ಇದ್ದಾಗ ಹೋಗುವುದಿಲ್ಲ. ಬೆಲೆ ಜಾಸ್ತಿ ಇದ್ದಾಗ ಕಡಿಮೆ ಬೆಲೆಗೆ ಯಾರು ಜಮೀನು ಬಿಟ್ಟುಕೊಡುವುದಿಲ್ಲ. ಪ್ರಭಾವಶಾಲಿಗಳು ಜಮೀನು ಬಿಟ್ಟುಕೊಡುವುದಿಲ್ಲ, ಕೈಲಾಗದವರು ಬಿಟ್ಟುಕೊಡುತ್ತಾರೆ. ಕಡಿಮೆ ಬೆಲೆ ಇದ್ದಾಗ ಯೋಗ್ಯವಾದ ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸೈಟುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಕೊಳಚೆ ಪ್ರದೇಶಗಳು ಎಲ್ಲಾ ಪಟ್ಟಣಗಳಲ್ಲಿಯೂ ಬೆಳೆದುಬಂದಿವೆ. ಇದರಿಂದ ಊರಿನ ವಾತಾವರಣಕ್ಕೆ ತೊಂದರೆಯಾಗಿದೆ. ಭೂ ಸ್ವಾಧೀನ ಕಾರ್ಯವನ್ನು ತೀವ್ರಗೊಳಿಸಿ, ಸೈಟು ಇಲ್ಲದವರಿಗೆ ಸೈಟು ಕೊಟ್ಟು, ಜೊತೆಗೆ ಕೊಳಚೆ ನಿವಾಸಿಗಳಿಗೂ ನಿವೇಶನಗಳು ದೊರೆಯುವಂತೆ ಮಾಡಿದರೆ, ಕೊಳಚೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರದೇಶಗಳು ಬೆಳೆಯುವುದನ್ನು ತಪ್ಪಿಸಬಹುದೆಂದು ಹೇಳುತ್ತೇನೆ. ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ರಾಷ್ಟ್ರೀಯ ಮತ್ತು ಪ್ರಾಂತೀಯ ಹೆದ್ದಾರಿಗಳು ಹಾದುಹೋಗುತ್ತವೆ. ತಿಪಟೂರಿನಲ್ಲಿ ಒಂದು ತಿಂಗಳಲ್ಲಿ ಎರಡು ಅಪಘಾತಗಳು ಆಗಿವೆ. ಮಧ್ಯೆ ಹೋಗತಕ್ಕ ರಸ್ತೆಗಳನ್ನು ತಪ್ಪಿಸಿ, ಡೀವಿಯೇಷನ್ ರಸ್ತೆಗಳಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ತಿಪಟೂರು ತಾಲ್ಲೂಕಿನಲ್ಲಿ ಅರಳುಕುಪ್ಪೆ ಗ್ರಾಮದಲ್ಲಿ ಹೊಯ್ಸಳರ ಕಾಲದಲ್ಲಿ ಕಟ್ಟಲಾದ ದೇವಸ್ಥಾನ ಇದೆ. ಅದು ಬಿ. ಹೆಚ್. ರಸ್ತೆಯಲ್ಲಿ ಬರುತ್ತದೆ. ಅಲ್ಲಿ ಪ್ರವಾಸಿಗರು ತಂಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ತಮಿಳುನಾಡಿನಲ್ಲಿ ಪ್ರವಾಸೋದ್ಯಮ ಕೇಂದ್ರಗಳು ಬಹಳ ಚೆನ್ನಾಗಿವೆ. ಅಲ್ಲಿ ರಸ್ತೆಗಳನ್ನು ಕೂಡ ಚೆನ್ನಾಗಿ ಇಟ್ಟಿದ್ದಾರೆ. ನಮ್ಮ ಸರ್ಕಾರದವರು ಕೇಂದ್ರದೊಡನೆ ವ್ಯವಹರಿಸಿ ವಿಶೇಷ ಮನೋಭಾವನೆಯನ್ನು ಇಟ್ಟುಕೊಂಡು ನಮ್ಮ ಬೇಡಿಕೆಗಳು ಪೂರೈಸುವುದಕ್ಕೆ ಏರ್ಪಾಡು ಮಾಡಬೇಕು. ''ಎತ್ತು ಏರಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು'' ಎನ್ನುವಂತೆ ಮಾಡಬಾರದೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ದೊಡ್ಡಮೇಟಿ (ರೋಣ).— ಮಾನ್ಯ ಅಧ್ಯಕ್ಷರೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಯವರು ಸದನದ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ, ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ನಗರಗಳು ಸುಂದರವಾಗಿ ಬೆಳೆಯಬೇಕು. ನಿಜ. ವಕ್ರವಾಗಿ ಬೆಳೆಯಬಾರದು. ನಗರಗಳು ಸುಂದರವಾಗಿ ಬೆಳೆಯಬೇಕಾದರೆ, ಪಕ್ಕದಲ್ಲಿರುವ ಹಳ್ಳಿಗಳ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಹಳ್ಳಿಗಳು ವಕ್ರವಾಗಿ ಬೆಳೆಯುವುದರಿಂದ ನಗರದ ಸೌಂದರ್ಯಕ್ಕೆ ಕುಂದು ಬರುತ್ತದೆ. ಅಲ್ಲದೆ, ಒಳಚರಂಡಿ ವ್ಯವಸ್ಥೆಯನ್ನು ಕೂಡ ಸರಿಯಾಗಿ ಮಾಡಬೇಕು. ಕೊಳಚೆ ನಿರ್ಮೂಲನ ಮಾಡುವುದಕ್ಕೆ ಮುಂಚೆ ಕೊಳಚೆ ಪ್ರದೇಶಗಳು ಹುಟ್ಟದಹಾಗೆ ನೋಡಿಕೊಳ್ಳಬೇಕು. ಕೊಳಚೆ ಪ್ರದೇಶಗಳಲ್ಲಿ ಹಿಂದುಳಿದವರು ಇರುವುದರಿಂದ ಅವರಿಗೆ ಯೋಗ್ಯವಾದ ವಾಸದ ಮನೆಗಳನ್ನು ಕಟ್ಟಿಸಿಕೊಡಬೇಕು. ಮುನ್ನಡೆ ಯೋಜನೆ ಚುನಾವಣೆ ಕಾವಿನ ಸಮಯದಲ್ಲಿ ಹುಟ್ಟಿದಂಥ ಯೋಜನೆ. ಯೋಜನೆ ಮುನ್ನಡೆದಿದೆ, ಅದನ್ನು ಹಿಡಿದಂತ ಜನ ಹಿನ್ನೆಡೆದಿದ್ದಾರೆ. ಸರ್ಕಾರದವರು ಪೌರಕಾರ್ಮಿಕರ ವಿಚಾರದಲ್ಲಿಯೂ ಹೆಚ್ಚಿನ ಕಾಳಜಿ ಇಡಬೇಕು. ದಿನಗೂಲಿ ಮೇಲೆ ಕೆಲಸ ಮಾಡುವವರು ಬಹಳ ಜನ ಇದ್ದಾರೆ, ಇವರಿಗೆ ಖಾಯಂ ಉದ್ಯೋಗ ದೊರಕಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ರಾಜಕೀಯ ಒಕ್ಕರೆ ಎಂಥ ದುರಂತವಾಗುತ್ತದೆ ಎನ್ನುವುದಕ್ಕೆ ಗದಗ ಬೆಟಗೇರಿ ಕುಡಿಯುವ ನೀರಿನ ಯೋಜನೆಯೇ ಸಾಕ್ಷಿಯಾಗಿದೆ. ಒಬ್ಬರು ಘಟಪ್ರಭಾದಿಂದ ನೀರು ತರುತ್ತೇವೆಂದರೆ, ಮತ್ತೊಬ್ಬರು ತುಂಗಭದ್ರಾದಿಂದ ತರುತ್ತೇವೆಂದು ಹೇಳುತ್ತಾರೆ, ಮಗದೊಬ್ಬರು ಘಟಾರದಿಂದ ತರುತ್ತೇವೆಂದು ಹೇಳುತ್ತಾರೆ. ಅಲ್ಲಿ ರಾಜಕೀಯ ಒಕ್ಕಿದ್ದರಿಂದ ಬಡ ಜನತೆ ನೀರಿಗಾಗಿ ಪರಿತಪಿಸುತ್ತಿದ್ದಾರೆ. ಆದರೆ ರಾಜಕಾರಣಗಳಿಗೆ ಸಾಕಷ್ಟು ನೀರು ಸಿಗುತ್ತಿದೆ. ಎಲ್ಲದರಲ್ಲಿಯೂ, ಭ್ರಷ್ಟಾಚಾರ ಭ್ರಷ್ಟಾಚಾರ ಎಂದು ಹೇಳುತ್ತೇವೆ. ೧ ಕೋಟಿ ೨ ಕೋಟಿ ನುಂಗಿದವರೂ ಸಹ ಇದ್ದಾರೆ. ಇಲ್ಲಿ ೧-೨ ಕೋಟಿ ರೂಪಾಯಿಗಳನ್ನು ನುಂಗಿದ್ದು ದೊಡ್ಡ ವಿಚಾರವಲ್ಲ, ಅದನ್ನು ಅರಗಿಸಿಕೊಂಡಿರುವುದು ದೊಡ್ಡ ವಿಚಾರವಾಗಿದೆ. ಈ ಭ್ರಷ್ಟಾಚಾರವೆಂಬುದು ಒಂದು ಕರಿಯ ಬೆಕ್ಕು ಇದ್ದಂತೆ. ಇದು ಕತ್ತಲೆಯಲ್ಲಿ ಕುಳಿತಿರುವಂತಹ ಭ್ರಷ್ಟಾಚಾರವಾಗಿದೆ. ಕತ್ತಲೆಯಲ್ಲಿ ಕುಳಿತಿರುವ ಇಂತಹ ಕರಿಯ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ?

ಒಬ್ಬರು ಸದಸ್ಯರು.—ನೀವೇನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ಜ್ಞಾನದೇವ ದೊಡ್ಡಮೇಟಿ.—ಕರಿಯ ಬೆಕ್ಕು ಸಿಕ್ಕಬೇಕಲ್ಲ ? ಅದರ ಕೊರಳಿಗೆ ಗಂಟೆ ಕಟ್ಟಲು ಹೋದವರು ತಮ್ಮ ಕೊರಳಿಗೇ ಗಂಟೆಯನ್ನು ಕಟ್ಟಿಕೊಂಡಂತೆ ಆಗಿದೆ. ಮೀನಿನ ಹೆಜ್ಜೆ ಗುರುತನ್ನು ಕಂಡುಹಿಡಿಯಲು ಯಾವ ರೀತಿ ಸಾಧ್ಯವಿಲ್ಲವೋ ಅದೇ ರೀತಿ ಈ ಭ್ರಷ್ಟಾಚಾರ ಎಂಬುದು ಇದೆ. ಇದನ್ನು ಪತ್ತೆ ಮಾಡಲು ಸಾಹಸ ಮಾಡಬೇಕಾಗಿದೆ. ಆ ಸಾಹಸ ಇನ್ನೂ ಆಗಿಲ್ಲ, ಅದು ಆಗುವುದೂ ಇಲ್ಲ. ಏಕೆಂದರೆ ಜನರ ಮನಸ್ಸಿನ ಪರಿವರ್ತನೆ ಮುಖಾಂತರ ಇದನ್ನು ಹೋಗಲಾಡಿಸುವ ಕೆಲಸ ಆಗಬೇಕು, ಅದು ಇನ್ನೂ ಆಗಿಲ್ಲ. ಮೊದಲು ರಾಜಕೀಯ ಭ್ರಷ್ಟಾಚಾರ ಹೋದರೆ ಎಲ್ಲಾ ಹಂತಗಳಲ್ಲಿಯೂ ಇರುವ ಭ್ರಷ್ಟಾಚಾರ ತನ್ನಿಂದ ತಾನೇ ಹೋಗುತ್ತದೆ.

ಮತ್ತೊಂದು ಮುಖ್ಯ ವಿಚಾರವೆಂದರೆ, ಮಾನ್ಯ ರಘುಪತಿಯವರ ಇಲಾಖೆಗೆ ಸಂಬಂಧ ಪಟ್ಟಿದ್ದು. ಈಗ ೫೦ ಪರ್ಸೆಂಟ್ ಸಬ್ಸಿಡಿಯನ್ನು ಚಲನ ಚಿತ್ರಗಳಿಗೆ ಯಾವ ಆಧಾರದ ಮೇಲೆ ಕೊಡುತ್ತಿದ್ದಾರೆಂಬುದು ನಮಗೆ ತಿಳಿಯುತ್ತಿಲ್ಲ. ಇದಕ್ಕೆ ಯಾವ ಆಧಾರವಿದೆ? ಇದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಇನ್ನು ಸಾಕ್ಷಾ ಚಿತ್ರಗಳೆಂದು ತೆಗೆಯುತ್ತಿದ್ದಾರೆ. ಇದನ್ನು ಯಾರು ನೋಡಬೇಕು ಕುವೆಂಪು, ಬೇಂದ್ರೆ, ಗುಬ್ಬಿ ವೀರಣ್ಣ ಮುಂತಾದವರ ಸಾಕ್ಷಾ ಚಿತ್ರಗಳು ಬಂದಿವೆ. ಇವುಗಳೆಲ್ಲಾ ಡಬ್ಬಿಗಳಲ್ಲಿಯೇ ಕೊಳೆಯುತ್ತಿವೆ. ಇದರಿಂದ ಯಾರಿಗೂ ಸುಖವಿಲ್ಲ. ಹಳ್ಳಿಯ ಜನರಿಗೆ ಸುಖ ಕೊಡುವಂತಹ ಚಿತ್ರಗಳನ್ನು ಹಳ್ಳಿಗಳಲ್ಲಿ ತೋರಿಸುವಂತಹ ವ್ಯವಸ್ಥೆ ಮಾಡಬೇಕು. ಈಗ ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನವನ್ನು ಏನು ಕೊಡಲಾಗುತ್ತಿದೆ, ಅದನ್ನು ಸಕಾಲಕ್ಕೆ ಕೊಡಬೇಕು. ಸಕಾಲದಲ್ಲಿ ಕೊಟ್ಟರೆ ಅವರು ನಿಮ್ಮನ್ನು ನೆನಸಿಕೊಳ್ಳುತ್ತಾರೆ. ಈ ರೀತಿ ಮಾಡದೆ ಚಲನಚಿತ್ರ ನಿರ್ಮಾಪಕರು ಅನೇಕ ಸಲ ತಮ್ಮ ಹತ್ತಿರ ಎಡೆತಾಕಿ ಸತ್ತಮೇಲೆ ಕೊಟ್ಟರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಸಕಾಲದಲ್ಲಿ ಕೊಡುವುದು ಒಳ್ಳೆಯದು.

ಕೊನೆಯದಾಗಿ, ನಾಗರಿಕರೆಲ್ಲರೂ ಸಹ ಪೌರ ಪ್ರಜ್ಞೆಯನ್ನು ಬೆಳೆಸಿಕೊಂಡರೆ ಯಾವುದೇ ಅನಾಹುತಗಳಾಗುವುದಿಲ್ಲ, ಬಹು ಅಂತಸ್ತಿನ ಕಟ್ಟಡಗಳು ಬೀಳುವುದಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಎಲ್ಲರೂ ಇದರ ಕಡೆ ಗಮನ ಕೊಟ್ಟು ಕೆಲಸ ಮಾಡೋಣವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಡಿ. ಗೋವಿಂದರಾಜ್ (ಶಾಂತಿನಗರ).—ಮಾನ್ಯ ಅಧ್ಯಕ್ಷರೆ, ಆಸ್ಟಿನ್ ಟೌನ್‌ನಲ್ಲಿ ಈ ಹಿಂದಿನ ಸರ್ಕಾರದವರು ೩೦೦ ಮನೆಗಳನ್ನು ರಸ್ತೆಯ ಮಟ್ಟಕ್ಕಿಂತ ಎರಡು ಅಡಿ ಕೆಳಗೆ ಕಟ್ಟಿಸಿರುವುದರಿಂದ ಮಳೆ ಬಂದರೆ ನೀರೆಲ್ಲಾ ಮನೆಯ ಒಳಗೆ ಹೋಗುತ್ತದೆ. ಇದರಿಂದ ಅಲ್ಲಿ ವಾಸ ಮಾಡುವವರಿಗೆ ತೊಂದರೆಯಾಗುತ್ತಿದೆ. ಇನ್ನು ಮುಂದೆ ಹುಡ್ಕೋ ಯೋಜನೆ ಕೆಳಗೆ ಮನೆ ಕಟ್ಟಿಸುವಾಗ ಒಳ್ಳೆಯ ಜಾಗದಲ್ಲಿ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಸ್ಟಿನ್ ಟೌನ್ ಲೇಔಟ್ ಕೆಲಸ ಮುಗಿದ ನಂತರವೂ ಬಿ.ಡಿ.ಎ.ನವರು ಕಾರ್ಪೊರೇಷನ್ ಅವರಿಗೆ ವಹಿಸಿಕೊಟ್ಟಿಲ್ಲ. ಈಗ ಬಿ.ಡಿ.ಎ.ನವರು ಅಲ್ಲಿ ರಸ್ತೆಗಳನ್ನು ರಿಪೇರಿ ಮಾಡಿಸುತ್ತಿಲ್ಲ ಕಸ ಗುಡಿಸಲು ಸ್ವೀಪರ್‌ಸ್‌ನ್ನು ಇಟ್ಟಿಲ್ಲ, ದೀಪಗಳ ವ್ಯವಸ್ಥೆ ಮಾಡಿಲ್ಲ, ಆದ್ದರಿಂದ ಈ ಲೇಔಟ್‌ನ್ನು ಕಾರ್ಪೊರೇಷನ್‌ಗೆ ವಹಿಸಿ ಕೊಟ್ಟರೆ ಅವರು ಚೆನ್ನಾಗಿ ಮೇನ್‌ಟೇನ್ ಮಾಡುತ್ತಾರೆಂದು ಹೇಳುತ್ತೇನೆ. ಈ ಮೊದಲು ವಿವೇಕನಗರದಲ್ಲಿ ನೂರು ಸೈಟ್‌ಗಳನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿದ್ದರು. ಆದರೆ ಯಾರಿಗೆ ಕೊಟ್ಟರು, ಎಷ್ಟು ಸೈಟ್‌ಗಳನ್ನು ಉಚಿತವಾಗಿ ಕೊಟ್ಟರೆಂಬುದು ನಮಗೆ ಗೊತ್ತಿಲ್ಲ. ಉಚಿತವಾಗಿ ಸೈಟ್‌ಗಳನ್ನು ಪಡೆದವರು ಈಗಾಗಲೇ ಮಾರಾಟ ಮಾಡಿ ಬಿಟ್ಟಿದ್ದಾರೆ. ಈ ಸೈಟ್‌ಗಳ ಪಕ್ಕದಲ್ಲಿಯೇ ಮತ್ತಷ್ಟು ಖಾಲಿ ಜಾಗವಿದೆ. ಈ ಜಾಗದಲ್ಲಿ ಕೆಲವರು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟುತ್ತಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಬಿ.ಡಿ.ಎ. ಚೇರ್‌ಮನ್‌ರವರಿಗೆ ಕಾಗದ ಬರೆದರೂ ಸಹ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ಈಗಲಾದರೂ ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಅಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟುತ್ತಿರುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ದೊಮ್ಮಲೂರು ಲೇಔಟ್‌ನಲ್ಲಿ ಬಿ.ಡಿ.ಎ. ನವರು ಮನೆಗಳನ್ನು ಕಟ್ಟಿಸಲು ಪ್ರಾರಂಭ ಮಾಡಿದ ಮೇಲೆ ಪೂರ್ತಿ ಮಾಡಿ ಮುಗಿಸದ ಕಾರಣ ಈ ಮನೆಗಳಲ್ಲಿರುವ ಕದಗಳನ್ನು, ವಾಸ್‌ಕಲ್‌ಗಳನ್ನು ಕೆಲವರು ಕಳ್ಳತನದಿಂದ ಸಾಗಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳನ್ನು ಸಹ ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಆದರೆ ಆ ಕೆಲಸ ಮಾತ್ರ ಮುಗಿದಿಲ್ಲ. ಈ ಬಗ್ಗೆಯೂ ಸಹ ಜಾಗ್ರತೆ ಕ್ರಮ ಕೈಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರ ಒಂದು ಸುಂದರ ನಗರ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಎಂ.ಟಿ.ಆರ್. ಹೋಟೇಲ್ ಮುಂದೆ ಇರುವಂತಹ ಲಾಲ್‌ಬಾಗ್ ರಸ್ತೆಯನ್ನು ಒಂದು ವರ್ಷದಿಂದ ರಿಪೇರಿ ಮಾಡಿಲ್ಲ. ಇದಕ್ಕೆ ಏನು ಕಾರಣ ಎಂಬುದು ಗೊತ್ತಿಲ್ಲ. ಅದೇ ರೀತಿ ಮಿಷನ್ ರೋಡ್‌ನಲ್ಲಿ ಒಂದು ಜಂಕ್ಷನ್ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಓಡಾಡುವವರಿಗೆ ತೊಂದರೆಯಾಗಿದೆ. ಈ ರೋಡ್‌ನಲ್ಲಿ ಒಂದು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಲ್ಯಾಣ ಮಂಟಪವಿದೆ. ಇಲ್ಲಿ ಮದುವೆಗಳಾಗುತ್ತಿರುತ್ತವೆ. ಆದ್ದರಿಂದ ಜನರು ಸಲೀಸಾಗಿ ಓಡಾಡಲು ಅನುಕೂಲವಾಗುವಂತೆ ಈ ರಸ್ತೆಗಳನ್ನು ಜಾಗ್ರತೆ ರಿಪೇರಿ ಮಾಡಿಸಬೇಕೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿ ಕಾರ್ಪೊರೇಷನ್ ಅವರಿಗೆ ಸೇರಿದ ಅನೇಕ ಮನೆಗಳಿವೆ. ಇಂತಹ ಮನೆಗಳಲ್ಲಿ ಯಾರು ವಾಸವಾಗಿದ್ದಾರೆ. ಅವರಿಗೆ ಈ ಮನೆಗಳನ್ನು ಕೊಡಬೇಕೆಂದು ಆರ್ಡರ್ ಆಗಿದೆ. ಇದರ ಪ್ರಕಾರ ಕೆಲವು ಮನೆಗಳನ್ನು ಕೊಟ್ಟಿದ್ದಾರೆ. ಕೆಲವು ಮನೆಗಳನ್ನು ಹಾಗೆಯೇ ಇಟ್ಟು ಕೊಂಡಿದ್ದಾರೆ. ಈ ಕೆಲವು ಮನೆಗಳಲ್ಲಿ ಹರಿಜನ ಮತ್ತು ಗಿರಿಜನರು ವಾಸವಾಗಿದ್ದಾರೆ. ಇವರಿಗೆ ಈ ಮನೆಗಳನ್ನು ಕಂತಿನ ಆಧಾರದ ಮೇಲೆ ಕೊಟ್ಟರೆ ಅವರು ತೆಗೆದುಕೊಳ್ಳುತ್ತಾರೆ. ಈಗ ಈ ಮನೆಗಳ ವಾರ್ಷಿಕ ರಿಪೇರಿಯನ್ನು ಕಾರ್ಪೊರೇಷನ್ ಅವರು ಮಾಡುತ್ತಿಲ್ಲ. ಇದರಿಂದ ಮಳೆ ಬಂದರೆ ಮಳೆ ನೀರೆಲ್ಲಾ ಮನೆ ಒಳಗೆ ತುಂಬಿಕೊಳ್ಳುತ್ತದೆ. ಕೆಲವು ಕಡೆ ಕಟ್ಟಿಸಿರುವ ಕಾಂಪೌಂಡ್ ವಾಲ್‌ಗಳು ಬಿದ್ದು ಹೋಗಿವೆ. ಆದ್ದರಿಂದ ಇದರ ಕಡೆಗೂ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಈಗ ಸ್ಲಮ್ ಕ್ಲೀಯರೆನ್ಸ್ ಬೋರ್ಡ್ ಇದೆ ಮತ್ತು ಸ್ಲಮ್ ಇಂಪ್ರೂವ್‌ಮೆಂಟ್ ಬೋರ್ಡ್ ಇದೆ. ಕಾರ್ಪೊರೇಷನ್‌ಗೆ ಸೇರಿದ ಒಂದು ಸ್ಲಮ್ ಬೋರ್ಡ್ ಇದೆ ಮತ್ತು ಬಿ.ಡಿ.ಎ.ಗೆ ಸೇರಿದ ಒಂದು ಸ್ಲಮ್ ಬೋರ್ಡ್ ಇದೆ. ಈ ರೀತಿ ಅನೇಕ ಬೋರ್ಡ್‌ಗಳಿರುವುದರಿಂದ ನಮ್ಮ ಶಾಂತಿನಗರದಲ್ಲಿರುವ ಸ್ಲಮ್‌ಗಳು ಯಾರಿಗೆ ಸೇರಿದ್ದು ಎಂಬುದು ತಿಳಿಯುತ್ತಿಲ್ಲ. ನಾನು ಎಲ್ಲಾ ಕಡೆಗೂ ಕಾಗದಗಳನ್ನು ಬರೆಯುತ್ತಿದ್ದರೂ ಸಹ ಯಾರೂ ಸಹ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈಗಲಾದರೂ ಸಹ ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ಪೋಲಿಸರ ವಸತಿ ಗೃಹಗಳು ಬೇಕಾದಷ್ಟು ಇವೆ. ಇವುಗಳನ್ನು ಕಾರ್ಪೊರೇಷನ್ ವ್ಯಾಪ್ತಿಯಿಂದ ದೂರ ಇಡಲಾಗಿದೆ. ಚುನಾವಣೆ ಸಮಯದಲ್ಲಿ ಇಲ್ಲಿ ವಾಸ ಮಾಡುವವರು ತಮ್ಮ ಮತವನ್ನು ಕೊಡುತ್ತಾರೆ. ಆದರೆ ಇವರು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ ಕಾರಣ ಇವರ ಬಗ್ಗೆ ಏನಾದರೂ ಒಳ್ಳೆಯ ಕೆಲಸ ಮಾಡೋಣ ಎಂದರೆ ದಾರಿಯೇ ಕಾಣುತ್ತಿಲ್ಲ. ಲೋಕೋಪಯೋಗಿ ಇಲಾಖೆಯವರಿಗೆ ಕಾಗದ ಬರೆದರೆ ಅವರೂ ಸಹ ಇದರ ಕಡೆ ಗಮನ ಕೊಡುತ್ತಿಲ್ಲ. ಮಾನ್ಯ ಮಂತ್ರಿಗಳಾದರೂ ಇದರ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಪೊರೇಷನ್ ಅವರು ಕಾರ್ಪೊರೇಷನ್ ಸ್ಕೂಲುಗಳನ್ನು ಚೆನ್ನಾಗಿ ಮೇನ್‌ಟೇನ್ ಮಾಡುತ್ತಿದ್ದಾರೆ. ನಮ್ಮ ಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ನಮ್ಮ ಡಿವಿಜನ್‌ನಲ್ಲಿ ಸುಮಾರು ೩ ಕೋಟಿ ರೂಪಾಯಿಗಳ ಕೆಲಸ ನಡೆಯುತ್ತಿದೆ. ಕಾರ್ಪೊರೇಷನ್ ಚುನಾವಣೆ ಸಮಯದಲ್ಲಿ ಕೆಲವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಆದರೆ ಇವರ ಪೈಕಿ ಹರಿಜನ ಮತ್ತು ಗಿರಿಜನರು ಯಾರೂ ಇಲ್ಲ. ೧೮ ಪರ್ಸೆಂಟ್‌ವರೆಗೆ ಇವರಿಗೆ ಕೆಲಸ ಕೊಡಬೇಕೆಂದು ನಿಯಮವಿದ್ದರೂ ಸಹ ಒಂದು ಪರ್ಸೆಂಟ್ ಕೂಡ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಹೇಳಿದರೂ ಸಹ ಅಲ್ಲಿನ ಕಮೀಷನರ್ ಇದರ ಕಡೆಗೆ ಗಮನ ಕೊಟ್ಟಿಲ್ಲ. ಈಗ ಹಾಲಿ ಕೆಲಸ ಮಾಡುತ್ತಿರುವವರಿಗೆ ಸರಿಯಾದಂಥ ಕೊಠಡಿಯನ್ನಾಗಲೀ ಟೆಲಿಫೋನ್ ಸೌಲಭ್ಯವನ್ನಾಗಲೀ ಒದಗಿಸಿಕೊಟ್ಟಿಲ್ಲ. ಕಾರ್ಪೊರೇಷನ್ ಸ್ಕೂಲ್‌ಗಳನ್ನು ಚೆನ್ನಾಗಿ ಮೇನ್‌ಟೇನ್ ಮಾಡುತ್ತಿದ್ದರೂ ಸಹ ಖಾಲಿ ಇರುವ ಜಾಗಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಿಲ್ಲ. ಆದ್ದರಿಂದ ಇದರ ಕಡೆಗೂ ಸಹ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕನ್‌ಟೋನ್‌ಮೆಂಟ್ ಏರಿಯಾದಲ್ಲಿರುವ ಬ್ರಿಗೇಡ್ ರೋಡಿನಿಂದ ನೀರು ಹರಿದು ಬರತಕ್ಕಂಥ ಡ್ರೈನೇಜನ್ನು ೪ ಅಡಿ ಅಗಲ ಮಾಡಬೇಕೆಂದು ೬ ತಿಂಗಳ ಹಿಂದೆ ಮನವಿ ಕೊಟ್ಟಿದ್ದರೂ ಸಹ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇಲ್ಲಿಂದ ಹರಿದು ಬರುವ ನೀರು ಕೋರಮಂಗಲಕ್ಕೆ ಬಂದು ಸೇರುತ್ತದೆ. ಅಲ್ಲಿ ೨ ಸಾವಿರ ಮನೆಗಳಿವೆ. ಅಲ್ಲಿ ಹರಿಜನರೇ ವಾಸವಾಗಿದ್ದಾರೆ. ಇವರ ಮನೆಗಳಿಗೆಲ್ಲಾ ಡ್ರೈನೇಜ್ ನೀರು ಹರಿದು ಹೋಗುತ್ತಿದೆ. ಇದರ ಜೊತೆಗೆ ಅಲ್ಲಿರುವಂತಹ ಹಳ್ಳಗಳನ್ನು ಮುಚ್ಚಲು ಕಾರ್ಪೊರೇಷನ್ ಅವರು ಬೆಂಗಳೂರಿನ ಕಸಕಡ್ಡಿಯನ್ನೆಲ್ಲಾ ತೆಗೆದುಕೊಂಡು ಹೋಗಿ ಹಾಕುತ್ತಿದ್ದಾರೆ. ಮಳೆ ಬಂದಾಗ ಈ ಕಸವೆಲ್ಲಾ ಕೊಚ್ಚಿಕೊಂಡು ಇವರ ಮನೆಗಳಿಗೆ

ಬರುತ್ತದೆ. ಇದರಿಂದ ಆ ಜನರು ಖಾಯಿಲೆಗೆ ತುತ್ತಾಗಬೇಕಾಗಿದೆ. ಈ ಹರಿಜನರು ವಾಸ ಮಾಡುತ್ತಿರುವ ಕಡೆ ಹಾಕಿರುವಂತಹ ಕಚಡವನ್ನೆಲ್ಲಾ ತೆಗೆದು ಬೇರೆ ಕಡೆ ಹಾಕಿಸಬೇಕೆಂದು ಕೇಳಿ ಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಹರಿಹರ).—ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನದಿವಸ ನಗರಾಭಿವೃದ್ಧಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಗಳ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ನನ್ನ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಹೇಳಬೇಕಾದರೆ ನಗರಸಭೆ ಮತ್ತು ಪುರಸಭೆಗಳ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗುವ ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಸುಮಾರು ೪ ವರ್ಷಗಳ ಹಿಂದೆ ಪುರಸಭೆ ಮತ್ತು ನಗರಸಭೆಗಳಿಗೆ ಜೀವನಾಡಿಯಾಗಿದ್ದಂಥ ಆಕ್ಟ್ರಾಯ್‌ನ್ನು ರದ್ದು ಮಾಡಿದ್ದರಿಂದ ಅವರ ವರಮಾನ ಕಡಿಮೆಯಾಗಿ ರಸ್ತೆಗಳ ನಿರ್ಮಾಣ, ರಸ್ತೆಗಳ ದುರಸ್ತಿಕಾರ್ಯ, ಬೀದಿ ದೀಪದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಮಲೇರಿಯಾ ತಡೆಗಟ್ಟಲು ಮಾಡುವಂಥ ಔಷಧಿ ಸಿಂಪರಣಾಕಾರ್ಯ ಮುಂತಾದುವುಗಳಿಗೆ ಹಣವಿಲ್ಲದೆ ಯಾವ ಕೆಲಸವನ್ನೂ ಅವರು ಮಾಡುತ್ತಿಲ್ಲ. ಇದರಿಂದಾಗಿ ನಾಗರಿಕರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಇವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಿಕೊಳ್ಳಲು ಕೆಲವು ಮಾರ್ಗಗಳನ್ನು ಕಂಡುಹಿಡಿದುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಆಯಾಯ ಸ್ಥಳಗಳಲ್ಲಿ ಬರತಕ್ಕ ವರಮಾನ ಎಂದರೆ ವಾಹನ ತೆರಿಗೆಗಳು, ವಾಣಿಜ್ಯ ತೆರಿಗೆಗಳು, ಸೇಂದಿ ಸಾರಾಯಿಗಳ ಹರಾಜು ಮುಂತಾದುವುಗಳಿಂದ ಬಂದ ಹಣದಲ್ಲಿ ಸರ್ಕಾರದವರು ನಗರಸಭೆ ಮತ್ತು ಪುರಸಭೆಗಳಿಗೆ ಪಾಲು ಹಣವನ್ನು ಕೊಡಬೇಕು. ಇದರಿಂದ ಈ ಸ್ಥಳೀಯ ಸಂಸ್ಥೆಗಳು ಆರ್ಥಿಕಾಭಿವೃದ್ಧಿಯನ್ನು ಮಾಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಮಂಡಳಿಯವರು, ಅಂಚೆ ಮತ್ತು ತಂತಿ ಇಲಾಖೆಯವರು ಮತ್ತು ದೂರವಾಣಿ ಇಲಾಖೆಯವರು ವಾಣಿಜ್ಯ ತೆರಿಗೆಯನ್ನು ತೆಗೆದುಕೊಳ್ಳುತ್ತಾರೆ. ಇವರು ಕೆಲಸಮಾಡತಕ್ಕ ಸ್ಥಳದಲ್ಲಿ ೧ ಅಡಿಗೆ ೧೦ ಪೈಸೆಯಂತೆ ನಾವು ವಸೂಲ್ಮಾಡಬೇಕು. ನಾನು ಏತಕ್ಕೆ ಈ ರೀತಿ ಹೇಳುತ್ತಿದ್ದೇನೆಂದರೆ, ವಿದ್ಯುಚ್ಛಕ್ತಿ ಇಲಾಖೆಯವರಾಗಲಿ, ದೂರವಾಣಿ ಇಲಾಖೆಯವರಾಗಲಿ ಬಳಕೆದಾರರಿಂದ ತಮಗೆ ಬರಬೇಕಾದ ಹಣ ಸಕಾಲದಲ್ಲಿ ಬರದೇ ಹೋದರೆ ಅದಕ್ಕೆ ದಂಡವನ್ನು ಹಾಕುವುದಲ್ಲದೆ ಡಿಸ್‌ಕನೆಕ್ಟ್ ಕೂಡ ಮಾಡುತ್ತಾರೆ. ಆದ್ದರಿಂದ ಇವರ ಹತ್ತಿರ ನಾವೂ ಕೂಡ ಏತಕ್ಕೆ ಈ ರೀತಿ ತೆರಿಗೆಯನ್ನು ವಸೂಲ್ಮಾಡಬಾರದು ?

ಇನ್ನು ಮನೆಗಂದಾಯವನ್ನು ವಿಧಿಸುವಾಗ ಭಿಕ್ಷುಕರ ಪರಿಹಾರ ತೆರಿಗೆ ಎಂದು ಹಾಕುತ್ತಿದ್ದೇವೆ. ಆದರೆ ಈ ಹಣವನ್ನು ಖರ್ಚುಮಾಡದೇ ಇರುವುದರಿಂದ ಇದು ಹಾಗೆಯೇ ಉಳಿದಿದೆ. ಇದನ್ನು ಭಿಕ್ಷುಕರ ಕಾಲೋನಿಗಳ ನಿರ್ಮಾಣಕ್ಕಾಗಿ, ಅವರ ಕ್ಷೇಮಾಭಿವೃದ್ಧಿಗಾಗಿ ಖರ್ಚು ಮಾಡಿದರೆ ಇದರಿಂದ ನಾಗರೀಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬಹುದು. ರಾಜ್ಯದಲ್ಲಿ ಪ್ರತಿದಿನವೂ ಭಿಕ್ಷುಕರ ಸಂಖ್ಯೆ ಏರುತ್ತಾ ಹೋಗುತ್ತಿದೆ ಇವರಿಗೆ ಒಂದು ಕಾಲೋನಿಯನ್ನು ನಿರ್ಮಾಣ ಮಾಡಿ ಅಲ್ಲಿಗೆ ಇವರನ್ನು ತೆಗೆದುಕೊಂಡು ಹೋಗಿ ಬಿಟ್ಟು ಇವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಇವತ್ತು ಭಿಕ್ಷುಕರ ಪರಿಹಾರ ತೆರಿಗೆಯನ್ನು ನಾವು ಕೇವಲ ಸಂಗ್ರಹ ಮಾಡುತ್ತಿದ್ದೇವೆಯೇ ಹೊರತು ಅವರಿಗಾಗಿ ಇದನ್ನು ವಿನಿಯೋಗ ಮಾಡುತ್ತಿಲ್ಲ. ಇನ್ನು ಮುಂದಾದರೂ ಈ ಹಣವನ್ನು ಇವರಿಗಾಗಿ ವಿನಿಯೋಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯುವ ಜನತೆಯ ಆಶೋತ್ತರಗಳನ್ನೂ, ಆರೋಗ್ಯವನ್ನೂ ಸುಧಾರಿಸುವ ದೃಷ್ಟಿಯಿಂದ ಒಳ್ಳೆಯ ಕ್ರೀಡಾಪಟುಗಳನ್ನು ತಯಾರಿಸಲು ಆಟದ ಮೈದಾನದ ವ್ಯವಸ್ಥೆಗೆ ಸಾರ್ವಜನಿಕರು ತಮ್ಮ ವಂತಿಗೆಯನ್ನು ಕೊಡಬೇಕೆಂದು ಕೇಳುತ್ತಿದ್ದೀರಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಮನೆಗಂದಾಯವನ್ನು ವಿಧಿಸುವಾಗ ೨ ಪರ್ಸೆಂಟ್ ಭಿಕ್ಷುಕರ ಪರಿಹಾರ ತೆರಿಗೆ ಎಂದು ಏನು ಹಾಕುತ್ತೀರಿ ಅದೇ ರೀತಿ ಕ್ರೀಡಾ ತೆರಿಗೆ ಎಂದು ೨ ಪರ್ಸೆಂಟ್‌ನ್ನು ಮನೆಗಂದಾಯದ ಜೊತೆಗೆ ಹಾಕಿದರೆ ಇದರಿಂದ ಸುಲಭವಾಗಿ ಹಣ ಸಂಗ್ರಹಣೆಯಾಗಿ ತನ್ಮೂಲಕ ಯುವ ಜನರಿಗೆ ಒಳ್ಳೆಯ ಕ್ರೀಡಾ ವ್ಯವಸ್ಥೆಯನ್ನು ಮಾಡಲು ಅನುಕೂಲವಾಗುತ್ತದೆ. ನಮ್ಮ ಹರಿಹರವು ತುಂಗಭದ್ರಾ ನದಿಯ ದಡದ ಮೇಲಿದೆ. ಆದರೂ ಅಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಇದೆ. ಈ ತೊಂದರೆಯನ್ನು ಹೋಗಲಾಡಿಸಲು ಸೂಕ್ತ ಕ್ರಮ ತೆಗೆದುಕೊಂಡು ಒಂದು ಸಮಗ್ರ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪತ್ರ ಮುಖೇನ ಪ್ರಾರ್ಥಿಸಿಕೊಂಡಿದ್ದೆ. ಆದರೆ ಅದು ಕಾರ್ಯಗತ ಆಗಲಿಲ್ಲ. ಅಲ್ಲಿನ ಜನರು ಕುಡಿಯುವ ನೀರಿಗಾಗಿ ಬಹಳ ತೊಂದರೆಯನ್ನು ಅನುಭವಿಸುತ್ತಿರುವುದರಿಂದ ಮೊದಲು

ಅಲ್ಲಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೋರಿಕೊಳ್ಳುತ್ತೇನೆ. ಇದರ ಜೊತೆಗೆ ಕಳೆದ ೧೦ ವರ್ಷಗಳ ಹಿಂದೆ ಹರಿಹರ ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡುವಸಲುವಾಗಿ ಕೆಲಸವನ್ನು ಪ್ರಾರಂಭ ಮಾಡಿದರು. ಆದರೆ ಕಾರಣಾಂತರದಿಂದ ಅದನ್ನು ಪೂರ್ತಿ ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಇದರಿಂದಾಗಿ ಹರಿಹರದ ನಾಗರಿಕರಿಗೆ ತುಂಬಾ ತೊಂದರೆಯಾಗಿರುವುದರಿಂದ ಕೂಡಲೇ ಅಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಇದೇ ರೀತಿ ದಾವಣಗೆರೆಯು ಒಳ್ಳೆಯ ವಾಣಿಜ್ಯೋದ್ಯಮ ಕೇಂದ್ರ ಹಾಗೂ ವಿದ್ಯಾ ಕೇಂದ್ರವಾಗಿರುವುದರಿಂದ ಸುಮಾರು ೧೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ನಗರದ ಅಭಿವೃದ್ಧಿ ಯೋಜನೆಯನ್ನು ಹಿಂದೆ ತಯಾರಿಸಲಾಗಿತ್ತು. ಆದರೆ ಕಾರ್ಯಗತವಾಗಿರಲಿಲ್ಲ. ಆದರಿಂದ ತಾವು ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ ನಮ್ಮ ಚಿತ್ರದುರ್ಗವು ಒಳ್ಳೆಯ ಐತಿಹಾಸಿಕ ಸ್ಥಳ. ಇಲ್ಲಿ ಜೋಗಿಮಟ್ಟಿ ಎನ್ನುವ ಊರು ಇದೆ. ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇರುವುದರಿಂದ ಸರ್ಕಾರ ಕೂಡಲೆ ಒಂದು ಸಮಗ್ರ ಕಾರ್ಯಕ್ರಮವನ್ನು ರೂಪಿಸಿಕೊಂಡು ಕುಡಿಯುವ ನೀರು ಮತ್ತು ಉತ್ತಮ ಸಾರಿಗೆ ಸಂಪರ್ಕವನ್ನು ಏರ್ಪಡಿಸಿ ಅದನ್ನು ಒಳ್ಳೆಯ ಪ್ರವಾಸೀ ಕೇಂದ್ರವನ್ನಾಗಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ. ನಾನು ಹೇಳಿದ ಕೆಲವು ಸಲಹೆಗಳನ್ನು ತಾವು ಅನುಷ್ಠಾನಕ್ಕೆ ತಂದು ಪುರಸಭೆ ಮತ್ತು ನಗರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗಚ್ಚಿನಮಠ್ ಚಂದ್ರಶೇಖರ್ ಗುರುಪಾದಯ್ಯ (ಬಿಜಾಪುರ).—ಸನ್ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಮೇಲೆ ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹಿಂದೆ ಒಮ್ಮೆ ನಾನು ಮಾತನಾಡುವಾಗ ನನ್ನ ಭಾಷೆ ಭಾಷಾಂತರವಾಗಿ ಇಲ್ಲಿ ಕುಳಿತಿರತಕ್ಕ ನನ್ನ ಮಿತ್ರ ಸದಸ್ಯರು ಗಲಾಟೆಯನ್ನು ಎಬ್ಬಿಸಿದರು. ಆದರೆ ಈ ಸಾರಿ ಆ ರೀತಿ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಈಗಾಗಲೇ ಮಾತನಾಡಿದಂಥ ಮಾನ್ಯ ಸದಸ್ಯರುಗಳು ನಗರಾಭಿವೃದ್ಧಿ ವಿಚಾರಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಒಂದು ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಇದುವರೆಗೆ ಮಾತನಾಡಿದ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಬಿ.ಡಿ.ಎ., ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ನಗರಗಳನ್ನು ಕುರಿತು ಮಾತನಾಡಿದರೇ ಹೊರತು ಸಣ್ಣ ಸಣ್ಣ ನಗರಗಳ ಬಗ್ಗೆ ಯಾರು ಕೂಡ ಮಾತನಾಡಲಿಲ್ಲ. ಇದು ಬಹಳ ದುಃಖದ ಸಂಗತಿ. ಹಿಂದಿನ ಪೌರಾಡಳಿತ ಸಚಿವರಾಗಿದ್ದ ಮಾನ್ಯ ಧರ್ಮಸಿಂಗ್‌ರವರು ಭಾಷಣ ಮಾಡುವಾಗ ಮೊದಲು ಸಣ್ಣ ನಗರಗಳ ವಿಷಯದಲ್ಲಿ ಮಾತನಾಡಿ ಅನಂತರ ಮಹಾನಗರಪಾಲಿಕೆಗಳ ಬಗ್ಗೆ ಮಾತನಾಡುತ್ತೇನೆಂದು ಹೇಳಿದರು. ಆದರೆ ಅವರೂ ಕೂಡ ತಮ್ಮ ಭಾಷಣದಲ್ಲಿ ಸಣ್ಣ ನಗರಗಳ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ನಾನು ಬಿಜಾಪುರ ಕ್ಷೇತ್ರದಿಂದ ಆರಿಸಿ ಬಂದಿರುವವನು. ಆದರೆ ಅದು ಒಂದು ನಗರ ಪ್ರದೇಶವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದು ಅತ್ಯಂತ ಹಿಂದುಳಿದಿರತಕ್ಕ ಪ್ರದೇಶ. ಈ ಬಿಜಾಪುರವು ಒಂದು ಐತಿಹಾಸಿಕ ನಗರ. ಆ ಪ್ರದೇಶದಿಂದ ನಾನು ಆರಿಸಿ ಬಂದಿದ್ದೇನೆ. ಅಲ್ಲಿನ ನಾಗರೀಕರು ಅಪೇಕ್ಷಿಸುವುದು ಕುಡಿಯುವುದಕ್ಕೆ ಒಳ್ಳೆಯ ನೀರು, ನಗರದ ಸ್ವಚ್ಛತೆ ಮತ್ತು ಉತ್ತಮ ಬೀದಿ ದೀಪದ ವ್ಯವಸ್ಥೆ. ಇವು ಅತ್ಯಂತ ಅವಶ್ಯಕವಾಗಿ ಬೇಕಾಗಿರುವುದರಿಂದ ಸರ್ಕಾರದವರು ಸೂಕ್ತ ಗಮನಹರಿಸಿ ಆದಷ್ಟು ಬೇಗ ಈ ಅವಶ್ಯಕ ಸೌಲಭ್ಯಗಳನ್ನು ಅಲ್ಲಿಗೆ ಒದಗಿಸಿಕೊಡಬೇಕು.

ಬಿಜಾಪುರ ಒಂದು ಐತಿಹಾಸಿಕ ನಗರವೆಂದು ಹೇಳಿಕೊಂಡರೂ ಸಹ ಅಲ್ಲಿ ನೀರಿನ ಬವಣೆ ಐತಿಹಾಸಿಕವಾಗಿಯೇ ಉಳಿದಿರುತ್ತದೆ. ಇಂಥ ಒಂದು ಬಿಜಾಪುರ ನಗರಕ್ಕೆ ಹಿಂದಿನ ಸರ್ಕಾರ ೧೯೬೭ರಲ್ಲಿ ನೀರಿನ ಬವಣೆಯನ್ನು ದೂರ ಮಾಡಬೇಕೆಂದು ಕೃಷ್ಣಾನದಿ ೩೦ ಮೈಲಿ ದೂರದಲ್ಲಿ ಬಳೂಚಿ ಸ್ಕೀಮ್ ಎಂದು ಮಾಡಿದ್ದಾರೆ. ಇದಕ್ಕಾಗಿ ಒಂದು ಕೋಟಿ ೭೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆಂದು ನನಗನ್ನಿಸುತ್ತದೆ. ಇಷ್ಟೊಂದು ದುಡ್ಡನ್ನು ಖರ್ಚು ಮಾಡಿದರೂ ಸಹಿತ ಇಂಥ ಒಂದು ಯೋಜನೆ ಮಾಡಿದರೂ ಸಹಿತ ನಾನು ಬಹಳ ವೇದನೆಯಿಂದ ಹೇಳುತ್ತಿದ್ದೇನೆ ಬಳೂಚಿ ಸ್ಕೀಮ್ ಏನು ಇದೆ ಆ ನದಿಯ ನೀರು ಯಾವ ಪ್ರಮಾಣದಲ್ಲಿ ನಿಲ್ಲಬೇಕೋ ಮತ್ತು ಯಾವ ಸ್ಥಳ

ದಲ್ಲಿ ನಿಲ್ಲಿಸಬೇಕಾಗಿತ್ತೋ ಅದನ್ನು ಬಿಟ್ಟು ಬೇರೆ ಸ್ಥಳದಲ್ಲಿ ನೀರನ್ನು ನಿಲ್ಲಿಸಿ ಪಂಪ್ ಹೌಸ್ ಮಾಡಿ ನೀರನ್ನು ಹಾಯಿಸುತ್ತಿರುವುದರಿಂದ ಬಿಜಾಪುರ ನಗರಕ್ಕೆ ಎಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ ಬಿಜಾಪುರ ನಗರದಲ್ಲಿ ವಾಸಮಾಡತಕ್ಕಂಥ ಜನರ ಸಂಖ್ಯೆ ಒಂದು ಲಕ್ಷ ೬೦ ಸಾವಿರ. ಇಂಥ ಒಂದು ನಗರಕ್ಕೆ ಈವತ್ತಿನ ದಿವಸ ಕನಿಷ್ಟಪಕ್ಷ ತಮ್ಮ ಯೋಜನೆಯ ಪ್ರಕಾರವೇ ಹೇಳುವುದಾದರೆ ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ ೨೫ ಗ್ಯಾಲನ್ ನೀರು ಬೇಕಾಗುತ್ತದೆ. ಈ ಒಂದು ಬಳೂಟಿ ನೀರು ಸರಬರಾಜು ಯೋಜನೆಯಿಂದ ಅಷ್ಟು ನೀರನ್ನು ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಬಿಜಾಪುರದ ನಾಗರೀಕರಿಗೆ ಪ್ರತಿದಿವಸ ೪೫ ಲಕ್ಷ ಗ್ಯಾಲನ್ ನೀರು ಸರಬರಾಜು ಆಗುವುದಕ್ಕೆ ಬದಲಾಗಿ ೨೫ ಲಕ್ಷ ಗ್ಯಾಲನ್ ನೀರು ಸರಬರಾಜು ಆಗುತ್ತಿರುತ್ತದೆ. ಮಾನ್ಯ ಚಂದ್ರಶೇಖರ್‌ರವರು ನಗರಾಭಿವೃದ್ಧಿ ಸಚಿವರಾದಮೇಲೆ ಎರಡುಬಾರಿ ಬಿಜಾಪುರ ನಗರಕ್ಕೆ ಭೇಟಿ ಕೊಟ್ಟಾಗ ನಾವು ಮನವರಿಕೆ ಮಾಡಿಕೊಂಡ ಸಲುವಾಗಿ ಇತ್ತ ಲಕ್ಷ್ಯ ಕೊಟ್ಟು ಬಿಜಾಪುರ ನಗರವಾಸಿಗಳಿಗೆ ಸದ್ಯ ಕುಡಿಯಲಿಕ್ಕೆ ನೀರಿನ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಮೂರು ವರ್ಷಗಳ ಕಾಲ ನಗರಸಭೆಯಲ್ಲಿ ಇದ್ದರು. ನಾನು ಅವರನ್ನು ಟೀಕೆ ಮಾಡುವ ಸಲುವಾಗಿ ಮಾತನಾಡುತ್ತಿಲ್ಲ, ಆದರೆ ಬಿಜಾಪುರ ನಗರಕ್ಕೆ ಕುಡಿಯುವ ನೀರಿನತ್ತ ಅವರು ತಮ್ಮ ಲಕ್ಷ್ಯವನ್ನು ಹರಿಸಿದ್ದುದು ನನಗಂತೂ ಗೊತ್ತಿಲ್ಲ.

ಬಿಜಾಪುರ ನಗರದಲ್ಲಿ ಹಿಂದೆ ಎರಡು ಬಾರಿ ದುರ್ಘಟನೆ ನಡೆಯಿತು. ಇಂಥ ಘಟನೆಯು ನಡೆದಂಥ ಸಂದರ್ಭದಲ್ಲಿ ಫೈರ್ ಫೈಟಿಂಗ್ ಘಟಕವನ್ನು ಸ್ಥಾಪನೆ ಮಾಡಬೇಕೆಂದು ಹಿಂದಿನ ಸರ್ಕಾರದವರೇ ತೀರ್ಮಾನವನ್ನು ಕೈಗೊಂಡಿದ್ದರು. ಈವತ್ತಿನ ದಿವಸ ಜನತಾ ಸರ್ಕಾರ ಅಧಿಕಾರಕ್ಕೆ ಬಂದಿದೆ. ಬಿಜಾಪುರದ ಜನತೆ ಈ ಸರ್ಕಾರದಿಂದಲಾದರೂ ಬೆಳಕು ಕಾಣುತ್ತೇವೆಂದು ಎನ್ನುವ ಅಪೇಕ್ಷೆಯನ್ನಿಟ್ಟುಕೊಂಡಿರುವುದರಿಂದ ಇತ್ತಕಡೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಬಹುತೇಕ ಮಾನ್ಯ ಸದಸ್ಯರುಗಳು ಮಹಾನಗರ ಪಾಲಿಕೆಗಳಿಂದಲೇ ಬಂದಿರತಕ್ಕಂಥವರಾಗಿದ್ದು, ಮಹಾನಗರ ಪಾಲಿಕೆಗಳ ಬಗ್ಗೆಯೇ ಮಾತನಾಡಿರುತ್ತಾರೆ. ಹೊಸಬರು ನಾವು ಏನಾದರೂ ಮಾತನಾಡಿದರೆ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ೧೯೮೦ನೇ ಇಸವಿಯಲ್ಲಿ ಮಾನ್ಯ ಧರ್ಮಸಿಂಗ್‌ರವರು ಬಿಜಾಪುರಕ್ಕೆ ಭೇಟಿಕೊಟ್ಟಾಗ ಬಿಜಾಪುರ ನಗರಕ್ಕೆ ಓವರ್‌ಹೆಡ್ ಟ್ಯಾಂಕ್ ಸಲುವಾಗಿ ಮನವಿಯನ್ನು ಸಲ್ಲಿಸಿದಾಗ ಕಡ್ಡಾಯವಾಗಿ ಮಾಡುತ್ತೇವೆಂದು ಹೇಳಿ ಇಲ್ಲಿಯವರೆಗೆ ಮಾಡಿಲ್ಲ, ೧೯೮೨ ನೇ ಇಸವಿಯಲ್ಲಿ ಈ ಓವರ್ ಹೆಡ್‌ಟ್ಯಾಂಕ್ ಸಲುವಾಗಿ ೮೦ ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿರುತ್ತದೆ. ಇದನ್ನು ಮಾನ್ಯ ಸರ್ಕಾರದವರು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಸ್ಯಾಂಕ್ಷನ್ ಆಗಿರತಕ್ಕ ಹಣವನ್ನು ರಿಲೀಸ್ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬಿಜಾಪುರ ನಗರಕ್ಕೆ ಒಳಚರಂಡಿ ಯೋಜನೆ ಮಾಡಿದ್ದಾರೆ. ಕೋಟಿಗಟ್ಟಲೆ ಹಣ ವ್ಯಯವಾಗತಕ್ಕಂಥ ಒಳಚರಂಡಿ ಯೋಜನೆಯನ್ನು ಏತಕ್ಕೆ ಮಾಡಿದ್ದಾರೋ ಗೊತ್ತಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಯಾವ ಒಂದು ನಗರದಲ್ಲಿ ನೀರಿನ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ಇದೆಯೋ ಅಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿದರೆ ಉಪಯೋಗವಾಗುತ್ತದೆ. ಆದರೆ ಕುಡಿಯಲಿಕ್ಕೆ ನೀರು ಸಿಕ್ಕದೇ ಇದ್ದ ಪಕ್ಷದಲ್ಲಿ ಒಳಚರಂಡಿ ವ್ಯವಸ್ಥೆ ದೊರಕಿಸಲು ಸಾಧ್ಯವೇ ಆಗುವುದಿಲ್ಲ. ಬಿಜಾಪುರ ನಗರ ಸ್ವಾತಂತ್ರ್ಯಕ್ಕೆ ಪೂರ್ವ ೨೦ ಸಾವಿರ ಜನಸಂಖ್ಯೆ ಇದ್ದು ಆ ಜನಸಂಖ್ಯೆಗೆ ಅನುಗುಣವಾಗಿ ನೀರು ಸರಬರಾಜು ಮಾಡುವಂಥ ಯೋಜನೆ ಮಾಡಿದ್ದು ಅದು ಇಂದಿನವರೆಗೂ ಮುಂದುವರಿಯುತ್ತಲೇ ಇದೆ. ಅದಕ್ಕಾಗಿ ಇಂದು ಬಿಜಾಪುರ ನಗರದ ಜನತೆ ನೀರಿನ ಬವಣೆಯನ್ನು ಬಹಳಷ್ಟು ಎದುರಿಸಬೇಕಾಗಿರುತ್ತದೆ. ಆದ್ದರಿಂದ ಬಿಜಾಪುರ ನಗರಕ್ಕೆ ತೀವ್ರಗತಿಯಿಂದ ಸಾಕಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಮಾಡುವಂಥ ಯೋಜನೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಬಿಜಾಪುರ ನಗರಸಭೆಯಲ್ಲಿ ಜನತಾ ಹೆಸರಿನಲ್ಲಿ ಇರತಕ್ಕಂಥ ನಗರ ಸಭೆಯು ಬಿಜಾಪುರ ನಗರದ ನೀರಿನ ಸಮಸ್ಯೆಯನ್ನು ಮುನಗಂಡು ಸರ್ಕಾರದ ಉಪಯೋಗವನ್ನು ಪಡೆದು ಬಳೂಟಿ ಸ್ಕೀಮನ್ನು ಪೂರ್ಣಮಾಡಿ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತಾರೆಂದು ನಂಬಿರುತ್ತೇನೆ. ಬಿಜಾಪುರದ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲು, ಕಸಕಡ್ಡಿಗಳನ್ನು ಹೊರಗೆ ಹಾಕಿ ಸ್ವಚ್ಛತೆಗೊಳಿಸಲು ಸಿಬ್ಬಂದಿ ವರ್ಗ ಕಡಿಮೆ ಇರುತ್ತದೆ. ಅಲ್ಲದೆ ವಾಹನಗಳ ಸೌಕರ್ಯವೂ ಇರುವುದಿಲ್ಲ. ಸ್ವೀಪರ್ಸ್ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಇದೆಲ್ಲಾ ಅನಾನುಕೂಲತೆಗಳನ್ನು ಸರ್ಕಾರದವರು ಮುನಗಂಡು ಮಹಾನಗರಸಭೆಗಳಿಗೆ ಯಾವರೀತಿ ಒಂದು ಸೌಕರ್ಯಗಳನ್ನು ಕಲ್ಪಿಸುತ್ತಾರೋ ಅದೇ ರೀತಿಯಲ್ಲಿ ಸರ್ಕಾರದವರು ಈ ಕಡೆಯೂ ಲಕ್ಷ್ಯ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬಿಜಾಪುರ

ನಗರವು ಕರ್ನಾಟಕದಲ್ಲಿ ಪ್ರಸಿದ್ಧವಾದಂಥ, ಐತಿಹಾಸಿಕವಾದಂಥ ಸ್ಥಳವೆಂದು ಹೇಳತಕ್ಕಂಥ ಈ ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗಳನ್ನು ಪೂರೈಸುತ್ತಾರೆಂದು ತಿಳಿದುಕೊಂಡು ಮಾನ್ಯ ಅಧ್ಯಕ್ಷರು ನನಗೆ ೧೦ ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಕೆಂಪೇಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಮಾನ್ಯ ಸ್ನೇಹಿತರನೇಕರು ನಗರಾಭಿವೃದ್ಧಿ ಬಗ್ಗೆ ಮತ್ತು ಪ್ರವಾಸೋದ್ಯಮದ ಬಗ್ಗೆ ಬಹಳವಾಗಿ ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡದೆ ಕೇವಲ ಮೈಸೂರು ನಗರದ ಬಗ್ಗೆ ಮಾತನಾಡುತ್ತೇನೆ. ಎಲ್ಲರೂ ತಿಳಿದಂತೆ ಮೈಸೂರು ನಗರ ಕರ್ನಾಟಕ ರಾಜ್ಯದಲ್ಲಿಯೇ ಎರಡನೆಯ ದೊಡ್ಡ ಮಹಾನಗರವಾಗಿದೆ. ಅಲ್ಲಿ ಈಗ ೫ ಲಕ್ಷ ಜನಸಂಖ್ಯೆ ಇದೆ. ಈ ನಗರದ ಸುತ್ತಮುತ್ತಲೂ ದೊಡ್ಡ ದೊಡ್ಡ ಕೈಗಾರಿಕೆಗಳು ಇತ್ತೀಚೆಗೆ ಬೆಳೆಯುತ್ತಿವೆ. ೧೯೬೪ರಿಂದೀಚೆಗೆ ಅಲ್ಲಿ ಏನೇನು ಬೆಳವಣಿಗೆಗಳಾಗಿವೆ ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ೧೯೦೨ರಿಂದಲೂ ಅಲ್ಲಿನ ನಗರಾಭಿವೃದ್ಧಿ ಸಂಸ್ಥೆ ಕೆಲಸ ಮಾಡಿಕೊಂಡು ಬಂದಿದೆ. ಈಗ ಮೈಸೂರು ದೇಶವಿದೇಶಗಳಿಂದ ಅನೇಕ ಜನರನ್ನು ಆಕರ್ಷಣೆ ಮಾಡುವಂತಹ ನಗರವಾಗಿದೆ. ಈ ಮೊದಲು ಮೈಸೂರು ನಗರಕ್ಕೆ ಮಂತ್ರಿಗಳು ಹತ್ತಾರು ಸಲ ಇಲ್ಲವೇ ನಾಲ್ಕಾರು ಸಲ ಬಂದು ಹೋಗುತ್ತಿದ್ದರು. ಆದರೆ ಈಗಿನ ಮಂತ್ರಿಗಳು ಯಾರೂ ಸಹ ಹೆಚ್ಚಾಗಿ ಅಲ್ಲಿಗೆ ಬರುತ್ತಿಲ್ಲ. ತಿಂಗಳಿಗೆ ಒಂದು ಸಲವೂ ಸಹ ಬರುತ್ತಿಲ್ಲ. ನಮ್ಮ ಜಿಲ್ಲೆಯ ಮಂತ್ರಿಗಳೂ ಸಹ ಮೈಸೂರು ನಗರಕ್ಕೆ ಹೆಚ್ಚಾಗಿ ಬರುವುದಿಲ್ಲ. ಕೆಲವು ದಿನಗಳ ಮಟ್ಟಿಗೆ ಮಾತ್ರ ಬರುತ್ತಾರೆ. ಮೈಸೂರು ನಗರದ ಸ್ಥಿತಿ ಇತ್ತೀಚೆಗೆ ಬಹಳ ಕೆಟ್ಟಿದೆ. ೧೯೬೦ರಿಂದಲೂ ಸಹ ಅಲ್ಲಿನ ಪುರಸಭೆಗೆ ಚುನಾವಣೆಗಳು ನಡೆಯಲಿಲ್ಲ. ೧೯೬೪ರಿಂದ ಅಲ್ಲಿನ ನಗರಸಭೆಯವರು ಮತ್ತು ಟೌನ್ ಪ್ಲಾನಿಂಗ್‌ನವರು ಯಾವ ರೀತಿ ನಡೆದುಕೊಂಡಿದ್ದಾರೆಂಬುದು ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ಈ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರಿಗೂ ಗೊತ್ತಿದೆ. ಯಾವ ರೀತಿ ಅನಾಚಾರಗಳು ನಡೆದಿವೆ ಎಂಬುದನ್ನು ನಾನು ಈಗ ಹೆಚ್ಚು ಹೇಳಬೇಕಾಗಿಲ್ಲ. ಮಾನ್ಯ ಮಂತ್ರಿಗಳು ಎಲ್ಲವನ್ನೂ ಖುದ್ದಾಗಿ ಪರಿಶೀಲನೆ ಮಾಡಿನೋಡಬೇಕು. ಅಲ್ಲಿನ ನಗರಾಭಿವೃದ್ಧಿ ಸಮಿತಿ ಮೂಲಕ ಸಾಕಷ್ಟು ನಗರಾಭಿವೃದ್ಧಿ ಕೆಲಸಗಳಾಗಿಲ್ಲ. ೧೯೬೦ರಲ್ಲಿ ಅಲ್ಲಿನ ಪುರಸಭೆ ಆಡಳಿತಾಧಿಕಾರಿಯವರ ವಶಕ್ಕೆ ಬಂದಮೇಲೆ ಅಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ಆಗಿಲ್ಲ. ರಸ್ತೆ ಕೆಲಸವಾಗಲೀ ದೀಪಗಳನ್ನು ಹಾಕಿಸುವುದಾಗಲೀ ನಡೆದಿಲ್ಲ. ಅಲ್ಲಿನ ನಗರಾಭಿವೃದ್ಧಿ ಸಮಿತಿ ಮೂಲಕ ೧೯೬೪ ರಿಂದೀಚೆಗೆ ಹೊಸ ಬಡಾವಣೆಗಳಾಗಿಲ್ಲ. ಪಾರ್ಕಿಗೆ ಮತ್ತು ಸ್ಕೂಲುಗಳಿಗೆಂದು ಇಟ್ಟಿದ್ದ ಜಾಗಗಳನ್ನೇ ನಿವೇಶನಗಳನ್ನಾಗಿ ಪರಿವರ್ತನೆ ಮಾಡಿ ಹಂಚಿದ್ದಾರೆಯೇ ಹೊರತು ಹೊಸ ಬಡಾವಣೆಗಳು ಮಾತ್ರ ಆಗಿಲ್ಲ. ಇದರಿಂದ ಮೈಸೂರು ನಗರದ ಸುತ್ತಮುತ್ತ ಅನೇಕ ರೆವಿನ್ಯೂ ಲೇಔಟ್‌ಗಳಾಗಿವೆ. ಈ ಖಾಸಗಿ ಲೇಔಟ್‌ಗಳಲ್ಲಿ ಅನೇಕ ಜನರು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟಿಸಿದ್ದಾರೆ. ಸುಮಾರು ೬–೭ ಸಾವಿರ ಮನೆಗಳು ಅಲ್ಲಿ ಕಟ್ಟಲ್ಪಟ್ಟಿವೆ. ಚಿಕ್ಕಚಿಕ್ಕದಾಗಿ ಮನೆಗಳಿಗೆ ಪಿಟ್‌ಗಳನ್ನು ಹಾಕಿದ್ದಾರೆ. ಈ ರೀತಿ ಅನುಮತಿ ಇಲ್ಲದೆ ಕಟ್ಟಿಸಿರುವ ಮನೆಗಳು ಇರುವ ಜಾಗಗಳಿಗೆ ಗುಂಡೂರಾವ್ ನಗರ, ಸೊಳ್ಳೆಪುರನಗರ, ವರಲಕ್ಷ್ಮೀನಗರ, ಗಾಸಿಯಾ ನಗರ ಎಂದು ಹೆಸರುಗಳನ್ನಿಟ್ಟಿದ್ದಾರೆ. ಮಾನ್ಯ ಧರ್ಮಸಿಂಗ್ ಅವರು ಬಹಳ ಉದಾರಿಗಳು, ಅದರ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಬೇಕಾಗಿದೆ. ಏಕೆಂದರೆ, ಅವರು ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರು ಮೈಸೂರು ನಗರಕ್ಕೆ ಬಂದಾಗ ಯಾರು ಯಾರು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟಿದ್ದಾರೆ, ಆ ಮನೆಗಳನ್ನೆಲ್ಲಾ ಕ್ರಮಬದ್ಧಗೊಳಿಸುವುದಾಗಿ ಒಂದು ಹೇಳಿಕೆ ಕೊಟ್ಟರು. ೧೯೬೪ನೇ ಇಸವಿಗೆ ಮುಂಚೆ ಈ ರೀತಿ ಯಾರೂ ಮನೆಗಳನ್ನು ಕಟ್ಟಿಸಿರಲಿಲ್ಲ. ಆದರೆ ಅಲ್ಲಿಂದೀಚೆಗೆ ಇಂತಹ ಮನೆಗಳು ಅಲ್ಲಿ ಬೇಕಾದಷ್ಟು ಬಂದಿವೆ. ಮೊದಲಿನಿಂದಲೇ ಇವು ಬರದಂತೆ ನೋಡಿಕೊಳ್ಳಬೇಕಾಗಿತ್ತು. ಆದರೆ ನೋಡಿಕೊಳ್ಳದ ಕಾರಣ ಅನೇಕ ಮನೆಗಳು ಬಂದವು. ಇಂತಹ ಮನೆಗಳನ್ನು ರೆಗ್ಯುಲರೈಜ್ ಮಾಡುವಾಗ ಯಾವ ರೀತಿ ಮಾಡಬೇಕೆಂಬುದನ್ನು ನೋಡಿಕೊಂಡು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈಗ ಈ ಮನೆಗಳಿರುವ ಜಾಗಕ್ಕೆ ಶ್ರೀ ಧರ್ಮಸಿಂಗ್ ಅವರ ನಾಮಾಂಕಿತವನ್ನು ಬೇಕಾದರೆ ಕೊಡಬಹುದು. ಅಲ್ಲಿ ಇಷ್ಟೊಂದು ಮನೆಗಳಾಗುವವರೆಗೆ ಅಲ್ಲಿನ ಟೌನ್ ಪ್ಲಾನಿಂಗ್ ಅಥಾರಿಟಿಯವರು ಏನು ಮಾಡುತ್ತಿದ್ದರು ? ಮೊನ್ನೆ ಬೆಂಗಳೂರಿನಲ್ಲಿ ಕೂಡ ಅನುಮತಿ ಇಲ್ಲದೆ ಕಟ್ಟಿದ ಕೆಲವು ಮನೆಗಳನ್ನು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಬಿ.ಡಿ.ಎ. ನವರು ಡೆಮಾಲಿಷ್ ಮಾಡಿದರು. ಇದೇ ರೀತಿ ಅಲ್ಲಿಯೂ ಕ್ರಮ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ೧೯೬೪ರಿಂದ ಅಲ್ಲಿನ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ಕೇಳುವವರು ಹೇಳುವವರು ಯಾರೂ ಇಲ್ಲ. ಇಲ್ಲಿ ಕೆಲಸ ಮಾಡಲು ಯೋಗ್ಯರಾದವರನ್ನು, ದಕ್ಷರಾದವರನ್ನು ನೇಮಕ ಮಾಡಲಿಲ್ಲ. ಅಕ್ಷರ ಬರದಿದ್ದವರನ್ನು ಹಾಗೂ ನಗರಾಭಿವೃದ್ಧಿ ವಿಷಯ ತಿಳಿಯದಿದ್ದವರನ್ನು ಇಲ್ಲಿಗೆ ಸದಸ್ಯರನ್ನಾಗಿ ಮತ್ತು ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ಇದರಿಂದ ಅಲ್ಲಿ ನಡೆದಿದ್ದಾದರೂ ಏನು ? ಅಲ್ಲಿನ ಟೌನ್ ಪ್ಲಾನಿಂಗ್ ಅಥಾರಿಟಿಯವರು ಕೈಕೊಂಡ ಯಾವ ಕೆಲಸವನ್ನೂ ಅಲ್ಲಿನ ನಗರಸಭೆಯವರು ತಮ್ಮ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ಕಾರಣದಿಂದ ಅಲ್ಲಿ ಹೊಸ ಲೇಔಟ್‌ಗಳು ಒಂದೂ ಸಹ ಆಗಲಿಲ್ಲ. ಈ ಮಧ್ಯೆ ಅರ್ಬನ್ ಸೀಲಿಂಗ್ ಆಕ್ಟ್ ಕೂಡ ಜಾರಿಗೆ ಬಂತು. ಇದು ಜಾರಿಗೆ ಬಂದಮೇಲೆ ಯಾವ ಕೆಲಸಗಳೂ ಆಗದೆ ಎಲ್ಲವೂ ಸ್ಥಗಿತಗೊಂಡವು. ಈ ಮೊದಲು ಅಲ್ಲಿ ಎರಡು ಕೋಟಿ ರೂಪಾಯಿಗಳ ರಿವಾಲ್ವಿಂಗ್ ಫಂಡ ಇತ್ತು. ಆದರೆ ಈಗ ಅಲ್ಲಿ ಯಾವ ಹಣವೂ ಇಲ್ಲ. ಈಗ ಸರ್ಕಾರವೇ ಸಹಾಯ ಮಾಡಬೇಕಾಗಿದೆ. ಅಲ್ಲಿ ಹೊಸದಾಗಿ ಕೆಲವು ಸೈಟ್‌ಗಳನ್ನು ರಚನೆ ಮಾಡಿದಾಗ ಕೆಲವರು ಇಪ್ಪತ್ತು ಮೂವತ್ತು ಸೈಟ್‌ಗಳನ್ನು ಪಡೆದಿದ್ದೂ ಇವೆ. ಒಂದು ಸೈಟ್ ಇದ್ದವರಿಗೆ ಇನ್ನೊಂದು ಸೈಟ್ ಕೊಡಬಾರದೆಂದು ಕಾನೂನಿದ್ದರೂ ಸಹ ಅಲ್ಲಿ ಕೆಲವು ಕುತಂತ್ರಗಳು ನಡೆದವು. ಹೆಚ್ಚುವರಿ ಸೈಟ್‌ಗಳನ್ನು ಸರಂಡರ್ ಮಾಡುವುದು ಮತ್ತೆ ಪಡೆಯುವುದು ಹಾಗೂ ಪಡೆದಂಥ ಸೈಟ್‌ನ್ನು ಮತ್ತೆ ಲಾಭಕ್ಕೆ ಮಾರಾಟ ಮಾಡುವುದು ಹಾಗೂ ಅಲ್ಲಿದ್ದ ಚೇರ್‌ಮನ್ ಅವರು ಇದ್ದಂಥ ಸ್ಪೇರ್ ಸೈಟ್‌ಗಳನ್ನು ತಮಗೆ ಬೇಕಾದವರಿಗೆ ಅಲಾಟ್ ಮಾಡುವುದು, ಹೀಗೆಲ್ಲಾ ನಡೆಯಿತು. ಇಷ್ಟೆಲ್ಲಾ ನಡೆದು ಈಗ ಅಲ್ಲಿನ ನಗರಸಭೆ ಬಹಳ ದುಸ್ಥಿತಿಗೆ ಬಂದಿದೆ. ಈಗ ಅಲ್ಲಿ ನೀರಿನ ಕೊರತೆ ಇಲ್ಲ. ಸಮನಾಗಿ ಹಂಚಿದರೆ ಎಲ್ಲರಿಗೂ ದಿನಕ್ಕೆ ೪೦ ಗ್ಯಾಲನ್ ನೀರು ಸಿಗುತ್ತದೆ. ಆದರೆ ಸಮನಾಗಿ ಹಂಚಿಕೆಯಾಗುತ್ತಿಲ್ಲ. ಕೆಲವರಿಗೆ ೨೦೦೦ ಸಾವಿರ ಗ್ಯಾಲನ್, ಮತ್ತೆ ಕೆಲವರಿಗೆ ಒಂದು ಸಾವಿರ ಗ್ಯಾಲನ್, ಕೆಲವರಿಗೆ ೨೦೦ ಗ್ಯಾಲನ್ ನೀರು ಸರಬರಾಜಾದರೆ ಕೆಲವರಿಗೆ ಒಂದು ಗ್ಯಾಲನ್ ನೀರೂ ಕೂಡ ಸಿಗುತ್ತಿಲ್ಲ. ಇದರ ಜೊತೆಗೆ ಅಲ್ಲಿ ಒಳಚರಂಡಿ ವ್ಯವಸ್ಥೆ ಕೂಡ ಚೆನ್ನಾಗಿಲ್ಲ. ಇದನ್ನು ವ್ಯವಸ್ಥಿತಗೊಳಿಸಬೇಕಾದರೆ ೨೦ ಕೋಟಿ ರೂಪಾಯಿಗಳಾದರೂ ಬೇಕು. ಆದರೆ ಇಷ್ಟು ಹಣ ಅವರಲ್ಲಿ ಇಲ್ಲ. ಕಳೆದ ೧೩–೧೪ ವರ್ಷಗಳಿಂದ ಅಲ್ಲಿನ ನಗರಸಭೆಯು ಆಡಳಿತ ಆಡಳಿತಾಧಿಕಾರಿಯವರ ಕೈಯಲ್ಲಿದ್ದು ಬೇಕಾದಷ್ಟು ಭ್ರಷ್ಟಾಚಾರಗಳು ಮತ್ತು ಅನಾಚಾರಗಳು ನಡೆದಿವೆ. ಯಾವ ಅಭಿವೃದ್ಧಿ ಕೆಲಸಗಳೂ ಆಗಿಲ್ಲ. ರಸ್ತೆಗಳ ಕೆಲಸವಾಗಿಲ್ಲ. ಮೈಸೂರಿನಲ್ಲಿ ಹುಡ್ಕೋ ನೆರವಿನಿಂದ ಮನೆಗಳನ್ನು ಕಟ್ಟಿಸುವ ಸಮಯದಲ್ಲಿ ನಗರಾಭಿವೃದ್ಧಿ ಸಮಿತಿಯವರು ಟೆಂಡರ್ ಮೂಲಕ ಈ ಕೆಲಸ ಮಾಡಿಸುವುದು ಬೇಡ, ಲೋಕೋಪಯೋಗಿ ಇಲಾಖೆಯವರೇ ೪೦ ಪರ್ಸೆಂಟ್ ಕಮಿಷನ್ ಪಡೆದು ಈ ಕೆಲಸ ಮಾಡಲಿ ಎಂದು ಶ್ರೀ ದೇವರಾಜ ಅರಸ್ ಅವರು ದೊಡ್ಡ ಮನಸ್ಸು ಮಾಡಿ ಹೇಳಿದರು. ಆದರೆ ಲೋಕೋಪಯೋಗಿ ಇಲಾಖೆಯವರು ೪೦ ಪರ್ಸೆಂಟ್‌ಗೆ ಬದಲು ೬೦ ಪರ್ಸೆಂಟ್ ಕಮಿಷನ್ ಪಡೆದು ಈ ಕೆಲಸ ಮಾಡಿದ್ದರಿಂದ ಈಗ ಅನೇಕ ಮನೆಗಳು ಬಿದ್ದು ಹೋಗಿವೆ. ಈ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಆಗಿಲ್ಲ. ಮಳೆ ಏನಾದರೂ ಬಂದರೆ ಮಳೆ ನೀರೆಲ್ಲಾ ಮನೆಯೊಳಗೆ ಹೋಗುತ್ತದೆ. ವಾರ್ತಾಮಂತ್ರಿಗಳು ಅನೇಕ ಸಾರಿ ಇಲ್ಲಿಗೆ ಭೇಟಿ ಮಾಡಿದ್ದಾರೆ. ಈ ಮನೆಗಳನ್ನು ಯಾರೇ ಕಟ್ಟಿರಲಿ, ಲೋಕೋಪಯೋಗಿ ಇಲಾಖೆಯವರು ಆಗಲಿ, ನಗರಸಭೆಯವರಾಗಲಿ, ಅದಕ್ಕೊಂದು ವ್ಯವಸ್ಥೆ ಮಾಡಿ ಕೆಳಮಟ್ಟದ ಮನೆಗಳನ್ನು ಕಟ್ಟುವುದಕ್ಕೆ ಯಾರೇ ಕಾರಣರಿರಲಿ ಅಂತಹವರಿಗೆ ಶಿಕ್ಷೆ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈಗಾಗಲೇ ಹತ್ತಾರುವರ್ಷಗಳು ಕಳೆದುಹೋಗಿವೆ, ಏನೇನು ಲೋಪದೋಷಗಳು ಆಗಿವೆ ಅದನ್ನು ಸರಿಪಡಿಸಬೇಕಾಗಿದೆ. ಇದನ್ನೆಲ್ಲಾ ಸರಿಪಡಿಸಬೇಕಾದರೆ ಮಂತ್ರಿಮಂಡಲ ಸಹಾಯ ಮಾಡಬೇಕು. ಈಗ ಒದಗಿಸಿರತಕ್ಕ ಹಣ ಸಾಲದು, ಮೈಸೂರು ವಿಶ್ವವಿಖ್ಯಾತವಾದ ನಗರವಾಗಿದೆ. ಮೈಸೂರು ನಗರದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಮೈಸೂರುನಗರದಲ್ಲಿ ದಸರಾ ಮಹೋತ್ಸವ ನಡೆಸಬೇಕೆಂದು ಪ್ರಯತ್ನ ಮಾಡಿದ್ದೀರಿ. ಮೈಸೂರು ನಗರದ ರಸ್ತೆಗಳ ವ್ಯವಸ್ಥೆ ಚರಂಡಿ ವ್ಯವಸ್ಥೆ ೧೦ ವರ್ಷಗಳಿಂದ ದುಸ್ಥಿತಿ ಇದ್ದುದರಿಂದ ಸರಿಯಾಗಿ ಇಲ್ಲ. ಇದಕ್ಕೆ ಹತ್ತಾರು ಲಕ್ಷ ರೂಪಾಯಿಗಳನ್ನು ಒದಗಿಸಿ ರಸ್ತೆ, ಚರಂಡಿ, ಸರಿಪಡಿಸದಿದ್ದರೆ ಹೊರಗಡೆಯಿಂದ ಮೈಸೂರು ನಗರಕ್ಕೆ ಬಂದಂತಹ ಜನ ತಿರುಗಾಡಲಿಕ್ಕೆ ಆಗಲಿಕ್ಕಿಲ್ಲ. ಮೈಸೂರು ನಗರವನ್ನು ನೋಡಿ ಹಾಡಿಕೊಳ್ಳುವಂತಹ ಪರಿಸ್ಥಿತಿಗೆ ಅವಕಾಶ ಕೊಡದೆ ಬೇಗ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಅನೇಕ ಸದಸ್ಯರುಗಳು ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ, ಸಮಯದ ಅಭಾವವಿರುವುದರಿಂದ ಹೆಚ್ಚಿಗೆ ಮಾತನಾಡಲಿಕ್ಕೆ ಅವಕಾಶವಿಲ್ಲ, ನಾನು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಮಾನ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತೇನೆ.

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಸನ್ಮಾನ್ಯ ಉಪಾಧ್ಯಕ್ಷರೆ, ನಗರಸಭೆಯ ಬೇಡಿಕೆಗಳ ಮೇಲೆ ಮಾತನಾಡುತ್ತ ಪುರಸಭೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ನಿರ್ಮಾಪಕ ಮಾಗಡಿ ಕೆಂಪೇಗೌಡ, ಅಂತಹವರ ಊರಿನಲ್ಲಿ ಇವತ್ತಿನ ದಿವಸ ಕುಡಿಯುವ ನೀರಿಲ್ಲ ಎಂದರೆ ನಿಜವಾಗಿಯೂ ಶೋಚನೀಯವೆಂದು ಹೇಳಿದರೆ ತಪ್ಪಾಗಲಾರದು. ಬೆಂಗಳೂರು ನಗರದಲ್ಲಿ ಯಥೇಚ್ಛವಾಗಿ ನೀರು ಸಿಗುತ್ತದೆ, ಮಾಗಡಿಯಲ್ಲಿ ನೀರು ಇಲ್ಲ. ಬೆಂಗಳೂರು ನಗರ ನಿರ್ಮಾಪಕರ ಊರಿನಲ್ಲಿ ಕುಡಿಯುವ ನೀರು ಇಲ್ಲ ಎಂದರೆ ಶೋಚನೀಯವಲ್ಲವೇ ಇದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಮೊನ್ನೆ ಮಾನ್ಯ ಮಂತ್ರಿಗಳು ಮಾಗಡಿ ತಾಲ್ಲೂಕಿಗೆ ಪ್ರವಾಸ ಹೋಗಿದಾಗ ಪುರಸಭೆಯವರು ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟಿದ್ದಾರೆ. ಈ ಒಂದು ಸಂದರ್ಭದಲ್ಲಿ ಹಿಂದೆ ಇದ್ದಂತಹ ಸರ್ಕಾರ ೭೫ ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಮಂಜೂರಾತಿ ಕೊಟ್ಟಿದ್ದಾರೆ. ಅದರ ಜೊತೆಗೆ ಜನಗಳು ವಂತಿಗೆ ಕೊಡದೇ ಇರುವುದರಿಂದ ಆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ೧೯೫೦ನೇ ಇಸವಿಯಿಂದ ಈ ಒಂದು ಬೇಡಿಕೆ ಹಾಗೆಯೇ ನಡೆದುಕೊಂಡು ಬರುತ್ತಿದೆ, ಇಲ್ಲಿಯವರೆಗೂ ಇದಕ್ಕೆ ಪರಿಹಾರವಾಗಿಲ್ಲ ಈಗಲಾದರೂ ಮಾಗಡಿಯ ನಾಗರೀಕರಿಗೆ ಇರುವ ಕಷ್ಟಕಾರ್ಪಣ್ಯಗಳನ್ನು ಪರಿಹರಿಸಲಿಕ್ಕೆ ಈಗಿನ ಸರ್ಕಾರ ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಜನಗಳು ವಂತಿಗೆ ಕೊಡುವುದಕ್ಕೆ ಆಗುವುದಿಲ್ಲ, ಪುರಸಭೆಯವರು ಕೂಡ ಕೊಡುವುದಕ್ಕೆ ಆಗುವುದಿಲ್ಲ ಏಕೆಂದರೆ ಆಕ್ಟ್ರಾಯಿಯನ್ನು ರದ್ದು ಮಾಡಿರುವುದರಿಂದ ಯಾವುದೇ ವಿಧವಾದ ವರಮಾನ ಪುರಸಭೆಗಳಿಗೆ ಬರುವುದಿಲ್ಲ. ಎಂಟರಿಟ್ಯಾಕ್ಸ್ ಹಾಕುವುದಕ್ಕೆ ಅವಕಾಶವಿದೆ, ಎಂಟರಿಟ್ಯಾಕ್ಸ್ ಹಾಕಿ ಅದರ ಮುಖಾಂತರ ಬರತಕ್ಕ ವರಮಾನದಿಂದ ಅಲ್ಲಿರತಕ್ಕ ಸಿಬ್ಬಂದಿವರ್ಗಕ್ಕೆ ಸಂಬಳ ಕೊಡುವುದಕ್ಕೆ ಮತ್ತು ಮೇಂಟೆನ್ನ್‌ಸ್‌ಗೆ ಸಾಕಾಗುವುದಿಲ್ಲ. ವರಮಾನ ಕಡಿಮೆಯಿರುವುದರಿಂದ ಯಾವುದೇ ರೀತಿಯ ವಂತಿಗೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮೂಲವಾಗಿ ಆದಾಯ ಕಡಿಮೆ ಇರತಕ್ಕ ಪುರಸಭೆಗಳಿಂದ ವಂತಿಗೆ ಕೇಳದೆ ಸರ್ಕಾರ ದೊಡ್ಡ ಮನಸ್ಸು ಮಾಡಿ ವಂತಿಗೆ ಹಣವನ್ನು ಜನರಿಂದ ಕೇಳದೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಯೋಜನೆ ಪ್ರಾರಂಭವಾದಾಗ ಅಂದಾಜುವೆಚ್ಚ ೧೨ ಲಕ್ಷ ರೂಪಾಯಿಗಳು ಇತ್ತು. ಈಗ ೭೫ ಲಕ್ಷ ರೂಪಾಯಿಗಳಿಗೆ ಹೋಗಿದೆ. ದಿನೇ ದಿನೇ ಬೆಲೆಗಳು ಜಾಸ್ತಿಯಾಗುವುದರಿಂದ ಆದಷ್ಟು ಶೀಘ್ರವಾಗಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ಜನಗಳಿಂದ ವಂತಿಗೆಯನ್ನು ಕೇಳದೆ ಎಲ್ಲಾ ಕೆಲಸವನ್ನು ಸರ್ಕಾರವೇ ವಹಿಸಿಕೊಂಡು ಮಾಗಡಿ ಜನತೆಗೆ ಇರತಕ್ಕ ಕುಡಿಯುವ ನೀರಿನ ಬವಣೆಯನ್ನು ಪರಿಹರಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯಸಚಿವರನ್ನು ಕೇಳಿಕೊಳ್ಳುತ್ತೇನೆ. ಮಾಗಡಿಯಲ್ಲಿ ಮೂಲತಃ ಯಾವ ಕೈಗಾರಿಕೆಗಳು ಇಲ್ಲ. ಅಲ್ಲಿ ಯಾವುದಾದರೂ ಕೈಗಾರಿಕೆಯನ್ನು ಹಾಕಿ ಆ ಪಟ್ಟಣ ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾಗಡಿ ಟೌನ್‌ನಲ್ಲಿ ಮನೆಗಳ ಅಭಾವ ತುಂಬಾ ಇದೆ. ಒಂದೊಂದು ಮನೆಯಲ್ಲಿ ಮೂರು-ನಾಲ್ಕು ಸಂಸಾರಗಳು ಇವೆ. ಮಾನ್ಯ ಮಂತ್ರಿಗಳು ನಗರಕ್ಕೆ ಭೇಟಿಕೊಟ್ಟು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಕೊಳಚೆ ಪ್ರದೇಶಗಳು ಯಥೇಚ್ಛವಾಗಿ ಬೆಳೆದಿವೆ. ಅಲ್ಲಿ ಸೈಟು ಕೊಂಡುಕೊಂಡು ಮನೆ ಕಟ್ಟಿಕೊಳ್ಳಬೇಕಾದರೆ, ಒಂದು ಸೈಟಿಗೆ ೧೫ ಸಾವಿರದಿಂದ ೨೦ ಸಾವಿರ ರೂಪಾಯಿಗಳನ್ನು ಅದೂ ಚಿಕ್ಕ ಸೈಟುಗಳಿಗೆ ಕೊಡಬೇಕು. ಹಣ ಕೊಟ್ಟು ಸೈಟು ತೆಗೆದುಕೊಂಡು ಮನೆ ಕಟ್ಟಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಮನೆಗಳ ಸೈಟಿಗೆ ಬೇಕಾದಂತಹ ಭೂಮಿಯನ್ನು ಆಕ್ವೈರ್ ಮಾಡಿ ಸೈಟುಗಳನ್ನು ವಿಂಗಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಮನೆಯಲ್ಲಿ ಎರಡು ಮೂರು ಸಂಸಾರಗಳು ಇವೆ. ಒಂದೊಂದು ಕುಟುಂಬಕ್ಕೂ ನಿವೇಶನಗಳನ್ನು ಕೊಟ್ಟು ಉಪಕಾರ ಮಾಡಬೇಕು. ಟೌನ್‌ಪ್ಲಾನಿಂಗ್‌ನವರು ಟೌನ್‌ನ ಅಭಿವೃದ್ಧಿಗೋಸ್ಕರ ಒಂದು ಸ್ಕೀಮ್ ತಯಾರುಮಾಡಿ, ಸೈಟುಗಳನ್ನು ವಿಂಗಡಿಸಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಂತಹ ಒಂದು ಪ್ಲಾನ್ ಅನ್ನು ಮಾಗಡಿ ಟೌನ್‌ಗೆ ತಯಾರು ಮಾಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ ಮಾಗಡಿ ಪುರಾತನ ಪ್ರಸಿದ್ಧವಾದ ಜಾಗ. ಅಲ್ಲಿ ಅನೇಕ ಪುರಾತನ ಪ್ರಸಿದ್ಧವಾದ ಜಾಗಗಳಿವೆ. ಬೆಂಗಳೂರು ನಗರ ನಿರ್ಮಾಪಕ ಕೆಂಪೇಗೌಡ ಹುಟ್ಟಿದಂತಹ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲಾ ಎಂದು ಸೂಚಿಸುತ್ತದೆ.

ಮೂಲ ಪಟ್ಟಣವನ್ನು ಅಲಕ್ಷ್ಯ ಮಾಡಲಾಗಿದೆ ಏತಕ್ಕೆ ಅಲಕ್ಷ್ಯ ಮಾಡಲಾಗಿದೆ. ಎಂಬುದು ಆಶ್ಚರ್ಯಕರವಾಗಿದೆ, ಈ ಒಂದು ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಾ ಮಾಗಡಿ ಹತ್ತಿರ ಸಾವನದುರ್ಗ ಬೆಟ್ಟವಿದೆ. ಇಂಡಿಯಾದೇಶದಲ್ಲಿ ಪ್ರಖ್ಯಾತಿಯನ್ನು ಹೊಂದಿರುವ ಅಡಿಯಾರ್ ಮದ್ರಾಸ್ ನಗರದಲ್ಲಿದೆ. ಅದೇರೀತಿ ಮಾಗಡಿ ತಾಲ್ಲೂಕಿನಲ್ಲಿ ಚುಂಚನಕುಪ್ಪೆ ಹತ್ತಿರ ಒಂದು ದೊಡ್ಡ ಆಲದಮರವಿದೆ. ಸಾವನದುರ್ಗ ಮತ್ತು ಆಲದಮರ ಇವೆರಡೂ ಸ್ಥಳಗಳನ್ನು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ಕಾಲಾವಕಾಶ ಕಡಿಮೆಯಿರುವುದರಿಂದ ನಾವು ಹೇಳಬೇಕಾದ ವಿಷಯಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಕೆಲವು ಸದಸ್ಯರುಗಳಿಗೆ ೧ ಗಂಟೆ ಮುಕ್ಕಾಲು ಗಂಟೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ ಅದಕ್ಕೆ ಬದಲಾಗಿ ಕಾಲಮಿತಿಯನ್ನು ಹಂಚಿಕೆ ಮಾಡಿದರೆ ಎಲ್ಲರೂ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ನಾವು ಮಾತನಾಡುವಾಗ ೨-೩ ನಿಮಿಷ ಅವಕಾಶ ಕೊಟ್ಟರೆ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ, ಎರಡು ಮೂರು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುವುದಕ್ಕೆ ಬದಲಾಗಿ ನೀವು ಎದ್ದು ಹೋಗಿ ಎಂದು ಹೇಳುವುದು ಬಹಳ ಸೂಕ್ತವೆಂದು ಹೇಳುತ್ತೇನೆ. ಕಾಲವನ್ನು ಎಲ್ಲರಿಗೂ ಸರಿಯಾಗಿ ಹಂಚಿ, ಕೆಲವರಿಗೆ ಜಾಸ್ತಿ ಸಮಯ ಕೊಡುವುದು ಸರಿಯಲ್ಲ. ನಾವು ಕೂಡ ನಮ್ಮ ಕ್ಷೇತ್ರಗಳ ಕಷ್ಟಸುಖಗಳನ್ನು ಹೇಳಿಕೊಳ್ಳಬೇಕಾಗಿದೆ. ಮಾಗಡಿಯಲ್ಲಿರತಕ್ಕ ಕುಡಿಯುವ ನೀರಿನ ಸಮಸ್ಯೆಯನ್ನು ಬೇಗ ಪರಿಹರಿಸಬೇಕು. ಸೈಟುಗಳನ್ನು ಕೊಡಲಿಕ್ಕೆ ಭೂಮಿಯನ್ನು ಅಕ್ವೈರ್ ಮಾಡಿ ನಿವೇಶನಗಳನ್ನು ಬೇಗ ಹಂಚಬೇಕು. ಸಾವನದುರ್ಗ ಮತ್ತು ಆಲದಮರ ಇವೆರಡೂ ಸ್ಥಳಗಳಲ್ಲಿ ಟೂರಿಸ್ಟ್ ಸೆಂಟರ್ ತೆಗೆಯಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆಯ ಮೇಲಿನ ಚರ್ಚೆ ಮುಕ್ತಾಯವಾಯಿತು.

(ಗೊಂದಲ)

ಶ್ರೀ ಪಿ. ತಿಪ್ಪಯ್ಯ.—ಇದು ಬಹಳ ಅನ್ಯಾಯ, ಒಬ್ಬೊಬ್ಬರಿಗೆ ೫೦,೬೦ ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ ಇದು ಸರಿಯೆ ?

ಉಪಾಧ್ಯಕ್ಷರು.—ಎಲ್ಲಾ ಸದಸ್ಯರುಗಳಲ್ಲಿ ವಿನಂತಿ, ೫ ನಿಮಿಷ ಮಾತನಾಡುತ್ತೇವೆಂದು ಎದ್ದು ನಿಂತುಕೊಂಡರೆ ಮಾತು ಮುಗಿಸುವುದು ೧೫ ನಿಮಿಷಗಳ ಮೇಲಾಗುತ್ತದೆ. ಈ ವಿಷಯ ಇವತ್ತಿಗೆ ಮುಕ್ತಾಯವಾಗಬೇಕಾಗಿದೆ. ಇದು ಆದಮೇಲೆ ಪೊಲೀಸ್ ಇಲಾಖೆಯ ಮೇಲಿನ ಬೇಡಿಕೆ ಇದೆ, ಅದು ಕೂಡ ಮುಕ್ತಾಯವಾಗಬೇಕಾಗಿದೆ. ನಿಮ್ಮ ನಿಮ್ಮ ಪಕ್ಷಗಳಿಗೆ ಕೊಟ್ಟಿದ್ದ ಸಮಯಕ್ಕಿಂತ ಜಾಸ್ತಿ ಸಮಯ ತೆಗೆದುಕೊಂಡು ಅನೇಕ ಸದಸ್ಯರು ಮಾತನಾಡಿದ್ದಾರೆ. ಈಗ ಸಾಕಷ್ಟು ಸದಸ್ಯರು ಈ ಬೇಡಿಕೆಯ ಮೇಲೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ನಿಮ್ಮ ನಿಮ್ಮ ಕ್ಷೇತ್ರಗಳ ಕುಂದುಕೊರತೆಗಳನ್ನು ಹೇಳಬೇಕೆನ್ನುವ ಕಾತುರತೆ ನಿಮಗೆ ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಎಲ್ಲರಿಗೂ ಅವಕಾಶ ಮಾಡಿ ಕೊಡುತ್ತೇನೆ.

ಇಡೀ ದಿವಸ ತಾವು ಇದರ ಬಗ್ಗೆ ಚರ್ಚೆ ಮಾಡಿದರೆ ಹೇಗೆ? ಮಾನ್ಯ ಮಂತ್ರಿಗಳು ಇವತ್ತು ಉತ್ತರ ಕೊಡಬೇಕೆಂದು ಇದೆ. ಆ ಪ್ರಕಾರ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ತಾವು ಕೂಡ ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೀರಿ. ನಿಮ್ಮ ಸಹಕಾರ ನಮಗೆ ಬೇಕು ನಮ್ಮ ಸಹಕಾರ ನಿಮಗೆ ಬೇಕು. ಆಗ ನಾವು ಸುಲಭವಾಗಿ ಈ ಸದನದ ಕಾರ್ಯಕಲಾಪಗಳನ್ನು ನಡೆಸಬಹುದು. I request you co-operate with the Chair to complete the demands. ಬೇಕಾದರೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.— ಇಷ್ಟೇ ಸಮಯ ಮಾತನಾಡಬೇಕೆಂದು ಕಾಲಾವಕಾಶವನ್ನು ನಿಗದಿ ಮಾಡಿದ್ದೇವೆ. ಮತ್ತು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಕೂಡ ತೀರ್ಮಾನ ಮಾಡಿದ್ದೇವೆ. ಆ ಪ್ರಕಾರವಾಗಿ ನಾವು ಕೆಲಸ ಮಾಡಬೇಕಾಗುತ್ತದೆ. ಬೆಳಗ್ಗೆ ೯-೩೦ ಗಂಟೆಯಿಂದ ರಾತ್ರಿ ೯ ಗಂಟೆಯ ತನಕ ಸೇರಬೇಕೆಂದು ಕೂಡ ನಿರ್ಣಯವನ್ನು ಮಾಡಿದ್ದೇವೆ. ಆದ್ದರಿಂದ ಈಗಾಗಲೇ ಸುಮಾರು ೪-೩೦ ಗಂಟೆಯಾಗುತ್ತಾ ಬಂದಿದೆ.

ಶ್ರೀ ಎಂ. ಮಹದೇವ್.— ಸ್ವಾಮಿ ನಾವು ಚುನಾಯಿತ ಪ್ರತಿನಿಧಿಗಳು. ನಾವು ರೈತರ ಬಗ್ಗೆ ಕಾರ್ಮಿಕರ ಬಗ್ಗೆ ಮಾತನಾಡಬೇಕಾಗುತ್ತದೆ. ಆದ್ದರಿಂದ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಈ ಸದನವನ್ನು ನಿಯಮದ ಪ್ರಕಾರ ನಡೆಸಬೇಕಾಗುತ್ತದೆ. ನಿಮ್ಮ ಪಕ್ಷದ ವತಿಯಿಂದ ಕೂಡ ಹೆಸರುಗಳನ್ನು ನಿಮ್ಮ ಲೀಡರ್ ಕಳುಹಿಸಿಕೊಟ್ಟಿದ್ದರು. ಅದೇರೀತಿಯಾಗಿ ಜನತಾ ಪಕ್ಷದ ವತಿಯಿಂದ ಕೂಡ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದರು. ಬಿ.ಜೆ.ಪಿ. ಪಕ್ಷದವರು ಕೂಡ ತಮ್ಮ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದರು. ಆ ಪ್ರಕಾರ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಆದ್ದರಿಂದ ಈಗ ತಮ್ಮ ಸಹಕಾರವನ್ನು ನಾನು ಕೇಳುತ್ತೇನೆ.

(ಗೊಂದಲ)

(ಉಪಾಧ್ಯಕ್ಷರು ಅಪ್ಪಣೆ ಮೇರೆಗೆ ವರದಿಯನ್ನು ಮಾಡಲಿಲ್ಲ)

ಉಪಾಧ್ಯಕ್ಷರು.— ನಾನು ನಿಂತಿದ್ದೇನೆ. ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಅಧ್ಯಕ್ಷರೇ ನಾನು ಈ ಸಂದರ್ಭದಲ್ಲಿ ಒಂದು ಮೆಚ್ಚುಗೆಯ ಮಾತನ್ನು ವ್ಯಕ್ತಪಡಿಸಬೇಕಾಗುತ್ತದೆ. ಕಾರಣವೇನೇದರೆ ಈ ಸದನಕ್ಕೆ ಅನೇಕ ಜನ ಕಿರಿಯ ಸದಸ್ಯರು ಹಾಗೂ ಯುವಕ ಸದಸ್ಯರು ಚುನಾಯಿತರಾಗಿ ಬಂದಿದ್ದಾರೆ. ಅವರು ನಾನು ಮಾತನಾಡುತ್ತೇನೆಂದು ಕೇಳಿದರೆ ಅದಕ್ಕೆ ತಾವು ಒಪ್ಪಿಗೆ ಕೊಡಲಿಲ್ಲವೆಂದರೆ ಹೇಗೆ? ಮತ್ತು ಮಾನ್ಯ ಪಂಪಾಪತಿ ಯವರು ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಅವರು ಈ ಮನೆಯ ಹಿರಿಯ ಸದಸ್ಯರು. ಅವರು ಮಾತನಾಡುವಂಥ ವಿಷಯ ಬೇಕಾದಷ್ಟಿರುತ್ತದೆ. ಆದ್ದರಿಂದ ತಾವು ಎಲ್ಲರಿಗೂ ೫ ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.— ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಂಡರೆ ಒಳ್ಳೆಯದು. ಕಾರಣ ನಿಮ್ಮ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಸದಸ್ಯರಾದಂಥ ಶ್ರೀಮಾನ್ ಪಂಪಾಪತಿಯವರು ಬಹಳ ಹಿರಿಯ ಸದಸ್ಯರಿದ್ದಾರೆ. ಮತ್ತು ಈ ಸದನದಲ್ಲಿ ಅನೇಕ ಜನ ಯುವಕರು ಇದ್ದಾರೆ. ಆದರೆ ಸುಮಾರು ಜನ ಯಾವ ವಿಷಯದ ಮೇಲೂ ಕೂಡ ಮಾತನಾಡಿಲ್ಲ. ಆದರೆ ಈಗ ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಅವರು ಮಾತನಾಡುತ್ತೇನೆಂದು ಎದ್ದು ನಿಂತಿದ್ದಕ್ಕೆ ನಾವೆಲ್ಲರೂ ಮೆಚ್ಚಬೇಕು. ಕಾರಣ ಅವರಿಗೂ ಕೂಡ ಅಷ್ಟು ಧೈರ್ಯ ಬಂದು ಮಾತನಾಡುತ್ತಾರಲ್ಲ ಎಂದು. ಕಾರಣ ಅವರು ಮೊದಲ ಬಾರಿಗೆ ಚುನಾಯಿತರಾಗಿ ಬಂದಿದ್ದಾರೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರು ಅವರಿಗೆ ಉತ್ತೇಜನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅವರ ಆಸೆಯನ್ನು ತಾವು ನಿರಾಸೆ ಮಾಡಿದರೆ ಅವರು ಮುಂದೆ ಮಾತನಾಡುವುದಕ್ಕೆ ಉತ್ತೇಜನ ಸಿಗುವುದಿಲ್ಲ. ತಾವು ಬೆಳಗ್ಗೆ ೮ ಗಂಟೆಗೆ ಬರಬೇಕೆಂದು ಹೇಳಿದರೂ ಕೂಡ ನಾವು ಬರುವುದಕ್ಕೆ ಸಿದ್ಧವಾಗಿದ್ದೇವೆ. ರಾತ್ರಿ ೧೨ ಗಂಟೆಯತನಕ ಇರಬೇಕೆಂದು ಹೇಳಿದರೂ ಕೂಡ ಇರುವುದಕ್ಕೆ ಸಿದ್ಧವಾಗಿದ್ದೇವೆ. ನಾವು ಯಾವ ರೀತಿಯ ಸಹಕಾರ ಬೇಕಾದರೂ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಆದ್ದರಿಂದ ತಾವು ಈಗ ಅವರಿಗೆ ೫ ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ವಿರೋಧಪಕ್ಷದ ನಾಯಕರ ಮಾತಿಗೆ ನಾನು ಬೆಲೆಕೊಟ್ಟು ಹೊಸದಾಗಿ ಬಂದಿರತಕ್ಕಂಥ ಮಾನ್ಯ ಸದಸ್ಯರು ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ. ನಾನು ಮೊದಲನೆಯ ಬೆಲ್ ಮಾಡಿದ ತಕ್ಷಣ ತಮ್ಮ ಮಾತನ್ನು ಮುಗಿಸಬೇಕು.

ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).— ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಡಳಿತ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ನಾನು ಸ್ವಾಗತ ಮಾಡಿ ಕೆಲವಾರು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಹುಬ್ಬಳ್ಳಿ ಮಹಾನಗರವಾಗಿ ಸುಮಾರು ೨೧ ವರ್ಷಗಳು ಆಗಿದೆ. ಇದು ಮಹಾನಗರವಾಗಿದ್ದುದು ೧-೩-೧೯೬೨ರಲ್ಲಿ. ಇದರ ಜನಸಂಖ್ಯೆ ಸುಮಾರು ೫೨,೭೦೦ ಇದ್ದು ಇದರ ಒಟ್ಟು

ವಿಸ್ತೀರ್ಣ ೧೭ ಕಿಲೋಮೀಟರ್‌ಗಳು. ಇವತ್ತು ಹುಬ್ಬಳ್ಳಿ ಮಹಾನಗರಸಭೆಯು ಒಂದು ಉತ್ತಮ ಮಟ್ಟದಲ್ಲಿ ಕೆಲಸ ಮಾಡಿಕೊಂಡು ಬರುತ್ತಿದೆ. ಮತ್ತು ಜನತೆಗೆ ಒಳ್ಳೆಯ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತಿದೆ. ಮತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಹುಬ್ಬಳ್ಳಿ ನಗರಸಭೆ ಹೆಸರುವಾಸಿಯಾಗಿದೆ ಎನ್ನ ತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಇವತ್ತು ನಾವು ಬೆಂಗಳೂರು ನಗರಸಭೆಯನ್ನು ತೆಗೆದುಕೊಂಡರೆ ಈ ನಗರಸಭೆಗೆ ನಾನಾರೀತಿಯ ವರಮಾನ ಬರುತ್ತಿದೆ. ಆದ್ದರಿಂದ ಈ ನಗರಸಭೆಯಲ್ಲಿ ಕೂಡ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಇವತ್ತು ಬೆಂಗಳೂರು ನಗರಸಭೆಯಲ್ಲಿ ಶೇಕಡ ೨೦ ಪರ್ಸೆಂಟ್ ಮಾತ್ರ ಟ್ಯಾಕ್ಸ್‌ನ್ನು ಕೊಡುತ್ತಿದ್ದರೆ ನಮ್ಮ ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್‌ನಲ್ಲಿ ನಾವು ಶೇಕಡ ೩೧ ಪರ್ಸೆಂಟ್ ಟ್ಯಾಕ್ಸ್‌ನ್ನು ಕೊಡುತ್ತಿದ್ದೇವೆ. ಆದರೂ ಕೂಡ ಇವತ್ತು ಬೆಂಗಳೂರು ನಗರಕ್ಕೆ ಒದಗಿಸಿಕೊಡುತ್ತಿರುವ ಸೌಲಭ್ಯಗಳಲ್ಲಿ ನಮ್ಮ ನಗರಸಭೆಗೆ ಒದಗಿಸಿಕೊಡುತ್ತಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಹುಬ್ಬಳ್ಳಿ ನಗರಸಭೆಯಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ರಸ್ತೆಗಳ ಸೌಕರ್ಯ ಇಲ್ಲ, ನಗರದ ಸ್ವಚ್ಛತೆ ಇಲ್ಲ. ಇದರಿಂದ ಅಲ್ಲಿನ ಆರೋಗ್ಯ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ನಗರಸಭೆಯ ಮೇಲೆ ಹೆಚ್ಚು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ನಗರ ಸಭೆಯ ಅಧಿಕಾರ ವ್ಯಾಪ್ತಿಯಲ್ಲಿ ಸುಮಾರು ೫೨ ಕೊಳಚೆ ಪ್ರದೇಶಗಳು ಇದ್ದು ಅದರಲ್ಲಿ ಸುಮಾರು ೨೧ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಮಂಡಲಿಯವರು ತೆಗೆದುಕೊಂಡಿದ್ದಾರೆ. ಇನ್ನು ಸುಮಾರು ೩೬ ಕೊಳಚೆ ಪ್ರದೇಶಗಳು ಇವೆ. ನಮ್ಮ ಹುಬ್ಬಳ್ಳಿ ನಗರಸಭೆಗೆ ೧೯೭೫ರಿಂದ ೧೯೭೮ರವರೆಗೆ ಸುಮಾರು ೫೦ ಲಕ್ಷ ರೂಪಾಯಿಗಳ ಧನಸಹಾಯವನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದರು. ಅನಂತರ ಸುಮಾರು ೫೫ ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದರು. ಆ ಹಣ ಯಾವ ಕೆಲಸಕಾರ್ಯಗಳಿಗೂ ಕೂಡ ಸಾಕಾಗುತ್ತಿರಲಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ನಗರಸಭೆಗೆ ಸುಮಾರು ೧ ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯದು. ನಮ್ಮ ಸರ್ಕಾರ ಬಂದ ನಂತರ ೧ ಕೋಟಿ ರೂಪಾಯಿಗಳ ಹಣ ಒದಗಿಸಿ ಉಳಿದಿರುವ ಸ್ಲಂಗಳನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಯಿತೆಂಬುದನ್ನು ನಾನು ತಮ್ಮ ಮುಂದಿಡ ಬಯಸುತ್ತೇನೆ.

ಆಕ್ಟ್ರಾಯ್ ಅನುದಾನ ೧೯೮೧–೮೨ರಲ್ಲಿ ೨ ಕೋಟಿ ೧೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ೧೯೮೨–೮೩ ರಲ್ಲಿ ೨ ಕೋಟಿ ೩೨ ಲಕ್ಷ ಮಾಡಿದ್ದಾರೆ. ಈ ೨ ಕೋಟಿ ೩೨ ಲಕ್ಷ ರೂಪಾಯಿಗಳು ಎಲ್ಲಿಗೂ ಸಾಕಾಗುವುದಿಲ್ಲ. ಕೊಡುವುದಾದರೆ, ಪ್ರತಿ ವರ್ಷ ೨೫ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಮಾಡಿ ಕನಿಷ್ಠ ೪ ಕೋಟಿ ರೂಪಾಯಿಗಳನ್ನಾದರೂ ಕೊಡಬೇಕಾಗುತ್ತದೆ. ಈ ಹಣಕ್ಕೋಸ್ಕರ ನಮ್ಮ ಹುಬ್ಬಳ್ಳಿ ಮಹಾನಗರ ಸಭೆಯ ಕಮೀಷನರ್‌ರವರು ೩ ದಿವಸ ಇಲ್ಲಿಗೆ ಬಂದು ಕ್ಯಾಂಪ್ ಮಾಡಿ ಈ ಹಣ ತೆಗೆದುಕೊಂಡು ಹೋಗಬೇಕಾದಂಥ ಪರಿಸ್ಥಿತಿ ಇದೆ. ಇದು ಬರುವ ತನಕ ಅಲ್ಲಿ ನೌಕರರ ಪಗಾರ ಕೊಡುವುದಕ್ಕಾಗುತ್ತಾ ಇಲ್ಲ. ಆದ್ದರಿಂದ ಇಂತಹ ಪದ್ಧತಿಯನ್ನು ಕೊನೆಯಪಕ್ಷ ಜನತಾ ಸರ್ಕಾರ ಬಂದ ಮೇಲಾದರೂ ತಪ್ಪಿಸಿ ಸರಿಪಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ವರ್ಷದ ಆರಂಭದಲ್ಲಿಯೇ ಈ ೨ ಕೋಟಿ ೩೨ ಲಕ್ಷಗಳ ರೂಪಾಯಿ ಅನುದಾನ ಏನಿದೆ ಅದನ್ನು ೪ ಕೋಟಿ ರೂಪಾಯಿಗಳಿಗೆ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ೧೮ ಪರ್ಸೆಂಟ್ ಏನು ಖರ್ಚು ಮಾಡಲಾಗಿದೆ ಅದನ್ನು ನಮ್ಮ ಹುಬ್ಬಳ್ಳಿ ಮಹಾ ನಗರಸಭೆಯು ಬಹಳ ಶಿಸ್ತಿನಿಂದ ಖರ್ಚು ಮಾಡಿರುವುದು ಎಲ್ಲರಿಗೂ ಪ್ರಶಂಸನೀಯವಾಗಿದೆ. ಈ ೧೮ ಪರ್ಸೆಂಟ್ ಹಣದಲ್ಲಿ ಸುಮಾರು ೬೦ ಲಕ್ಷ ರೂಪಾಯಿಗಳು ಬಡವರ ಮತ್ತು ದುಡಿಯುವ ಜನರ ಕಲ್ಯಾಣಕ್ಕೆ ನಮ್ಮ ಕಮೀಷನರ್‌ರವರ ಖರ್ಚು ಮಾಡಿದ್ದಾರೆ. ನಮಗೆ ಒಳ್ಳೆಯ ಕಮೀಷನರ್‌ರವರು ಬಂದಿದ್ದಾರೆ. ಅವರು ಬಡವರ ಬಗ್ಗೆ ಬಹಳ ಅನುಕಂಪವನ್ನು ತೋರುವಂತಹ ಅಧಿಕಾರಿಗಳಾಗಿದ್ದಾರೆ. ಅದ್ದರಿಂದ ಈ ಬಡವರಿಗೂ ಸ್ವರ ಹೆಚ್ಚಿನ ಸಹಾಯವನ್ನು ಮಾಡುವುದಕ್ಕೆ ಸಾಧ್ಯವಾಯಿತು. ಅವರು ಕಲ್ಯಾಣ ಮಂಟಪಗಳನ್ನು ಭಜನೆ ಮಂದಿರಗಳನ್ನು ಈ ಸಾಮಾನ್ಯ ಬಡ ಜನರು, ಹರಿಜನರು ಇದ್ದ ಕಡೆ ಕಟ್ಟಿಸಿ ಕೊಟ್ಟಿದ್ದಾರೆ. ಅದೇ ರೀತಿ ಶಿಕ್ಷಣ ಮಂದಿರಗಳನ್ನು ಸಹ ಚಾಲೂ ಮಾಡಿದ್ದಾರೆ. ಈ ೧೮ ಪರ್ಸೆಂಟ್ ನೊಳಗಿಂದ ೬೧೮ ಭಾಗ್ಯ ಜ್ಯೋತಿಗಳನ್ನು ಮಾಡಿದ್ದಾರೆ. ಅದೇ ಪ್ರಕಾರ ಹಾಸ್ಟೆಲ್ ಚಾಲೂ ಮಾಡಿದ್ದಾರೆ. ದುರ್ಬಲವರ್ಗದವರಿಗೆ ೧೯೮೨–೮೩ರಲ್ಲಿ ಸಾಕಷ್ಟು ಮನೆ ನಿವೇಶನಗಳನ್ನು ಒದಗಿಸುವ ಕೆಲಸವಾಗಿಲ್ಲ. ಸಾಮಾನ್ಯ ಬಡ ಜನರು ಹರಿಜನರು. ದುರ್ಬಲ ವರ್ಗದವರಿಗೆ ಕನಿಷ್ಠ ೫ ಸಾವಿರ ನಿವೇಶನಗಳನ್ನಾದರೂ ಕಡಿಮೆ ಬೆಲೆಗೆ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮಲಪ್ರಭಾ ಯೋಜನೆ. ಈ ಯೋಜನೆ ಒಂದು ಒಳ್ಳೆಯ ಯೋಜನೆ. ಮಹಾ ನಗರಕ್ಕೆ ೧೦ ವರ್ಷದೊಳಗೆ ಎಲ್ಲರಿಗೂ ನೀರು ಪೂರೈಕೆ ಆಗಬೇಕೆಂದು ಪ್ರಾರಂಭ ಮಾಡಿದರು. ಈಗ ೧೨–೧೩ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ ಮಲಪ್ರಭಾ ಬಂದರೂ ಸಹ ನೀರು ಸಿಗದಿದ್ದಂಥ ಪರಿಸ್ಥಿತಿ ಇರುವುದು ತುಂಬಾ ದುರ್ದೈವದ ಸಂಗತಿ. ಮೊನ್ನೆಯ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಬಂದಿದ್ದಾಗ, ನಮ್ಮ ನಗರ ಸಭೆಯ ವತಿಯಿಂದ ಅಲ್ಲಿದ್ದ ಕಮೀಷನರ್‌ರವರು ಇದನ್ನು ಸಾದರಪಡಿಸಿದರು. ಆದರೆ ಆ ಮಲಪ್ರಭಾ ಯೋಜನೆಯಿಂದ ನೀರು ಧಾರವಾಡಕ್ಕೆ ಸಿಕ್ಕದಿರುವುದು ಒಂದು ದುರ್ದೈವದ ಸಂಗತಿಯಾಗಿದೆ ಕಾರಣವೇನೆಂದರೆ, ಧಕ್ಷ ಸಿಬ್ಬಂದಿ ಇಲ್ಲದ ಕಾರಣ, ಟ್ಯಾಂಕ್ಸ್ ಇಲ್ಲದ ಕಾರಣ ಅಲ್ಲಿ ನೀರಿನ ಸೌಲಭ್ಯ ಒದಗಿಸುವುದು ಕಷ್ಟವಾಗಿದೆ. ಇವೊತ್ತಿನ ದಿವಸ ಅಲ್ಲಿನ ಜನರಿಗೆ ರಾತ್ರಿ ೨ ಗಂಟೆಯಿಂದ ಬೆಳಿಗ್ಗೆ ೫ ಗಂಟೆಯವರಿಗೆ ನೀರು ಹಿಡಿದು ಸಂಗ್ರಹಿಸತಕ್ಕ ಪ್ರಸಂಗವುಂಟಾಗಿದೆ. ಇದೂ ಒಂದು ದುರ್ದೈವದ ಸಂಗತಿಯಾಗಿದೆ. ಸಾಮಾನ್ಯವಾಗಿ, ಜನರು ದುಡಿದು ರಾತ್ರಿ ೧೦ ಗಂಟೆಗೆ ಬಂದಾಗ ಅವರಿಗೆ ಕೊನೆಯಪಕ್ಷ ನೀರನ್ನಾದರೂ ಪಡೆಯೋಣ ಎಂದರೆ ಸರಿಯಾಗಿ ನೀರು ದೊರೆಯದಿರುವುದು ಶೋಚನೀಯ. ಇದನ್ನು ಹೋಗಲಾಡಿಸಬೇಕಾದರೆ ಮಂತ್ರಿಯವರು ಶ್ರದ್ಧೆ ವಹಿಸಬೇಕು ಎಂದು ಹೇಳುತ್ತೇನೆ. ಹಿಂದೆ ಮಲಪ್ರಭಾ ಯೋಜನೆ ಕಾರ್ಯಗತವಾದರೆ ಹಾಲು, ಜೇನು ಹರಿಸುತ್ತೇವೆಂದು ಹೇಳಿದರು. ಆದರೆ ಅದು ಯಾವುದೇ ರೀತಿಯಲ್ಲಿ ಇನ್ನೂ ಕಾರ್ಯಗತವಾಗುತ್ತಿಲ್ಲ. ಅಲ್ಲಿ ದಕ್ಷ ಸಿಬ್ಬಂದಿ ಇಲ್ಲದ ಕಾರಣ ಮತ್ತು ಕಟ್ಟುನಿಟ್ಟಾಗಿ ಕೆಲಸ ಮಾಡದಿರುವ ಕಾರಣ ವಿತರಣೆಯಲ್ಲಿ ದೋಷವುಂಟಾಗಿ ತೊಂದರೆಯಾಗಿದೆ.

ಮತ್ತೊಂದು ವಿಚಾರ, ಕಟ್ಟಡಗಳಿಗೆ ಪರವಾನಗಿಯನ್ನು ಕೊಡುವುದು, ಅದರಲ್ಲಿಯೂ ಸಹ ತೊಂದರೆಯಾಗಿದೆ. ಏಕೆಂದರೆ, ಟೌನ್ ಮತ್ತು ಕಂಟ್ರಿ ಪ್ಲಾನ್ ಆಕ್ಟ್ ಪ್ರಕಾರ ಎರಡು ಸಲ ಒಂದು ಕಟ್ಟಡಕ್ಕೆ ಪರವಾನಗಿ ಪಡೆಯಬೇಕಾಗಿದೆ. ಒಂದು ಟೌನ್ ಪ್ಲಾನಿಂಗ್‌ನಿಂದ ಪರವಾನಗಿ ಅನಂತರ ಪುರಸಭೆಯ ವತಿಯಿಂದ ಪರವಾನಗಿ ತೆಗೆದುಕೊಳ್ಳಬೇಕು. ಆದರೆ ಬೆಂಗಳೂರಿನಲ್ಲಿ ಈ ರೀತಿಯಿಲ್ಲವೆಂದು ತಿಳಿದು ಬಂದಿದೆ. ಇದರಿಂದಾಗಿ ಸಾವಿರಗಟ್ಟಲೇ ದುಡ್ಡು ಸಾರ್ವಜನಿಕರು ಖರ್ಚು ಮಾಡಬೇಕಾಗಿದೆ. ಆದ್ದರಿಂದ ಇದನ್ನು ಸುಗಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿಮಾನ ನಿಲ್ದಾಣಕ್ಕೋಸ್ಕರ ೪೦೦ ಎಕರೆ ಜಮೀನನ್ನು ತೆಗೆದುಕೊಂಡು ೭–೮ ವರ್ಷವಾಗಿದೆ ಮತ್ತು ೧೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೂ ಈ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ಇದರಲ್ಲಿ ಕೊನೆಯ ಪಕ್ಷ ೨ ಕೋಟಿ ರೂಪಾಯಿ ಬೆಲೆ ಬಾಳುವ ಜಮೀನು ಇದೆ. ಇದನ್ನೂ ಸಹ ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹುಬ್ಬಳ್ಳಿ, ಧಾರವಾಡ ಕಾರ್ಪೊರೇಷನ್‌ನಲ್ಲಿ ವಿದ್ಯುತ್ ಚಿತಾಗಾರವನ್ನು ನಿರ್ಮಾಣ ಮಾಡಲಿಕ್ಕೆ ೧೯೮೦ರಲ್ಲಿ ಕಾರ್ಯಾರಂಭ ಕೈಗೊಂಡರೂ ಇಲ್ಲಿಯವರೆಗೂ ಅದು ಪೂರ್ಣವಾಗಿಲ್ಲ. ಇದು ಏಕೆ ಆಗಿಲ್ಲವೆಂದರೆ ಯಾವುದೋ ಒಂದು ಸಾಮಾನು ಇಲ್ಲದಿರುವುದರಿಂದ ಅದು ನಿಂತಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ಇವೊತ್ತು ಸಾವಿರಾರು, ನೂರಾರು ಜನರು ಖರ್ಚು ಮಾಡಿ ಸೌದೆಯನ್ನು ಉಪಯೋಗಿಸಿ ಅಂತ್ಯಕ್ರಿಯೆ ಮಾಡಬೇಕಾಗಿರುವಂತಹ ಸಂದರ್ಭ ಬಂದಿದೆ. ಆದ್ದರಿಂದ ಇದನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ಭಿಕ್ಷುಕರ ಬಗ್ಗೆ ಹೇಳಿದ್ದೇನೆ. ಈಗ ಭಿಕ್ಷುಕರ ಬಿಲ್ಡಿಂಗ್ ತಯಾರಾಗಿದೆ. ಹೋದವರ್ಷ ಒಂದೆರಡು ಮೂರು ತಿಂಗಳಲ್ಲಿ ಈ ಬಿಲ್ಡಿಂಗನ್ನು ಚಾಲೂ ಮಾಡುತ್ತೇವೆಂದು ಹೇಳಿದರು. ಆದರೂ ಭಿಕ್ಷುಕರು ಇಂದು ರಸ್ತೆಗಳಲ್ಲಿ ತಿರುಗಾಡಿ, ಅವರೂ ತೊಂದರೆ ಪಟ್ಟು, ಜನರಿಗೂ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಇದನ್ನು ಕೂಡಲೇ ಕಾರ್ಯಗತ ಮಾಡಬೇಕು.

ಇನ್ನು ವೆಹಿಕಲ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ, ಸರ್ಕಾರ ಏನು ನಗರಸಭೆಗೆ ೫೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅದು ಸಾಲದು. ಆದ್ದರಿಂದ ಹುಬ್ಬಳ್ಳಿ, ಧಾರವಾಡ ಕಾರ್ಪೊರೇಷನ್‌ಗೆ ಸಂಪೂರ್ಣವಾದ ಹಣವನ್ನು ಕೊಡಬೇಕು. ಇವೊತ್ತು ಅಲ್ಲಿ ಕೆಲಸ ಕಾರ್ಯಗಳು ಕುಂಠಿತವಾಗಿರುವುದಕ್ಕೆ ಕಾರಣ ಸಾಕಷ್ಟು ಹಣ ಸರ್ಕಾರದ ಕಡೆಯಿಂದ ಬಾರದಿರುವುದು. ಆದ್ದರಿಂದ ಈ ಕಾರ್ಪೊರೇಷನ್‌ಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ತಕ್ಷಣ ಸರ್ಕಾರ ಹೆಚ್ಚಿನ ಹಣವನ್ನು ಈ ಮಹಾ ನಗರ ಪಾಲಿಕೆಗೆ ಒದಗಿಸಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri Hiroji V.S. Lod (Sandur).—Hon'ble Speaker, Sir, in the first instance I would like to say that the minorities inter-rest must be protected. I call the attention of the Hon'ble Minister regarding underground drainage in Sandur Town. The plans and estimates for underground drainage were prepared at the time of work relating to drinking water III Stage was taken up. Now that the work of the said III stage has been completed. I earnestly request the Government to take up the work of underground drainage for which plans and estimates are already prepared. I appeal to the Hon'ble Minister to give top priority to this work during the current year budget itself.

Then, the second point which I wish to bring to you kind notice is that there is a hill station called R?mgad in Sandur. This has attracted so many tourists foreign countries as well India. I therefore, appeal to the Hon'ble Minister for Tour-sim to select this year for improvement and make it as a good tourist resort. with these few words I thak the Chair and conclude.

ಶ್ರೀ ಪಂಪಾಪತಿ (ದಾವಣಗೆರೆ).—ಅಧ್ಯಕ್ಷರೇ, ದಾವಣಗೆರೆ ನಗರ ಬಹಳ ದೊಡ್ಡದಾಗಿ ಬೆಳೆಯುತ್ತಿರುವ ನಗರವಾಗಿದೆ. ಹೀಗೆ ಈ ನಗರ ಬೆಳೆಯುತ್ತಿರುವುದರಿಂದ ಅಲ್ಲಿ ಸಾಕಷ್ಟು ವ್ಯವಸ್ಥೆಗಳಿಲ್ಲವಾಗಿದೆ. ನೀರು, ದೀಪ, ರಸ್ತೆ, ಸ್ವಚ್ಛತೆಗೆ ಸಾಕಷ್ಟು ಸಿಬ್ಬಂದಿವರ್ಗ ಇಲ್ಲ. ಹಿಂದೆ ಈ ನಗರದ ಜನಸಂಖ್ಯೆ ಒಂದು ಲಕ್ಷ ಇದ್ದಾಗ ಇದ್ದಂತಹ ಸಿಬ್ಬಂದಿವರ್ಗವೇ ಈಗ ಜನಸಂಖ್ಯೆ ಎರಡೂವರೆ ಲಕ್ಷ ಮುಟ್ಟಿದ್ದರೂ ಕೂಡ ಅಷ್ಟೇ ಇದೆ. ಆದ್ದರಿಂದ ನಗರಕ್ಕೆ ಸಂಬಂಧಪಟ್ಟ ಯಾವ ಕೆಲಸವನ್ನೇ ಆಗಲಿ ಸಮರ್ಪಕವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಷ್ಟು ಜಾಗ್ರತೆಯಾಗಿ ಈ ನಗರದ ಈಗಿನ ಜನಸಂಖ್ಯೆಗೆ ತಕ್ಕಂತೆ. ವಿಸ್ತರಣೆಗೆ ತಕ್ಕಂತೆ, ಸಿಬ್ಬಂದಿವರ್ಗವನ್ನು ನೇಮಕ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗ ನಮ್ಮ ನಗರಸಭೆಯ ಆದಾಯ ಬಹಳ ಕಡಿಮೆಯಾಗಿದೆ. ಆಕ್ಟ್ರಾಯಿ ಹೋದಮೇಲೆ ಪ್ರವೇಶ ತೆರಿಗೆಯಿಂದ ಶೇಕಡಾ ೨೫ ಭಾಗ ಏನು ಕೊಡುತ್ತಿದ್ದಾರೆ ಅದರಿಂದ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ನಗರಸಭೆಯಲ್ಲಿ ಸಿಬ್ಬಂಧಿವರ್ಗಕ್ಕೆ ಸಂಬಳ ಕೊಡುವುದಕ್ಕೆ ಈ ಹಣ ಸಾಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಆಕ್ಟ್ರಾಯಿಯನ್ನು ಪುನಃ ತರುವುದಕ್ಕೆ ಸಾಧ್ಯವಿದ್ದರೆ ಖಂಡಿತವಾಗಿಯೂ ತರಬೇಕು. ನಗರಸಭೆಯ ಕೆಲಸಕಾರ್ಯಗಳು ಕುಂಟಿತವಾಗದಂತೆ ಅವುಗಳು ಸಮರ್ಪಕವಾಗಿ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಈಗ ನಮ್ಮ ನಗರಸಭೆಯಲ್ಲಿ ಮನೆ ಕಂದಾಯವನ್ನು ಅಂದಾಜು ಮಾಡುವುದಕ್ಕೆ ಮೂರು ವರ್ಷಗಳಿಗೊಮ್ಮೆ ಅಧಿಕಾರಿಗಳು ಬರುತ್ತಾರೆ. ಆದರೆ ಹೀಗೆ ಅಂದಾಜು ಮಾಡುವಾಗ ಅವರು ಮನಸ್ವೇಚ್ಛೆ ಮನೆಕಂದಾಯದ ಅಂದಾಜು ಮಾಡುತ್ತಿದ್ದಾರೆ. ಒಂದು ಮನೆಗೆ ಸಾವಿರ ರೂಪಾಯಿಗಳ ಕಂದಾಯ ಬರುತ್ತಿದ್ದರೆ ಅಥವಾ ಬಾಡಿಗೆ ಬರುತ್ತಿದ್ದರೆ, ಮುನ್ನೂರು ರೂಪಾಯಿಗಳ ಮನೆ ಕಂದಾಯ ಹಾಕುತ್ತಾರೆ. ಇದು ಸರಿಯಲ್ಲ. ಆದ್ದರಿಂದ ಅಧಿಕಾರಿಗಳು ಈ ಅಂದಾಜನ್ನು ಮಾಡುತ್ತಾರೆ, ಅವರು ಮಾಡಲಿ. ಆದರೆ ಮೇಲಿನ ಅಧಿಕಾರಿಗಳು ಅವರು ಮಾಡಿರುವುದನ್ನು ಸ್ವಲ್ಪಮಟ್ಟಿಗೆ ಪರಿಶೀಲನೆ ಮಾಡಲಿಕ್ಕೆ ವ್ಯವಸ್ಥೆ ಮಾಡಿದರೆ ಖಂಡಿತವಾಗಿಯೂ ಅವರಿಗೆ ಸ್ವಲ್ಪ ಭಯವಿರುತ್ತದೆ. ಮನೆಕಂದಾಯದಿಂದ ಬರುವ ಆದಾಯ ಇವತ್ತು ಏನು ಕಡಿಮೆಯಾಗಿದೆ, ಇದನ್ನು ತಡೆಗಟ್ಟುವುದಕ್ಕೆ ಆಗ ಸಾಧ್ಯವಾಗುತ್ತದೆ. ದಾವಣಗೆರೆಯಲ್ಲಿ ದೇವರಾಜನಗರ ಎಂದು

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದೆ. ಅನೇಕ ಎಕರೆ ಪ್ರದೇಶದಲ್ಲಿ ಬಡವರಿಗೆ ಮನೆಗಳಿಗಾಗಿ ನಿವೇಶನಗಳನ್ನು ಹಂಚಿದ್ದಾರೆ. ಆದರೆ ಅಲ್ಲಿ ನಲ್ಲಿ, ದೀಪ, ರಸ್ತೆಗಳಿಲ್ಲ. ಹೀಗಿರುವಾಗ ಜನರು ಅಲ್ಲಿಗೆ ಹೋಗಿ ಹೇಗೆ ವಾಸಮಾಡಬೇಕು? ಮನೆ ಇಲ್ಲದವರಿಗೆ ಮನೆ, ನಿವೇಶನ ಇಲ್ಲದವರಿಗೆ ನಿವೇಶನ ಎಂದು ಹೇಳುತ್ತೀರಿ. ನಿವೇಶನ ಕೊಟ್ಟ ಮಾತ್ರಕ್ಕೆ ಸಾಲದು. ಅವರಿಗೆ ಬೇಕಾದಂತಹ ವ್ಯವಸ್ಥೆಗಳನ್ನು ಒದಗಿಸಿಕೊಟ್ಟು ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಆದ್ದರಿಂದ ತಕ್ಷಣ ಅಲ್ಲಿ ನೀರು, ದೀಪ ರಸ್ತೆ ಇವುಗಳನ್ನು ಮಾಡಿಸುವುದಕ್ಕೆ ಬೇಕಾದಂತಹ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ನಗರ ಈಗಾಗಲೇ ಸಾಕಷ್ಟು ಬೆಳೆದಿದ್ದು, ಕಾರ್ಪೊರೇಷನ್ ಆಗುವುದಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಪಡೆದಿದೆ. ಕೆಲವು ಹಳ್ಳಿಗಳು ದಾವಣಗೆರೆ ನಗರದ ಒಳಗಡೆ ಬಂದಿವೆ. ಬೇತೂರು. ಬಸಾಪುರ, ಶಿವನಕೆರೆ ಕುಂದವಾಡ, ಒರಿಗೆರೆ ಮೊದಲಾದ ಹಳ್ಳಿಗಳು ಪ್ರತ್ಯೇಕವಾಗಿಯೇ ಇವೆ. ಇವುಗಳನ್ನು ಒಂದು ಮೈಲಿ ವಿಸ್ತರಣೆಯ ಒಳಗೆ ಸೇರಿಕೊಂಡರೆ ಸುಮಾರು ಮೂರು-ಮೂರುವರೆ ಲಕ್ಷ ಜನಸಂಖ್ಯೆ ಆಗುತ್ತದೆ. ಆಗ ನಮ್ಮ ನಗರವನ್ನು ಕಾರ್ಪೊರೇಷನ್ ಮಾಡುವುದಕ್ಕೆ ಸಹಾಯಕವಾಗುತ್ತದೆ. ಕಾರ್ಪೊರೇಷನ್ ಮಾಡಿ ಟೌನ್ ಪ್ಲಾನಿಂಗ್‌ನ್ನು ಅಳವಡಿಸಿಕೊಂಡರೆ ವ್ಯವಸ್ಥಿತವಾಗಿ ಮನೆಗಳನ್ನು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆ, ಹೀಗೆ ಮಾಡದೇ ಬಿಟ್ಟುಬಿಟ್ಟರೆ ಮನಸೇಚ್ಛೆ ಮನೆಗಳನ್ನು ಕಟ್ಟಿ, ರಸ್ತೆಗಳು ಚಿಕ್ಕದಾಗಿ, ನಗರಪ್ರದೇಶ ಬಹಳ ಕಿಸ್ಕಿಂದವಾಗಿ ಬಿಡುತ್ತದೆ ಮತ್ತು ಜನರಿಗೆ ತುಂಬಾ ಅನಾನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೇ, ನಗರಸಭೆ ವತಿಯಿಂದ ನಿವೇಶನಗಳನ್ನು ಬಡವರಿಗೆ ಕೊಡುತ್ತಿದ್ದೇವೆ. ಆದರೆ ಈಗ ಸಿಐಟಿಬಿ ಅಧ್ಯಕ್ಷರು ಇಲ್ಲ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಈಗ ಸೈಟುಗಳನ್ನು ಕೊಡುವುದಕ್ಕಾಗುತ್ತಿಲ್ಲ. ಸೈಟುಗಳನ್ನು ವಿತರಣೆ ಮಾಡುವುದಕ್ಕೆ ಇವರಿಗೆ ಪರವಾನಗಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು, ಕೊಳಚೆ ಪ್ರದೇಶಗಳ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ೭೯೨ ಕೊಳಚೆ ಪ್ರದೇಶಗಳಿವೆ. ಒಟ್ಟು ೭೯೨ ಕೊಳಚೆ ಪ್ರದೇಶಗಳು ಇರುವಾಗ ಇವತ್ತು ಇವುಗಳಿಗೆ ಬೇಕಾದಂಥ ಅನುಕೂಲತೆಯನ್ನು ಸರಿಯಾಗಿ ಒದಗಿಸಲಾಗುತ್ತಿಲ್ಲ. ಈಗ ನಮ್ಮ ದೇಶದಲ್ಲಿ ಒಂದು ಪದ್ಧತಿ ಇದೆ. ಯಾರು ಇವತ್ತು ಸುಖವಾಗಿ ಇದ್ದಾರೆ, ಅವರಿಗೆ ಮತ್ತೆ ಅನುಕೂಲತೆಗಳನ್ನು ಮಾಡಿಕೊಡುವುದು, ಹೊಟ್ಟೆಗಿಲ್ಲದೆ ಹಸಿದವನನ್ನು ಒಳಗೆ ತಳ್ಳುತ್ತೇವೆ. ಕೊಳಚೆ ಪ್ರದೇಶಗಳ ವಿಷಯದಲ್ಲೂ ಹೀಗೆಯೇ ಆಗಿದೆ. ಎಲ್ಲಿ ಅನುಕೂಲತೆ ಇದೆ ಅಲ್ಲಿ ರಸ್ತೆಗಳಿಗೆ ಮತ್ತೆ ಟಾರು ಹಾಕುತ್ತಾರೆ, ದೀಪ ಹಾಕುತ್ತಾರೆ ಬೇಕಾದ ಅನುಕೂಲತೆಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡುತ್ತಾರೆ. ಆದರೆ ಈ ಕೊಳಚೆ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ ದೀಪ ಇಲ್ಲ ರಸ್ತೆ ಇಲ್ಲ ಸ್ವಚ್ಛತೆ ಇಲ್ಲ. ಎಲ್ಲಿ ವಾಸ ಮಾಡುವುದಕ್ಕೆ ಅನುಕೂಲತೆ ಇಲ್ಲ, ಅಂತಹ ಕಡೆಗೆ ನೀವು ನಿರ್ಲಕ್ಷ್ಯ ಮಾಡಿದ್ದೀರಿ. ಸರ್ಕಾರದವರು ಕೊಳಚೆ ಪ್ರದೇಶಗಳಿಗೆ ಮೊದಲ ಆದ್ಯತೆ ಕೊಟ್ಟು ಹೆಚ್ಚಿನ ಹಣವನ್ನು ಒದಗಿಸಿ ಅವರಿಗೆ ವ್ಯವಸ್ಥಿತವಾಗಿ ವಾಸ ಮಾಡುವುದಕ್ಕೆ ಅನುಕೂಲ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ದಿವಂಗತ ದೇವರಾಜು ಅರಸುರವರು ಕೆಲವು ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದರು. ಈಗ ಕೊಳಚೆ ಪ್ರದೇಶಗಳನ್ನು ಸರಿಯಾಗಿ ಗುರುತಿಸುವ ಪ್ರಯತ್ನಕ್ಕೆ ಹೋಗಿಲ್ಲ. ಕೆಲವು ಕೊಳಚೆ ಪ್ರದೇಶಗಳು ಸರ್ಕಾರಿ ಜಮೀನುಗಳಲ್ಲಿವೆ, ಕೆಲವು ನಗರಸಭೆಯ ಜಮೀನಿನಲ್ಲಿವೆ. ಕೆಲವು ಖಾಸಗಿ ಜಮೀನುಗಳಲ್ಲಿ ಕೂಡ ಕೊಳಚೆ ಪ್ರದೇಶಗಳು ಇವೆ. ಇವುಗಳನ್ನು ನೋಟಿಫೈ ಮಾಡದಿದ್ದರೆ ಈ ಜನರನ್ನು ಬಲಾತ್ಕಾರದಿಂದ ಕಿತ್ತುಹಾಕಲಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಕೊಳಚೆ ಪ್ರದೇಶಗಳು ಎಲ್ಲೆಲ್ಲಿ ಇವೆ, ಅವುಗಳನ್ನು ನೋಟಿಫೈ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ರೀತಿ ಮಾಡಿ ಅಲ್ಲಿಯ ಜನರಿಗೆ ವಾಸ ಮಾಡಲಿಕ್ಕೆ ರಕ್ಷಣೆ ಕೊಡಬೇಕು. ಅವರಿಗೆ ಬೇಕಾದ ಅನುಕೂಲತೆಗಳನ್ನು ಎಂದರೆ ನೀರು, ದೀಪ ರಸ್ತೆ ಸ್ವಚ್ಛತೆ ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಅವರು ತಮ್ಮನ್ನು ಬೇರೇನೂ ಕೇಳುವುದಿಲ್ಲ. ಈ ವ್ಯವಸ್ಥೆಗಳನ್ನು ಒದಗಿಸಿ ಕೊಡುವುದಕ್ಕೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಷಯವನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ದಾವಣಗೆರೆಯಲ್ಲಿ ಸಿಐಟಿಬಿ ಇದೆ. ಆದರೂ ಇರತಕ್ಕಂಥ ಅಧ್ಯಕ್ಷರು ಯಾರೂ ಇಲ್ಲ. ಆದ್ದರಿಂದ ಅಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ೧೯೮೨-೮೩ರಲ್ಲಿ ಒಟ್ಟು ವೆಚ್ಚ ೧೧ ಲಕ್ಷ ೫೯ ಸಾವಿರ ರೂಪಾಯಿಗಳಲ್ಲಿ, ಸಿಬ್ಬಂದಿ ವೆಚ್ಚಕ್ಕಾಗಿ ೯.೮೨ ಲಕ್ಷ, ಚರಂಡಿಗಾಗಿ ೧.೫೦ ಲಕ್ಷ ಮತ್ತು ರಸ್ತೆಗಳಿಗೆ ೦.೨೭ ಲಕ್ಷ ರೂಪಾಯಿಗಳು ಖರ್ಚಾಗಿದೆ. ಎಂದರೆ, ಒಟ್ಟು ಕಾಮಗಾರಿಗಳಿಗಾಗಿ ಒಂದು

ಲಕ್ಷ ಎಪ್ಪತ್ತೆಳು ಸಾವಿರ ರೂಪಾಯಿಗಳು ಖರ್ಚಾಗಿದೆ. ಆದರೆ ಸಿಬ್ಬಂದಿಗಳಿಗಾಗಿ ಆಗಿರುವ ವೆಚ್ಚ ೯ ಲಕ್ಷ ೮೨ ಸಾವಿರ ರೂಪಾಯಿಗಳು. ಇದರ ಅರ್ಥ ಏನು ಅಧ್ಯಕ್ಷರೆ? ಇದರಿಂದ ಏನು ಸಾರ್ಥಕವಾದಂತಾಯಿತು? ಸಾಮಾನ್ಯ ಜನರ ಹಣವನ್ನು ಈ ರೀತಿಯಾಗಿ ದುರ್ವ್ಯಯ ಮಾಡಿದಂತೆ ಆಗುವುದಿಲ್ಲವೇ? ಆದ್ದರಿಂದ ತಾವು ಕೂಡಲೇ ಸಿಐಟಿಬಿಗೆ ಬೇಕಾದಂತಹ ಅಧ್ಯಕ್ಷರನ್ನು ಮತ್ತು ಮಂಡಲಿಯನ್ನು ನೇಮಿಸಲು ಕಾರ್ಯಪ್ರವೃತ್ತರಾಗಿ ಜನರಿಗೆ ಬೇಕಾದಂತಹ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕೆ ಸಹಾಯ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪಂಪಾಪತಿಗಳೇ, ನೀವು ಹೇಳಬೇಕಾದುದೆಲ್ಲವನ್ನೂ ಹೇಳಿದ್ದೀರಿ. ಬೇಗ ನಿಮ್ಮ ಭಾಷಣ ಮುಗಿಸಿ.

ಶ್ರೀ ಪಂಪಾಪತಿ.—ಅನಧಿಕೃತವಾದ ಕಟ್ಟಡಗಳ ಬಗ್ಗೆ ಹೇಳಬೇಕಾಗಿದೆ ಸ್ವಾಮಿ. ಇವುಗಳ ಹಾವಳಿಯನ್ನು ತಡೆಗಟ್ಟಲು ಮಂಡಳಿಯು ಕ್ರಮ ತೆಗೆದುಕೊಂಡಿದೆ. ಇದಕ್ಕಾಗಿ ಇದುವರೆಗೆ ಎರಡು ಸಾವಿರದ ಒಂದು ನೂರು ಗುಡಿಸಲುಗಳನ್ನು ಕೆಡವಿ ಹಾಕಲಾಗಿದೆ. ಏಕೆ ಹೀಗೆ ಮಾಡಿದ್ದೀರಿ? ಬೇರೆ ಬೇರೆ ಕಡೆಗಳಿಂದ ಬೆಂಗಳೂರು ನಗರಕ್ಕೆ ಜನರು ಬಂದಿರುತ್ತಾರೆ. ಅವರಿಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಈ ಜನರಿಗೆ ಏನಾದರೂ ನಿವೇಶನವಾಗಲೀ ಅಥವಾ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆಯಾಗಲೀ ಏನೂ ಇಲ್ಲ. ಅವರ ಗುಡಿಸಲುಗಳನ್ನು ಹೀಗೆ ಕೆಡವಿಹಾಕಿಬಿಟ್ಟರೆ ಅವರು ಬೀದಿಪಾಲಾಗುತ್ತಾರೆ. ತಾವು ಈ ರೀತಿ ಆಗದಂತೆ ದಯವಿಟ್ಟು ನೋಡಿಕೊಳ್ಳಬೇಕು. ಸರ್ಕಾರ ಹೊರಗಡೆಯಿಂದ ಬಂದಿರತಕ್ಕಂಥ ಬಡವರಿಗೆ ನಿವೇಶನ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಬೆಂಗಳೂರು ನಗರಕ್ಕೆ ಎಲ್ಲಾ ಕಡೆಯಿಂದ ಜನ ಬರುತ್ತಾರೆ. ಬಿಜಾಪುರದಿಂದ ಬರುತ್ತಾರೆ, ರಾಯಚೂರಿನ ಜನ ಬರುತ್ತಾರೆ. ಗುಲ್ಬರ್ಗದ ಜನ ಬರುತ್ತಾರೆ. ಅಲ್ಲಿ ಅವರಿಗೆ ತಿನ್ನುವುದಕ್ಕೆ ಅನ್ನ ಇಲ್ಲದೆ ಹುಡುಕಿಕೊಂಡು ಇಲ್ಲಿಗೆ ಬರುತ್ತಾರೆ. ಅವರಿಗೆ ಮನೆ ಇಲ್ಲ, ಎಂದರೆ ಹೇಗೆ? ಅವರು ಇರುವಂತಹ ನೆಲೆಯನ್ನು ಕಿತ್ತುಹಾಕತಕ್ಕಂಥದ್ದು ಸರಿಯಲ್ಲ. ಆ ಜನ ಬಡವರಿದ್ದಾರೆ. ಬೇರೆ ಕಡೆಯಿಂದ ಇಲ್ಲಿಗೆ ಬರುವಂತಹವರನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಬರದಿದ್ದರೆ ಇಲ್ಲಿ ಕೆಲಸ ಕೂಡ ನಡೆಯುವುದಿಲ್ಲ. ಆದ್ದರಿಂದ ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡತಕ್ಕಂಥಹದ್ದು ಸರ್ಕಾರ ಕರ್ತವ್ಯವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ದಾವಣಗೆರೆಯಲ್ಲಿರುವ ನೀರಿನ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಸಮಗ್ರ ನೀರಿನ ಯೋಜನೆಯೊಂದನ್ನು ಹಿಂದಿನ ಸರ್ಕಾರ ಮಾಡಿತ್ತು. ಆದರೆ ಡಿಸ್ಟ್ರಿಬ್ಯೂಷನ್ ಲೈನ್ ಏನು ಇದೆ, ಆ ಲೈನ್‌ನ್ನು ಇದುವರೆವಿಗೂ ಬದಲಿಸಿಲ್ಲ. ಆದ್ದರಿಂದ ನೀರು ಸಮರ್ಪಕವಾಗಿ ಜನರಿಗೆ ಹಂಚಿಕೆಯಾಗುತ್ತಿಲ್ಲ. ಆ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯವರು ಸುಮಾರು ೭೦ ಲಕ್ಷ ರೂಪಾಯಿಗಳ ಅಂದಾಜೊಂದನ್ನು ತಯಾರು ಮಾಡಿ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಕೂಡಲೇ ಆ ಕೆಲಸವನ್ನು ಕೈಗೆ ತೆಗೆದುಕೊಂಡು ಆ ಜನರಿಗೆ ನೀರನ್ನು ಒದಗಿಸತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕಳಕಳಿಯಿಂದ ಮಾನ್ಯ ಮಂತ್ರಿಗಳಿಗೂ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮಂಡಲಿಯ ಅಧ್ಯಕ್ಷರಲ್ಲೂ ನಾನು ಮನವಿ ಮಾಡಿಕೊಳ್ಳುತ್ತೇನೆ. ಎಲ್ಲಾ ಕಡೆ ಕುಡಿಯುವ ನೀರನ್ನು ಒದಗಿಸಿದ್ದೀರಿ. ಆದರೆ ದಾವಣಗೆರೆ ನಗರಕ್ಕೆ ಕುಡಿಯುವ ನೀರಿನ ತೊಂದರೆ ಇದೆ. ಅಲ್ಲಿರತಕ್ಕಂತಹ ಕೊಳಚೆ ಪ್ರದೇಶದಲ್ಲಿ ನೀರು ಇಲ್ಲ. ಕೊಳವೆ ಬಾವಿ ಎಂದು ಹೇಳುತ್ತಾರೆ. ಕೊಳವೆ ಬಾವಿಯನ್ನೂ ಕೂಡ ಕೊಟ್ಟಿಲ್ಲ. ಕುಡಿಯುವ ನೀರಿನ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನಾನು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಂಗಮೇಶ್ವರ್ ಸರ್ದಾರ್ (ರಾಯಚೂರು).—ಮಾನ್ಯ ಉಪಾಧ್ಯಕ್ಷರೆ, ಸಚಿವರಾಗಿರತಕ್ಕಂತಹ ಸನ್ಮಾನ್ಯ ಚಂದ್ರಶೇಖರ್‌ರವರನ್ನು ಈ ಖಾತೆಯ ಮಂತ್ರಿಗಳನ್ನಾಗಿ ಮಾಡಿದಕ್ಕೆ ನಾನು ಬಹಳ ಸಂತೋಷಗೊಂಡಿದ್ದೇನೆ. ಕಾರಣ ಸ್ವತಃ ಇಂಜಿನೀಯರ್ ಆಗಿರತಕ್ಕಂತಹವರು ಈ ಇಲಾಖೆಯ ಮಂತ್ರಿಗಳಾಗಿರುವುದು ಬಹಳ ಒಳ್ಳೆಯದು. ಇಂಜಿನೀಯರ್ಸ್ ಆಗಿರುವವರೇ ಏಕೆ

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ಖಾತೆಯು ಮಂತ್ರಿಗಳಾಗಿರಬೇಕೆಂಬುದಕ್ಕೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಾನೂ ಕೂಡ ೨೨ ವರ್ಷಗಳ ಕಾಲ ಪುರಸಭೆಗಳಲ್ಲಿ ಅಧ್ಯಕ್ಷನಾಗಿ ಹಾಗೂ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಿಂದೆ ಶ್ರೀಮಾನ್ ಆರ್. ಎಂ. ಪಾಟೀಲ್‌ರವರು ಹಿಂದೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳಾಗಿದ್ದರು. ಅವರು ಮುನಿಸಿಪಲ್ ಸರ್ವೀಸ್ ಎಂದು ತರಬೇಕು ಎಂದು ಪ್ರಯತ್ನ ಮಾಡಿದ್ದರು. ವೈಜ್ಞಾನಿಕವಾಗಿ ಎಲ್. ಐ. ಸಿ. ಡಿ. ಯೋಜನೆಯು ಆ ಒಂದು ತಳಹದಿಯ ಮೇಲೆ ಇನ್ನೂ ಕೆಲವು ಅನುಕೂಲಗಳನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರು. ಈ ತರಹದ ಸರ್ವೀಸ್‌ನಲ್ಲಿ ಪರೀಕ್ಷೆ ಮಾಡಿ, ಕರ್ನಾಟಕ ಮುನಿಸಿಪಲ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಬೇರೆ ಇಲಾಖೆಯವರು ಇಲ್ಲಿಗೆ ಬರುತ್ತಾರೆ. ಅವರಿಗೆ ಪುರಸಭೆಗಳ ಆಡಳಿತ ಅನುಭವ ಕಡಿಮೆ ಇರುತ್ತದೆ. ಆದ್ದರಿಂದ ಆಯಾ ಮುನಿಸಿಪಲ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನಲ್ಲಿ ನುರಿತ ಹಾಗೂ ತರಬೇತಿ ಹೊಂದಿದ ಜನರನ್ನೇ ಈ ಇಲಾಖೆಯಲ್ಲಿ ನೇಮಕ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಪುರಸಭೆಗಳಿಗೆ ಹೆಚ್ಚಾಗಿ ಇಂಜಿನಿಯರ್‌ಗಳನ್ನು ಮುನಿಸಿಪಲ್ ಕಮೀಷನರ್ ಮತ್ತು ಎಕ್ಸಿಕ್ಯೂಟೀವ್ ಆಫೀಸರ್‌ಗಳನ್ನಾಗಿ ಹಾಕಬೇಕು. ಏಕೆಂದರೆ ಅಲ್ಲಿ ನಡೆಯುತ್ತಿರತಕ್ಕಂತಹ ಮುಖ್ಯವಾದ ಕೆಲಸಗಳು, ರೋಡ್ಸ್‌ಗಳು. ವಾಟರ್‌ಸಪ್ಲೈ, ಬಿಲ್ಡಿಂಗ್ಸ್, ನೈರ್ಮಲೀಕರಣ ಇಂತಹವುಗಳೇ ಪುರಸಭೆಗಳಲ್ಲಿ ನಡೆಯುತ್ತಿರತಕ್ಕಂತಹ ಕೆಲಸಗಳು. ಆದ್ದರಿಂದ ಅಲ್ಲಿ ಹೆಚ್ಚಾಗಿ ಇಂಜಿನೀಯರಿಂಗ್ ಕೆಲಸಗಳೇ ನಡೆಯುತ್ತಿರುತ್ತವೆ. ಮತ್ತೆ ಟೌನ್ ಪ್ಲಾನಿಂಗ್ ಶೇಕಡ ೯೦ರಷ್ಟು ಕೆಲಸ ಇಂಜಿನೀಯರ್ ಸಂಬಂಧಪಟ್ಟಂತಹವುಗಳು ನಡೆಯುತ್ತವೆ. ಆದ್ದರಿಂದ ಪುರಸಭೆಗಳಲ್ಲಿ ಹಾಗೂ ನಗರಸಭೆಗಳಲ್ಲಿ ಕಮೀಷನರ್ ಆಗಿರತಕ್ಕಂತಹವರು ಇಂಜಿನೀಯರ್ ಆಗಿರಬೇಕು. ಮತ್ತು ಈ ಖಾತೆಯನ್ನು ನೋಡಿಕೊಳ್ಳತಕ್ಕಂತಹ ಮಂತ್ರಿಗಳೂ ಕೂಡ ಇಂಜಿನೀಯರ್ ಇರಬೇಕು. ನಗರ ಮಿತಿ ಆಕ್ಟ್ ಏನಿದೆ ಅದರಲ್ಲಿ ಈ ರೀತಿಯ ಬದಲಾವಣೆಯಾಗಬೇಕೆಂದು ತಿಳಿದು ಹಿಂದೆ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಆರ್. ಎಂ. ಪಾಟೀಲ್‌ರವರು ಇದಕ್ಕಾಗಿ ಒಂದು ಸಮಿತಿಯನ್ನು ಸಹ ನೇಮಕ ಮಾಡಿದ್ದರು. ಆ ಸಮಿತಿಯಲ್ಲಿ ನನ್ನನ್ನೂ ಕೂಡ ಒಬ್ಬ ಸದಸ್ಯನನ್ನಾಗಿ ಮಾಡಿದ್ದರು. ಆ ಸಮಿತಿಯ ಒಂದೇ ಒಂದು ಸಭೆಯಲ್ಲಿ ನಾನು ಭಾಗವಹಿಸಿದ್ದೆ. ಸಮಿತಿಯು ತನ್ನ ಮುಂದಿನ ಸಭೆ ಸೇರುವಷ್ಟರಲ್ಲಿ ಅದನ್ನು ರದ್ದು ಮಾಡಿದರು. ಕಾರಣ ಸರ್ಕಾರ ಬದಲಾವಣೆಯಾದ್ದರಿಂದ. ಈಗ ನಗರ ಸಮಿತಿಯು ಅಧ್ಯಕ್ಷರನ್ನು ಆರಿಸಲಾಗುತ್ತಿದೆ. ನನ್ನ ಕಾಲದಲ್ಲಿ ಕೇವಲ ಮೂರನೆ ಎರಡು ಭಾಗ ಯಾವ ಪಕ್ಷದವರು ಇರುತ್ತಾರೋ, ಆ ಪಕ್ಷದವರು ಅಧ್ಯಕ್ಷರನ್ನಾಗಿ ಆರಿಸುತ್ತಿದ್ದರು. ಆವೊತ್ತಿನ ದಿವಸ ಅಧ್ಯಕ್ಷರಾಗಿರಬೇಕಾದಂತಹವರು, ಸದಸ್ಯರಿಂದ ಆಯ್ಕೆಯಾದ ಮೇಲೆ ಆ ಸದಸ್ಯರು ಅಧ್ಯಕ್ಷರಿಗೆ ಹೆದರುವುದಿಲ್ಲ. ನಗರ ಸಮಿತಿಯ ಸದಸ್ಯರನ್ನು ಹೆದರಿಸಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಈ ತರಹದ ಕಾನೂನನ್ನು ತಿದ್ದುಪಡಿಮಾಡಬೇಕು. ನಗರ ಸಮಿತಿಯ ಅಧ್ಯಕ್ಷರಾಗಿ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ನಗರ ಸಮಿತಿಯಲ್ಲಿ ಆ ಭಾಗದ ಶಾಸಕರನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಬೇಕು. ಇದೇ ರೀತಿಯಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳ ಸಮಿತಿಯಲ್ಲೂ ಸಹ ಶಾಸಕರನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಬೇಕು. ಆ ಬಗ್ಗೆ ಇರತಕ್ಕಂತಹ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕೆಂಬ ಸೂಚನೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ.

ಇನ್ನು ನಮ್ಮ ನಗರದ ಬಗ್ಗೆ ಹೇಳುವುದಾದರೆ, ರಾಯಚೂರು ನಗರ ನಮ್ಮ ದೇಶದಲ್ಲಿ ಕೊಯಮತ್ತೂರು, ಅಹಮ್ಮದಾಬಾದ್ ಹಾಗೂ ಬೆಂಗಳೂರನ್ನು ಬಿಟ್ಟರೆ ರಾಯಚೂರು ಮಹಾನಗರ, ಅಹಮ್ಮದಾಬಾದ್‌ನಂತಹ ನಗರವಾಗಿದೆ. ಅದಕ್ಕೆ ಕಾಟನ್ ಸಿಟಿ ಎಂಬುದಾಗಿ ಕರೆಯಬೇಕೆಂದು ಕೇಂದ್ರದ ತಜ್ಞರೇ ಆ ರೀತಿಯಾಗಿ ಹೇಳಿದ್ದಾರೆ. ಇದನ್ನು ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಅಧ್ಯಕ್ಷರಾಗಿರುವಂತಹ ಶ್ರೀಮಾನ್ ಕೃಷ್ಣನ್‌ರವರು ಇಂತಹ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಒಂದು ನಗರ ಇಡೀ ದೇಶಕ್ಕೆ ಹೋಲ್‌ಸೇಲ್ ಹತ್ತಿಯನ್ನು ಒದಗಿಸತಕ್ಕಂತಹ ಸಿಟಿ ಆದು. ಅಲ್ಲಿ ಸೂಯಿಂಗ್ ಕಾಟೇಜ್‌ಗೆ ಬಹಳ ಬೆಲೆ ಬರುತ್ತಿದೆ. ಇದು ೧,೭೫.೦೦೦ ಜನಸಂಖ್ಯೆ ಇರತಕ್ಕಂತಹ ಮಹಾ ನಗರವಾಗಿದೆ. ಈಗಾಗಲೇ ಈ ನಗರವನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಈ ನಗರದ ಸುತ್ತ ಮುತ್ತ ಕೈಗಾರಿಕೆಗಳು ಬರುತ್ತಿವೆ. ಈಗಲಾದರೂ ಈ ನಗರವನ್ನು ಅಭಿವೃದ್ಧಿ ಪಡಿಸುವ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ರಾಯಚೂರು ನಗರದಲ್ಲಿ ೮ ಕೊಳಚೆ ಪ್ರದೇಶಗಳು ಇವೆ. ಇದರಿಂದ ಇಡೀ ರಾಯಚೂರು ನಗರ ಕೊಳಚೆ ಪ್ರದೇಶವಾಗಿದೆ. ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡುವುದಕ್ಕೆ ಸೂಕ್ತ ಸಹಾಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ೧೫ ಲಕ್ಷ

ರೂಪಾಯಿಗಳ ಯೋಜನೆಯೊಂದನ್ನು ಕುಡಿಯುವ ನೀರಿನ ಅನುಕೂಲಕ್ಕಾಗಿ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿ ನೀರಿನ ಕೊರತೆ ಬಹಳ ಇದೆ. ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರತಕ್ಕಂತಹ ನಗರವಾಗಿದೆ. ಅದಕ್ಕೋಸ್ಕರ ತಕ್ಷಣ ಇದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಕರ್ನಾಟಕ ನಗರ ಪ್ರದೇಶದ ನೀರು ಸರಬರಾಜು ಮಂಡಲಿಯ ಅಧ್ಯಕ್ಷರು ಅದರ ಕಡೆಗೆ ಗಮನ ಕೊಟ್ಟು ಇಡಿ ಭಾರತದಲ್ಲೇ ಹತ್ತಿಯ ವ್ಯಾಪಾರ ಕೇಂದ್ರವಾಗಿರತಕ್ಕಂತಹ ರಾಯಚೂರು ನಗರಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಗಮನ ಕೊಟ್ಟರೆ ಇದು ಇನ್ನೂ ಮಹಾ ದೊಡ್ಡ ನಗರವಾಗುತ್ತದೆ.

ಮತ್ತೆ ನಮ್ಮ ನಗರಕ್ಕೆ ನಗರಾಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿಲ್ಲ. ಏಕೆ ಮಾಡಿಲ್ಲವೆಂಬುದು ನನಗೆ ಗೊತ್ತಿಲ್ಲ. ಇದರಲ್ಲಿ ಅನ್ಯಾಯ ಮಾಡಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಇದ್ದರು. ಎಲ್ಲರೂ ಈ ಭಾಗಕ್ಕೆ ಅನ್ಯಾಯ ಮಾಡಿದ್ದಾರೆ. ಈ ಸರ್ಕಾರ ಕೂಡ ಆ ರೀತಿ ಮಾಡುವುದಿಲ್ಲ ಎಂದು ಭಾವಿಸಿದ್ದೇನೆ. ರಾಯಚೂರು ನಗರವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ನಗರಾಭಿವೃದ್ಧಿ ಮಂಡಲಿಯನ್ನು ರಚನೆ ಮಾಡಬೇಕು. ಆ ರೀತಿಯ ಬೋರ್ಡನ್ನು ರಚನೆ ಮಾಡಿ ಒಳ್ಳೆಯ ನಗರವನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಸಮಯದ ಅಭಾವದಿಂದ ಹೆಚ್ಚು ವೇಳೆಯನ್ನು ತೆಗೆದುಕೊಳ್ಳದೆ ನೀರು ಸರಬರಾಜು ಯೋಜನೆಗೆ ಆದ್ಯತೆಯನ್ನು ಕೂಡಲೇ ಮಾಡಿಸಿಕೊಡಬೇಕೆಂದು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಇಟ್ಟಿರತಕ್ಕಂತಹ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಬಹಳ ಜನ ಮಾನ್ಯ ಸದಸ್ಯರು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ನಾನು ಮುಖ್ಯವಾಗಿ ಇರತಕ್ಕಂತಹ ವಾರ್ತಾ ಮತ್ತು ಪ್ರಚಾರ ಹಾಗೂ ಪ್ರವಾಸೋದ್ಯಮ ಇಲಾಖೆಯ ಮೇಲೆ ಮಾತನಾಡಬೇಕೆಂದಿದ್ದೇನೆ. ಮಾನ್ಯ ಸಚಿವರಾದ ಶ್ರೀಮಾನ್ ರಘುಪತಿಯವರಿಗೆ ಬಹಳ ಸಣ್ಣ ಖಾತೆಯನ್ನು ಕೊಟ್ಟುಬಿಟ್ಟಿದ್ದಾರೆ. ನಮ್ಮ ಕಳಕಳಿ ಏನೆಂದರೆ ಇವರಿಗೆ ಯಾವುದಾದರೊಂದು ದೊಡ್ಡ ಖಾತೆಯನ್ನು ಕೊಡಬೇಕು. ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಬಹಳ ಸೂಕ್ಷ್ಮವಾದ ಜನ ಇದ್ದಾರೆ. ಈ ಇಲಾಖೆಯಲ್ಲಿ ಬಹಳ ಸೂಕ್ಷ್ಮವಾಗಿ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಯಾರಿಗೆ ಪಬ್ಲಿಸಿಟಿ ಕೊಡಬೇಕು? ಯಾರಿಗೆ ಮಾನ್ಯತೆ ಸಲ್ಲಬೇಕೋ ಅದು ಸಲ್ಲುತ್ತಿಲ್ಲ. ತಾವೂ ಸಹ ಅದೇ ರೀತಿಯಲ್ಲಿ ಸೂಕ್ಷ್ಮವಾಗಿ ಇರಬೇಕು ಎಂದು ಹೇಳುತ್ತೇನೆ. ತಮ್ಮ ಇಲಾಖೆಯಲ್ಲಿ ತಾರತಮ್ಯ ನಡೆಯುತ್ತಾ ಇದೆ. ಅದು ತಮಗೆ ಗೊತ್ತಿರಬಹುದು. ಅಲ್ಲಿ ಜಾಯಿಂಟ್ ಡೈರೆಕ್ಟರ್ ಏನು ಇದ್ದಾರೆ ಅವರು ಮತ್ತು ಇನ್ನು ಕೆಲವು ಅಧಿಕಾರಿಗಳು ಏನು ಇದ್ದಾರೆ ಅವರು ಯಾರನ್ನು ಎಲ್ಲಿಗೆ ಹಾಕಬೇಕು ಯಾರಿಗೆ ಜವಾಬ್ದಾರಿ ಕೊಡಬೇಕು ಅದೆಲ್ಲಾ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಲ್ಲೂ ವಿಶಿಷ್ಟ ಶಕ್ತಿಗಳು ಇವೆ. ಇವರು ಬೇರೆಯವರಿಗೆ ತಾರತಮ್ಯ ತೋರಿಸುತ್ತಾ ಇರುವುದರಿಂದ ಆ ಜಾಗದಲ್ಲಿ ಯಾರು ಹಿಂದುಳಿದವರು ಇರುತ್ತಾರೋ ಯಾರು ಅಲ್ಪಸಂಖ್ಯಾತರು ಇರುತ್ತಾರೋ ಅವರನ್ನು ಅಲ್ಲಿ ಇಡಬೇಕು ಇಲ್ಲದೇ ಹೋದರೆ ಅವರು ಮುಂದೆ ಬರುವ ಹಾಗಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಲ್ಲಿ ಕೆಲವು ಅಧಿಕಾರಿಗಳು ಏನು ಇದ್ದಾರೆ ಅವರನ್ನು ನೀವು ಒಂದು ಹಿಡಿತದಲ್ಲಿಟ್ಟುಕೊಳ್ಳಬೇಕು ಏಕೆಂದರೆ ಅವರದೇ ಆದಂಥ ಒಂದು ಪಬ್ಲಿಸಿಟಿ ಇದೆ. ಅದು ತಮಗೂ ಗೊತ್ತಿರಬಹುದು. ಅಲ್ಲಿ ಒಂದು ವಿಷಸ್ ಸರ್ಕಲ್ ಇದೆ, ಅವರಿಗೆ ಯಾವಾಗಲೂ ಸಹ ಸಂಗೀತ, ನಾಟಕ ಅದರ ಜೊತೆಗೆ ಕುಡಿತ ಈ ಅಭ್ಯಾಸ ಇರುವುದು ಜಾಸ್ತಿ, ಅವರು ಇದರ ಬಗ್ಗೆ ಏನಾದರೂ ಪಬ್ಲಿಸಿಟಿ ಕೊಡಬೇಕಾದರೆ ಕೇವಲ ಕೆಲವೇ ಪ್ರೆಸ್‌ನವರು ಇರುತ್ತಾರೆ ಅವರಿಗೆ ಮಾತ್ರ ಕೊಡುತ್ತಾರೆ ಬೇರೆಯವರಿಗೆ ಕೊಡುವುದಿಲ್ಲ.

ಇನ್ನು ಡಾಕ್ಯುಮೆಂಟರಿ ಫಿಲಂ ತೆಗೆಯತಕ್ಕಂಥ ವಿಚಾರದಲ್ಲಿ ಹೇಳಬೇಕಾದರೆ ಅಲ್ಲಿ ಯಾರಿಗೆ ಮಾನ್ಯತೆ ಕೊಟ್ಟಿದ್ದಾರೆ ಎಂದರೆ ತಮಗೆ ಬೇಕಾದವರಿಗೆ ಕೊಡುತ್ತಾರೆ. ಅದರಲ್ಲೂ ಸಹ ಇದು ಕೇವಲ ಕೆಲವೇ ಜನರ ಸ್ವತ್ತಾಗಿದೆ, ಬೇರೆಯವರು ಕೇಳಿದರೂ ಕೊಡುವುದಿಲ್ಲ. ಇದನ್ನು ತಾವು

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಅವರು ಜಾಹೀರಾತುಗಳನ್ನೂ ಕೂಡ ಕೆಲವೇ ಪತ್ರಿಕೆಗಳಿಗೆ ಕೊಡುತ್ತಾರೆ, ಹಳ್ಳಿಮಟ್ಟದಲ್ಲಿರತಕ್ಕಂಥ ಪತ್ರಿಕೆಗಳವರಿಗೆ ನ್ಯಾಯವಾಗಿ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು ಕೊಡುತ್ತಾ ಇಲ್ಲ. ಇದರ ಬಗ್ಗೆ ತಾವು ಸರಿಯಾಗಿ ವಿಚಾರಗಳನ್ನು ತಿಳಿದುಕೊಂಡು ಹಳ್ಳಿಮಟ್ಟದಲ್ಲಿರುವ ಪತ್ರಿಕೆಗಳವರಿಗೆ ಪ್ರಾಧಾನ್ಯತೆ ಕೊಟ್ಟು ಜಾಹಿರಾತುಗಳನ್ನು ಕೊಡುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಕೆಲವು ಅಧಿಕಾರ ಕೆಲವೇ ಜನರ ಸ್ವತ್ತಾಗಿರುವುದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಅಲ್ಲಿರುವ ಜಂಟಿ ನಿರ್ದೇಶಕರಿಗೆ ಎರಡೂ ಕಡೆಯಲ್ಲಿ ಕೆಲಸಗಳನ್ನು ನೋಡಿಕೊಳ್ಳುವ ಹಾಗೆ ಅಧಿಕಾರ ಕೊಟ್ಟಿದ್ದಾರೆ. ಅಲ್ಲಿರುವ ಖಾಲಿ ಹುದ್ದೆಗೆ ಪರ್ಮನೆಂಟ್ ಅಧಿಕಾರಿಯನ್ನು ಇನ್ನೂ ಹಾಕಿಲ್ಲ. ಅದನ್ನು ಟೆಂಪರರಿಯಾಗಿ ಇಟ್ಟುಕೊಳ್ಳಬೇಕೋ ಅಥವಾ ಪರ್ಮನೆಂಟ್ ಅಧಿಕಾರಿಯೊಬ್ಬರನ್ನು ಹಾಕಿ ಕೆಲಸ ಮಾಡಬೇಕೋ ಅದು ಇನ್ನೂ ನಿಶ್ಚಯವಾಗಿಲ್ಲ. ಮತ್ತು ಅಲ್ಲಿ ಕೆಲವು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡುವಂತೆ ಕೇಳಿದ್ದಾರೆ ಆದುದರಿಂದ ಮಾನ್ಯ ಮಂತ್ರಿಗಳು ಇವೆಲ್ಲದರ ಬಗ್ಗೆ ಬಹಳ ಸೂಕ್ಷ್ಮವಾಗಿ ಇರಬೇಕು ಎಂದು ಕೇಳಿಕೊಳ್ಳುತ್ತೇನೆ, ಇನ್ನೊಂದು ವಿಚಾರ ಏನೆಂದರೆ ಯಾವುದಾದರೂ ಕೆಲಸ ಮಾಡಬೇಕಾದರೆ ಕೇವಲ ತಮಗೆ ಬೇಕಾದವರಿಗೆ ಕೊಡದೇ ಬೇರೆಯವರೂ ಸಹ ಇದ್ದಾರೆಂದು ತಿಳಿದುಕೊಂಡು ಅವರಿಗೂ ಅದರಲ್ಲಿ ಅವಕಾಶ ಸಿಗುವ ಹಾಗೆ ಮಾಡಿಕೊಡಬೇಕು. ತಮಗೆ ಹೇಳಬೇಕಾದರೆ ಸಂಗೀತ. ನಾಟಕ ಇವುಗಳ ಬಗ್ಗೆ ಬೇರೆಯವರಿಗೂ ಪ್ರತಿಭೆ ಇದ್ದರೂ ಕೂಡ ಅವರನ್ನು ಬಿಟ್ಟು ತಮಗೆ ಬೇಕಾದವರಿಗೆ ಕೊಡುವುದಕ್ಕೆ ಹೋಗುತ್ತಾರೆ. ನ್ಯಾಯವಾಗಿ ಹೇಳಬೇಕಾದರೆ ಸಂಗೀತ ನಾಟಕದಲ್ಲಿ ಯಾರು ಹೆಚ್ಚು ಪ್ರತಿಭೆ ಉಳ್ಳವರಾಗಿರುತ್ತಾರೋ ಅಂಥವರನ್ನು ಹುಡುಕಿ ಪ್ರಾಧಾನ್ಯತೆ ಕೊಡಬೇಕು. ಆದರೆ ಇವರು ಹಾಗೆ ಮಾಡುವುದಿಲ್ಲ. ಇದರ ಬಗ್ಗೆ ಮಾನ್ಯ ವಾರ್ತಾ ಮಂತ್ರಿಗಳು ಗಮನಹರಿಸಿ ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಮುನಿಸಿಪಾಲಿಟಿಗಳ ಬಗ್ಗೆ ಹೇಳುವುದಾದರೆ ಚಿತ್ರದುರ್ಗ ಮುನಿಸಿಪಾಲಿಟಿ ಏನು ಇದೆ ಅವರು ಅಲ್ಲಿರುವ ರೋಡ್ಸ್‌ಗಳನ್ನು ತೆಗೆದುಕೊಂಡು ಇನ್ನೂ ಇಂಪ್ರೂವ್ ಮಾಡಿಲ್ಲ. ಅಲ್ಲಿರುವ ರೋಡ್ಸ್ ಓಬೀರಾಯನ ಕಾಲದ್ದು. ಅದನ್ನು ಇಂಪ್ರೂವ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ದಾವಣಗೆರೆ ಟ್ರಸ್ಟ್‌ಬೋರ್ಡ್‌ಗೆ ಇನ್ನೂ ಅಧ್ಯಕ್ಷರನ್ನು ನೇಮಕ ಮಾಡಿಲ್ಲ. ಏತಕ್ಕೆ ತಡ ಮಾಡುತ್ತಿದ್ದಾರೋ ಎನ್ನುವುದು ಗೊತ್ತಿಲ್ಲ. ಅದನ್ನು ಆದಷ್ಟು ಬೇಗ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂಥ ರೋಡ್ಸ್ ಇವೆ, ಮತ್ತು ಮುನಿಸಿಪಾಲಿಟಿಗೆ ಸೇರಿದಂಥ ರೋಡ್ಸ್ ಇವೆ ಅದರ ಬಗ್ಗೆ ಕಂಪ್ಲೇಂಟ್ ಮಾಡಿದ್ದೇವೆ ಅದರ ಬಗ್ಗೆ ಗಮನ ಹರಿಸಿ ಅಲ್ಲಿ ರೋಡ್ಸ್‌ನ್ನು ಇಂಪ್ರೂವ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಪಂಪಾಪತಿಯವರು ದಾವಣಗೆರೆಯ ಮುನಿಸಿಪಾಲಿಟಿಯಲ್ಲಿ ಹಿಂದೆ ಅಧ್ಯಕ್ಷರಾಗಿದ್ದಾಗ ಗಿಡಗಳನ್ನು ಚೆನ್ನಾಗಿ ಬೆಳೆಸಿದರು, ಒಳ್ಳೆ ರೋಡ್ಸ್ ಅನ್ನು ಮಾಡಿಸಿದರು ಕೆಲವು ಬೇಕಾದ ಸೌಕರ್ಯಗಳನ್ನೆಲ್ಲಾ ಮಾಡಿಸಿಕೊಟ್ಟರು. ಅವರು ಅಲ್ಲಿ ಬೇಕಾದಷ್ಟು ಸಸಿಗಳನ್ನು ಹಾಕಿಸಿದ್ದಾರೆ. ಈವೊತ್ತಿನ ದಿವಸ ದಾವಣಗೆರೆಯಲ್ಲಿ ಯಾವ ಒಂದು ಸಣ್ಣ ಮಗುವನ್ನು ಕೇಳಿದರೂ ಸಹ ಆ ಸಸಿ ಬಗ್ಗೆ ಏನನ್ನುತ್ತಾರೆ ಎಂದರೆ ಪಂಪಾಪತಿ ಸಸಿ, ಪಂಪಾಪತಿ ಗಿಡ ಎನ್ನುತ್ತಾರೆ. ಈ ದೃಷ್ಟಿಯಿಂದ ನಾನು ಹೇಳುವುದು ಮುಂದೆ ದಾವಣಗೆರೆ ಬಹಳ ಅಭಿವೃದ್ಧಿ ಆಗತಕ್ಕಂಥ ಒಂದು ಸನ್ನಿವೇಶ ಇದೆ, ಅಲ್ಲದೆ ಅದು ಕಾರ್ಪೊರೇಷನ್ ಆಗತಕ್ಕಂಥ ಸಂದರ್ಭವೂ ಬರುತ್ತದೆ, ಅದು ರಾಜ್ಯದ ರಾಜಧಾನಿಯಾದರೂ ಆಗಬಹುದು. ಆದುದರಿಂದ ಇದರ ಕಡೆ ನೀವು ಗಮನ ಹರಿಸಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ದಾವಣಗೆರೆ ಮುನಿಸಿಪಾಲಿಟಿಯಲ್ಲಿ ಸಾಕಷ್ಟು ಲಂಚ ನಡೆಯುತ್ತಾ ಇದೆ ಎಂದು ಕೇಳಿದ್ದೇನೆ. ಅವರು ಕಂದಾಯ ವಸೂಲ್ಮಾಡುವ ರೀತಿ ನೋಡಿದರೆ ಒಂದು ಸಾವಿರ ರೂಪಾಯಿಗಳು ಕೊಡತಕ್ಕಂಥ ಕಡೆ ಆ ಅಧಿಕಾರಿಗೆ 200 ರೂಪಾಯಿಗಳು ಕೊಟ್ಟರೆ ಹೆಚ್ಚು ಕಂದಾಯ ಹಾಕುವುದನ್ನು ಕಡಿಮೆ ಮಾಡುತ್ತಾರೆ. ಇವರ ಬಗ್ಗೆ ಮೇಲಾಧಿಕಾರಿಗಳು ಗಮನಹರಿಸಬೇಕೆಂದು ನಾನು ಕೇಳುತ್ತೇನೆ. ಹೀಗೆ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣ ಎಷ್ಟು ನಷ್ಟವಾಗುತ್ತದೆ ಅದನ್ನು ನೋಡಿ ಆ ಕಡೆ ಗಮನ ಹರಿಸಬೇಕು ಎಂದು ಮತ್ತೊಮ್ಮೆ ಕೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಈಗ ಮಾತನಾಡುವುದಕ್ಕೆ ನನಗೆ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ನಂಜನಗೂಡಿಗೆ ಮಾತ್ರ ಸೀಮಿತವಾಗಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನಂಜನಗೂಡಿನಲ್ಲಿ ಜಾಗದ ಅಭಾವ ಬಹಳ ಇದೆ. ಕಾರಣ ಕಾರ್ಖಾನೆಗಳು ಇರುವುದರಿಂದ ಕಾರ್ಮಿಕರು ವರ್ಷ ವರ್ಷೇ ಜಾಸ್ತಿಯಾಗುತ್ತಿದ್ದಾರೆ. ಅಲ್ಲಿ ಇನ್ನೂ ಕೆಲವು ಕಾರ್ಖಾನೆಗಳು ಬರುತ್ತಾ ಇವೆ. ನಮ್ಮ ಭಾಗದಲ್ಲಿ ಸಣ್ಣ ಪುಟ್ಟ ಕೈ ತೋಟಗಳು ಇರುವುದರಿಂದ ಜನಸಂಖ್ಯೆಯೂ ಜಾಸ್ತಿಯಾಗಿದೆ. ಈಗ ನಂಜನಗೂಡಿನಲ್ಲಿ ವಾಸ ಮಾಡ ಬೇಕಾದರೆ ಸುತ್ತ ಮುತ್ತ ಇರತಕ್ಕಂಥ ಜಮೀನಿನಲ್ಲಿ ಕೆಲವರು ಏನು ಸೈಟುಗಳನ್ನು ಮಾಡಿಕೊಂಡಿದ್ದಾರೆ ಅವರ ಹತ್ತಿರ ಕೊಂಡುಕೊಳ್ಳಬೇಕಾದರೆ ೪೦ ಮತ್ತು ೬೦ ಅಡಿ ಇರುವ ಜಾಗಕ್ಕೆ ೧೦-೨೦ ಸಾವಿರ ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಸಲಹೆ ಏನೆಂದರೆ ನಂಜನಗೂಡಿನ ಮುನಿಸಿಪಾಲಿಟಿಯವರು ಇದರ ಸುತ್ತಳತೆ ೩ ಮೈಲಿ ತನಕ ಇರುವ ಜಮೀನುಗಳನ್ನು ಅಕ್ವೈರ್ ಮಾಡಿಕೊಂಡು, ಆ ಬಗ್ಗೆ ಏನಾದರೂ ಒಂದು ಪ್ರಕಟಣೆ ಹೊರಡಿಸಿದರೆ ದರ ಕಡಿಮೆಯಾಗಬಹುದು. ಆಗ ಈಗಿನ ಹಾಗೆ ಜಾಸ್ತಿ ದರವನ್ನು ಕೊಟ್ಟು ಹೊರಗಿನವರು ಬಂದು ತೆಗೆದುಕೊಳ್ಳತಕ್ಕಂಥ ಪ್ರಮೇಯವೇ ಬರುವುದಿಲ್ಲ. ನಾನು ಹೇಳಿದ ಹಾಗೆ ಸುತ್ತಮುತ್ತ ೩ ಮೈಲಿ ಒಳಪಟ್ಟು ಇರುವ ಜಮೀನುಗಳನ್ನು ಅಕ್ವೈರ್ ಮಾಡಿ ಸೈಟುಗಳನ್ನು ಮಾಡಿಕೊಡದೇ ಹೋದರೆ ಬಡಬಗ್ಗರಿಗೆ ಬಹಳ ತೊಂದರೆಯಾಗುತ್ತದೆ. ಈ ಬಗ್ಗೆ ಗಮನಹರಿಸಿ ತಕ್ಕ ಅನುಕೂಲತೆ ಗಳನ್ನು ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಮೈಸೂರು ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವೆಂದು ಹೊರ ರಾಜ್ಯದವರು ನಂಜನ ಗೂಡಿಗೆ ಬಂದು ಕೆಲವು ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಈಗಾಗಲೇ ಇರತಕ್ಕಂಥ ಕಾರ್ಖಾನೆಗಳಿಂದ ಪಲ್ಯೂಷನ್ ವಾಟರ್ ಬಂದು ಈ ಟೌನಿನ ಜನರ ಆರೋಗ್ಯ ಕೆಡುತ್ತಾ ಇದೆ ಆದುದರಿಂದ ನಂಜನಗೂಡಿನ ಟೌನಿನ ೫ ಮೈಲು ಸುತ್ತಳತೆಯೊಳಗೆ ಯಾವ ಕಾರ್ಖಾನೆಯೂ ಸಹ ಆಗದೇ ಇದ್ದ ಹಾಗೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಅರ್ಧ ಮೈಲು, ಎರಡು ಫರ್ಲಾಂಗ್ ದೂರದೊಳಗೆ ಕಾರ್ಖಾನೆಗಳು ಬರುತ್ತಾ ಇವೆ. ಇದರಿಂದ ಈಗಲೇ ಜನರ ಆರೋಗ್ಯಕ್ಕೆ ತೊಂದರೆಯಾಗಿದೆ. ಈಗಾಗಲೇ ಅಲ್ಲಿರುವ ೪-೫ ಕಾರ್ಖಾನೆಗಳ ನೀರು ಕಬಿನಿ ನದಿಗೆ ಬಂದು ಸಾಕಷ್ಟು ಜನರ ಆರೋಗ್ಯಕ್ಕೆ ತೊಂದರೆಯಾಗಿದೆ. ಇದರ ಬಗ್ಗೆ ಗಮನಹರಿಸಿ ತಕ್ಕ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಪಟ್ಟಣವಾಗಲಿ, ಸಿಟಿಗಳಾಗಲಿ ಇದನ್ನು ವಿಂಗಡಣೆ ಮಾಡುವಾಗ ಹರಿಜನರಿಗೆ. ಹಿಂದುಳಿದವರಿಗೆ ಅಲ್ಲಿ ಉದ್ಯಾನವನ ಮತ್ತು ಕ್ರೀಡಾಂಗಣಗಳು ಇರುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಹಾಗೆ ಮಾಡಬೇಕಾದರೆ ಇದರ ಬಗ್ಗೆ ಟೌನ್ ಪ್ಲಾನಿಂಗ್ ನವರ ಸಲಹೆಯನ್ನು ತೆಗೆದುಕೊಂಡು ಮಾಡಬೇಕು ಅವರ ಸಲಹೆಯನ್ನು ತೆಗೆದುಕೊಳ್ಳದೇ ಮಾಡು ವುದು ಬೇಡ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ನಂಜನಗೂಡಿನ ಟೌನಿನಲ್ಲಿ ಸರ್ಕಾರದ ವತಿಯಿಂದ ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಾಟರ್‌ಟ್ಯಾಂಕ್‌ನ್ನು ಕಟ್ಟುತ್ತಿದ್ದಾರೆ. ಬಹುಶಃ ಅದು ಕಂಪ್ಲೀಟ್ ಆಗಿರಬಹುದು. ಒಂದು ಸಾರಿ ನಾನು ಅದನ್ನು ನೋಡಲು ಹೋಗಿದ್ದಾಗ ೨೨ ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಿದಂಥ ವಾಟರ್ ಟ್ಯಾಂಕನ್ನು ನೋಡಿದಾಗ ಅದರಿಂದೆ ಕೊಳಾಯಿಯಲ್ಲಿ ನೀರು ಬರುವ ಹಾಗೆ ನೀರು ಬರುತ್ತಿತ್ತು. ಆ ಕಟ್ಟಡ ನೋಡಿದರೆ ಅಷ್ಟು ಶಿಥಿಲವಾಗಿ ಇದೆ ಎಂದು ನನಗೆ ಅನಿಸಿತು. ಹೀಗೆ ಈ ಕಟ್ಟಡದ ಕ್ವಾಲಿಟಿ ಇದೆ. ನಾನೇನೂ ತಜ್ಞನಲ್ಲ. ಆದರೆ ಆ ಬಗ್ಗೆ ನಾನು ತಜ್ಞರ ಅಭಿಪ್ರಾಯ ತೆಗೆದುಕೊಂಡಿದ್ದೇನೆ. ಹೀಗೆ ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಇಂತಹ ಕಟ್ಟಡವನ್ನು ಇಲಾಖೆಯವರು ಕಟ್ಟಿದ್ದಾರೆಂದರೆ ಇಲಾಖೆಯವರು ಇದರ ಬಗ್ಗೆ ಎಷ್ಟರ ಮಟ್ಟಿಗೆ ಮುತುವರ್ಜಿ ವಹಿಸಿದ್ದಾರೆ ಎಂದರೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದು ಇರಲಿ ಇದರಿಂದ ಅನಾನುಕೂಲತೆಗಳು ಆಗಿವೆಯೇ ವಿನಹ ಪ್ರಯೋಜನ ಆಗಿಲ್ಲ. ಆದುದರಿಂದ ಇದರ ಬಗ್ಗೆ ತನಿಖೆ ಆಗಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇಲ್ಲಿ ಜವಾಬ್ದಾರಿಯನ್ನು ಹೊತ್ತಿರತಕ್ಕ ಇಂಜನಿಯರುಗಳು ಮತ್ತು ಕಂಟ್ರಾಕ್ಟರುಗಳನ್ನು ಇದಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಸುಮಾರು ೨೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದ್ದ ನೀರಿನ ಟ್ಯಾಂಕ್ ಸರಿಯಾಗಿರದೆ ನೀರು ಟ್ಯಾಂಕ್‌ನಿಂದ ಸೋರಿಯುತ್ತಿದೆ. ಇದರ ಬಗ್ಗೆ ಸರ್ಕಾರದವರು ಎನ್‌ಕ್ವಯರಿ ಮಾಡಿ ಇಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಕೆಂಪೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಇಲಾಖೆಗಳ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ಇದರ ಬಗ್ಗೆ ಹಿರಿಯ ಸದಸ್ಯರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಇದುವರೆಗೂ ಮಾತನಾಡಿದ ಸದಸ್ಯರು ಬಹುತೇಕವಾಗಿ ನಗರಗಳ ಬಗ್ಗೆ ಮತ್ತು ದೊಡ್ಡ ಪಟ್ಟಣಗಳ ಬಗ್ಗೆ ಮಾತನಾಡಿ ಸಣ್ಣ ಪಟ್ಟಣಗಳ ಬಗ್ಗೆ ತಮ್ಮ ಗಮನವನ್ನು ಹರಿಸಿದಂತೆ ಕಾಣಲಿಲ್ಲ. ನನ್ನ ಒಂದು ಕ್ಷೇತ್ರವಾದ ಪಾಂಡವಪುರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ನೀರು ಸರಬರಾಜು ಯೋಜನೆ ಪಟ್ಟಣದ ಜನಸಂಖ್ಯೆ ಸುಮಾರು ೪-೫ ಸಾವಿರ ಇದ್ದಾಗ ತಯಾರಾಗಿತ್ತು, ಆದರೆ ಈಗ ಅಲ್ಲಿಯ ಜನಸಂಖ್ಯೆ ೨೦ ಸಾವಿರದವರೆಗೂ ಹೋಗಿದೆ, ಆಗಿನ ಯೋಜನೆಯ ಪ್ರಕಾರ ಕೃಷ್ಣರಾಜ ಸಾಗರದಿಂದ ವಿ. ಸಿ. ಕೆನಾಲ್ ಮುಖಾಂತರ ನೀರನ್ನು ಸ್ಟೋರ್ ಮಾಡಿಕೊಂಡು ಪಾಂಡವಪುರಕ್ಕೆ ನೀರು ಸರಬರಾಜು ಆಗುತ್ತಿತ್ತು. ಕೃಷ್ಣರಾಜ ಸಾಗರದಲ್ಲಿ ನೀರು ಬಹಳ ಕಡಿಮೆಯಾದಾಗ ವಿ. ಸಿ. ಕೆನಾಲ್‌ನಲ್ಲಿ ನೀರು ಹರಿಯುವುದಿಲ್ಲ. ಕಳೆದ ಬೇಸಿಗೆಯಲ್ಲಿ ಇದರ ಅನುಭವವನ್ನು ನಮ್ಮ ಜನರು ಅನುಭವಿಸಿದ್ದಾರೆ ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಒಂದು ಖಾಯಂ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ, ನಮ್ಮ ಪಟ್ಟಣಕ್ಕೆ ಕಾವೇರಿ ನದಿ ಸುಮಾರು ೬ ಕಿಲೋ ಮೀಟರ್ ದೂರ ಇದೆ. ಅಲ್ಲಿಂದ ನೀರನ್ನು ಕಾಲುವೆಗಳ ಮೂಲಕ ತರುವಂಥ ಯೋಜನೆಯನ್ನು ಮಾಡಿ, ಮಧ್ಯದಲ್ಲಿ ಬರುವ ಸಣ್ಣ ಸಣ್ಣ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸತಕ್ಕ ಕೆಲಸವನ್ನು ಸರ್ಕಾರದವರು ಈ ಮಾಡಬೇಕಾಗಿದೆ. ಏಕೆಂದರೆ ಅಲ್ಲಿಯ ಜನರಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಇದನ್ನು ತಾವು ಪರಿಹಾರ ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಕಳೆದ ೨೫-೩೦ ವರ್ಷಗಳಿಂದ ಹಿಂದೆ ಹಾಕಿರತಕ್ಕ ಕಡಿಮೆ ವ್ಯಾಸದ ಪೈಪುಗಳು ತುಕ್ಕು ಹಿಡಿದು ನೀರು ಸರಬರಾಜು ಸರಿಯಾಗಿಲ್ಲ. ನನಗೆ ಗೊತ್ತಿರುವ ಹಾಗೆ ಸುಮಾರು ೪೪ ಲಕ್ಷ ರೂಪಾಯಿಗಳ ಒಂದು ಯೋಜನೆ ಇದಕ್ಕಾಗಿ ತಯಾರಾಗಿ ಅದರ ಪ್ರಕಾರ ಒಳ್ಳೆಯ ಪೈಪುಗಳನ್ನು ಉಪಯೋಗ ಮಾಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಈ ವರ್ಷದಲ್ಲಿಯೇ ಪ್ರಯಾರಿಟಿ ಕೊಟ್ಟು ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮಲ್ಲಿ ಐತಿಹಾಸಿಕವಾದ ಮೇಲುಕೋಟೆ ಮತ್ತು ತಣ್ಣೂರು ಕ್ಷೇತ್ರಗಳು ಇವೆ. ವಾರ್ತಾ ಮಂತ್ರಿಗಳು ಇತ್ತ ಕಡೆ ಗಮನಹರಿಸಿ ಈ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುವುದರ ಕಡೆ ನಿಗ ಕೊಡಬೇಕು ಎಂದು ನಾನು ಹೇಳುತ್ತೇನೆ. ಮೇಲುಕೋಟೆಯನ್ನು ದಕ್ಷಿಣ ಕಾಶಿ ಎಂದು ಕರೆಯುತ್ತಿದ್ದಾರೆ, ಅಲ್ಲದೆ ತಣ್ಣೂರು ಕ್ಷೇತ್ರದಲ್ಲಿ ರಾಮಾನುಜಚಾರ್ಯರು ನೆಲಸಿದ್ದರು ಮತ್ತು ಹೆಚ್ಚು ಪ್ರಸಿದ್ಧವಾದ ದೇವಾಲಯಗಳು ಅಲ್ಲಿವೆ. ಇವುಗಳನ್ನು ಆರ್ಕಿಯಾಲಜಿಕಲ್ ಡಿಪಾರ್ಟಮೆಂಟಿನವರು ತಮ್ಮ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ರಿನೋವೇಷನ್ ಮಾಡಬೇಕು. ಇಲ್ಲಿ ಬಹಳ ಪ್ರಸಿದ್ಧವಾದ ದೇವಸ್ಥಾನಗಳು ಇವೆ. ಈ ಕ್ಷೇತ್ರಕ್ಕೆ ಪ್ರವಾಸಿಗರು ಹೋಗುವುದಕ್ಕೆ ಸರಿಯಾದ ರಸ್ತೆಗಳು ಇಲ್ಲ. ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಕೂಡ ತಯಾರಾಗಿದೆ ಎಂದು ನಾನು ತಿಳಿದಿದ್ದೇನೆ. ತಯಾರಾದಂಥ ಮಾಸ್ಟರ್ ಪ್ಲಾನ್ ಕಡೆ ಸರ್ಕಾರದವರು ಇನ್ನೂವರೆಗೆ ಗಮನಹರಿಸಿಲ್ಲ ಮಾನ್ಯ ವಾರ್ತಾ ಮಂತ್ರಿಗಳು ಈ ಕ್ಷೇತ್ರಕ್ಕೆ ಒಂದು ಸಾರಿ ಭೇಟಿ ಕೊಟ್ಟು ಪುಣ್ಯ ಪ್ರಸಿದ್ಧವಾದ ದೇವಸ್ಥಾನಗಳ ಸಮೀಕ್ಷೆ ಮಾಡಿ ಆ ಸ್ಥಳಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಈ ಮಾಸ್ಟರ್ ಪ್ಲಾನ್‌ನ್ನು ಕಾರ್ಯಗತ ಮಾಡಬೇಕು ಎಂದು ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಮದುರ್ಗ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶ. ಅಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಜಾಗವೇ ಇರುವುದಿಲ್ಲ. ಸುತ್ತಮುತ್ತ ಗುಡ್ಡಗಳು ಇರುವುದರಿಂದ ಮನೆಗಳನ್ನು ಕಟ್ಟುವುದೂ ಸಹ ಕಷ್ಟವಾಗುತ್ತದೆ ಇಲ್ಲಿ

ಮುನಿಸಿಪಾಲಿಟಿಯವರು ನಡೆಸತಕ್ಕ ಒಂದು ದವಾಖಾನೆ ಇದೆ, ಇದನ್ನು ಸರ್ಕಾರದವರು ತೆಗೆದುಕೊಂಡು ನಡೆಸಿದರೆ ಒಳ್ಳೆಯದು, ಇಲ್ಲಿ ೫–೬ ಮಂದಿ ಡಾಕ್ಟರುಗಳು ಇದ್ದರು ಈಗ ಒಬ್ಬರು ಮಾತ್ರ ಇದ್ದಾರೆ. ಈ ದವಾಖಾನೆಯಲ್ಲಿ ಔಷಧಗಳೂ ಸರಿಯಾಗಿ ಸಿಕ್ಕುತ್ತಿಲ್ಲ, ಅಲ್ಲಿ ೩೦ ಸಾವಿರ ಜನಸಂಖ್ಯೆ ಇದೆ. ಆದರೆ ಶ್ರೀಮಂತರ ನಡುವೆ ಜಾಗ ಇಲ್ಲದಿರುವುದರಿಂದ ಮನೆಗಳನ್ನು ಬಡವರಿಗೆ ಕಟ್ಟುವುದು ಸಾಧ್ಯವಾಗಿಲ್ಲ. ಅಲ್ಲಿ ಬಡ ನೇಕಾರ ಮಂದಿ ವಾಸವಾಗಿರುವುದರಿಂದ ಸರ್ಕಾರದವರು ಅವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜನತಾ ಮನೆಗಳನ್ನು ಕಟ್ಟುವುದಕ್ಕೆ ಟಿ.ಡಿ.ಬಿ.ಯವರು ಸ್ಯಾಂಕ್ಷನ್ ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರೇ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದಲ್ಲದೆ ಬಡವರಿಗೆ ಮನೆಗಳನ್ನು ಕಟ್ಟಲಿಕ್ಕೆ ಅಲ್ಲಿ ೨೦ ಎಕರೆ ಅರಣ್ಯ ಭೂಮಿ ಇದೆ. ಅದನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದನ್ನು ಮಾನ್ಯ ನಗರಾಡಳಿತ ಮಂತ್ರಿಗಳು ಏನಾದರೂ ಮಾಡಿ ಕೊಡಿಸಿದರೆ ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆಂದು ತಿಳಿಸುತ್ತೇನೆ.

ಒಟ್ಟಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಬಹಳ ಮಂದಿ ಬಡವರು ಇದ್ದಾರೆ. ಅವರಿಗೆ ಸರ್ಕಾರದವರು ಎಲ್ಲಾ ಸೌಕರ್ಯಗಳನ್ನು ಕೊಟ್ಟು ಉತ್ತಮ ಜೀವನ ನಡೆಸಲಿಕ್ಕೆ ಅನುಕೂಲ ಮಾಡಬೇಕು ಎಂದು ಕೇಳಿಕೊಂಡು, ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ವಸತಿ ಮತ್ತು ನಗರಾಭಿವೃದ್ಧಿ ಮತ್ತು ಪ್ರವಾಸೋದ್ಯಮ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಮಲೆನಾಡು ಪ್ರದೇಶದಿಂದ ಬಂದಿರತಕ್ಕವನು, ಮೊದಲು ಮಲೆನಾಡಿನಲ್ಲಿ ನೀರು ಸಿಕ್ಕರೆ ಬಯಲು ಸೀಮೆಯಲ್ಲಿ ಕುಡಿಯುವ ನೀರು ಸಿಕ್ಕುತ್ತದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಮಲೆನಾಡಿನಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಅಲ್ಲಿ ಜಲಸಂಪತ್ತು ಹೇರಳವಾಗಿದ್ದರೂ ಕೂಡ ಕುಡಿಯುವ ನೀರಿನ ತೊಂದರೆ ಅನೇಕ ಕಡೆಗಳಲ್ಲಿದೆ. ನಮ್ಮ ಭಾಗದ ಹುಟ್ಟುವಂಥ ಜಲವನ್ನು ಇಳಿದು ಬಾ ತಾಯಿ ಎಂದು ಕರೆದುದ್ದುಂಟು. ಇಂಥ ಭಾಗಗಳನ್ನು ಕುಡಿಯುವ ನೀರಿನ ವ್ಯವಸ್ಥೆಗೆ ಅಭಾವವುಂಟು ಮಾಡಿದರೆ ಮುಂದೆ ಏನೋ ಅನಾಹುತ ಕಾದಿದೆ ಎಂದು ನಾನು ಹೇಳಬೇಕಾಗುತ್ತದೆ. ೧೯೫೦ನೇ ಇಸವಿಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಒಂದು ಮಾತನ್ನು ಹೇಳಿದ್ದರು. ಅವರು ಬೆಂಗಳೂರು ನಗರವನ್ನು ಮತ್ತು ಅದರ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಒಂದು ಮಾತನ್ನು ಹೇಳಿದ್ದಾರೆ. ಈ ಒಂದು ಬೆಂಗಳೂರು ನಗರವನ್ನು ಇದೇ ರೀತಿ ಬೆಳವಣಿಗೆ ಮಾಡುತ್ತಾ ಹೋದರೆ, we will have to face three problems i.e., (i) water pollution, (ii) air pollution and (iii) slums. We have Slum Clearance Board but in fact it has become Slum Creation Board. ಈ ರೀತಿ ನಗರಗಳನ್ನು ಬೆಳವಣಿಗೆ ಮಾಡಿಕೊಳ್ಳುತ್ತಾ, ಸಮಸ್ಯೆಗಳನ್ನು ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೇವೆಯೋ ಹೊರತು ಅದರ ಪರಿಹಾರದ ಕಡೆ ಗಮನ ಕೊಟ್ಟಿಲ್ಲ. ಇದರಿಂದಾಗಿ, ಇವತ್ತಿನ ದಿವಸ ಈ ಒಂದು ಕಷ್ಟ ಪರಿಸ್ಥಿತಿಗೆ ಬಂದಿದ್ದೇವೆ. ಆದ್ದರಿಂದ ಇದರ ಬಗ್ಗೆ ಗಮನಕೊಡಬೇಕು ಎಂದು ನಾನು ಹೇಳುತ್ತೇನೆ. ಈಗ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಏನು ಇದೆ. ಅದನ್ನು ಸ್ಲಂ ಕ್ರಿಯೇಟಿಂಗ್ ಬೋರ್ಡ್ ಎಂದು ಏಕೆ ಮಾಡಬಾರದು ? ಸ್ಲಂ ಕ್ರಿಯೇಟ್ ಮಾಡುವುದು ಬೇರೆ, ಸ್ಲಂ ಕ್ಲಿಯರೆನ್ಸ್ ಮಾಡುವುದು ಬೇರೆ. ಏಕೆಂದರೆ ಸ್ಲಂ ಕ್ಲಿಯರೆನ್ಸ್ ಮಾಡುವುದಕ್ಕೆ ಬರೀ ಯೋಜನೆ ಇದೆ. ನಗರದ ಸೌಂದರ್ಯ ಕೆಡದ ರೀತಿಯಲ್ಲಿ ನಗರದ ಸಮಸ್ಯೆಗಳನ್ನು ಬಗೆಹರಿಸಬೇಕು. ಆ ಸಮಸ್ಯೆಗಳತ್ತ ಗಮನಹರಿಸದೆ "ಭಾಗ್ಯಮಂದಿರ", "ಮುನ್ನಡೆ" ಮುಂತಾಗಿ ಹೇಳಿದ್ದಾರೆ. ಮುನ್ನಡೆ ಮುಂತಾದ ಪದಗಳು ಹೇಗೆ ಹೊಂದಾಣಿಕೆಯಾಗುತ್ತವೋ ಅರ್ಥವಾಗುತ್ತಿಲ್ಲ. ಭಾಗ್ಯಮಂದಿರ, ಮುನ್ನಡೆ, ಯೋಜನೆಗಳಲ್ಲಿ ೪೫೦೦ ರೂಪಾಯಿಗಳನ್ನು ಕೊಡಬೇಕು ಎಂದು ಮಾಡುವುದಕ್ಕೆ ಬದಲಾಗಿ ಈ ಸಮಸ್ಯೆಗಳನ್ನು ಹೌಸಿಂಗ್ ಬೋರ್ಡ್ ಮೂಲಕವಾಗಲಿ, ಹುಡ್ಕೋ ಮೂಲಕವಾಗಲಿ ತೆಗೆದುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಮುನಿಸಿಪಾಲಿಟಿಗಳಿಗೆ ಮತ್ತು ನಗರಸಭೆಗಳಿಗೆ ಉತ್ತೇಜನ ಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ. ಮೂಡಿಗೆರೆ ಪುರಸಭೆಗೆ ೧೪ ಲಕ್ಷ ರೂಪಾಯಿಗಳ ಒಂದು ಯೋಜನೆ ಇದೆ, ಅದು ಸಾಲದು ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಎಂದು ಕೇಳಿದ್ದಾರೆ. ಅದರ ಕಡೆಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಮತ್ತೆ ಮಲೆನಾಡಿನಲ್ಲಿ ನೀರಿನ ಕೊರತೆ ಇದೆ, ಅದನ್ನು ಪರಿಹಾರ ಮಾಡಬೇಕು. ಇನ್ನೊಂದು ವಿಷಯವೇನೆಂದರೆ, ಮುನಿಸಿಪಾಲಿಟಿ ಅಧ್ಯಕ್ಷರಾಗತಕ್ಕವರಿಗೆ ಸ್ವತಃ ಒಂದು ಸೈಟನ್ನು ಕೊಡುವುದಕ್ಕೆ ಅವಕಾಶವಿತ್ತು. ಬಹುಶಃ ಮುನಿಸಿಪಲ್ ಆಕ್ಟಿನ ೧೭೮ನೇ ಸೆಕ್ಷನ್ ಎಂದು ಕಾಣುತ್ತದೆ. ಅದರ ಪ್ರಕಾರ ಅಲಿನೇಷನ್ ಮಾಡಿಕೊಂಡರೆ ಅಧ್ಯಕ್ಷರಿಗೆ ಈ ಅವಕಾಶ ಸಿಕ್ಕುವುದಿಲ್ಲ. ಆದುದರಿಂದ ಕಾನೂನನ್ನು ತಿದ್ದುಪಡಿ ಮಾಡಿ ಯಾರಾದರೂ ಸಾಮಾನ್ಯ ಜನರಿಗೆ ಗ್ರಾಮಾಂತರ ಪ್ರದೇಶದಲ್ಲಿ ಸೈಟುಗಳನ್ನು ಕೊಡಲಿಕ್ಕೆ ಅಧ್ಯಕ್ಷರಿಗೆ ಅವಕಾಶ ಕೊಡತಕ್ಕ ಸನ್ನಿವೇಶವನ್ನು ಮಾಡಬೇಕು. ಅಲ್ಲದೆ ಇದರಿಂದ ಖಾಸಗಿಯವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಟ್ರಸ್ಟ್ ಬೋರ್ಡ್ ಅನುಮತಿ ಸಿಕ್ಕುತ್ತದೆ. ಆದರೆ ಅದೇ ಮುನಿಸಿಪಾಲಿಟಿಯವರು ಆ ಜಾಗಬೇಕು ಎಂದು ಕೇಳಿದರೆ ಆರೋಗ್ಯಕ್ಕೆ ಸರಿಯಿಲ್ಲ ಎಂದು ಹೇಳುತ್ತಾರೆ. ಬಹುಶಃ ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಚಿಕ್ಕಮಗಳೂರಿಗೆ ಬಂದಾಗ ಆ ಜಾಗ ಪುರಸಭೆಗೆ ಕೊಡಬೇಕು ಎಂದು ಇದ್ದರೂ ಸಹ ಅದು ಆರೋಗ್ಯಕ್ಕೆ ಸರಿಯಿಲ್ಲ ಎಂದು ಹೇಳಿ ಬೇರೆ ಕಡೆ ಕೊಟ್ಟಿದ್ದಾರೆ. ಇದರಲ್ಲಿ ಅಧಿಕಾರಿಗಳ ಕೈವಾಡ ಇದೆ. ಆದುದರಿಂದ ಅದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡಬೇಕು ಮತ್ತು ಅಳವಡಿಸಬೇಕು ಎಂದು ಹೇಳುತ್ತೇನೆ. ಹಿಂದೆ ದಿವಂಗತ ಭೀಮಪ್ಪ ನಾಯ್ಕರು ಇದ್ದರು. ಅವರು ಮುನಿಸಿಪಲ್ ಆಕ್ಟ್‌ಗೆ ಬಹಳ ಉತ್ತಮವಾಗಿರತಕ್ಕ ಸಲಹೆಗಳನ್ನು ಕೊಟ್ಟಿದ್ದರು. ಆ ರೀತಿ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಸ್ನೇಹಿತರು ಹೇಳಿದ ಹಾಗೆ ಪೌರಸಭೆಗಳಲ್ಲಿ ಶಾಸಕರು ಹಾಜರಿರಲು ಅವರನ್ನೂ ಕೂಡ ಏಕೆ ಎಕ್ಸ್‌ಅಫಿಷಿಯೋ ಮೆಂಬರಾಗಿ ತರುವುದಕ್ಕೆ ಆಗುವುದಿಲ್ಲ ? ಈ ಬಗ್ಗೆ ಕಾನೂನು ತಿದ್ದುಪಡಿ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಸರ್ಕಾರವನ್ನು ಕೇಳುತ್ತಾ ಇದ್ದೇನೆ. ಇನ್ನು ಓಟಿನ ಪವರ್ ಇದೆ, ಎ.ಪಿ.ಎಂ.ಸಿ.ಗಳಿಗೆ ನಾಮಕರಣ ಮಾಡುತ್ತಾರೆ, ಬರುತ್ತಾರೆ. ಆದ್ದರಿಂದ ಇಲ್ಲೂ ಕೂಡ ಶಾಸಕರನ್ನು ಮಾಡಲಿಕ್ಕೆ ಏಕೆ ಆಗುವುದಿಲ್ಲ ? ಪ್ರತಿಯೊಂದರಲ್ಲಿಯೂ ಶಾಸಕರಿಗೆ ವಿಶಿಷ್ಟ ಸ್ಥಾನಗಳನ್ನು ಕೊಟ್ಟರೆ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಪ್ರವಾಸೋದ್ಯಮ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮೂಡಿಗೆರೆ ತಾಲ್ಲೂಕಿನಲ್ಲಿ ಬಲ್ಲಾಳರಾಯನ ಸಮುದ್ರ ಎಂದು ಇದೆ. ಅದು ಬಹಳ ಚೆನ್ನಾಗಿದೆ. ಅದು ಅನೇಕ ವರ್ಷಗಳ ಇತಿಹಾಸವುಳ್ಳಂಥ ಸ್ಥಳ. ಆದುದರಿಂದ ಅದನ್ನು ಪ್ರವಾಸೋದ್ಯಮದ ವ್ಯಾಪ್ತಿಗೆ ಸೇರಿಸಿ ಮಾನ್ಯ ಪ್ರವಾಸೋದ್ಯಮ ಮಂತ್ರಿಗಳು ಅದಕ್ಕೆ ಒಂದು ಯೋಜನೆ ಹಾಕಿಕೊಂಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮುನಿಸಿಪಾಲಿಟಿಗಳಲ್ಲಿ ೧೮ ಪರ್ಸೆಂಟ್ ಬಡ್ಜೆಟ್ ಎಂದು ಮಾಡುತ್ತಾರೆ. ಪುರಸಭೆಗಳಾಗಲಿ. ನಗರಸಭೆಗಳಾಗಲಿ, ಸೈಟುಗಳನ್ನು ಕೊಡುವುದಾಗಲಿ, ಹುಡ್ಕೋ ನೆರವು ಕೊಡುವುದಾಗಲಿ ೧೮ ಪರ್ಸೆಂಟ್ ಏನು ಹೇಳುತ್ತೀರಿ ಅದನ್ನು ಹರಿಜನ ಗಿರಿಜನರಿಗೆ ತಲುಪುವಂತೆ ಮಧ್ಯದಲ್ಲಿ ಕೊಡುವಂಥ ಅವಕಾಶ ಮಾಡಿಕೊಡಬೇಕು ಎಂದು ಬೇಡಿಕೊಳ್ಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ನಗರಸಭೆಯ ಆದಾಯಗಳಲ್ಲಿ ಅನೇಕ ಕೊರತೆಗಳನ್ನು ಅನೇಕ ಸದಸ್ಯರುಗಳು ಹೇಳಿದ್ದಾರೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಚಲನಚಿತ್ರಗಳಿಗೆ ಮನರಂಜನೆ ತೆರಿಗೆ ವಿನಾಯಿತಿ ಏನು ಕೊಡುತ್ತೀರಿ ಇದರಿಂದ ನಗರಸಭೆಗಳಿಗೆ ಬಹಳ ಹಾನಿಯಾಗುತ್ತಿದೆ. ಆದುದರಿಂದ ಮನರಂಜನೆ ತೆರಿಗೆ ವಿನಾಯಿತಿ ಏನು ಕೊಡುತ್ತಿದ್ದೀರಿ ಅದರ ಒಂದು ಭಾಗವನ್ನು ಸರ್ಕಾರ ನಗರಸಭೆಗಳಿಗೂ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ. ಅಧಿಕಾರ ವಿಕೇಂದ್ರೀಕರಣ ನಗರಸಭೆ ಸೈಟುಗಳನ್ನು ಕೊಡುವಾಗ ಆಗಲೀ ಹರಾಜು ಮಾಡುವಾಗ ಆಗಲೀ ಯಾವುದೇ ತೀರ್ಮಾನ ತೆಗೆದುಕೊಂಡರೂ ಕೂಡ ಡಿವಿಜನಲ್ ಕಮಿಷನರ್ ಆಫೀಸಿಗೆ ಕಳಿಸಬೇಕಾಗಿದೆ ಮತ್ತು ಅವರ ಅನುಮತಿ ಪಡೆಯಬೇಕಾಗಿದೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಶಿವಮೊಗ್ಗ ನಗರಸಭೆಗೆ ಸಂಬಂಧಪಟ್ಟಂತೆ ಸುಮಾರು ೧೫ ಫೈಲುಗಳು ೧೦ ವರ್ಷಗಳಿಂದ ಅಲ್ಲಿ ಬಿದ್ದಿವೆ. ಅದನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಇನ್ನೂ ಕೂಡ ತೀರ್ಮಾನ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ, ೧೯೬೦ನೇ ಇಸವಿಯಲ್ಲಿ ೨೪೦ ಜನ ರೆವಿನ್ಯೂ ಸೈಟುಗಳನ್ನು ತೆಗೆದುಕೊಂಡರು. ಅನಂತರ ಆ ಜಾಗವನ್ನು ಶಿವಮೊಗ್ಗ ನಗರಸಭೆ ಅಕ್ವೈರ್ ಮಾಡಿಕೊಂಡ ಮೇಲೆ ಅವರು ಹೈಕೋರ್ಟಿಗೆ ಹೋದರು. ಹೈಕೋರ್ಟ್ ತೀರ್ಮಾನ ಕೊಟ್ಟಿತು. ಯಾರು ಯಾರು ಸೈಟುಗಳನ್ನು ತೆಗೆದುಕೊಂಡಿದ್ದರೋ ಅವರಿಗೆ ಒಂದೊಂದು ಸೈಟನ್ನು ಕೊಡಬೇಕು ಎಂದು ಹೈಕೋರ್ಟ್ ಆರ್ಡರ್ ಮಾಡಿತು. ಆದರೆ

ನಗರಸಭೆ ಅದನ್ನು ಸರ್ಕಾರಕ್ಕೆ ಕಳುಹಿಸುವಾಗ ೧೯೭೪ನೇ ಇಸವಿಯಲ್ಲಿ ಒಂದು ರೇಟನ್ನು ಫಿಕ್ಸ್ ಮಾಡಿತು. ೭೫೦ ರೂಪಾಯಿ ಫಿಕ್ಸ್ ಮಾಡಿ ಡಿವಿಜನಲ್ ಕಮಿಷನರ್ ಆಫೀಸಿಗೆ ಕಳಿಸಿದೆವು. ಆದರೆ ಇತ್ತೀಚೆಗೆ ಏನಾಗುತ್ತಿದೆ ಎಂದರೆ ೭೫೦ ರೂಪಾಯಿಗಳಿಗೆ ಫಿಕ್ಸ್ ಮಾಡಿದಿರಿ, ಇಷ್ಟು ಕಡಿಮೆ ಬೆಲೆ ಫಿಕ್ಸ್ ಮಾಡಲಾಗಿದೆ ಎಂದು ಮತ್ತೆ ಕೇಳಿದರು. ೧೯೭೪ನೇ ಇಸವಿಯಲ್ಲಿ ೭೫೦ ರೂಪಾಯಿಗಳಿಗೆ ಏನು ಫಿಕ್ಸ್ ಮಾಡಿತ್ತು ಆ ಬೆಲೆಯನ್ನು ಫಿಕ್ಸ್ ಮಾಡಬೇಕು ಎಂದು ಕಳಿಸಿದೆವು. ಆ ಫೈಲ್ ಮಾನ್ಯ ಮಂತ್ರಿಗಳ ಟೇಬಲ್‌ನಲ್ಲಿದೆ. ಅದಕ್ಕೆ ತಾವು ಅನುಮತಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಷಯವೇನೆಂದರೆ, ನೀವು ಅನೇಕ ಕಾರ್ಪೊರೇಷನ್‌ಗಳನ್ನು ಮಾಡುತ್ತಾ ಇದ್ದೀರಿ. ಶಿವಮೊಗ್ಗ ಮತ್ತು ಭದ್ರಾವತಿ ಕಾರ್ಪೊರೇಷನ್ ಮಾಡುವಂಥ ಪ್ರಪೋಸಲ್ ಬಹಳ ದಿವಸಗಳಿಂದಲೂ ಇದೆ. ಭದ್ರಾವತಿಯ ಪ್ರತಿನಿಧಿಗಳು ಬಂದಿಲ್ಲ. ನನ್ನ ಒಂದು ಅನುಭವ ಏನೆಂದರೆ ಹುಬ್ಬಳ್ಳಿ, ಧಾರವಾಡದ ಎಂ.ಎಲ್.ಎ.ಗಳೂ ಕೂಡ ಹೇಳುತ್ತಾ ಇದ್ದಾರೆ. ಅವರಿಗೆ ನಾನು ಹೇಳುವುದೇನೆಂದರೆ ನೀವು ದಯವಿಟ್ಟು ಕಾರ್ಪೊರೇಷನ್‌ಗೆ ಒಪ್ಪಿಕೊಳ್ಳಬೇಡಿ ಎಂದು ಇದರಿಂದ ಅನೇಕ ತೊಂದರೆಗಳು ಬರುತ್ತಾ ಇವೆ. ನಾನು ನಗರಸಭೆಯ ಸದಸ್ಯನಾಗಿ ಅನುಭವ ಪಡೆದಿದ್ದೇನೆ ಮತ್ತು ಈಗ ಶಾಸಕನಾಗಿ ಹೇಳುತ್ತಾ ಇದ್ದೇನೆ. ಭದ್ರಾವತಿ-ಶಿವಮೊಗ್ಗ ಕಾರ್ಪೊರೇಷನ್‌ನನ್ನು ದಯವಿಟ್ಟು ಮಾಡಬೇಡಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಒಂದು ವಿಷಯವನ್ನು ನಾನು ಪೇಪರಿನಲ್ಲಿ ಓದಿದೆ. ದೆಹಲಿಯ ಪ್ರಾಧಿಕಾರಕ್ಕೆ ಸಂಬಂಧ ಪಟ್ಟಂತೆ ಒಂದು ಕಾನೂನು ತರುತ್ತಾ ಇದ್ದಾರೆ. ಎನ್‌ಕ್ರೋಚ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಕಾನೂನು ತರುತ್ತಾ ಇದ್ದಾರೆ. ಯಾರು ಅಕ್ರಮವಾಗಿ ಮನೆ ಕಟ್ಟಿಕೊಳ್ಳುತ್ತಾರೆ, ಅಥವಾ ಜಾಗವನ್ನು ಅಕ್ರಮಿಸಿಕೊಳ್ಳುತ್ತಾರೆ ಅವರ ಬಗ್ಗೆ ಕಾನೂನು ತರುತ್ತಿದ್ದಾರೆ. ಅದರ ಪ್ರಕಾರ, We are thinking of imposing rigorous punishment even upto 3 years for encroachment and forming unauthorised colonies. ಈ ರೀತಿ ಬೆಂಗಳೂರಿನಂಥ ನಗರಗಳಲ್ಲಿಯೂ ಕೂಡ ಕೆಲವರು ಅಕ್ರಮವಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶಕೊಟ್ಟು ಅದರಿಂದ ದುಡ್ಡು ಮಾಡುತ್ತಾ ಇದ್ದಾರೆ. ಆ ಒಂದು ಕಾನೂನನ್ನು ಬೆಂಗಳೂರು ನಗರಸಭೆ ಮತ್ತು ಅನೇಕ ಸಿಟಿಗಳಲ್ಲೂ ತೆಗೆದುಕೊಂಡು ಬಂದು ಏನು ಏನ್‌ಕ್ರೋಚ್‌ಮೆಂಟ್ ಆಗುತ್ತಿದೆ ಅದನ್ನು ತಪ್ಪಿಸಬೇಕು ಎಂದು ಈ ಸಮಯದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ತುಂಗಾನದಿ ಶಿವಮೊಗ್ಗ ನಗರದ ಮೂಲಕ ಹಾದು ಹೋಗುತ್ತಿದೆ. ಆದರೆ ನಗರ ಪ್ರದೇಶದಲ್ಲಿ ಕೊಳಚೆ ಪ್ರದೇಶ ಎಂದರೆ ತುಂಗಾನದಿ ಪ್ರದೇಶವಾಗಿದೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಸುವ್ಯವಸ್ಥೆಗಾಗಿ ೧೦ ಲಕ್ಷ ರೂಪಾಯಿಗಳ ಒಂದು ವ್ಯವಸ್ಥೆ ಮಾಡಿತ್ತು. ಅದು ಕಳೆದು ಹೋಯಿತು. ಈ ಸರ್ಕಾರವಾದರೂ ಕೂಡ ನದಿಯ ಪ್ರದೇಶದಲ್ಲಿ ಅದನ್ನು ಸ್ವಚ್ಛತೆಗೊಳಿಸತಕ್ಕಂಥ ಒಂದು ಕಾರ್ಯಕ್ರಮಕ್ಕೆ ಯೋಜನೆಯನ್ನು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ನನಗೆ ಕೊಟ್ಟಂಥ ೫ ನಿಮಿಷದಲ್ಲಿ ೪ ನಿಮಿಷಕ್ಕೇ ನನ್ನ ಭಾಷಣವನ್ನು ಮುಗಿಸಿ, ನನಗೆ ಮಾತನಾಡಲಿಕ್ಕೆ ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

MR. SPEAKER.—Discussion concluded.

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—ಅಧ್ಯಕ್ಷರೆ, ಪ್ರವಾಸ ಮತ್ತು ವಾರ್ತಾ ಪ್ರಚಾರ ಇಲಾಖೆಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾದುದು ಬಹಳ ಕಡಿಮೆ. ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ಹೊರನಾಡಿನ ಪ್ರವಾಸಿಗರನ್ನು ಆಕರ್ಷಿಸಲು ಮತ್ತು ನಮ್ಮ ಕರ್ನಾಟಕದ ಜನತೆಗೋಸ್ಕರ ಕೆಲವು ಯೋಜನೆಗಳನ್ನು ಮಾಡಬೇಕಾಗಿತ್ತು. ಆದರೆ ಅವ್ಯತೆ ಮೇರೆಗೆ ಹೆಚ್ಚಿನ ಅವಕಾಶ ಹೊರನಾಡಿನ ಮತ್ತು ವಿದೇಶಿ ಪ್ರವಾಸಿಗರಿಗೆ ಸಿಕ್ಕಿತು. ಇವತ್ತಿನ ದಿವಸ ನಾವು ಹೊಸ ನೀತಿಯ ಪ್ರಕಾರ ರಾಷ್ಟ್ರೀಯ ಹೆದ್ದಾರಿಗಳೆ ನಿವೆ ಅಲ್ಲಿ ಒಂದೊಂದು ಹೋಟೆಲನ್ನು ಮಾಡಬೇಕೆಂದಿದ್ದೇವೆ. ರಾಷ್ಟ್ರೀಯ ಹೆದ್ದಾರಿಗಳ ಮೂಲಕ ಪ್ರವಾಸಿಗರೇನು ಬರುತ್ತಾರೆ ಅವರಿಗೆ ಒಂದು ಒಳ್ಳೆಯ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಮತ್ತು ಉಪಹಾರದ ವ್ಯವಸ್ಥೆ ಹಾಗೂ ಕಾರಿನಲ್ಲಿ ಬಂದರೆ ಕಾರನ್ನು ನಿಲ್ಲಿಸಿ ಪೆಟ್ರೋಲ್ ತುಂಬಿಕೊಳ್ಳುವುದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡುವ ಸಲುವಾಗಿ ಈ ವರ್ಷದಲ್ಲಿ ೪ ಸ್ಥಳಗಳನ್ನು ಆರಿಸಿಕೊಂಡಿದ್ದೇವೆ. ಇದಕ್ಕಾಗಿ ಮುಳುಬಾಗಿಲಿನಲ್ಲಿ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನ ನಡೆದಿದೆ. ಅದೇ ರೀತಿ

ಬೆಳಗಾಮಿನಲ್ಲಿ ಕೂಡ ಸ್ಥಳ ವಶಪಡಿಸಿಕೊಳ್ಳುವುದಕ್ಕೆ ವ್ಯವಹಾರಗಳು ನಡೆದಿವೆ. ಕೆಲವು ದಿನಗಳಲ್ಲಿ ಅದು ಆಗುತ್ತದೆ. ಹಂಗಳದಲ್ಲಿ (ಗುಂಡ್ಲುಪೇಟೆ ಹತ್ತಿರ) ಸ್ಥಳ ಪರೀಕ್ಷೆ ನಡೆದು ಸ್ಥಳವನ್ನು ಆಯ್ಕೆ ಮಾಡಲಾಗಿದೆ. ಹೊರನಾಡಿನ ಪ್ರವಾಸಿಗರನ್ನು ಆಕರ್ಷಿಸಲು ಮುತ್ತಾಲದಮರದಲ್ಲಿ ಒಂದು ಪ್ರವಾಸಿ ಕೇಂದ್ರವನ್ನು ಸ್ಥಾಪಿಸಬೇಕೆಂದು ಸ್ವಲ್ಪ ಹಣವನ್ನು ಈ ಸಾರಿ ಇಟ್ಟಿದ್ದೇವೆ. ಅದೇ ರೀತಿ ಶಾಂತಿ ಸಾಗರದಲ್ಲಿ ಒಂದು ಯೋಜನೆ ಮಾಡಬೇಕೆಂದು ಇತ್ತು. ಆದರೆ ಅದನ್ನು ಯೋಜನೆಯಲ್ಲಿ ತರುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಜಮೀನನ್ನು ಖರೀದಿ ಮಾಡುವುದಕ್ಕೆ ಮತ್ತು ಇನ್‌ಫ್ರಾಸ್ಟ್ರಕ್ಚರ್ ಬಿಲ್ಡ್ ಅಪ್ ಮಾಡುವುದಕ್ಕೆ ಯೋಜನೆ ಪ್ರಾರಂಭ ಮಾಡಿದ್ದೇವೆ. ಶಿವಮೊಗ್ಗದಿಂದ ೯ ಮೈಲಿ ದೂರದಲ್ಲಿ ಇರುವ ಗಾಜನೂರಿನಲ್ಲಿ ಬಹಳ ಸುಂದರವಾದ ಪ್ರದೇಶ ಇದೆ. ಅಲ್ಲಿ ಒಂದು ಲೋಕೋಪಯೋಗಿ ಇಲಾಖೆಯ ಕಟ್ಟಡ ಇದೆ. ಅದನ್ನು ವಶಪಡಿಸಿಕೊಂಡು ಆ ಸ್ಥಳವನ್ನು ಹೆಚ್ಚು ಅಕರ್ಷಣೀಯವಾಗಿ ಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಾನು ಈಗ ಹೇಳುತ್ತಿರುವ ಎಲ್ಲಾ ಸ್ಥಳಗಳಿಗೆ ಭೇಟಿ ಕೊಟ್ಟಿದ್ದೇನೆ. ಬೆಂಗಳೂರು ನಗರದ ಹೆಸರುಘಟ್ಟವನ್ನು ಒಂದು ಉತ್ತಮವಾದ 'ಹಾಲಿಡೆ ರೆಸಾರ್ಟ್' ಮಾಡಬೇಕೆಂಬ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆದಕ್ಕೆ ಈ ವರ್ಷ ೫ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಅಲಸೂರು ಕೆರೆ ಏನಿದೆ ಅದು ಬಹಳ ಪುರಾತನವಾದುದು ಈಗತಾನೇ ಅದನ್ನು ಕಾರ್ಪೊರೇಷನ್ ವತಿಯಿಂದ ನಮ್ಮ ಇಲಾಖೆ ವಹಿಸಿಕೊಂಡಿದೆ. ಪ್ರವಾಸೋದ್ಯಮ ಇಲಾಖೆ ಮೂಲಕ ಅಲ್ಲಿ ದೋಣಿಗಳನ್ನು ನಡೆಸುವ ಯೋಜನೆ ಮಾಡಬೇಕು, ಅಲ್ಲಿ ಒಂದು ಹೋಟೆಲ್ ಅನ್ನು ಮಾಡಬೇಕು ಮತ್ತು ಕೆ.ಆರ್.ಎಸ್.ಒಸ್.ನಲ್ಲಿ ಯಾವ ರೀತಿ ಮ್ಯೂಸಿಕಲ್ ವ್ಯವಸ್ಥೆ ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಮಾಡಿದ್ದೇವೆ. ಅದರ ಸಲುವಾಗಿ ಹಣ ಸಂಗ್ರಹಿಸಲು ಈಗಾಗಲೇ ವ್ಯವಹಾರ ನಡೆಸುತ್ತಿದ್ದೇವೆ. ಹಣ ಸಂಗ್ರಹವಾದ ಕೂಡಲೇ ಕಾರ್ಯಕ್ರಮ ಪ್ರಾರಂಭಿಸುತ್ತೇವೆ. ಈಗ ತಾತ್ಕಾಲಿಕವಾಗಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಬೋಟಿಂಗ್ ಮತ್ತು ಉಪಹಾರ ಕೇಂದ್ರ ಪ್ರಾರಂಭಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಅದೇ ರೀತಿ, ಬಾದಾಮಿಯಲ್ಲಿ ೫ ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಅದಕ್ಕೆ ಹಣ ಜಾಸ್ತಿ ಬೇಕಾಗಿದೆ ಆದರೂ ಅದನ್ನು ಪೂರೈಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಎಂ. ರಘುಪತಿ.—ಈಗಿರುವ ಹೋಟೆಲನ್ನು ಎಕ್ಸ್‌ಪ್ಯಾಂಡ್ ಮಾಡುವುದು.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ.—ಚಿತ್ರದುರ್ಗದಲ್ಲಿ ಚಂದ್ರವಳ್ಳಿ ಟ್ಯಾಂಕ್ ಎಂದು ಕೇಳಿರಬಹುದು. ಅದು ಪ್ರವಾಸಿಗರಿಗೆ ಯೋಗ್ಯವಾದ ಸ್ಥಳವಾದ್ದರಿಂದ ಅದನ್ನು ಅಭಿವೃದ್ಧಿಗೊಳಿಸತಕ್ಕ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಬಾದಾಮಿಯಲ್ಲಿ ಸಾವಿರಾರು ವರ್ಷಗಳಿಂದ ದೊಡ್ಡ ಸರೋವರ ಇದೆ. ಅಲ್ಲಿ ಬೋಟ್‌ಗಳನ್ನು ನಡೆಸುವ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ರಘುಪತಿ.—ಮೊಯಿಲಿಯವರು ಈ ಖಾತೆಯನ್ನು ವಹಿಸಿದ್ದವರು. ಅವರಿಗೆ ಹಣಕಾಸಿನ ಪರಿಸ್ಥಿತಿ ಗೊತ್ತಿದೆ. ಇವರ ಕಾಲದಲ್ಲಿ ನಂದಿ ಬೆಟ್ಟದಲ್ಲಿ ಒಳ್ಳೆಯ ಕಾರ್ಯಕ್ರಮ ಮಾಡಿದರು.

ಒಬ್ಬ ಮಾನ್ಯ ಸದಸ್ಯರು.—ಕೆ.ಆರ್.ಎಸ್. ಅನ್ನು ಮರೆತರಲ್ಲ.

ಶ್ರೀ ಎಂ. ರಘುಪತಿ.—ನಾನು ಇನ್ನೂ ಅಲ್ಲಿಗೆ ಬಂದಿಲ್ಲ. ಕರಾವಳಿ ಪ್ರದೇಶಗಳಾದ ಮಲ್ಪೆ ಮತ್ತು ಮರವಂತಿಗಳೇನಿವೆ ಅಲ್ಲಿ ಕೂಡ ಕೆಲಸ ನಡೆದಿದೆ. ಮಲ್ಪೆಯಲ್ಲಿ ಅರ್ಧ ಕೆಲಸ ಆಗಿದೆ ಮತ್ತು ಉಳಿದ ಕೆಲಸಗಳನ್ನು ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಆ ಸ್ಥಳಕ್ಕೆ ನಾನು ಖುದ್ದಾಗಿ ಹೋಗಿ ಬಂದಿದ್ದೇನೆ. ಅಲ್ಲಿ ಹೋಟೆಲ್ ಕೆಲಸ ಏನು ಅಪೂರ್ಣವಾಗಿದೆ ಅದನ್ನು ಪೂರ್ಣ ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಮರವಂತಿ ಪಶ್ಚಿಮ ಘಟ್ಟದ ಯೋಜನೆ. ಅದಕ್ಕೆ ಕೂಡ ಹಣ ಒದಗಿಸಬೇಕಾಗಿದೆ. ಅದೇ ರೀತಿ, ಕೊಡಚಾದ್ರಿ ಬೆಟ್ಟ ಮತ್ತು ಬಾಬಾ ಬುಡನ್‌ಗಿರಿಯನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕೆಂದು ಇದೆ. ಅದೇ ಪ್ರಕಾರ ಜೋಗ್‌ಫಾಲ್ಸ್‌ನಲ್ಲಿ ಕೂಡ ಮಾಡಬೇಕೆಂದು ಇದೆ. ಮೊನ್ನೆ ಜೋಗ್‌ಫಾಲ್ಸ್‌ನಲ್ಲಿರುವ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರೊಡನೆ ಸಮಾಲೋಚನೆ ಮಾಡಿ, ಅವರ ಬಂಗಲೆಯನ್ನು

ತೆಗೆದುಕೊಂಡು ಅದನ್ನು ಆಕರ್ಷಣೀಯವಾಗಿ ಮಾಡಬೇಕೆಂದು ಮಾಡಿದ್ದೇವೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಬೇರೆ ಇಲಾಖೆಗಳ ಬಗ್ಗೆ ಉತ್ತರಗಳು ಆಗಬೇಕಾಗಿದೆ. ಹಂಪೆ ಪುನರುತ್ಥಾನ ಸಮಿತಿ ಏನಿತ್ತು, ಅದನ್ನು ನಾವು ಪುನರ್‌ರಚನೆ ಮಾಡಿದ್ದೇವೆ. ಮುಖ್ಯ ಮಂತ್ರಿಗಳು ಅದಕ್ಕೆ ಅಧ್ಯಕ್ಷರಾಗಿದ್ದು ಪ್ರವಾಸೋದ್ಯಮ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಯಾರು ಯಾರು ಹಂಪೆ ವಿಷಯದಲ್ಲಿ ಅಧ್ಯಯನ ಮಾಡಿ ಅನುಭವವನ್ನು ಪಡೆದಿದ್ದಾರೆ, ಪುಸ್ತಕಗಳನ್ನು ಲೇಖನಗಳನ್ನು ಬರೆದಿದ್ದಾರೆ ಅಂಥ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳನ್ನು ಸದಸ್ಯರನ್ನಾಗಿ ಮಾಡಿದ್ದೇವೆ. ಮಾನ್ಯ ವೀರಪ್ಪ ಮೊಯಿಲಿಯವರು ಹಿಂದೆ ಆ ಸಮಿತಿಯ ಅಧ್ಯಕ್ಷರಾಗಿದ್ದರು. ಅವರನ್ನು ಈಗ ಸದಸ್ಯರನ್ನಾಗಿ ಮಾಡಿದ್ದೇವೆ. ಅವರೂ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತೇನೆ. ಅವರ ಸಲಹೆಗಳೂ ನಮಗೆ ಬೇಕು. ಹಂಪೆ ಪುನರುತ್ಥಾನ ಮಾಡುವಾಗ ಬಾದಾಮಿ ಪೂರ್ತಿ ಸರ್ಕ್ಯೂಟ್ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಆ ಮೂಲಕ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸಮಿತಿಯ ಪ್ರಿಲಿಮಿನರಿ ಮೀಟಿಂಗ್ ಕೂಡ ತುರ್ತಾಗಿ ನಡೆದಿದೆ. ಮುಂದಿನ ಸಾಲಿನಲ್ಲಿ ವ್ಯಾಪಕವಾಗಿ ಸಭೆಗಳನ್ನು ನಡೆಸಿ ಹಲವಾರು ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ನಿನ್ನೆಯ ಸಭೆಯಲ್ಲಿ ತೀರ್ಮಾನ ಮಾಡಿದ್ದೇವೆ. ಈ ಸಾರಿ ದಸರಾ ಉತ್ಸವವನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಟ್ಟಿದ್ದೇವೆ ದಸರಾ ಉತ್ಸವವನ್ನು ವಿಜೃಂಭಣೆಯಿಂದ ಪ್ರತಿ ವರ್ಷ ಯಾವ ರೀತಿ ಮಾಡುತ್ತಿದ್ದರೋ ಅಷ್ಟೇ ಆಕರ್ಷಣೀಯವಾಗಿ ಮಾಡಬೇಕೆಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಹೈಪವರ್ ಕಮಿಟಿ ರಚಿಸಲಾಗಿದ್ದು ಅದಕ್ಕೆ ಪ್ರವಾಸೋದ್ಯಮ ಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ. ದಸರಾ ಉತ್ಸವಕ್ಕೆ ಎಲ್ಲಾ ಸಿದ್ಧತೆಗಳೂ ನಡೆಯುತ್ತಿವೆ. ಹೊರನಾಡಿನ ಪ್ರವಾಸಿಗರನು ಆಕರ್ಷಿಸುವುದಕ್ಕೆ ಡಾರ್ಮಿರಟರಿ ಮಾಡಬೆ ಕೆಂದು ಯೋಚನೆ ಮಾಡಿದ್ದೇವೆ. ಮೈಸೂರಿನಲ್ಲಿ ಬೃಂದಾವನದಲ್ಲಿ ಮಾಡಿರುವ ಕುಣಿತದ ಕಾರಂಜಿಯನ್ನು ರಾಷ್ಟ್ರಪತಿಯವರು ನೋಡಿ ಬಹಳ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ಮೊಯಿಲಿಯವರು ಹೆಚ್ಚಿನ ಆಸಕ್ತಿ ವಹಿಸಿ ಕೇಂದ್ರದಿಂದ ಸಾಕಷ್ಟು ಹಣ ಒದಗಿಸಿ ಕಾರ್ಯಕ್ರಮ ಚೆನ್ನಾಗಿ ಆಗುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದ್ದರಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕೇಂದ್ರದವರೂ ಅದಕ್ಕೆ ಹಣ ಒದಗಿಸಿದ್ದಾರೆ. ನಾವೂ ಖರ್ಚು ಮಾಡಿದ್ದೇವೆ. ಇನ್ನೂ ಒಂದು ಕೋಟಿ ರೂಪಾಯಿಗಳು ಬೇಕಾಗಿದ್ದು ಮತ್ತೆ ಕೇಂದ್ರವನ್ನು ಕೇಳಿದ್ದೇವೆ. ಅವರು ಕೊಡುವ ಸೂಚನೆ ಕಂಡು ಬರುತ್ತಿದೆ. ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಆಕರ್ಷಣೀಯವಾದ ರೀತಿಯಲ್ಲಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅದಕ್ಕೆ ಈ ವರ್ಷದಲ್ಲಿ ಸ್ವಲ್ಪ ಹಣ ಇಟ್ಟಿದ್ದೇವೆ. ಅದೇ ತರಹ ನಂದಿ ಬೆಟ್ಟದಲ್ಲಿ ಕೂಡ ಡಾರ್ಮಿಟರಿ ಮಾಡಬೆ ಕೆಂದು ತೋಟಗಾರಿಕೆ ಇಲಾಖೆ ಜೊತೆಯಲ್ಲಿ ಸಂಪರ್ಕ ಮಾಡುತ್ತಿದ್ದೇವೆ. ಅವರ ಜೊತೆಯಲ್ಲಿ ಮಾತುಕತೆ ನಡೆದಿದೆ. ನಮ್ಮ ಹೋಟೆಲ್‌ಗಳು ಚೆನ್ನಾಗಿ ನಡೆಯುತ್ತಿಲ್ಲ ಎಂದು ಮಾನ್ಯ ಸದಸ್ಯರುಗಳು ದೂರಿದ್ದಾರೆ. ನಾನು ಮ್ಯಾನೇಜರ್‌ಗಳ ಸಭೆ ಕರೆದು ಕಟ್ಟುನಿಟ್ಟಾಗಿ ಹೇಳಿದ್ದೇನೆ. ಎಲ್ಲಿಯವರೆಗೆ ಹೋಟೆಲ್‌ಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸುವುದಿಲ್ಲವೋ ಅಲ್ಲಿಯವರೆಗೆ ಯಾವ ವಿಧವಾದ ವಿಸ್ತರಣಾ ಕಾರ್ಯ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ, ಆದ್ದರಿಂದ ಚೆನ್ನಾಗಿ ನಡೆಸಬೇಕು ಎಂದು ಎಚ್ಚರಿಕೆ ಕೊಟ್ಟಿದ್ದೇನೆ. ಪ್ರವಾಸೋದ್ಯಮ ನಿಗಮಕ್ಕೆ ಅಧ್ಯಕ್ಷರು ಬಂದಮೇಲೆ ಅವರು ಸರ್‌ಪ್ರೈಸ್ ವಿಸಿಟ್ ಮಾಡಿ ನೋಡಿದ್ದಾರೆ. ಕೊಡಗಿನಲ್ಲಿರುವ ಹೋಟೆಲ್ ಬಿಟ್ಟು ಬೇರೆ ಎಲ್ಲಾ ಹೋಟೆಲ್‌ಗಳು ಲಾಭದಾಯಕವಾಗಿ ನಡೆಯುತ್ತಿವೆ. ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾನು ಮತ್ತು ಜೀವಿಜಯ ಅವರು ಹೋಗಿ ನೋಡಿಕೊಂಡು ಬಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದನ್ನು ಸರಿಪಡಿಸುತ್ತೇವೆ. ನಮ್ಮ ಹತ್ತಿರ ಇರುವ ೨೯ ಬಸ್ಸುಗಳಲ್ಲಿ ೨೦ ಬಸ್ಸುಗಳು ಕೆಲಸ ಮಾಡುತ್ತಿವೆ. ೯ ಬಸ್ಸುಗಳು ಕಂಡಮ್ ಆಗಿವೆ ಎಂದು ಟೆಕ್ನಿಕಲ್ ರಿಪೋರ್ಟ್ ಬಂದಿದೆ. ನಾಲ್ಕು ಬಸ್ಸುಗಳ ಚಾಸಿ ಖರೀದಿ ಮಾಡಿ ಅದರ ಬಾಡಿ ಬಿಲ್ಡಿಂಗ್ ಕಾರ್ಯ ನಡೆಯುತ್ತಿದೆ. ಆ ಬಸ್ಸುಗಳು ಬಂದತಕ್ಷಣ ಪ್ರವಾಸಿಗರಿಗೆ ಹೆಚ್ಚು ಸೌಲಭ್ಯ ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ವಿದೇಶಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಏರ್ ಕಂಡೀಷನ್ ಬಸ್ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಕೇಂದ್ರದ ಜೊತೆ ಸಂಪರ್ಕ ಮಾಡಿ ಬೆಂಗಳೂರು ನಗರವನ್ನು ಇಂಟರ್ ನ್ಯಾಷನಲ್ ಏರ್ ಪೋರ್ಟ್ ಆಗಿ ಡಿಕ್ಲೇರ್ ಮಾಡಬೇಕೆಂದು ಕೋರಿದ್ದೇವೆ. ವಾಣಿಜ್ಯ ಮತ್ತು ಕೈಗಾರಿಕೆಯಲ್ಲಿ ಬೆಂಗಳೂರು ನಗರ ಭಾರತ ದೇಶದಲ್ಲೇ ದೊಡ್ಡ ನಗರವಾಗಿ ಬೆಳೆಯುತ್ತಿರುವುದರಿಂದ ವಿದೇಶಕ್ಕೆ ಹೋಗುವವರ ಮತ್ತು ವಿದೇಶದಿಂದ ಬರುವವರ ಜನಸಂಖ್ಯೆ ಜಾಸ್ತಿ ಇದ್ದು ವ್ಯಾಪಾರ ವಹಿವಾಟು ಬಹಳಮಟ್ಟಿಗೆ ನಡೆಯುತ್ತಿದೆ. ಆ ಕಾರಣದಿಂದ ಇದನ್ನು ಇಂಟರ್ ನ್ಯಾಷನಲ್ ಏರ್ ಪೋರ್ಟ್ ಮಾಡಬೇಕೆಂದು ಒತ್ತಾಯ ತಂದಿದ್ದೇವೆ. ಕೇಂದ್ರದ ಮಂತ್ರಿಗಳನ್ನು ಎರಡು ಬಾರಿ ಭೇಟಿ

ಯಾಗಿ ಈ ಬಗ್ಗೆ ಪತ್ರ ಕೊಟ್ಟಿದ್ದೇನೆ, ಕೇಳಿಕೊಂಡಿದ್ದೇನೆ, ಅವರು ಸದ್ಯಕ್ಕೆ ಅದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ನಾನು ಮೊಯಿಲಿ ಅವರನ್ನು ಕೇಳಿಕೊಳ್ಳುತ್ತೇನೆ. ಅವರು ನಾವು ಎಲ್ಲಾ ಸೇರಿಕೊಂಡು ಈ ವಿಷಯದಲ್ಲಿ ಪ್ರಯತ್ನ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಪ್ರಧಾನಿಯವರಿಗೆ ಪತ್ರ ಬರೆದಿದ್ದಾರೆ. ಮೈಸೂರು ನಗರದಲ್ಲಿ ಕೂಡ ಏರ್ ಪೋರ್ಟ್ ಆಗಬೇಕೆಂಬ ಬೇಡಿಕೆ ಇದೆ. ರಾಷ್ಟ್ರಪತಿಗಳು ಕೂಡ ಮೈಸೂರಿನಂಥ ಸುಂದರ ನಗರದಲ್ಲಿ ಏರ್‌ಪೋರ್ಟ್ ಆಗಬೇಕಾದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ರಾಷ್ಟ್ರಪತಿಗಳಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಧಾರವಾಡದಲ್ಲೂ ಏರ್‌ಪೋರ್ಟ್ ಮಾಡಬೇಕೆಂದು ಪತ್ರ ಬರೆದಿದ್ದೇವೆ. ಪ್ರವಾಸೋದ್ಯಮ ತರಪೇತಿ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ಬೆಂಗಳೂರಿನಲ್ಲಿ 10 ಎಕರೆ ಸ್ಥಳ ಕೊಡುತ್ತೇವೆಂದು ಹೇಳಿದ್ದೇವೆ. ತರಪೇತಿ ಕೇಂದ್ರವನ್ನು ಕೊಡುವಾಗ ಆಧ್ಯತೆ ಮೇರೆಗೆ ನಮಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಕೇಂದ್ರದ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹಳ ಜನ ಸದಸ್ಯರು ನಮ್ಮ ಊರಿನಲ್ಲಿ ಪ್ರವಾಸಿ ಕೇಂದ್ರ ಆಗಬೇಕು. ಅದು ಆಕರ್ಷಣೀಯವಾದ ಸ್ಥಳ, ಪುಣ್ಯ ಸ್ಥಳ ಎಂದು ಹೇಳಿದ್ದಾರೆ. ಎಲ್ಲಾ ಕಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಕಾರಣ, ಹಣದ ಅಭಾವ. ಆದರೂ ಒಂದೊಂದಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಎಲ್ಲಾ ಊರುಗಳೂ ನನಗೆ ಜ್ಞಾಪಕವಿದೆ.

ಶ್ರೀ ಬಿ. ಶಿವಣ್ಣ.—ಗುಲ್ಬರ್ಗ, ಬೀದರ್, ರಾಯಚೂರಿಗೆ ನೀವು ಬಂದೇ ಇಲ್ಲ. ಸರ್ಕಾರ ನಡೆಸುವುದಕ್ಕೆ ಎಂ. ಎಲ್. ಎ. ಗಳ ಸಹಾಯ ಮಾತ್ರ ಬೇಕು. ಆದರೆ ಆ ಕಡೆ ಗಮನ ಮಾತ್ರ ಕೊಡುವುದಿಲ್ಲ.

ಶ್ರೀ ಎಂ. ರಘುಪತಿ.—ಹಂಪೆ ಕಾರ್ಯಕ್ರಮದಲ್ಲಿ ಅದೆಲ್ಲಾ ಸರ್ಕ್ಯೂಟ್ ಎಂದು ಡಿಕ್ಲೇರ್ ಮಾಡಿದ್ದೇವೆ. ಅದರಲ್ಲಿ ಬಿಜಾಪುರ ಮತ್ತು ಬೀದರ್ ಸೇರಿಕೊಂಡಿದೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿ, ಹೊಸಪೇಟೆಯಲ್ಲಿ ವಿಮಾನ ನಿಲ್ದಾಣ ಮಾಡುವ ಬಗ್ಗೆ ಹೇಳಲಿಲ್ಲ.

ಶ್ರೀ ಎಂ. ರಘುಪತಿ.—ರಾಯಚೂರು ಮತ್ತು ಬಳ್ಳಾರಿಯಲ್ಲಿ ಮಾಡಬೇಕೆಂದು ಕೇಂದ್ರಕ್ಕೆ ಬರೆಯುತ್ತೇವೆ.

ಶ್ರೀ ಜೆ. ಡಿ. ಸೋಮಪ್ಪ.—ಬೇಲೂರು, ಹಳೇಬೀಡು, ಶ್ರವಣಬೆಳಗೊಳ......

ಶ್ರೀ ಎಂ. ರಘುಪತಿ.—ಅಲ್ಲಿ ಪ್ರವಾಸಿ ಕೇಂದ್ರ ಮಾಡುತ್ತಿದ್ದೇವೆ. ಈಗ ವಾರ್ತಾ ಮತ್ತು ಪ್ರಚಾರ ಇಲಾಖೆ ಬಗ್ಗೆ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬೇಲೂರಿನಲ್ಲಿ ಏನು ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಹೋಟೆಲ್ ಕಟ್ಟುವುದಕ್ಕೆ, ವಿಸ್ತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಹೋಟೆಲ್ ಇಲ್ಲವೆ ?

ಶ್ರೀ ಎಂ. ರಘುಪತಿ.—ಇದೆ. ಅದನ್ನು ವಿಸ್ತರಣೆ ಮಾಡುತ್ತೇವೆ.

ಶ್ರೀ ಎಂ. ರಾಮಪ್ಪ.—ಹಂಪೆಯಲ್ಲಿ ಹೋಟೆಲ್ ಇಲ್ಲ.

ಶ್ರೀ ಎಂ. ರಘುಪತಿ.—ಕೆ.ಎಸ್.ಟಿ.ಡಿ.ಸಿ. ಅಧ್ಯಕ್ಷರು ಹೋಗಿ ನೋಡಿಕೊಂಡು ಬಂದಿದ್ದಾರೆ ಮುಖ್ಯಮಂತ್ರಿಗಳನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದು ಅಲ್ಲಿನ ಶಾಸಕರನ್ನು ಸಮಿತಿಯಲ್ಲಿ ಸದಸ್ಯರನ್ನಾಗಿ ಸೇರಿಸಿದ್ದೇವೆ. ವಿಧಾನಪರಿಷತ್ತಿನ ಸದಸ್ಯರನ್ನೂ ಸೇರಿಸಿದ್ದೇವೆ. ಅಲ್ಲಿ ಎಲ್ಲಾ ವ್ಯವಸ್ಥೆ ಮಾಡುತ್ತಾ ಇದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳು ಅವಿವಾಹಿತರಾಗಿರುವುದರಿಂದ ಅವರಿಗೆ ವಿಹಾರದ ಅಭಿರುಚಿ ಕಡಿಮೆ. ಆದ್ದರಿಂದ ಅವರನ್ನು ಜೋಡಿ ಮಾಡಿ ಹನಿಮೂನ್‌ಗೆ ಬೇರೆ ದೇಶಕ್ಕೆ ಕಳುಹಿಸಿಕೊಡುವುದು ಒಳ್ಳೆಯದು.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಶಾಸಕರ ಭವನದಲ್ಲಿ ಕ್ಯಾಂಟೀನ್ ಇದೆ. ಹಾಗೂ ವಿಧಾನ ಸೌಧದಲ್ಲೂ ಕ್ಯಾಂಟೀನ್ ಇದೆ. ಇಲ್ಲಿ ಸರಿಯಾದ ಊಟ ಉಪಹಾರ ಸಿಗುತ್ತಾ ಇಲ್ಲ.

ಅಧ್ಯಕ್ಷರು.—ಈ ಬಗ್ಗೆ ನನ್ನ ಕೊಠಡಿಗೆ ಬಂದು ಮಾತನಾಡಿ.

ಶ್ರೀ ಎಂ. ರಘುಪತಿ.—ಇನ್ನು ವಾರ್ತಾ ಇಲಾಖೆಯ ಬಗ್ಗೆ ಮಾತನಾಡುವ ಸಮಯದಲ್ಲಿ ಮೊದಲು ಸಿನಿಮಾ ಬಗ್ಗೆ ಮಾತನಾಡಿ ನಂತರ ಪತ್ರಿಕೆಗಳ ವಿಷಯಕ್ಕೆ ನಾನು ಬರುತ್ತೇನೆ. ಸಿನಿಮಾ ಬಗ್ಗೆ ಹೇಳುವುದಾದರೆ, ಕರ್ನಾಟಕದಲ್ಲಿ ಮೊದಲಿನಿಂದಲೂ ಎಂದರೆ ೧೯೬೬ ರಿಂದಲೂ ಸಬ್ಸಿಡಿ ವ್ಯವಹಾರದಲ್ಲಿ ಆಗಲೀ, ತೆರಿಗೆ ವಿನಾಯಿತಿ ಕಾರ್ಯಕ್ರಮದಲ್ಲಾಗಲೀ ಇವತ್ತಿನವರೆವಿಗೂ ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಕನ್ನಡಿಗರಿಗೆ ಹೆಚ್ಚು ಕನ್ನಡ ಚಿತ್ರಗಳು ನೋಡಲು ಸಿಗಬೇಕೆಂದು ಆಸಕ್ತಿ ವಹಿಸಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಬರುತ್ತಿದೆ. ಈಗ ನಮ್ಮ ಉಸ್ತುವಾರಿಯಲ್ಲಿ ಕಂಠೀರವ ಸ್ಟುಡಿಯೋ ಇದೆ. ಇದರಲ್ಲಿ ಈಗಾಗಲೇ ೨ ಫ್ಲೋರ್ ಇದ್ದು ೩ನೇ ಫ್ಲೋರನ್ನು ಕಟ್ಟಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಇಲ್ಲಿ ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಇನ್ನೊಂದು ಫ್ಲೋರ್ ಕಟ್ಟಬೇಕು. ಕಲರ್ ಲ್ಯಾಬೋರೇಟರಿ ಸ್ಥಾಪನೆ ಮಾಡುವುದಕ್ಕೆ ಟೆಕ್ನಿಕಲ್ ರಿಪೋರ್ಟ್ ತಯಾರು ಮಾಡಿ ಇಡಲಾಗಿದೆ. ಇದಕ್ಕೆ ಸುಮಾರು ೧ಕೋಟಿ ರೂಪಾಯಿ ಬೇಕಾಗುತ್ತದೆ. ಆದುದರಿಂದ ಇದನ್ನು ಹಂತ ಹಂತವಾಗಿ ಕಟ್ಟಬೇಕಾಗುತ್ತದೆ. ಇದನ್ನು ಒಂದೇ ಸಾರಿ ಕಟ್ಟುವುದಕ್ಕಾಗುವುದಿಲ್ಲ. ಈಗ ಏನು ರೆಕಾರ್ಡಿಂಗ್ ಥಿಯೇಟರ್ ಎಂದು ಇದೆ ಅದನ್ನು ಪೂರ್ತಿಯಾಗಿ ನವೀಕರಣ ಮಾಡಬೇಕು. ಅದಕ್ಕೆ ೧ ಕೋಟಿ ರೂಪಾಯಿಗಳ ಖರ್ಚು ಆಗುತ್ತದೆ. ಅದಕ್ಕೂ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬ್ಯಾಂಕುಗಳ ಮೂಲಕ ಧನ ಸಹಾಯ ಪಡೆದು ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ಅಲ್ಲಿ ಇದನ್ನು ಫಿಲಂ ಸಿಟಿ ಮಾಡಬೇಕೆಂದು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಆದರೆ ಒಂದು ಸೆಮಿನಾರಾ ನಡೆಯಿತು. ಆ ಸೆಮಿನಾರ್‌ನಲ್ಲಿ ಇದ್ದ ಕೆಲವು ತಜ್ಞರು ಇದು ಬೇಕು, ಎಂದೂ ಕೆಲವು ತಜ್ಞರು ಬೇಡ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದನ್ನು ಮಾಡುವುದರ ಬದಲು ಏನು ಕಂಠೀರವ ಸ್ಟುಡಿಯೋ ಇದೆ ಅಲ್ಲಿ ಜಾಸ್ತಿ ಜಾಗವನ್ನು ನೋಂದಾಯಿಸಿಕೊಂಡು ಅದನ್ನೇ ಉತ್ತಮಪಡಿಸಿದಲ್ಲಿ ಬೆಂಗಳೂರು ನಗರದಲ್ಲಿ ಉತ್ತಮ ಪರಿವರ್ತನೆ ಮಾಡಬಹುದು ಎಂದು ಹೇಳಿದರು ಆ ಕಾರಣಕ್ಕೋಸ್ಕರ ಫಿಲಂ ಸಿಟಿ ಮಾಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಇದರ ಜೊತೆ ಹಣದ ಕೊರತೆಯೂ ಇದೆ. ಹಾಗೂ ನಾನು ಈ ಹಿಂದೆ ಏನು ೩ ಕಾರ್ಯಕ್ರಮಗಳನ್ನು ಹೇಳಿದೆ ಅವುಗಳನ್ನು ಪೂರೈಸಿದ ಮೇಲೆ ಇದನ್ನು ಮಾಡಬೇಕೆಂದು ಹೇಳಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇನ್ನು ಜನತಾ ಚಿತ್ರಮಂದಿರಗಳ ಬಗ್ಗೆ ಜನ ಆಸಕ್ತಿ ತೋರಿಸುತ್ತಾ ಇಲ್ಲ. ಕೇಂದ್ರದ ನ್ಯಾಷನಲ್ ಫಿಲಂ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನವರೂ ಈ ಬಗ್ಗೆ ಸಹಾಯ ಧನ ಕೊಡುತ್ತಾರಾದರೂ ಜನರು ಇದನ್ನು ಹೆಚ್ಚು ಉಪಯೋಗಿಸಿಕೊಳ್ಳುತ್ತಾ ಇಲ್ಲ. ಇನ್ನು ಚಲನಚಿತ್ರಗಳ ವಿಷಯ ಹೇಳಬೇಕೆಂದರೆ ಕಪ್ಪು ಮತ್ತು ಬಿಳುಪು ಚಿತ್ರಗಳಿಗೆ ೧ ಲಕ್ಷ ರೂಪಾಯಿಗಳು ಹಾಗೂ ಬಣ್ಣದ ಚಿತ್ರಗಳಿಗೆ ಒಂದೂವರೆ ಲಕ್ಷ ರೂಪಾಯಿಗಳು ಸಹಾಯಧನ ಕೊಡಲಾಗುತ್ತಿದೆ. ಹಾಗೂ ಈ ಪೈಕಿ ೪೦ ಲಕ್ಷ ರೂಪಾಯಿಗಳು ಬಾಕಿ ಇತ್ತು. ಈ ಹಣ ಕೊಡದಿದ್ದುದರಿಂದ ಅನೇಕ ನಿರ್ಮಾಪಕರಿಗೆ ತೊಂದರೆ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಇದು ನಿಜ. ಹಿಂದಿನ ಮೂರು ವರ್ಷಗಳಲ್ಲಿ ಹಣ ನಿಂತಿದು ದಿನಾಂಕ ೨೧-೩-೮೩ರಲ್ಲಿ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಸುಮಾರು ೫೦ ಚಲನಚಿತ್ರಗಳಿಗೆ ಸಹಾಯಧನ ಕೊಟ್ಟಿದ್ದೇವೆ. ಹಾಗೂ ಮಿಕ್ಕ ಚಿತ್ರಗಳಿಗೆ ಈ ಸದನ ಮುಗಿದಮೇಲೆ ಹಣವನ್ನು ಕೊಡುವ ಏರ್ಪಾಡು ಮಾಡಿದ್ದೇವೆ. ಇನ್ನೊಂದು ವಿಷಯ ಎಂದರೆ, ಚಲನಚಿತ್ರಗಳಿಗೆ ಪ್ರಶಸ್ತಿ ಕೊಡುವ ಬಗ್ಗೆ. ಇದರಲ್ಲಿ ಸ್ವಲ್ಪ ತೊಂದರೆಯಾಯಿತು. ೧೯೭೮-೭೯, ೧೯೭೯-೮೦, ೧೯೮೦-೮೧ ಈ ಮೂರು ವರ್ಷಗಳ ಬಗ್ಗೆ ಕೋರ್ಟಿನಿಂದ ತಡೆಯಾಜ್ಞೆ ಬಂದಿದೆ. ಇದು ಕೋರ್ಟಿನಲ್ಲಿರುವುದರಿಂದ ಆ ವರ್ಷಗಳ ಪ್ರಶಸ್ತಿ ವಿತರಣೆ ಮಾಡಲು ಸಾಧ್ಯವಿಲ್ಲ. ೧೯೭೭ ೭೮ ಹಾಗೂ ೮೧-೮೨ರ ಪ್ರಶಸ್ತಿಯ ಬಗ್ಗೆ ಸ್ಟೇ ಇಲ್ಲದಿರುವುದರಿಂದ ಮೇಲಿನ ೩ ವರ್ಷಗಳ ಬಗ್ಗೆ ಇನ್ನು ೧೦ ದಿನಗಳಲ್ಲಿ ಇತ್ಯರ್ಥವಾಗದಿದ್ದರೆ ಬರುವ ತಿಂಗಳು ಈ ೨ ವರ್ಷಗಳ ಪ್ರಶಸ್ತಿ ವಿತರಣೆ ಮಾಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಇಷ್ಟು ದಿನ ಏನು ಪ್ರಶಸ್ತಿಗಳನ್ನು ವಿತರಣೆ ಮಾಡಲಾಗಿತ್ತು ಅದರ ಜೊತೆ ಯಾರು ಚಲನಚಿತ್ರ ನಿರ್ಮಾಣ ಮಾಡುತ್ತಾರೆ ಅವರಿಗೂ ಪ್ರಶಸ್ತಿ ಕೊಡಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದೇವೆ. ಇದರಿಂದಾಗಿ ಸುಮಾರು ೩೫ ಜನ ಚಿತ್ರ ನಿರ್ಮಾಪಕರಿಗೆ ಪಾರಿತೋಷಕ ಸಿಗುತ್ತದೆ. ಇಷ್ಟೇ ಅಲ್ಲ ನಮ್ಮ ರಾಜ್ಯದ ಪ್ರಾಂತೀಯ ಭಾಷೆಗಳಾದ ತುಳು, ಕೊಂಕಣಿ ಕೊಡಗು ಭಾಷೆಯ ಉತ್ತಮ ಚಿತ್ರಗಳಿಗೆ ಕೂಡ ೫ ಸಾವಿರ ರೂಪಾಯಿಗಳ ಒಂದು ಹೆಚ್ಚಿನ

ಬಹುಮಾನ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಇನ್ನು ಚಲನ ಚಿತ್ರ ನಿರ್ಮಾಣ ಮಾಡುವಾಗ ಷೂಟಿಂಗ್ ಮಾಡಲು ೩ ಇಲಾಖೆಗಳು ಎಂದರೆ ಉದ್ಯಾನವನವೋ ಅಥವಾ ದೇವಸ್ಥಾನದಲ್ಲೇ ಷೂಟಿಂಗ್ ಮಾಡಬೇಕೆಂದಿದ್ದರೆ ಅದಕ್ಕೆ ಸಂಬಂಧಪಟ್ಟ ಇಲಾಖೆ, ಪೋಲೀಸ್ ಇಲಾಖೆ ಹಾಗೂ ವಾರ್ತಾ ಇಲಾಖೆಗಳಿಂದ ಪರವಾನಗಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ಈಗ ಸಿಂಗಲ್ ಡೋರ್ ಪಾಲಿಸಿ ಮಾಡಿದ್ದೇವೆ. ಈಗ ಆ ಬಗ್ಗೆ ವಾರ್ತಾ ಇಲಾಖೆಗೆ ಅರ್ಜಿ ಹಾಕಿಕೊಂಡರೆ ಸಾಕು. ಇನ್ನು ರಾಜ್ಯದಲ್ಲಿ ಷೂಟಿಂಗ್ ಮಾಡಲು ದಿನಕ್ಕೆ ೪೦೦ ರೂಪಾಯಿಗಳನ್ನು ಕೊಡಬೇಕಾದ್ದನ್ನು ಈಗ ೧೦೦ ರೂಪಾಯಿಗಳಿಗೆ ಇಳಿಸಿ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಿರ್ಣಯಿಸಿದ್ದೇವೆ. ಇನ್ನು ಒಂದು ಚಿತ್ರ ಸೆನ್ಸಾರ್ ಆದಮೇಲೆ ಮತ್ತೆ ಕ್ವಾಲಿಟಿ ಟ್ಯಾಗ್ ಬೇಡವೆಂದು ಚಲನಚಿತ್ರ ತಂತ್ರಜ್ಞರು ಮತ್ತು ಈ ಉದ್ಯಮದವರು ಅಭಿಪ್ರಾಯ ಪಟ್ಟಿರುವುದರಿಂದ ಅದಕ್ಕೆ ಅನುಗುಣವಾಗಿ ಕ್ವಾಲಿಟಿ ಟ್ಯಾಗ್ ಬೇಕಾಗಿಲ್ಲವೆಂದು ಈ ಕ್ರಮವನ್ನು ಈ ಸಾರಿಯಿಂದ ಜಾರಿಗೆ ತಂದಿದ್ದೇವೆ. ಇವತ್ತಿನ ದಿವಸ ಅಶ್ಲೀಲ ಚಲನಚಿತ್ರಗಳು ಏನು ಬರುತ್ತವೆ, ಮತ್ತೊಂದು ಕಡೆ ವಿಡಿಯೋ ಹಾವಳಿಯಿಂದ ಚಲನ ಚಿತ್ರೋದ್ಯಮಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ರಾಷ್ಟ್ರಮಟ್ಟದಲ್ಲಿಯೇ ಒಂದು ನೀತಿಯನ್ನು ರಚನೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಇವುಗಳ ಹಾವಳಿಯನ್ನು ನಿಲ್ಲಿಸುವುದಕ್ಕಾಗಿ ಒಂದು ನೀತಿಯನ್ನು ರಚನೆ ಮಾಡಿ, ಕೆಲವು ದಿನಗಳಲ್ಲಿಯೇ ನಮ್ಮ ಒಂದು ನೀತಿಯನ್ನು ಘೋಷಣೆ ಮಾಡಬೇಕೆಂಬ ನಿರ್ಣಯ ಮಾಡಿದ್ದೇವೆ. ವಿಡಿಯೋ ಚಿತ್ರಗಳನ್ನು ಕೂಡ ಟ್ಯಾಕ್ಸ್ ಕೆಳಗೆ ತರಬೇಕೆಂಬ ಉದ್ದೇಶವು ಸರ್ಕಾರಕ್ಕೆ ಇದೆ. ಹೋಟೆಲುಗಳಲ್ಲಿ ಹಾಗೂ ಕೆಲವು ಮಂದಿರಗಳಲ್ಲಿ ಪ್ರದರ್ಶನ ಮಾಡುವಂಥ ಚಿತ್ರಗಳಿಗೆ ಕಡಿವಾಣ ಹಾಕುವಂಥ ನಿರ್ಣಯ ತೆಗೆದುಕೊಂಡಿದ್ದೇವೆ. ಅಶ್ಲೀಲ ಚಿತ್ರಗಳ ಹಾವಳಿ ಇತ್ತೀಚೆಗೆ ಹೆಚ್ಚಾಗಿದೆ. ಮಲೆಯಾಳಂನಲ್ಲಿ ಇಂಥ ಚಿತ್ರಗಳು ಜಾಸ್ತಿ ಬರುತ್ತವೆ. ಇವುಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂಬ ದೃಷ್ಟಿಯಿಂದ ಮುಂದಿನವಾರ ಒಂದು ಸಭೆಯನ್ನು ಕರೆದಿದ್ದೇನೆ. ಸಭೆಯಲ್ಲಿ ತೀರ್ಮಾನ ತೆಗೆದುಕೊಂಡು. ಈ ಚಿತ್ರಗಳನ್ನು ತಡೆಗಟ್ಟುವುದಕ್ಕೆ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು. ಡೆಲ್ಲಿ ನಗರದಲ್ಲಿ ಈ ಚಿತ್ರಗಳ ಬಗ್ಗೆ ದೊಡ್ಡದಾಗಿ ಹೋರಾಟವೇ ನಡೆಯುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಅಶ್ಲೀಲ ಎಂದರೆ ಏನು? ತಮಗೆ ಅದರ ಬಗ್ಗೆ ಗೊತ್ತಿದೆಯೆ ಹೇಗೆ?

ಅಧ್ಯಕ್ಷರು.—ತೀರಾ ತಡವಾಗಿ ಏತಕ್ಕೆ ತಿಳಿದುಕೊಳ್ಳುತ್ತೀರಿ?

ಶ್ರೀ ಕೆ.ಹೆಚ್, ರಂಗನಾಥ್.—I am supposed to be a student. ಮನುಷ್ಯನಾಗಿ ತಿಳಿದುಕೊಳ್ಳುವುದು ಇದ್ದೇ ಇರುತ್ತದೆ. ಅವರು ಹೇಳಿದ್ದರಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಗುಣಮಟ್ಟದ ಟ್ಯಾಗ್ ತೆಗೆದುಹಾಕಿದ್ದೀರಿ. ಇದರ ಬಗ್ಗೆ ಸ್ಪಷ್ಟ ಪಡಿಸಬೇಕು. ಶೀಲ, ಅಶ್ಲೀಲ ಒಳ್ಳೆಯ ಪದ ಪ್ರಯೋಗ ಇವುಗಳ precise definition ಏನು? ಚಲನ ಚಿತ್ರಕ್ಕೆ ಸಂಬಂಧಪಟ್ಟಂತೆ, ಇದರ ಬಗ್ಗೆ ಡೆಫನೀಷನ್ಸ್ ಹೇಳಲಿ?

ಶ್ರೀ ಎಂ. ರಘುಪತಿ.—ಸೆನ್‌ಸಾರ್ ಆದಮೇಲೆ, ಕೆಲವರು ತೆಗೆದುಹಾಕಿದಂಥ ನಗ್ನ ಚಿತ್ರಗಳನ್ನು ಸೇರಿಸಿಕೊಂಡು ತೋರಿಸುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್.—ನಮಗೆ ಕೆಲ ಕೆಲವು ವಿಚಾರ ಗೊತ್ತಿದೆ. ಅವರಿಗೆ ಗೊತ್ತಿಲ್ಲ, ಆದ್ದರಿಂದ ಕುತೂಹಲ ಜಾಸ್ತಿ.

ಶ್ರೀ ಪಿ. ರಾಂದೇವ್ —ಸಭ್ಯತೆ ಅಸಭ್ಯತೆ ಪದದ ಒಳಕೆ ಹೇಗೆ ಇದೆಯೋ? ಹಾಗೆ ಶೀಲವನ್ನು ಕೆಡಿಸತಕ್ಕಂಥದ್ದಕ್ಕೂ ಅಶ್ಲೀಲ ಎಂದು ಕರೆಯುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಯಾವ ಅಳತೆಗೋಲನ್ನು ಇಟ್ಟುಕೊಂಡು ಇಂಥ ಚಿತ್ರಗಳನ್ನು ನಿರ್ಬಂಧ ಮಾಡುತ್ತೀರಿ?

ಶ್ರೀ ಎಂ. ರಘುಪತಿ.—ಸೆನ್ಸಾರ್‌ರವರು ಪ್ರದರ್ಶನಕ್ಕೆ ಅರ್ಹವಲ್ಲದ ಕೆಲವು ಭಾಗಗಳನ್ನು ಚಿತ್ರಗಳಿಂದ ತೆಗೆದುಹಾಕಿರುತ್ತಾರೆ. ಅಂಥ ಚಿತ್ರಗಳನ್ನು ಪ್ರದರ್ಶನಕ್ಕೆ ಬಿಡುವುದಕ್ಕೆ ಮುಂಚೆ ತೆಗೆದು ಹಾಕಿದಂಥ ಭಾಗಗಳನ್ನು ಮತ್ತೆ ಸೇರಿಸಿ ಪ್ರದರ್ಶನಕ್ಕೆ ಬಿಡುಗಡೆ ಮಾಡುತ್ತಾರೆ. ಇಂಥ ಚಿತ್ರಗಳನ್ನು ಪೋಲೀಸ್ ಇಲಾಖೆ, ಕಾನೂನು ಇಲಾಖೆಯೊಂದಿಗೆ ವ್ಯವಹಾರ ಮಾಡಿ ಆಜ್ಞೆ ಜಾರಿಗೆ ತರಬೇಕೆಂಬುದು

ಸರ್ಕಾರದ ಪರಿಶೀಲನೆಯಲ್ಲಿದೆ, ಇಂಥ ಚಿತ್ರಗಳ ಬಗ್ಗೆ ಮತ್ತು ಪೋಸ್ಟರುಗಳ ಬಗ್ಗೆ ನಿಲ್ಲಿಸಬೇಕೆಂದು ದೇಶಾದ್ಯಂತ ಹೋರಾಟ ನಡೆಯುತ್ತಿದೆ. ಚಲನ ಚಿತ್ರದ ಗುಣಮಟ್ಟವನ್ನು ಏರಿಸುವುದಕ್ಕೋಸ್ಕರ ಹಾಗೂ ಅದರ ಬೆಳವಣಿಗೆ ಬಗ್ಗೆ ಚಿಂತನೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿಯೂ. ವಾರ್ತಾಮಂತ್ರಿಯವರು ಉಪಾಧ್ಯಕ್ಷರಾಗಿಯೂ ಇರುತ್ತಾರೆ. ಉತ್ತಮವಾದಂಥ ನಿರ್ದೇಶಕರು, ನಟರು ಹಾಗೂ ಈ ಒಂದು ಉದ್ಯಮದಲ್ಲಿ ಹೆಚ್ಚಿನ ತರಬೇತಿಯನ್ನು ಹೊಂದಿದವರನ್ನು ಸದಸ್ಯರುಗಳನ್ನಾಗಿ ಮಾಡುತ್ತೇವೆ.

ಶ್ರೀ ಬಿ. ಶಿವಣ್ಣ.—ಎಲ್ಲಾ ಸಮಿತಿಗಳಿಗೂ ಮುಖ್ಯ ಮಂತ್ರಿಗಳನ್ನೇ ಅಧ್ಯಕ್ಷರಾಗಿ ಮಾಡುತ್ತಾರೆ ಇದಕ್ಕೆ ಕಾರಣ ಏನು?

ಶ್ರೀ ಎಂ. ರಘುಪತಿ.—ಹಣಕಾಸಿನ ವಿಚಾರ ಇದೆ. ಗೃಹ ಖಾತೆಗೆ ಸಂಬಂಧಪಟ್ಟ ವಿಷಯ ಇದೆ. ಜೊತೆಗೆ ವಾರ್ತಾ ಇಲಾಖೆಗೆ ಸಂಬಂಧಪಟ್ಟದ್ದು ಇರುವುದರಿಂದ ವಾರ್ತಾ ಇಲಾಖಾ ಮಂತ್ರಿಗಳು ಇರುತ್ತಾರೆ. ಸದಸ್ಯರುಗಳ ಹೆಸರುಗಳನ್ನು ಬೇಗ ಪ್ರಕಟಣೆ ಮಾಡುತ್ತೇವೆ.

ಇನ್ನು ವರ್ಕಿಂಗ್ ಜರ್ನಲಿಸ್ಟ್ ಅಸೋಷಿಯಯನ್ ಮತ್ತು ರಿಪೋರ್ಟರ್ಸ್ ಗಿಲ್ಡ್‌ನವರ ಸಭೆಯನ್ನು ಕರೆದು ಅವರಿಗೆ ಇರತಕ್ಕ ಕುಂದು ಕೊರತೆಗಳು ಏನು? ಅವುಗಳ ನಿವಾರಣೆಗೆ ಏನು ಮಾಡಬೇಕು? ಅವರು ಕೆಲಸ ಮಾಡತಕ್ಕ ವ್ಯಾಪ್ತಿ ಏನು ಎನ್ನುವುದರ ಬಗ್ಗೆ ಸಮಾಲೋಚನೆ ಮಾಡಿದ್ದೇನೆ. ನಮ್ಮ ಸರ್ಕಾರದ ನೀತಿ ಏನೆಂದರೆ, ಪತ್ರಿಕೆಗಳು ಸಂಪೂರ್ಣವಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು. ದೇಶದ ಅಭ್ಯುದಯಕ್ಕಾಗಿ, ಜನಾಭಿಪ್ರಾಯ ಶೇಖರಣೆಗಾಗಿ, ಜನಾಭಿಪ್ರಾಯವನ್ನು ರೂಢಿಸುವುದಕ್ಕಾಗಿ ಕೆಲಸಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ನಾಲ್ಕನೆಯ ಆಧಾರ ಸ್ತಂಭ ಇದ್ದಂತೆ. ಪತ್ರಿಕೆಗಳಿಗೆ ಕುಂಠಿತವಾಗದಂತೆ ಕಾರ್ಯಾಚರಣೆ ಮಾಡಬೇಕೆಂದು ಸಮಾಲೋಚನೆ ಮಾಡಿ ಮಾಡಿದ್ದೇವೆ. ಇನ್ನು ಪತ್ರಿಕಾಭವನ ಮಾಡಬೇಕೆಂದು ಹೇಳಿದಾಗ ಮೂರು ಸ್ಥಳಗಳನ್ನು ತೋರಿಸಿಕೊಂಡು ಬಂದಿದ್ದೇವೆ. ಅದರಲ್ಲಿ ಯಾವುದಾದರೂ ಒಂದನ್ನು ಕೊಡುತ್ತೇವೆಂದು ಹೇಳಿದ್ದೇವೆ. ಮಿಲ್ಲರ್ ಟ್ಯಾಂಕ್ ಹತ್ತಿರ ಒಂದು ಸ್ಥಳ ಇದೆ, ಅದನ್ನು ಯಾರಿಗೂ ಕೊಟ್ಟಿಲ್ಲ. ಈಗ ಇರತಕ್ಕ ಪತ್ರಿಕಾ ಕರ್ತರ ಸಂಘ ಏನಿದೆ, ತಾಲ್ಲೂಕು ಕಛೇರಿ ಬಳಿ ಇದೆ, ಅವರು ವಿಧಾನ ಸೌಧದ ಹತ್ತಿರ ಕೊಡಿ ಎಂದು ಹೇಳಿದ್ದಾರೆ. ಈಗ ಮಿಲ್ಲರ್ ಟ್ಯಾಂಕ್ ಹತ್ತಿರ ಇರತಕ್ಕ ಸ್ಥಳ ಕೊಡಿಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಸಂಬಂಧಪಟ್ಟ ಮಂತ್ರಿಗಳಿಗೂ ಬರೆದು ನಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಗಮನಹರಿಸಿದ್ದೇನೆ. ವರ್ಕಿಂಗ್ ಜರ್ನಲಿಸ್ಟ್ ಅಸೋಷಿಯೇಷನ್ ಅವರದು ಒಂದು, ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿ ಇದೆ. ೧೦ ಎಕರೆ ಜಮೀನು ಕೊಡಬೇಕೆಂದು ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಒಂದು ಸಭೆಯನ್ನು ವರ್ಕಿಂಗ್ ಜರ್ನಲಿಸ್ಟ್ ಅಸೋಷಿಯೇಷನ್ ಅವರು ನಡೆಸಿರುವುದರಿಂದ, ೧೦ ಎಕರೆ ಜಮೀನು ಕೊಟ್ಟು ಬಿಡಿಎ ಮೂಲಕ ಸೈಟುಗಳು ಮಾಡಿ, ಹಂಚತಕ್ಕ ವ್ಯವಸ್ಥೆ ಮಾಡಬೇಕು. ಅವರೆಲ್ಲರಿಗೂ ಸೈಟುಗಳು ಕೊಡಬೇಕು, ಎಂದು ಇದೆ. ಪ್ರಜಾಪ್ರಭುತ್ವದಲ್ಲಿ ಆಡಳಿತ ಅರ್ಥಪೂರ್ಣವಾಗಿ ಇರಬೇಕಾದರೆ ಪತ್ರಿಕೆಗಳ ಪಾತ್ರ ಬಹಳ ದೊಡ್ಡದು. ಈ ಕಾರಣದಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ಯಾವ ವಿಧದಲ್ಲೂ ಅಡ್ಡಿ ಆತಂಕ ಮಾಡಬಾರದೆಂದು ಇದೆ. ಪತ್ರಿಕೆಗಳ ಮೇಲೆ ಧಾಳಿ ನಡೆದಿರತಕ್ಕದ್ದು ಇದೆ. ಮೊನ್ನೆ ಗುಲ್ಬರ್ಗದಲ್ಲಿ ನಡೆದಿದೆ, ಮಂಡ್ಯದಲ್ಲಿ ನಡೆದಿದೆ, ಸೌತ್ ಕೆನರಾದಲ್ಲಿ ನಡೆದಿದೆ. ನಾನು ಮಂತ್ರಿ ಆದಮೇಲೂ ನಡೆದಿದೆ ಇಲ್ಲ ಎಂದು ಹೇಳುವುದಿಲ್ಲ. ಈ ಎರಡು ಸ್ಥಳಗಳಲ್ಲಿ ನಮ್ಮ ಇಲಾಖೆಯ ಮೂಲಕ ತನಿಖೆ ಮಾಡಲಿಕ್ಕೆ ಪ್ರಯತ್ನ ಮಾಡಿದೆ. ಅದು ನನಗೆ ಅಷ್ಟು ಫಲಕಾರಿಯಾಗಿ ಕಾಣಿಸಲಿಲ್ಲ. ಆದ್ದರಿಂದ, ಇದಕ್ಕೂ ಒಂದು ಸಮಿತಿ ಮಾಡಿದ್ದೇವೆ. ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುವ ಸಲುವಾಗಿ ನಾವು ಇದನ್ನು ಮಾಡಬೇಕಾಗುತ್ತದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಹೆಚ್ಚಿನ ಸಹಾಯ ಒದಗಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಆ ಬಗ್ಗೆ ಒಂದು ಸಮಿತಿ ರಚನೆ ಮಾಡಿದ್ದೇವೆ. ಅದಕ್ಕೆ ಮುಖ್ಯ ಮಂತ್ರಿಗಳನ್ನು ಅಧ್ಯಕ್ಷರಾಗಿಯೂ ವಾರ್ತಾ ಸಚಿವರನ್ನು ಉಪಾಧ್ಯಕ್ಷರಾಗಿಯೂ ಮಾಡಿ ಈ ಸಮಿತಿ ರಚನೆ ಮಾಡಲಾಗಿದೆ, ಇದರಲ್ಲಿ ಹಲವಾರು ನುರಿತ ಪತ್ರಿಕೋದ್ಯಮಿಗಳನ್ನು ಸೇರಿಸಿಕೊಂಡು ನಿರ್ಣಯ ತೆಗೆದುಕೊಂಡಿದ್ದೇವೆ. ಇನ್ನು ಪತ್ರಿಕಾ ಕರ್ತರಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ೫೦ ಪರ್ಸೆಂಟ್ ರಿಯಾಯಿತಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೆವು. ಅದರ ಪ್ರಕಾರ ಕೆಎಸ್‌ಆರ್‌ಟಿಸಿ ಅವರ ಜೊತೆ ಮಾತನಾಡಿ ೭೫ ರೂಪಾಯಿಗಳನ್ನು ನಾವು ಕೊಡುವುದು, ಇನ್ನು ೭೫ ರೂಪಾಯಿಗಳನ್ನು ಯಾರು ಪಾಸ್ ಕೇಳುತ್ತಾರೆ ಅವರು ಕೊಡುವುದು ಎಂದು ಈ ರೀತಿ ಹೇಳಿದ್ದೇವೆ. ಮತ್ತು ಈ

ಒಂದು ಕಾರ್ಯನೀತಿಯನ್ನು ನಾವು ಅಳವಡಿಸಿದ್ದೇವೆ. ಇನ್ನೊಂದು ವಾರದಲ್ಲಿ ಎಲ್ಲರಿಗೂ ಪಾಸ್ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಈಗಾಗಲೇ ಬಿಟಿಎಸ್ ಬಸ್ಸುಗಳಲ್ಲಿ ಸಂಪೂರ್ಣ ರಿಯಾಯಿತಿ ಇದೆ, ನಾಮಿನಲ್ ರೇಟು ೧೦ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಆಗ ಅವರು ಎಷ್ಟು ಸಾರಿ ಬೇಕಾದರೂ ಓಡಾಡಬಹುದು. ಇನ್ನು ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಪ್ರವಾಸ ಹೋಗಿ, ಆ ರಾಜ್ಯದಲ್ಲಿ ಪತ್ರಿಕೆಗಳು ಯಾವರೀತಿ ಕೆಲಸ ಮಾಡುತ್ತವೆ, ಅಲ್ಲಿ ಪತ್ರಿಕೆಗಳ ಸ್ಥಾನ ಯಾವ ರೀತಿ ಇದೆ, ಎಂದು ತಿಳಿದುಕೊಳ್ಳುವುದಕ್ಕೆ ಆಗಾಗ ಕಂಡಕ್ಟೆಡ್ ಟ್ರಿಪ್ಸ್ ಕೂಡ ಮಾಡಬೇಕೆಂದು ಮಾಡಿದ್ದೇವೆ. ವರ್ಷಕ್ಕೆ ಎರಡು ಕಂಡಕ್ಟೆಡ್ ಟ್ರಿಪ್ಸ್ ಮಾಡಬೇಕೆಂದು ಮಾಡಿದ್ದೇವೆ. ಆ ವಿಚಾರದಲ್ಲಿ ವರ್ಕಿಂಗ್ ಜರ್ನಲಿಸ್ಟ್ ಅಸೋಸಿಯೇಷನ್‌ಗೆ ಅದಕ್ಕೆ ಸಂಬಂಧಪಟ್ಟ ಅಸೋಸಿಯೇಷನ್‌ಗೆ ಪತ್ರವನ್ನು ಬರೆದಿದ್ದೇವೆ. ಇನ್ನು ಸರ್ಕಾರದಿಂದ ಎರಡು ಜನ ನಾಮಕರಣ ಮಾಡತಕ್ಕದ್ದು ತೆಗೆದು ಹಾಕಿ ಸರ್ಕಾರದ ಹಸ್ತಕ್ಷೇಪ ಇಲ್ಲದಂತೆ ಮಾಡಿದ್ದೇವೆ. ಸಂಪೂರ್ಣವಾಗಿ ಅವರೇ ಇದನ್ನು ನಡೆಸಿಕೊಳ್ಳುವಂತೆ ಮಾಡಿದ್ದೇವೆ. ಜಿಲ್ಲಾಮಟ್ಟದಲ್ಲಿ ಸಣ್ಣ ಸಣ್ಣ ಪತ್ರಿಕೆಗಳು, ಸಭೆ ನಡೆಸಿದರೂ, ಮಂತ್ರಿಗಳು ಹೋದರೂ, ಯಾರು ಹೋದರೂ, ಪ್ರೆಸ್ ಕಾನ್ಫರೆನ್ಸ್‌ನಲ್ಲಿ ವಿಷಯ ಸಂಗ್ರಹಣೆಗೆ ಸುಲಭವಾಗುವ ಹಾಗೆ ಅಕ್ರೆಡಿಷನ್ ಪಾಲಿಸಿಯನ್ನು ಸಡಿಲಗೊಳಿಸಿದ್ದೇವೆ. ಜಿಲ್ಲಾಮಟ್ಟದ ಗ್ರಾಮಾಂತರ ಪ್ರದೇಶದ ಪತ್ರಿಕೆಗಳಿಗೂ ಅವಕಾಶ ಸಿಕ್ಕಲಿ ಎಂದು ಈ ಅವಕಾಶ ಒದಗಿಸಿದ್ದೇವೆ. ಇನ್ನು ಪ್ರೆಸ್ ಸೆಕ್ರೆಟರಿ, ವಿಚಾರ ಎಂದರೆ, ಕಾರಣಾಂತರದಿಂದ ಈ ಕೆಲಸ ಕುಂಠಿತವಾಗಿತ್ತು. ಅಧ್ಯಕ್ಷರ ಅಕಾಲ ಮರಣದಿಂದ ಆ ಸ್ಥಾನ ತೆರವು ಆಯಿತು. ಅದಕ್ಕೆ ಕೆಲವು ನಿಬಂಧನೆ ಹಾಕಿದ್ದಾರೆ, ಅದರ ಪ್ರಕಾರ ಪಟ್ಟಿ ತರಿಸಿಕೊಳ್ಳಲಿಕ್ಕೆ ಸಂಪರ್ಕ ಮಾಡುತ್ತಿದ್ದೇನೆ. ಅದನ್ನು ಈ ಸದನ ಮುಗಿಯುವುದರೊಳಗೆ ಭರ್ತಿ ಮಾಡಬೇಕೆಂದಿದ್ದೇನೆ. ವರ್ಕಿಂಗ್ ಜರ್ನಲಿಸ್ಟ್ ಅಸೋಸಿಯೇಷನ್ ಅವರಿಂದ ಒಂದು ವಾರದೊಳಗೆ ಬಂದರೆ ಈ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಅನೌನ್ಸ್ ಮಾಡುತ್ತೇನೆ. ಸಣ್ಣ ಪತ್ರಿಕೆಗಳಿಗೂ ಕೂಡ ನಮ್ಮ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಈ ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಜಾಹಿರಾತುಗಳನ್ನು ಜಾಸ್ತಿ ಕೊಟ್ಟಿದ್ದೇವೆ. ಮಾಮೂಲು ಕೊಡುವುದಕ್ಕಿಂಥ ಜಾಸ್ತಿ ಕೊಟ್ಟಿದ್ದೇವೆ. ಅದರಲ್ಲಿ ಕೆಲವು ತಪ್ಪುಗಳು ಇವೆ, ಲೋಪದೋಷಗಳು ಇವೆ, ಇಲ್ಲ ಎಂದು ಹೇಳುವುದಿಲ್ಲ. ಅದನ್ನು ಸರಿ ಮಾಡಲಿಕ್ಕೆ ಒಂದು ಸಮಿತಿ ರಚನೆ ಮಾಡಿದ್ದೇವೆ......

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಪತ್ರಿಕೆಗಳಿಗೆ ಜಾಹಿರಾತು ಕೊಡುವ ಜೊತೆಗೆ ಮಾಮೂಲು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಅದನ್ನು ನಾನು ಅವರಿಗೂ ಕೊಡುವುದಿಲ್ಲ, ಅವರು ನನಗೂ ಕೊಡುವುದಿಲ್ಲ.

ಒಬ್ಬ ಸದಸ್ಯರು.—ಅಧ್ಯಕ್ಷರೆ, ಎಷ್ಟು ಸಮಿತಿಗಳನ್ನು ಇವರು ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ರಘುಪತಿ.—ನಾನು ಆಗಲೇ ಎರಡು ಸಮಿತಿಗಳು ಎಂದು ಹೇಳಿದೆ. ಸಣ್ಣ ಪತ್ರಿಕೆಗಳ ಬೆಳವಣಿಗೆ ಬಗ್ಗೆ, ಕಾರ್ಯಾಚರಣೆಯ ಬಗ್ಗೆ, ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು, ಸಣ್ಣ ಪತ್ರಿಕೆಗಳಿಗೆ ಸಮಿತಿ ರಚನೆ ಮಾಡಿದ್ದೇವೆ. ಆ ಸಮಿತಿಗೆ ಇಷ್ಟು ದಿವಸ ಮಂತ್ರಿಗಳು ಇದ್ದರು, ಈಗ ಮಂತ್ರಿಗಳು ಬೇಡ ಖಾಸಗಿಯವರನ್ನು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಆ ಸಮಿತಿಯನ್ನು ಮೂರು ನಾಲ್ಕು ದಿನಗಳಲ್ಲಿ ಪ್ರಕಟಣೆ ಮಾಡುತ್ತೇವೆ. ಅದರ ಅಧ್ಯಕ್ಷರನ್ನು ಮಾಡುವ ಬಗ್ಗೆ ಅವರ ಜೊತೆ ಸಂಪರ್ಕ ಮಾಡುತ್ತಿದ್ದೇವೆ. ಅವರು ಒಪ್ಪಿಗೆ ಕೊಟ್ಟ ತಕ್ಷಣ ಮಾಡುತ್ತೇವೆ. ಇನ್ನು ಪತ್ರಿಕೆಗಳ ಜಾಹಿರಾತು ನೀತಿಯ ಬಗ್ಗೆ ಹೇಳಬೇಕಾದರೆ, ಹಿಂದೆ ಏನಿತ್ತು ಅದನ್ನೇ ಮುಂದುವರಿಸುತ್ತಿದ್ದೇವೆ, ಈ ಇಲಾಖೆಯ ಒಳ ಆಡಳಿತದಲ್ಲಿ ಹೆಚ್ಚಿನ ಬದಲಾವಣೆ ತರಲಿಕ್ಕೆ ಹೋಗಿಲ್ಲ. ೯ ತಿಂಗಳು ಕಾಲ ಕಾದು ನೋಡೋಣ, ಚೆನ್ನಾಗಿ ಪರೀಕ್ಷೆ ಮಾಡಿ ಯಾವ ತರಹ ಕೆಲಸ ನಡೆಯುತ್ತದೆ ನೋಡೋಣ. ಕೆಲಸವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡ ಮೇಲೆ ಏನಾದರೂ ಬದಲಾವಣೆ ಮಾಡಬೇಕಾಗುತ್ತದೆಂದು ನಾನು ಯಾವುದೇ ಬದಲಾವಣೆ ಮಾಡಲಿಕ್ಕೆ ಹೋಗಿಲ್ಲ. ನನ್ನ ಇಲಾಖೆಯಲ್ಲಿ ಒಂದೆರಡು ಟ್ರಾನ್ಸ್‌ಫರ್‌ಗಳು ಅದು ಅಧಿಕಾರಿ ಮಟ್ಟದಲ್ಲಿ ಆಗಿರಬಹುದು. ನಾನು ಯಾವುದೂ ಟ್ರಾನ್ಸ್‌ಫರ್ ಮಾಡಿಲ್ಲ. ೯ ತಿಂಗಳು ಕಾಲ ಅವಕಾಶ ಕೊಟ್ಟು ನೋಡೋಣ ಎಂದು ಆ ನೀತಿಯನ್ನು ಇಟ್ಟುಕೊಂಡು ಮಾಡಿದ್ದೇನೆ.

ಒಬ್ಬ ಸದಸ್ಯರು.—ಒಂಭತ್ತು ತಿಂಗಳ ಗಡುವು ಏತಕ್ಕೆ.

ಶ್ರೀ ಎಂ. ರಘುಪತಿ.—ಒಂದು ವರ್ಷ ಬೇಕಾದರೆ ಮಾಡೋಣ. ನಮ್ಮ ಇಲಾಖೆಯಲ್ಲಿ ಡ್ರಾಮಾ ಡಿವಿಜನ್ ಎಂದು ಮಾಡಿ ಇದರಲ್ಲಿ ನಾಟಕ ತೋರಿಸುವ ಒಂದು ಕಾರ್ಯಕ್ರಮ ಏರ್ಪಾಡು ಮಾಡಿದ್ದೇವೆ. ಇದು ಹಳ್ಳಿಗಾಡಿನಲ್ಲಿ ಜನರಿಗೆ ಕೇವಲ ಮನರಂಜನೆಯನ್ನು ಕೊಡುವ ಉದ್ದೇಶದಿಂದ ಮಾತ್ರವೇ ಅಲ್ಲ, ನಮ್ಮ ಸರ್ಕಾರದ ಕಾರ್ಯಕ್ರಮಗಳು ಏನು, ಜನತೆಯ ಶೋಷಣೆ ಏನು ಆಗುತ್ತಿದೆ ಅದನ್ನು ಬಯಲು ಯಾವರೀತಿ ಮಾಡಬೇಕು ಎಂಬುದನ್ನು ಈ ಒಂದು ನಾಟಕದ ಮುಖಾಂತರ ಜನತೆಗೆ ತಿಳಿವಳಿಕೆ ಕೊಡಬೇಕೆಂದು ಒಂದು ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈಗ ಇದರ ಕೆಲಸ ಪ್ರಾರಂಭವಾಗಿದೆ.

ಇನ್ನು ಹೊಸದಾಗಿ, ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದು ಏನೆಂದರೆ, ೧೦-೧೨ ಹಳ್ಳಿಗಳನ್ನು ಸೇರಿಸಿ ರೈತರಿಗೆ ಸಂಬಂಧಪಟ್ಟಂತೆ, ಬಡವರಿಗೆ ಸಂಬಂಧಪಟ್ಟಂತೆ ಸರ್ಕಾರದ ವತಿಯಿಂದ ಇವರಿಗೆ ಯಾವ ಯಾವ ಸೌಲಭ್ಯಗಳು ಸಿಕ್ಕುತ್ತವೆ. ಗ್ರಾಮಾಭಿವೃದ್ಧಿ ಯಾವರೀತಿ ಮಾಡಲು ಸಾಧ್ಯ, ಬ್ಯಾಂಕ್‌ಗಳ ಮುಖಾಂತರ ಏನೇನು ಸೌಲಭ್ಯಗಳು ಲಭಿಸುತ್ತವೆ ಎಂಬುದನ್ನು ತಿಳಿಸುವುದಕ್ಕೋಸ್ಕರ ತೀವ್ರ ಪ್ರಚಾರ ಆಂಧೋಳನ ಎಂದು ಮಾಡುತ್ತಿದ್ದೇವೆ. ಪ್ರಪ್ರಥಮವಾಗಿ ಕೋಲಾರ ಜಿಲ್ಲಾ ಪತ್ರಕರ್ತರು ಈ ಒಂದು ಪ್ರಯೋಗವನ್ನು ಮಾಡಿದರು, ಅದು ಫಲಪ್ರದ ವಾಯಿತು. ಈ ಸಭೆಗೆ ಜಿಲ್ಲಾ ಸಮಸ್ಯೆಗಳ ಬಗ್ಗೆ ಪತ್ರಿಕಾಕರ್ತರು ಶಾಸಕರನ್ನೂ ಕರೆದು ಅಲ್ಲಿ ಗ್ರಾಮಿಣಾ ಅಭಿವೃದ್ಧಿಯನ್ನು ಯಾವರೀತಿ ಮಾಡಬೇಕು, ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಏನೇನು? ಎಂಬುದನ್ನು ಸಾರ್ವಜನಿಕವಾಗಿ ಚರ್ಚೆ ಮಾಡುತ್ತಾರೆ. ಇಂಥ ಒಂದು ಪ್ರಯೋಗ ಕೋಲಾರ ಜಿಲ್ಲೆಯಲ್ಲಿ ಯಶಸ್ವಿಯಾದ ಮೇಲೆ ಈಗ ತುಮಕೂರು ಜಿಲ್ಲೆಯಲ್ಲಿ ಮಾಡಿದ್ದೇವೆ. ಒಂದು ವರ್ಷಕಾಲ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಮಾಡುತ್ತೇವೆ. ಪ್ರತಿಯೊಬ್ಬ ಸ್ಥಳೀಯ ಶಾಸಕರೂ ಈ ಸಭೆಯಲ್ಲಿ ಭಾಗವಹಿಸುವಂತಿರಬೇಕೆಂಬ ದೃಷ್ಟಿಯಿಂದ ಜಿಲ್ಲಾ ಸಮಸ್ಯೆಗಳು ಮತ್ತು ಶಾಸಕರು ಎಂಬ ವಿಚಾರ ಸಂಕಿರ್ಣವನ್ನು ಮಾಡಿದ್ದೇವೆ ಹಿಂದೆ ಸಾಕ್ಷ್ಯ ಚಿತ್ರಗಳನ್ನು ಯಾವುದನ್ನೂ ಮಾಡಿಲ್ಲ. ನಾನು ಬಂದಮೇಲೆ ಶ್ರೀ ದೇವರಾಜ ಅರಸರ ಬಗ್ಗೆ ಮತ್ತು ಜನರಲ್ ಕಾರಿಯಪ್ಪನವರ ಬಗ್ಗೆ ಒಂದೊಂದು ಸಾಕ್ಷ್ಯ ಚಿತ್ರಗಳನ್ನು ತಯಾರುಮಾಡಿದ್ದೇವೆ. ಮುಂದೆ ಕೆಂಗಲ್ ಹನುಮಂತಯ್ಯನವರ ಬಗ್ಗೆ, ಶಿವರಾಮ ಕಾರಂತರ ಬಗ್ಗೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಬಗ್ಗೆ ಒಂದೊಂದು ಸಾಕ್ಷ್ಯ ಚಿತ್ರಗಳನ್ನು ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿ ಚೈಲ್ಡ್ ಲೇಬರ್ ಎಕ್ಸ್‌ಪ್ಲಾಯ್‌ಟೇಷನ್ ಬಗ್ಗೆ ಬಾಂಡೆಡ್ ಲೇಬರರ್ಸ್ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತೆಗೆದು ಕೇವಲ ಚಿತ್ರಮಂದಿರಗಳಲ್ಲೇ ಅಲ್ಲ ಹಳ್ಳಿಗಾಡಿನಲ್ಲೂ ತೋರಿಸುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಪ್ರತಿ ಶನಿವಾರ ಮತ್ತು ಭಾನುವಾರದ ದಿವಸ ಬಾದಾಮಿಯ ಚಿತ್ರಮಂದಿರದಲ್ಲಿ ತೋರಿಸುವ ವ್ಯವಸ್ಥೆ ಮಾಡುತ್ತೇವೆ. ಇದಕ್ಕೆ ಯಾವುದೇ ಪ್ರವೇಶ ಶುಲ್ಕ ಇಲ್ಲ. ನ್ಯಾಷನಲ್ ಆರ್ಕೀವ್ಸ್‌ನವರು ತೋರಿಸುವಂತೆ ನಾವೂ ಪ್ರದರ್ಶನಗಳನ್ನು ತೋರಿಸಬೇಕೆಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ದೇವರಾಜ ಅರಸರ ಬಗ್ಗೆ, ಜನರಲ್ ಕಾರಿಯಪ್ಪನವರ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತೆಗೆದಿರುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ನಮ್ಮ ಕರ್ನಾಟಕದ ಜನ ಜೀವನದ ಬಗ್ಗೆ, ಕಲೆ ಸಂಸ್ಕೃತಿಯ ಬಗ್ಗೆ ಚಿತ್ರಗಳನ್ನು ತಯಾರಿಸಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಹರಿಜನ ಗಿರಿಜನರ ಮೇಲೆ ಆಗುತ್ತಿರುವ ಅನ್ಯಾಯ, ಅತ್ಯಾಚಾರಗಳ ಬಗ್ಗೆ, ವರದಕ್ಷಿಣೆಯ ಪಿಡುಗಿನಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಸಾಕ್ಷ್ಯ ಚಿತ್ರವನ್ನು ತಯಾರು ಮಾಡಿ.

ಶ್ರೀ ಎಂ. ರಘುಪತಿ.—ಜೈಲ್ ರಿಫಾರಂಸ್ ಬಗ್ಗೆ......

ಶ್ರೀ ಮಾಣಿಕ್‌ರಾವ್ ಪಾಟೀಲ್.—ಕಾರ್ಖಾನೆಗಳಲ್ಲಿ ಕಾರ್ಮಿಕರು ಮುಷ್ಕರಗಳನ್ನು ಮಾಡುತ್ತಿರುವುದು, ಕಾರ್ಖಾನೆಗಳನ್ನು ಸುಡುವುದು ಇಂಥಾದ್ದರ ಬಗ್ಗೆ ನೀವು ಏನಾದರೂ ಸಾಕ್ಷ್ಯ ಚಿತ್ರಗಳನ್ನು ತೆಗೆಯುವ ಉದ್ದೇಶ ಇದೆಯೋ ?

ಶ್ರೀ ಎಂ. ರಘುಪತಿ.—ಅಥಾದ್ದು ಯಾವುದೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮಾನ್ಯ ಸದಸ್ಯರು ಕಾರ್ಮಿಕರ ಬಗ್ಗೆ ಮಾತನಾಡುತ್ತಿದ್ದಾರೆ. ಕಾರ್ಮಿಕರ ವಿಚಾರ, ಅವರ ಸಮಸ್ಯೆಗಳು ಏನು ಎಂಬುದೇ ಅವರಿಗೆ ಗೊತ್ತಿಲ್ಲ. ಅವರು ಏತಕ್ಕೆ ಸುಮ್ಮನೆ ಕಾರ್ಮಿಕರ ಬಗ್ಗೆ ಮಾತನಾಡುತ್ತಾರೆ ?

ಶ್ರೀ ಎಂ. ರಘುಪತಿ.—ಮಾನ್ಯ ಸಭಾಪತಿಯವರೆ, ಇನ್ನು ಟಿವಿ ಬಗ್ಗೆ ಹೇಳುವುದಾದರೆ ಇವತ್ತು ಟಿವಿಯ ಬಗ್ಗೆ, ಒಂದು ಪತ್ರಿಕೆಯಲ್ಲಿ ವ್ಯಾಪಕವಾಗಿ ವರದಿ ಬಂದಿದೆ. ದೂರದರ್ಶನ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಮುನಿರೆಡ್ಡಿ ಪಾಳ್ಯದಲ್ಲಿ ಒಂದು ಜಾಗವನ್ನು ಕೊಟ್ಟಿದ್ದೇವೆ ಆದರೆ ಮಿಲಿಟರಿಯವರು ಮಿಲಿಟರಿ ಏರಿಯಾದಲ್ಲೇ ೧೪ ಎಕರೆ ಜಾಗವನ್ನು ಕೊಡಬೇಕೆಂದು ಕೇಳಿದರು. ನಾವು ಹೆಚ್.ಎ.ಎಲ್. ಮತ್ತು ದೊಮ್ಮಲೂರು ಪಕ್ಕದಲ್ಲಿ ೧೪ ಎಕರೆ ಜಾಗವನ್ನು ಕೊಟ್ಟರೂ ಅವರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದರು. ನಾನು ಅಧಿಕಾರಕ್ಕೆ ಬಂದಮೇಲೆ ಆ ತಡೆಯಾಜ್ಞೆಯನ್ನು ತೆರವು ಮಾಡಿಸಿದೆ ಮತ್ತೆ ಅವರು ತಡೆಯಾಜ್ಞೆಯನ್ನು ತಂದರು. ಬೆಂಗಳೂರಿನಲ್ಲಿ ಇದರ ಬಗ್ಗೆ ತೀವ್ರ ಆಂಧೋಳನ ನಡೆಯುತ್ತಿದೆ ಎಂದು ಹೇಳಿದ ಮೇಲೆ ನಾಳೆ ೨೩ನೇ ತಾರೀಖು ಈ ಕೇಸು ಕೋರ್ಟಿನ ಮುಂದೆ ಬರುತ್ತಿದೆ. ಈಗಾಗಲೇ ಮಿಲಿಟರಿ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಮತ್ತು ದೂರ ದರ್ಶನ ಕೇಂದ್ರದ ಅಧಿಕಾರಿಗಳ ಜೊತೆ ನಾನು ೫–೬ ಸಭೆಗಳನ್ನು ನಡೆಸಿದ್ದೇನೆ. ಈ ತಿಂಗಳ ಕೊನೆಯೊಳಗಾಗಿ ಯಾವುದೂ ತೀರ್ಮಾನವಾಗದಿದ್ದರೆ ಮುಂದಿನ ತಿಂಗಳಲ್ಲಿ ನಾವು ಪರಿಶೀಲಿಸಿರತಕ್ಕ ೩ ಸ್ಥಳಗಳಲ್ಲಿ ಯಾವುದಾದರೊಂದನ್ನು ಕೊಡಿಸುತ್ತೇವೆಂದು ನಾನು ಮಿಲಿಟರಿಯವರಿಗೆ ಹೇಳಿದ್ದೇನೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಕಳೆದ ಎರಡು ದಿವಸದ ಹಿಂದೆ ದೂರದರ್ಶನ ಕೇಂದ್ರದ ಅಧಿಕಾರಿಗಳು ನನ್ನ ಹತ್ತಿರ ಬಂದು ನಾವು ಟೆಂಡರ್ ಕರೆಯಬೇಕೆಂದಿದ್ದೇವೆಂದು ಹೇಳಿದರು. ನಾನು ಈಗಾಗಲೇ ಮಿಲಿಟರಿ ಅಧಿಕಾರಿಗಳ ಜೊತೆ ಮಾತನಾಡಿದ್ದು ಅವರು ಒಪ್ಪಿಕೊಂಡಿರುವುದರಿಂದ ನೀವು ಟೆಂಡರ್ ಕರೆಯಬಹುದೆಂದು ಹೇಳಿದ್ದೇನೆ. ಇನ್ನು ಅಲ್ಲಿರತಕ್ಕ ಟ್ರಾನ್ಸ್‌ಮಿಟರ್‌ನ್ನು ಬೇರೆಯ ಕಡೆ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯುತ್ತಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದು ಸರಿಯಲ್ಲ. ನಾಳೆ ೨೨ನೇ ತಾರೀಖು ದೆಹಲಿಯಲ್ಲಿ ಕಾರ್ಮಿಕ ಖಾತೆ ಸಚಿವರ ಸಮ್ಮೇಳನ ಇದೆ. ಅಲ್ಲಿ ನಾನು ಕೇಂದ್ರದ ವಾರ್ತಾ ಸಚಿವರನ್ನು ಭೇಟಿ ಮಾಡುತ್ತೇನೆ. ಅಲ್ಲದೆ ದೆಹಲಿಯಲ್ಲೇ ಪಶ್ಚಿಮಘಟದ ಯೋಜನೆಯ ಬಗ್ಗೆ ಒಂದು ಸಭೆ ಇರುವುದರಿಂದ ಅಲ್ಲಿಗೆ ಮಾನ್ಯ ಮುಖ್ಯ ಮಂತ್ರಿಗಳೂ ಬರುತ್ತಾರೆ. ನಾವಿಬ್ಬರೂ ಅಲ್ಲಿ ಕೇಂದ್ರದ ವಾರ್ತಾ ಮಂತ್ರಿಗಳ ಮೇಲೆ ಒತ್ತಾಯ ತಂದು ಇಲ್ಲಿರತಕ್ಕ ಟ್ರಾನ್ಸ್‌ಮಿಟರ್‌ನ್ನು ಬೇರೆ ಕಡೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇವೆ. ಈಗಾಗಲೇ ವಿಶ್ವೇಶ್ವರಯ್ಯ ಕಟ್ಟಡದಲ್ಲಿ ದೂರದರ್ಶನ ಕೇಂದ್ರಕ್ಕಾಗಿ ೧೭ ಮತ್ತು ೨೧ನೇ ಅಂತಸ್ತುಗಳನ್ನು ಕೊಟ್ಟಿದ್ದೇವೆ. ಆದರೆ ನಮಗೆ ಒಂದಕ್ಕೊಂದು ಹೊಂದಿಕೊಂಡಿರುವಂಥ ಮಹಡಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ನಾನು ಮಂತ್ರಿಯಾದಮೇಲೆ ಏನೇನು ಕ್ರಮಗಳನ್ನು ಇದರ ಬಗ್ಗೆ ತೆಗೆದುಕೊಂಡಿದ್ದೇನೆ ಎನ್ನುವ ಬಗ್ಗೆ ಬರೆದಿರತಕ್ಕ ಎಲ್ಲಾ ಪತ್ರಗಳನ್ನೂ ಸಭೆಯ ಮುಂದಿಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾವು ಸರ್ವ ಪ್ರಯತ್ನಗಳನ್ನು ಮಾಡಿದ್ದೇವೆ. ನಮ್ಮ ಪ್ರಯತ್ನದಲ್ಲಿ ಯಾವುದೇ ವಿಧವಾದ ವಿಫಲತೆ ಕಂಡುಬಂದಿಲ್ಲ ನಾವು ವಿಶ್ವೇಶ್ವರಯ್ಯ ಕಟ್ಟಡದಲ್ಲಿ ಕೊಟ್ಟಿರತಕ್ಕಂಥ ರೂಮ್ ನಂಬರ್ ೧೦–೨೧ ಏನು ಕೊಟ್ಟಿದ್ದೇವೆ ಅದು ಕಂಟಿನ್ಯುಟಿ ಇಲ್ಲವೆಂದು ಕೇಂದ್ರ ಸರ್ಕಾರದವರು ತಿಳಿಸಿದ್ದರಿಂದ ೨೦–೨೧ನೇ ನಂಬರ್ ರೂಮ್‌ಗಳನ್ನು ಕೊಟ್ಟಿದ್ದೇವೆ. ೨೦–೨೧ನೇ ನಂಬರ್ ರೂಮ್‌ಗಳನ್ನು ಜುಲೈ ತಿಂಗಳಲ್ಲಿಯೇ ಕೊಟ್ಟಿದ್ದೇವೆ. ಈವತ್ತೂ ಕೂಡ ಕೇಂದ್ರದ ಮಂತ್ರಿಗಳಿಗೆ ಪತ್ರ ಬರೆದಿದ್ದೇವೆ. ನವೆಂಬರ್ ತಿಂಗಳಲ್ಲಿ ಟಿವಿ ಪ್ರದರ್ಶನ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ, ಸಾಧ್ಯವಿಲ್ಲದಿದ್ದರೆ ಡಿಸೆಂಬರ್ ತಿಂಗಳಲ್ಲಿಯಾದರೂ ಪ್ರಾರಂಭ ಮಾಡುತ್ತೇವೆಂದು ಹೇಳಿರುತ್ತಾರೆ. ಈಗಾಗಲೇ ಇದರ ಬಗ್ಗೆ ಕಾರ್ಯಕ್ರಮಗಳನ್ನು ಜರಗಿಸುತ್ತಿದ್ದಾರೆ. ಕೇಂದ್ರ ಮಂತ್ರಿಯವರಿಗೆ ಪತ್ರವನ್ನು ಬರೆದಿರತಕ್ಕಂಥದ್ದು ಹಲವಾರು ಇರುತ್ತದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದವರನ್ನು ನಾವು ಸಂಪೂರ್ಣವಾಗಿ ನಂಬಿದ್ದೇವೆ. ಕರ್ನಾಟಕ ರಾಜ್ಯಕ್ಕೆ ನ್ಯಾಯವಾಗಿ ಸಲ್ಲಬೇಕಾದ್ದನ್ನು ಕೊಡುತ್ತಾರೆಂದು ನಾವು ಸಂಪೂರ್ಣವಾಗಿ ನಂಬಿದ್ದೇವೆ. ಅವರಿಗೂ ಕೂಡ ಆಸಕ್ತಿ ಇದೆ ಎಂಬುದಾಗಿ ಭಾವಿಸಿದ್ದೇವೆ, ಅವರಿಗೂ ಸಂಪೂರ್ಣವಾಗಿ ಇದರ ಬಗ್ಗೆ ಮನವರಿಕೆಯಾಗಿದೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಕರ್ನಾಟಕದಲ್ಲಿ ಸುಮಾರು ಎಂಟು ಕಡೆ ಒಳ್ಳೆ ಒಳ್ಳೆಯ ಕೇಂದ್ರಗಳನ್ನು ಪ್ರಾರಂಭಿಸಬೇಕೆಂದು ಇರುತ್ತಾರೆ. ಸಣ್ಣ ಪ್ರಮಾಣದಲ್ಲಿ ಒಳ್ಳೆ ಒಳ್ಳೆಯ ಸೆಂಟರ್‌ಗಳನ್ನು ಸೆಲೆಕ್ಟ್ ಮಾಡಿದ್ದಾರೆ. ಈ ವಿಷಯದಲ್ಲಿ ಹೈಪವರ್ ಕಮಿಟಿಯನ್ನು ವಾರ್ತಾ ಮಂತ್ರಿಗಳು ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳಿಗೂ ಪತ್ರಗಳನ್ನು ಬರೆದಿದ್ದೇವೆ. ಕೆಲವರು ಪ್ರಪೋಸಲ್ಸ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಪರಿಶೀಲನೆಯಲ್ಲಿ ಇದೆ. ನಾವು ಯಾವ ವಿಧದಲ್ಲಿ ಕೇಂದ್ರಕ್ಕೆ ಸಹಕಾರ ಕೊಡಬೇಕು ಅದನ್ನೆಲ್ಲ

ಕೊಡಲು ಸಿದ್ಧರಾಗಿದ್ದೇವೆ. ಕೇಂದ್ರ ಸರ್ಕಾರದವರು ಏನೇನು ಸವಲತ್ತುಗಳನ್ನು ಕೇಳುತ್ತಾರೋ ಅದನ್ನೆಲ್ಲವನ್ನೂ ಸಂಪೂರ್ಣವಾಗಿ ನಾವು ಒದಗಿಸುತ್ತೇವೆ. ೨-೩ 'ಗಾಂಧಿ' ಚಿತ್ರದ ಮಾದರಿಯಲ್ಲಿ ಚಿತ್ರಗಳನ್ನು ತಯಾರು ಮಾಡಬೇಕೆಂದು ಮಂತ್ರಿಗಳ ಸಭೆ ನಡೆದಾಗ ಪ್ರಸ್ತಾಪ ಮಾಡಿದ್ದಕ್ಕೆ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮತ್ತೆ 'ಯೋಜನೆ' ಎಂದು ಹೇಳಿ ಒಂದು ಪತ್ರಿಕೆ ಬರುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಾಜಕುಮಾರ್‌ರವರದೇ ?

ಶ್ರೀ ಎಂ. ರಘುಪತಿ.—ಯಾವುದೆ ಪತ್ರಿಕೆ ಬರಲಿ ಯಾವುದೇ ಪತ್ರಿಕೆ ಹೊರಬರಲು ಮೊದಲು ಡೆಲ್ಲಿಯಲ್ಲಿರತಕ್ಕಂಥ ರೀಜನಲ್ ಆಫೀಸ್‌ನಲ್ಲಿ ಅದು ರಿಜಿಸ್ಟರ್ ಆಗಬೇಕಾಗಿರುತ್ತದೆ. ನಾವು ಕೂಡ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಅದನ್ನು ಪರಿಶೀಲನೆ ಮಾಡುತ್ತೇವೆಂದು ಅವರು ಪ್ರತಿ ಉತ್ತರ ಬರೆದಿರುತ್ತಾರೆ. ಈ 'ಯೋಜನೆ' ಪತ್ರಿಕೆ ಕನ್ನಡದಲ್ಲಿ ಕೇಂದ್ರದಿಂದ ಬಿಡುಗಡೆಯಾಗುತ್ತದೆ. ಕೇಂದ್ರದ ಕನ್ನಡ ಕಾರ್ಯಕ್ರಮಗಳು ಅರ್ಥವಾಗಬೇಕಾದರೆ ಕನ್ನಡದಲ್ಲಿಯೇ ಪ್ರಚಾರವಾಗಬೇಕು ಮತ್ತು ಕನ್ನಡದಲ್ಲಿಯೇ ಪ್ರಕಟಣೆಯಾಗಬೇಕೆಂದು ಕೇಳಿಕೊಂಡಿದ್ದೇವೆ. ಈ ವರ್ಷದಲ್ಲಿಯೇ ಕಾರ್ಯಕ್ರಮ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ಇನ್ನೂ ಹಲವಾರು ವಿಷಯಗಳು ಇವೆ. ಅವೆಲ್ಲವನ್ನು ನಾನು ಮಾತನಾಡುವುದಕ್ಕೆ ಸಮಯದ ಅಭಾವದಿಂದ ಇಷ್ಟು ಮಾತ್ರ ಹೇಳಿಕೊಂಡು ಈ ಒಂದು ಬೇಡಿಕೆಯ ಮೇಲೆ ಹೆಚ್ಚಿನ ಸದಸ್ಯರು ಭಾಗವಹಿಸದೆ ಇದ್ದರೂ ಭಾಗವಹಿಸಿದ ಸದಸ್ಯರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಅಭಿವಂದನೆಗಳನ್ನು ಸಲ್ಲಿಸಿ, ಅವರು ಯಾವುದೇ ವಿಚಾರವನ್ನು ಆಗಲೀ ಅದರ ಬಗ್ಗೆ ನನಗೆ ಪತ್ರ ಬರೆದರೆ ಅದನ್ನು ಕಾರ್ಯಾಚರಣೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಅವಕಾಶ ಮಾಡಿಕೊಟ್ಟ ತಮಗೆಲ್ಲರಿಗೂ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ನಮ್ಮ ಸಚಿವರಿಗೆ ಬಹಳ ಚಿಕ್ಕಖಾತೆಯನ್ನು ಕೊಟ್ಟಿರುವುದರಿಂದ ಬಹಳ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಪರಿಹಾರ ಮಾಡಲಿಕ್ಕೆ ಮಾನ್ಯ ಸಚಿವರು ಏನು ಪ್ರಯತ್ನ ಮಾಡುತ್ತಾರೋ ಎನ್ನುವುದು ಒಂದು. ಡಾಕ್ಟರ್ ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲಿ ಚಲನಚಿತ್ರ ಕಲಾವಿದರ ಒಂದು ಸಂಘವನ್ನು ಸ್ಥಾಪನೆ ಮಾಡಲು ಜಾಗಬೇಕೆಂದು ಅರ್ಜಿ ಹಾಕಿದ್ದಾರೆ. ಆ ಬಗ್ಗೆ ಸಾಕಷ್ಟು ಹಣವನ್ನು ಕೊಡಲು ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಿದ್ದಾರೆ. ಅದು ಯಾವಾಗ ಕೊಡುತ್ತಾರೆ ಎನ್ನುವುದು ಒಂದು. ಕೆಂಪೇಗೌಡ ರಸ್ತೆಯಲ್ಲಿ ಚಲನಚಿತ್ರ ಪ್ರದರ್ಶನದ ಜೀವಾಳವಾಗಿರುವ ಅನೇಕ ಸಿನಿಮಾ ಥಿಯೇಟರ್‌ಗಳನ್ನು ತೆಗೆದು ಷಾಪಿಂಗ್ ಕಾಂಪ್ಲೆಕ್ಸ್ ಮಾಡಬೇಕೆಂದು ಹೊರಟಿರುವುದರಿಂದ ತನ್ಮೂಲಕ ಬೆಂಗಳೂರು ನಗರದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಮಾರಕವಾಗುವಂಥ ಪ್ರಯತ್ನವನ್ನು ತಾವು ಮಾಡುವಿರಾ ? ಅಥವಾ ಅದನ್ನು ತಡೆಯಲಿಕ್ಕೆ ಏನಾದರೂ ಪ್ರಯತ್ನವನ್ನು ಮಾಡುತ್ತೀರಾ ಹೇಳಬೇಕು. ಈ ಬಗ್ಗೆ ಒಂದು ಸಮಿತಿಯೂ ಕೂಡ ಇದೆ, ಅದರ ಎದುರಿಗೆ ಈ ವಿಷಯ ಬರಲು ಅವಕಾಶ ಕೊಡುವುದಿಲ್ಲವೇ ತಿಳಿಸಬೇಕು.

ಶ್ರೀ ಎಂ. ರಘುಪತಿ.—ಚಲನಚಿತ್ರ ಸಮಿತಿಯಲ್ಲಿ ಈ ವಿಷಯ ಇದ್ದು, ಅವರು ಇದನ್ನು ಸ್ವಾಗತ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರಿಗೆ ಒಂದು ಮುಖ್ಯ ಪಾತ್ರವನ್ನು ಕೊಟ್ಟು ಒಂದು ಕಥೆಯನ್ನು ತಯಾರು ಮಾಡಬೇಕೆಂದು ಇದ್ದಾರೆ.

ಶ್ರೀ ಎಂ. ರಘುಪತಿ.—ನನಗೆ ಮುಖ್ಯಪಾತ್ರವನ್ನು ಕೊಟ್ಟರೆ ಯಾರೂ ನೋಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಸರಾ ಎಕ್ಸಿಬಿಷನ್‌ನ್ನು ಪ್ರವಾಸೋದ್ಯಮ ಇಲಾಖೆಯೇ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇದನ್ನು ೧೦-೨೦ ವರ್ಷಗಳಿಂದ ನಡೆದುಕೊಂಡು ಬಂದಂತೆ ಈ ವರ್ಷವೂ ಮಾಡಲು ತಯಾರು ಹೇಗೆ ಮಾಡಿದ್ದೀರಿ ? ಅದನ್ನೂ ಕೂಡ ವಿವರವಾಗಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಟಿ.ವಿ. ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರವನ್ನು ಮಾಡುತ್ತೇವೆಂದು ಹೇಳಿರುತ್ತೀರಿ. ಇಲ್ಲಿ ಮೂಲಭೂತವಾಗಿ ಇರತಕ್ಕಂಥ ಪ್ರಶ್ನೆ ಹೆಚ್.ಎ.ಎಲ್. ಆವರ್ಿಯವರಿಗೆ

ಆಲಟರ್‌ನೇಟೀವ್ ಸೈಟ್‌ನ್ನು ಕೊಟ್ಟು ಅಲ್ಲಿ ಟಿ.ವಿ. ಕೇಂದ್ರವನ್ನು ಸ್ಥಾಪನೆ ಮಾಡಲಾಗುವುದೆನ್ನುವ ಮಾತನ್ನು ಕೇಳಿದ್ದೇವೆ. ೩೦ ಅಡಿ ಎತ್ತರದ ಟವರ್ ಮಾಡಲಿಕ್ಕೆ ಈಗಿರತಕ್ಕಂಥ ವ್ಯವಸ್ಥೆಯಲ್ಲಿ ಪಿ.ಡಬ್ಲ್ಯೂ.ಡಿ. ಅವರು ಅದನ್ನು ಮಾಡಲು ಆಗುವುದಿಲ್ಲವೆಂದೂ ಕೂಡ ಆಕ್ಷೇಪಣೆ ಎತ್ತಿದ್ದಾರೆ. ಮತ್ತೆ ಆಲ್ಟರ್‌ನೇಟೀವ್ ಸೈಟ್‌ನ್ನು ಜುಲೈ ತಿಂಗಳಲ್ಲಿ ಕೊಡುವುದಾಗಿ ಹೇಳಿರುತ್ತೀರಿ. ಜುಲೈನಲ್ಲಿ ಕೊಟ್ಟಮೇಲೆ ಕಂಪಾರ್ಟ್‌ಮೆಂಟ್ ಮಾಡುವುದಕ್ಕೆ ಪಿಡಬ್ಲ್ಯೂಡಿ ಮಾಡಬೇಕೆಂದು ಹೇಳಿದಾಗ, ಪಿಡಬ್ಲ್ಯೂಡಿಯವರು ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಸಂಬಂಧಪಟ್ಟವರನ್ನು ಕರೆದು, ಪಿಡಬ್ಲ್ಯೂಡಿಯವರನ್ನು ಕರೆದು, ಮತ್ತು ಆರ್ಮಿ ಫೋರ್ಸ್‌ರವರನ್ನು ಕರೆದೂ ಮಾತನಾಡಿ ಕೇಂದ್ರದವರಿಗೆ ತಾವು ಸಹಾಯ ಮಾಡಬೇಕು. ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಕೇಂದ್ರದವರದೇನೂ ತಪ್ಪು ಇಲ್ಲ. ಮತ್ತೆ ಬಿಇಎಲ್‌ನವರಿಗೆ ಅತಿ ಶೀಘ್ರವಾಗಿ ರೆಕಾರ್ಡ್ ಟೈಮ್‌ನಲ್ಲಿ ಟ್ರಾನ್ಸ್‌ಮಿಷನ್ ಸೆಟ್ ಅವರಿಗೆ ಕೊಡುವಂಥ ವ್ಯವಸ್ಥೆ, ಮತ್ತು ಟವರ್ ವ್ಯವಸ್ಥೆ ಇದೆಲ್ಲವನ್ನೂ ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತೀರಿ, ಮತ್ತೆ ಅವರಿಗೆ ಕೊಡಬೇಕಾದಂಥ ಜಾಗ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ದಯವಿಟ್ಟು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪಿ. ಒಡೆಯರಾಜ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರಗಳಿಗೆಲ್ಲಾ ಉತ್ತರವನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಅವರನ್ನು ಕರೆಯಿಸಿ ಮಾತನಾಡುತ್ತೇನೆ. ಮುಂದಿನ ವಾರದಲ್ಲಿಯೇ ಈ ಸದನದಲ್ಲಿಯೇ ತೀರ್ಮಾನ ತೆಗೆದುಕೊಳ್ಳುತ್ತೇನೆ. ವಾರ್ ಫುಟಿಂಗ್ ರೀತಿಯಲ್ಲಿ ಇದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಭೈರಪ್ಪಾಜಿ.—ಎರಡು ಜಿಲ್ಲೆಯಲ್ಲಿ ಕಾರ್ಯಕ್ರಮ ಏರ್ಪಾಡು ಮಾಡಿದ್ದುದನ್ನು ತಾವೇ ಹೇಳಿದಿರಿ. ಅವರವರ ಜಿಲ್ಲೆಯ ಅವಶ್ಯಕತೆಗಳ ಬಗ್ಗೆ ಎಲ್ಲಾ ಶಾಸಕರು ಕೂಡ ಹೇಳಿದರು. ತಮ್ಮ ಇಲಾಖಾ ಮುಖ್ಯಸ್ಥರು ಏರ್ಪಾಡು ಮಾಡಿದ್ದು, ಪತ್ರಿಕಾಕರ್ತರು ಏರ್ಪಾಡು ಮಾಡಿದ್ದು, ಅವಶ್ಯಕತೆಗಳ ಪಟ್ಟಿ ತಮ್ಮ ಇಲಾಖೆಯಲ್ಲಿದೆ, ಜಿಲ್ಲೆಯ ಅವಶ್ಯಕತೆ ಪೂರೈಸುವುದಕ್ಕೆ ತಮ್ಮಲ್ಲಿರತಕ್ಕ ಪಟ್ಟಿಯ ವಿಷಯದಲ್ಲಿ ಏನಾದರೂ ತಾವು ಮಾಡಿದ್ದೀರಾ ? ಇನ್ನು ಆದಿಚುಂಚನಗಿರಿಯಲ್ಲಿ ಪ್ರವಾಸಿ ಕೇಂದ್ರ ಮಾಡುತ್ತೇವೆಂದು ಒಪ್ಪಿಕೊಂಡಿದ್ದಿರಿ. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರು ಹೋಗಿ ಭೇಟಿ ಮಾಡಿಕೊಂಡು ಬರಲಿಕ್ಕೆ ಹೇಳಿದ್ದೇವೆ. ಸೆಮಿನಾರ್ ಮಾಡಿದಮೇಲೆ, ಪ್ರತಿಯೊಂದನ್ನೂ ಆಯಾಯ ಇಲಾಖೆಗೆ ಬರೆದು ತಿಳಿಸುತ್ತೇವೆ.

ಶ್ರೀ ಕೆ. ಚನ್ನಬಸವನಗೌಡ.—ಬಳ್ಳಾರಿಯಲ್ಲಿ ಆಕಾಶವಾಣಿ ತೆರಿಯಲಿಕ್ಕೆ ತಾವು ಡೆಲ್ಲಿಗೆ ಹೋದಾಗ ಕೇಂದ್ರದವರ ಜೊತೆ ಕುಳಿತುಕೊಂಡು ಮಾತನಾಡಿ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಪ್ರಯತ್ನ ಮಾಡಿದ್ದೇನೆ, ಇನ್ನೂ ಮಾಡುತ್ತೇನೆ.

ಡಾ|| ವಿ.ಎಸ್. ಆಚಾರ್ಯ.—ಪ್ರತಿ ವರ್ಷ ಸದನದಲ್ಲಿ ಮರವಂತೆಯ ಹೆಸರು ಬರುತ್ತದೆ, ಆದರೆ ಇದುವರೆಗೂ ಅಲ್ಲಿಗೆ ಒಂದು ನಯಾಪೈಸೆ ಇನ್‌ವೆಸ್ಟ್‌ಮೆಂಟ್ ಮಾಡಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಎಷ್ಟು ವಿನಿಯೋಗ ಮಾಡುತ್ತೀರಿ ತಿಳಿಸಬೇಕು. ಇನ್ನು ೧೧ ಟಿವಿ ಸೆಂಟರ್‌ನಲ್ಲಿ ಮಂಗಳೂರು ಸೇರಿದೆಯೇ ? ಹಾಗೆ ಮಂಗಳೂರು ಉಡುಪಿ–ಮಧ್ಯೆ ೧೫ ಕಿಲೋಮೀಟರ್‌ನಲ್ಲಿ ಮಾಡಲಿಕ್ಕೂ ಸಾಧ್ಯ ಇದೆ ಅದನ್ನು ಮಾಡುತ್ತೀರಾ ? ಇನ್ನು ಪುತ್ತೂರಿನಲ್ಲಿ ಬಿಸಿನೀರಿನ ತೀರ್ಥ ಇದೆ. ಅಲ್ಲಿ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಬಿಸಿ ನೀರಿನ ಬುಗ್ಗೆಯ ಬಗ್ಗೆ ಪ್ರವಾಸಿಗರನ್ನು ಆಕರ್ಷಣೆ ಮಾಡಬಹುದು.

ಶ್ರೀ ಎಂ. ರಘುಪತಿ.—ಪುತ್ತೂರಿಗೆ, ಈ ಸದನ ಮುಗಿದ ಮೇಲೆ ಹೋಗಿಬರುತ್ತೇನೆ. ಇನ್ನು ಮರವಂತೆ ಬಗ್ಗೆ ವಿರೋಧಪಕ್ಷದ ನಾಯಕರು ಒಂದು ಪತ್ರ ಬರೆದಿದ್ದಾರೆ. ಅಷ್ಟು ಹೊತ್ತಿಗೆ ಯೋಜನೆ ರಚನೆಯಾಗಿತ್ತು. ಮುಂದಿನ ಯೋಜನೆಯಲ್ಲಿ ಮರವಂತೆಯನ್ನು ಅಳವಡಿಸಬೇಕೆಂದು ಅಷ್ಟೇ ಆಸಕ್ತಿ ಇದೆ. ಅಷ್ಟು ಸುಂದರವಾದ ಪ್ರದೇಶ ಎಲ್ಲಿಯೂ ಇಲ್ಲ. ಅಂಥ ಕರಾವಳಿ ಪ್ರದೇಶ. ಕೇಂದ್ರಕ್ಕೂ ಬರೆದಿದ್ದೇವೆ ತಕ್ಷಣ ಡೆವಲಪ್‌ಮೆಂಟ್ ಮಾಡಿ ಎಂದು ಹೇಳಿದ್ದಾರೆ. ಕೇಂದ್ರದಿಂದ

ಉತ್ತರ ಬಂದಿದೆ ನೆಕ್ಸ್ಟ್ ಕಾರ್ಯಕ್ರಮದಲ್ಲಿ ಮಾಡುತ್ತೇವೆ. ಇನ್ನು ಟಿವಿ ಬಗ್ಗೆ ಏನು ಹೇಳಿದ್ದೀರಿ ಅದನ್ನು ಟಿವಿ ಸಮಿತಿಗೆ ಬರೆದು ಕಳುಹಿಸಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಂಪಾಪತಿ.—ಚಲನಚಿತ್ರಗಳಿಗೆ ಶೇಕಡ ೫೦–೧೦೦ ರಿಯಾಯಿತಿ ಕೊಡತಕ್ಕದ್ದು ಇದೆ. ಮನರಂಜನೆ ತೆರಿಗೆ ಬರತಕ್ಕದ್ದು ನಗರಸಭೆಗಳಿಗೆ ಉಪಯೋಗವಾಗುತ್ತಿತ್ತು, ಈಗ ಮನರಂಜನೆ ತೆರಿಗೆ ಬರದೇ ಇದ್ದರೆ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಮನರಂಜನೆ ಯಿಂದ ಬರುವಷ್ಟು ಹಣವನ್ನು ನಗರಸಭೆಗಳಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ? ಇನ್ನು ೧೧ ಸ್ಥಳಗಳಲ್ಲಿ ಟಿವಿ ಸೆಂಟರ್ ಮಾಡುವುದಾಗಿ ಹೇಳಿದಿರಿ. ಅದರಲ್ಲಿ ದಾವಣಗೆರೆಯನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಅದನ್ನು ಕೇಂದ್ರದವರು ಸಲೆಕ್ಟ್ ಮಾಡುವುದು. ಅವರಿಗೆ ಬರೆಯು ತ್ತೇವೆ. ಹಣದ ವ್ಯವಹಾರ ಅರ್ಥ ಮಂತ್ರಿಗಳಿಗೆ ಸೇರಿದ್ದು ಅವರ ಅವಗಾಹನೆಗೆ ಇದನ್ನು ತರು ತ್ತೇನೆ. ತಮ್ಮ ದಾವಣಗೆರೆ ಈ ಯೋಜನೆಯಲ್ಲಿ ಸೇರಿದೆ.

ಶ್ರೀ ಪಿ. ರಾಂದೇವ್.—ಹಿಂದೆ ಕನ್ನಡ ಚಲನಚಿತ್ರಗಳನ್ನು ಕಡ್ಡಾಯ ಮಾಡಬೇಕೆಂದು ಹೇಳಿದ್ದೆ. ಅದು ಎಲ್ಲಿಯೂ ಜಾರಿಗೆ ಬಂದಿಲ್ಲ, ಅದನ್ನು ಜಾರಿಗೆ ತರಲಿಕ್ಕೆ ಏನು ಕ್ರಮ ತೆಗೆದುಕೊಳ್ಳು ತ್ತಿರಿ. ಇನ್ನು ಕರ್ನಾಟಕ ರಾಜ್ಯಕ್ಕೆ ವಿದೇಶಿ ಪ್ರವಾಸಿಗಳು ಬರುತ್ತಿರುತ್ತಾರೆ, ಆದ್ದರಿಂದ ಇಲ್ಲಿ ಒಂದು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮಾಡುತ್ತಿರಾ ?

ಶ್ರೀ ಎಂ. ರಘುಪತಿ.—೧೯೭೭ರಲ್ಲಿ ಕನ್ನಡ ಚಲನಚಿತ್ರಗಳನ್ನು ಕಡ್ಡಾಯ ಮಾಡಬೇಕೆಂದು ಸರ್ಕಾರ ಒಂದು ಆಜ್ಞೆ ಹೊರಡಿಸಿತ್ತು. ಹಿಂದೆ ಅದರ ಬಗ್ಗೆ ಕೋರ್ಟಿಗೆ ಹೋಗಿ ತಡೆಯಾಜ್ಞೆ ಬಂದು ನಿಂತಿದೆ. ಅದ್ಯತೆ ಮೇರೆಗೆ ಕನ್ನಡ ಚಲನಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಇದೆ. ಇನ್ನು ಮಾನ್ಯ ಮೊಯಿಲಿಯವರು ಕೆಂಪೇಗೌಡ ರಸ್ತೆಯಲ್ಲಿರುವ ಚಿತ್ರ ಮಂದಿರಗಳವರು ಷಾಪಿಂಗ್ ಕಾಂಪ್ಲೆಕ್ಸ್ ಮಾಡುವ ಯೋಚನೆ ತಿಳಿದು ಬಂದಿದೆ ಎಂದು ಹೇಳಿದರು. ಅದರ ಬಗ್ಗೆ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರ ಜೊತೆ ಚರ್ಚೆ ಮಾಡಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯ ಕುಮಾರ್.—ಹಿಂದೆ ಈಗಿನ ವಿರೋಧಪಕ್ಷದ ನಾಯಕರು ಮಂಗಳೂರಿನ ಚಿಂಗ್ರಿಯಲ್ಲಿ ಪ್ರವಾಸಿ ಕೇಂದ್ರ ಮಾಡಬೇಕೆಂದು ನಿರ್ಣಯ ಮಾಡಿದ್ದರು, ಅದಕ್ಕಾಗಿ ಸ್ಥಳ ಕೂಡ ಕಾಯಿರಿಸಿದ್ದಾರೆ. ಅಲ್ಲಿ ಫಿಷ್ ಅಕ್ವೇರಿಯಮ್ ಮಾಡಲಿಕ್ಕೆ ಸಾಧ್ಯವಿದೆ. ಸರ್ಕಾರ ಅದರ ಬಗ್ಗೆ ಯೋಚನೆ ಮಾಡುತ್ತದೆಯೇ ?

ಶ್ರೀ ಎಂ. ರಘುಪತಿ.—ಇನ್ನು ಫಿಷರೀಸ್ ಡಿಪಾರ್ಟ್‌ಮೆಂಟ್‌ಗೆ ತಿಳಿಸುತ್ತೇನೆ ನಾನು ಮಂಗಳೂರಿಗೆ ಬಂದಾಗ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ತಾವು ಕೋಲಾರಕ್ಕೆ ಬಂದಾಗ ಅಂತರಗಂಗೆ, ಕೈವಾರ ಪ್ರವಾಸಿ ಕೇಂದ್ರ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಿರಿ ಅದು ಯಾವ ಹಂತದಲ್ಲಿದೆ. ಇನ್ನು ಶರಾವತಿ ಬ್ಯಾಕ್ ವಾಟರ್ಸ್ ಇದೆ, ಸಣ್ಣ ಐಲೆಂಡ್ ತರಹ ಇದೆ. ಅದನ್ನು ಫ್ರಾನ್ಸ್‌ನಲ್ಲಿರುವಂತೆ ಪ್ರವಾಸಿ ಕೇಂದ್ರ ಮಾಡಲಿಕ್ಕೆ ಸಾಧ್ಯವಿದೆ ಈ ದ್ವೀಪಗಳನ್ನು ಪ್ರವಾಸಿ ಕೇಂದ್ರ ಮಾಡುವುದರಿಂದ ಹೊರ ದೇಶದ ಪ್ರವಾಸಿಗರನ್ನು ಆಕರ್ಷಿಸಲಿಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಕೈವಾರದ ಬಗ್ಗೆ ನಾನು ಅಧಿಕಾರಿಗಳನ್ನು ಕಳುಹಿಸಿ ವರದಿಯನ್ನು ತರಿಸಿಕೊಂಡಿದ್ದೇನೆ ಅದು ಇನ್ನೂ ಪರಿಶೀಲನೆಯಲ್ಲಿದೆ ಮುಂದೆ ಕಾರ್ಯಗತ ಮಾಡುತ್ತೇವೆ. ಇನ್ನು ಶರಾವತಿ ಬಗ್ಗೆ ನಿಗಮದ ಅಧ್ಯಕ್ಷರು ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ಕಾರ್ಯಕ್ರಮದಲ್ಲಿ ಸೇರಿಸಿ ಎಂದು ಹೇಳುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಹೊರಗಿನ ಪ್ರವಾಸಿಗಳು ರಾಷ್ಟ್ರದಲ್ಲಿ ಪ್ರವಾಸ ಮಾಡು ವಾಗ ಅನೇಕ ನ್ಯಾಷನಲ್ ಹೈವೇನಲ್ಲಿ ಹೋಗಬೇಕಾಗುತ್ತದೆ. ಈ ನ್ಯಾಷನಲ್ ಹೈವೇನಲ್ಲಿ ನಾವು ಹೋಗುವಾಗ ನೋಡಿದರೆ ಸುಮಾರು ನೂರಾರು ಮೈಲಿ ಹೊರಹೋದರೂ ಎಲ್ಲಿಯೂ ನೀರು ಕಾಣುವುದಿಲ್ಲ, ಮರಗಳು ಕಾಣುವುದಿಲ್ಲ, ಪ್ರಾಣಿಗಳು ಕಾಣುವುದಿಲ್ಲ. ಆದ್ದರಿಂದ, ಪ್ರವಾಸಿಗರಿಗೆ ಜಾಸ್ತಿ ಸೌಲಭ್ಯ ಕೊಡುವ ಸಲುವಾಗಿ ನ್ಯಾಷನಲ್ ಹೈವೇಗಳಲ್ಲಿ ಹೋಟಲ್‌ಗಳನ್ನು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ನಾನು ಅದರ ಬಗ್ಗೆ ಆಗಲೇ ಹೇಳಿದ್ದೇನೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಬೆಳಗಾಂ ಮತ್ತು ಬಿಜಾಪುರದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ, ಅಲ್ಲಿ ಗೋಕಾಕ್ ಫಾಲ್ಸ್ ಮತ್ತು ಗೋಲ್‌ಗುಮ್ಮಟ ಇದೆ. ಅಲ್ಲಿ ಪ್ರವಾಸಿ ಕೇಂದ್ರ ಮಾಡುತ್ತೀರಾ ? ಇನ್ನು ಬೆಂಗಳೂರು, ಮಂಗಳೂರು, ಬೆಳಗಾಂನಲ್ಲಿ ಏರೋಡ್ರಮ್‌ಗಳು ಏನಿವೆ ಅವುಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಹಿಂದೆ ಟೂರಿಸಂ ಡಿಪಾರ್ಟ್‌ಮೆಂಟಿನವರು ಹಿಡಕಲ್ ಡ್ಯಾಮ್‌ನಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಲಿಕ್ಕೆ ತೀರ್ಮಾನ ತೆಗೆದುಕೊಂಡಿದ್ದರು. ಈಗ ಆ ಕಾರ್ಯಕ್ರಮವನ್ನು ಮುಂದುವರಿಸುತ್ತೀರಾ ? ಗೋವಾದಲ್ಲಿ ಪರಮಗುಡಿಯಲ್ಲಿ ಮಾಡಿರುವಂತೆ ಸಣ್ಣ ಸಣ್ಣ ಕಾಟೇಜುಗಳನ್ನು ನಿರ್ಮಿಸಬೇಕು. ಹಾಗೆ ಮಾಡುವುದರಿಂದ ನೋಡಲು ಬಂದಂತಹ ಪ್ರವಾಸಿಗರಿಗೆ ಬಹಳ ಅನುಕೂಲವಾಗುತ್ತದೆ. ಈಗ ನಮ್ಮ ಕಡೆ ಗೋಕಾಕ್ ಪಾಲ್ಸ್ ಇದೆ, ಹಿಡಕಲ್ ಡ್ಯಾಮ್, ಮತ್ತು ಕೊರಚಮಳಗೆ ಸಣ್ಣ ಸಣ್ಣ ಜಲಪಾತಗಳು ಇವೆ ಇಡೀ ಕರ್ನಾಟಕದಲ್ಲಿರುವ ಎಲ್ಲಾ ಜಲಪಾತಗಳನ್ನು ಸೇರಿಸಿ ಒಂದು ಸಮಗ್ರವಾದ ಕಾರ್ಯಕ್ರಮ ತಾವು ತೆಗೆದುಕೊಳ್ಳುತ್ತೀರಾ ? ಆ ಬಗ್ಗೆ ಹೇಳಬೇಕು.

ಶ್ರೀ ಜಿ. ಎಸ್. ಬಸವರಾಜು.—ದೂರದರ್ಶನ ಕೇಂದ್ರವನ್ನು ಎಲ್ಲಾ ಕಡೆಗೂ ವಿಸ್ತರಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಅದರ ಒಂದು ಸೌಲಭ್ಯ ಹಳ್ಳಿಗಳಿಗೂ ದೊರೆಯುವಂತೆ ಮಾಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದಗೌಡ.—ಶೃಂಗೇರಿಯಲ್ಲಿ ಶಂಕರಾಚಾರ್ಯರು ತಂಗಿದ್ದಂತಹ ಉತ್ತಮವಾದ ಜಾಗ. ಆ ಜಾಗವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿದರೆ ಇಂಡಿಯಾ ದೇಶದ ಮೂಲೆ ಮೂಲೆಗಳಿಂದ ಬಂದು ನೋಡುತ್ತಾರೆ, ಅದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಿದ್ದಾರೆ ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ಕನ್ನಡ ಚಲನಚಿತ್ರಗಳಿಗೆ ಸಹಾಯಧನ ನೀಡುತ್ತೇವೆಂದು ಹೇಳುತ್ತಿದ್ದಾರೆ ಹಿಂದೆ ಮಾನ್ಯ ದೇವರಾಜಅರಸ್ ರವರ ಅವರ ಕಾಲದಲ್ಲಿ ಕನ್ನಡ ಚಲನಚಿತ್ರಗಳಿಗೆ ಕನ್ನಡ ಚಲನಚಿತ್ರ ಅಭಿವೃದ್ಧಿಗೋಸ್ಕರ ಸಹಾಯಧನ ಕೊಡುತ್ತೇವೆಂದು ಮಾಡಿದರು. ಈಗ ಸಹಾಯಧನ ಸಿಗುತ್ತದೆಂದು ಎಲ್ಲರೂ ಕೂಡ ಅನುವಾದ ಮಾಡಿಕೊಂಡು ಸಹಾಯಧನ ಪಡೆದು ಕೊಳ್ಳುತ್ತಿದ್ದಾರೆ. ಕರ್ನಾಟಕ ರಾಜ್ಯದ ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಇವತ್ತು ಜೀವನಕ್ಕೆ ತೊಂದರೆಯಾಗಿದೆ. ಕನ್ನಡ ಕಾದಂಬರಿಗಳನ್ನು ಬರೆದು ಸಹಾಯಧನ ತೆಗೆದುಕೊಳ್ಳತಕ್ಕಂತಹ ಒಂದು ಸಹಾಯಧನ ಸಮಿತಿ ಮಾಡಬೇಕೆಂದು ನನ್ನ ಸಲಹೆ. ೧೨ ವಾರ ಕನ್ನಡ ಚಲನಚಿತ್ರವನ್ನು ಕಡ್ಡಾಯವಾಗಿ ಚಿತ್ರಮಂದಿರಗಳವರು ಪ್ರದರ್ಶನ ಮಾಡಬೇಕೆಂದು ಹಿಂದಿನ ಸರ್ಕಾರ ಆಜ್ಞೆ ಮಾಡಿತ್ತು. ಈಗಲೂ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ೧೨ ವಾರ ಕನಡ್ನ ಚಲನಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಲಿಕ್ಕೆ ಚಲನಚಿತ್ರಮಂದಿರಗಳವರು ಒಪ್ಪುತ್ತಿಲ್ಲ. ಸರ್ಕಾರ ಇದರ ಬಗ್ಗೆ ಏತಕ್ಕೆ ಕ್ರಮ ಗೆದುಕೊಳ್ಳಬಾರದು ? ಇದರ ಬಗ್ಗೆ ಮಂತ್ರಿಗಳು ವಿಚಾರಮಾಡಬೇಕು. ಹೊರಗಡೆಯಿಂದ ಬರತಕ್ಕ ಪರಭಾಷೆಯ ಅಶ್ಲೀಲಚಿತ್ರಗಳು ಬಹಳ ದಿವಸ ನಡೆಯುತ್ತವೆ ಅದನ್ನು ತಡೆಗಟ್ಟಬೇಕಾದರೆ ಸರ್ಕಾರ ಖಾಸಗೀಯಾಗಿ ಒಂದು ಸಮಿತಿ ನೇಮಕಮಾಡಬೇಕು.

ಅಧ್ಯಕ್ಷರು.—ಈಗಾಗಲೇ ಸಮಿತಿ ನೇಮಕ ಮಾಡಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಹೊರಗಡೆಯಿಂದ ಬರತಕ್ಕ ಚಲನಚಿತ್ರಗಳನ್ನು ಪರಿಶೀಲನೆ ಮಾಡಲು ಒಂದು ಸಮಿತಿ ನೇಮಕಮಾಡಿ ನೀವು ಹಾಗೆ ಮಾಡದಿದ್ದರೆ ಅಶ್ಲೀಲಚಿತ್ರಗಳನ್ನು ಪ್ರದರ್ಶನ ಮಾಡುವವರಿಗೆ ಅನುಕೂಲವಾಗುತ್ತದೆ. ಇದನ್ನು ಸಮಿತಿ ನೇಮಕ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ.

ಅಧ್ಯಕ್ಷರು.— ನೀವು ಸಲಹೆ ಕೊಡುವುದಕ್ಕೆ ಮುಂಚೆ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ಪಿ. ರಾಮಚಂದ್ರರಾವ್.—ಥ್ರೀಸ್ಟಾರ್ ಹೋಟೆಲ್ ಎಂದು ಹೇಳುವಾಗ ಅವು ದೊಡ್ಡ ದೊಡ್ಡ ಹೋಟೆಲುಗಳು ಆಗುತ್ತವೆ. ಆದ್ದರಿಂದ ಮಧ್ಯಮ ತರಗತಿಯ ಹೋಟೆಲುಗಳನ್ನು ಸೈಡ್ ಬೈ ಸೈಡ್ ಚಿಕ್ಕ ಚಿಕ್ಕ ಹೋಟಲುಗಳನ್ನು ಕಟ್ಟಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಚಲನಚಿತ್ರಗಳಿಗೆ ಸಬ್ಸಿಡಿ ಮತ್ತು ತೆರಿಗೆ ರಿಯಾಯಿತಿ ಕೊಡುವುದು ಕನ್ನಡ ಬೆಳವಣಿಗೆಯ ದೃಷ್ಟಿಯಿಂದ ಕೊಡುವುದು ಸರಿ, ಆದರೆ ಅದಕ್ಕೆ ಒಂದು ಸ್ಟ್ಯಾಂಡರ್ಡ್ ಇಟ್ಟುಕೊಳ್ಳಬೇಕು. ಸ್ಟ್ಯಾಂಡರ್ಡ್ ಇಲ್ಲದಿದ್ದರೆ ಅದರಿಂದ ಮುನಿಸಿಪಾಲಿಟಿಗಳಿಗೆ ಬಹಳ ತೊಂದರೆಯಾಗಿದೆ. ಡಾಕ್ಯುಮೆಂಟರಿ ರಿಪೋರ್ಟ್ ಪ್ರಕಾರ ಹಳ್ಳಿಗಳಲ್ಲಿ ಸಾಕಷ್ಟು ಉತ್ತಮ ಪ್ರಚಾರ ಇಲ್ಲ, ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಆಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಉತ್ತಮವಾದ ಡಾಕ್ಯುಮೆಂಟರಿ ಪ್ರದರ್ಶನಕ್ಕೆ ಒಂದು ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ವಸಂತ ಬಂಗೇರ.—ಟಿಪ್ಪುಸುಲ್ತಾನ್ ಚಲನಚಿತ್ರ ತೆಗೆಯುತ್ತೇವೆಂದು ಹೇಳಿದ್ದಾರೆ ಆ ಸಂಬಂಧದ ಬಗ್ಗೆ ನಮ್ಮಲ್ಲಿ ಜಮಾಲಬಾದ್ ಘಡ ಇದೆ. ಅದನ್ನು ಚಿತ್ರಿಸಿಕೊಳ್ಳಬೇಕು. ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕು. ೪–೫ ವರ್ಷಗಳಿಂದ ಸಬ್ಸಿಡಿ ಕೊಡತಕ್ಕ ಫೈಲುಗಳನ್ನು ತಪ್ಪಿಸಿ ಇಟ್ಟುಕೊಂಡಿದ್ದಾರೆ. ನಿರ್ಮಾಪಕರಿಗೆ ಸಹಾಯಧನ ಕೊಡುವಂತಹ ಸಂಬಂಧಪಟ್ಟ ಕಾಗದ ಪತ್ರಗಳು ಇಲ್ಲ. ನಾಲ್ಕೈದು ವರ್ಷಗಳಿಂದ ಕಾಗದ ಪತ್ರಗಳನ್ನು ತಪ್ಪಿಸಿ ಇಟ್ಟುಕೊಂಡಂತಹ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಸರ್ಕಾರದಿಂದ ಬಹುಮಾನ ಏನಾದರೂ ಕೊಡುವ ಆಲೋಚನೆಯನ್ನು ತಾವು ಮಾಡುತ್ತೀರಾ ?

ಶ್ರೀ ಎಂ.ಬಿ. ದಿವಟರ್.—ಮಾನ್ಯ ಸಚಿವರು ಹಂಪೆಯ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅಲ್ಲಿ ಏನೇನು ಕೆಲಸ ಆಗಿದೆ ಎನ್ನುವುದನ್ನು ಸಭೆಗೆ ತಿಳಿಸಬೇಕು ? ಹಂಪೆ ಎಂದರೆ ಹಾಳುಹಂಪೆ, ಅಲ್ಲಿಗೆ ವಿದೇಶಿ ಪ್ರವಾಸಿಗರು ಬರುತ್ತಾರೆ. ಅಲ್ಲಿಗೆ ಬಂದಂತವರಿಗೆ ಉತ್ತಮವಾದ ಸೌಕರ್ಯಗಳು ಇಲ್ಲ. ಅಲ್ಲಿ ಕೆ.ಎಸ್.ಟಿ.ಡಿ.ಸಿಯವರ ಕ್ಯಾಂಟೀನು ಇದ್ದರೂ ಅದು ಸರಿಯಾದ ವ್ಯವಸ್ಥೆಯಲ್ಲಿಲ್ಲ. ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಉಚಿತ ಸೌಕರ್ಯ ವ್ಯವಸ್ಥೆ ಇರುವಂತಹ ದೊಡ್ಡ ಹೋಟೆಲು ಕೆ.ಎಸ್.ಟಿ.ಡಿ.ಸಿ. ಯವರು ಕಟ್ಟಬೇಕು. ಆ ರೀತಿ ಮಾಡುವುದರಿಂದ ವಿದೇಶಿ ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಈಗ ಅವರು ತಂಗಲು ಹೊಸಪೇಟೆ ಮತ್ತು ಬೇರೆ ಊರುಗಳಿಗೆ ಹೋಗಬೇಕಾಗಿದೆ. ಎರಡನೆಯದಾಗಿ ರಾಜ್ಯದಲ್ಲಿ ವಿಡಿಯೊ ಕ್ಯಾಸೆಟ್ಟುಗಳ ಹಾವಳಿ ಬಹಳ ಜಾಸ್ತಿಯಾಗಿದೆ. ವಿಡಿಯೋ ಹಾವಳಿಯಿಂದ ಸಿನಿಮಾ ಪ್ರದರ್ಶನಕ್ಕೆ ಆತಂಕವಾಗುತ್ತಿದೆ. ಅದಕ್ಕೆ ಸರ್ಕಾರ ಕಾನೂನು ಮಾಡಿ ಸರ್ಕಾರಕ್ಕೆ ಆದಾಯ ಬರುವಂತೆ ಮಾಡುತ್ತೀರಾ ? ದೂರದರ್ಶನಕೇಂದ್ರವನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡಬೇಕೆಂದು ಪ್ರಪೋಸ್ ಮಾಡಿದ್ದಾರೆ. ಹೊಸಪೇಟೆಯಲ್ಲಿ ಮಾಡುವುದಕ್ಕಿಂತ ಮುನಿರಾಬಾದ್‌ನಲ್ಲಿ ಸ್ಥಾಪನೆ ಮಾಡುವುದರಿಂದ ರಾಯಚೂರು ಜಿಲ್ಲೆ ಕೊಪ್ಪಳ ತಾಲ್ಲೂಕು ಮತ್ತು ಯಲಬುರ್ಗ ತಾಲ್ಲೂಕಿನ ಜನರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಯಾವ ರೀತಿ ಮಾಡುತ್ತಾರೆಂದು ಹೇಳಬೇಕು.

ಒಬ್ಬ ಸದಸ್ಯರು.—ಮಾನ್ಯ ಸಚಿವರು ಉತ್ತರ ಕೊಡುತ್ತಾ ಸಾಕ್ಷ ಚಿತ್ರಗಳನ್ನು ತೆಗೆಯುತ್ತೇವೆಂದು ಹೇಳಿದ್ದಾರೆ. ಮಾಸ್ತಿಯವರ ಬಗ್ಗೆ ಹಾಗೆಯೇ ಶಿವರಾಮಕಾರಂತರ ಬಗ್ಗೆ ಕೆಂಗಲ್ ಹನುಮಂತಯ್ಯನವರ ಬಗ್ಗೆ ಸಾಕ್ಷ ಚಿತ್ರ ತೆಗೆಯುತ್ತೇವೆಂದು ಹೇಳಿದ್ದಾರೆ. ಹಾಗೆಯೇ ಕರ್ನಾಟಕದ ಷೇಕ್ಸ್‌ಪಿಯರ್ ಎನಿಸಿಕೊಂಡಂತಹ ಹನುಮಂತರಾಯರ ಬಗ್ಗೆ ಅವರು ನಾಟಕಕಾರರು, ಸಾಹಿತಿಗಳು ಆಗಿರುವುದರಿಂದ ಅವರ ಬಗ್ಗೆ ಸಾಕ್ಷ ಚಿತ್ರವನ್ನು ತೆಗೆಯುತ್ತಾರೆಯೆ ?

ಶ್ರೀ ಎಸ್. ಗಂಗಾಧರಪ್ಪ.—ಯಡಿಯೂರಿನಲ್ಲಿ ಹೋಟೆಲು ಕೆಲಸ ಅರ್ಧಕ್ಕೆ ನಿಂತಿದೆ ಅದನ್ನು ಯಾವಾಗ ಶುರು ಮಾಡುತ್ತೀರಿ ?

ಶ್ರೀ ಜೆ. ಡಿ. ಸೋಮಪ್ಪ.—ಇದು ಬಡವರ ಬಗ್ಗೆ ಬಹಳ ಕಳಕಳಿ ಇರತಕ್ಕ ಸರ್ಕಾರ, ಟೂರಿಂಗ್ ಟಾಕೀಸ್‌ಗಳಲ್ಲಿ ಟ್ಯಾಕ್ಸನ್ನು ಕಡಿಮೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕೂಲಿಕಾರರು ಮತ್ತು ಬಡವರು ಟೂರಿಂಗ್ ಟಾಕೀಸ್‌ಗಳಲ್ಲಿ ಸಿನಿಮಾ ನೋಡುತ್ತಾರೆ. ಆದ್ದರಿಂದ ಟೂರಿಂಗ್‌ಟಾಕೀಸ್‌ಗಳಲ್ಲಿ ಕಂಪ್ಲೀಟ್ ಟ್ಯಾಕ್ಸ್ ತೆಗೆಯಲು ಸಾಧ್ಯವಿದೆಯೆ ? ಹಾಸನದಲ್ಲಿ ದೂರದರ್ಶನ ಕೇಂದ್ರವನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಟಿಪ್ಪುಸುಲ್ತಾನ್ ಚಿತ್ರವನ್ನು ತೆಗೆಯುತ್ತೇವೆಂದು ಹೇಳಿದ್ದಾರೆ. ಸಕಲೇಶ್ವರಕ್ಕೆ ೪ ಕಿಲೋಮೀಟರ್ ದೂರದಲ್ಲಿ ನ್ಯಾಷನಲ್ ಹೈವೇಯಲ್ಲಿ ಮಂಜರಬಾದ್ ಕೋಟೆಯನ್ನು ಟಿಪ್ಪುಸುಲ್ತಾನ್ ಕಾಲದಲ್ಲಿ ಕಟ್ಟಿದಂತಹದು ಇದೆ, ಆದ್ದರಿಂದ ಅದನ್ನು ಹಿಲ್‌ಸ್ಟೇಷನ್ ಮಾಡಿ ದೂರದರ್ಶನ ಕೇಂದ್ರ ಸ್ಥಾಪನೆ ಮಾಡಬೇಕೆಂದು

ನಾನು ಹಿಂದೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ, ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನೀವು ಅಲ್ಲಿಗೆ ಬಂದು ನೋಡಿ ಅಲ್ಲಿ ಹಿಲ್‌ಸ್ಟೇಶನ್ ಮಾಡುವುದಕ್ಕೆ ಸಾಧ್ಯ ವಾಗುತ್ತದೆ.

ಶ್ರೀ ಎ. ಆನಂದರಾವ್.—ಮಾನ್ಯ ಅಧ್ಯಕ್ಷರೆ, ದೂರದರ್ಶನ ಕೇಂದ್ರವನ್ನು ಶಿವಮೊಗ್ಗದಲ್ಲಿ ಮಾಡಬೇಕೆಂದು ಜಾಗವನ್ನು ಆರಿಸಿಕೊಂಡಿದ್ದಾರೆ. ಶಿವಮೊಗ್ಗದ ಪಕ್ಕದಲ್ಲೇ ಇರುವ ಅಧ್ಯಕ್ಷರ ಕ್ಷೇತ್ರದಲ್ಲಿ ೧೦ ಕಿಲೋಮೀಟರ್ ದೂರದಲ್ಲಿ ದೂರದರ್ಶನ ಕೇಂದ್ರ ಮಾಡಲಿಕ್ಕೆ ಸೂಕ್ತ ಪ್ರದೇಶವಿದೆ. ಅಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ತುಂಗಭದ್ರಾ ಕೂಡಲಸಂಗಮ ಕೇಂದ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಡಾ|| ಸಂಗಮೇಶ್ವರ ಸರ್ದಾರ್.—ರಾಯಚೂರಿನಲ್ಲಿ ದೂರದರ್ಶನ ಕೇಂದ್ರವನ್ನು ತೆಗೆಯು ಲಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಅದು ಆಗಿದ್ದರೆ ಯಾವಾಗ ಆಗುತ್ತದೆ? ನಮ್ಮಲ್ಲಿ ತೆಲಗು ರಾಣಿ ಫಿಲಂ ತೆಗೆದರೆ ಬೀದರ್ ಮತ್ತು ರಾಯಚೂರು ಜನಗಳಿಗೆ ಮತ್ತು ಎಲ್ಲ ರಿಗೂ ವೀರರಾಣಿಯರ ದೇಶಸೇವೆಯನ್ನು ಫಿಲಂ ಮೂಲಕ ತೋರಿಸಿದರೆ ಅವರ ಚರಿತ್ರೆ ಗೊತ್ತಾಗು ತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಡಿಯೂರಿನಲ್ಲಿ ಪ್ರವಾಸಿಕೇಂದ್ರವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ ಮೂರು ವರ್ಷಗಳಾಯಿತು. ಈಗಲಾದರೂ ಅದನ್ನು ಬೇಗ ಪ್ರಾರಂಭ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಕೆ. ಕೆಂಪೇಗೌಡ.—ದಕ್ಷಿಣ ಕಾಶೀಯೆಂದು ಪ್ರಸಿದ್ಧವಾಗಿರುವ ಮೇಲು ಕೋಟೆಯ ಬಗ್ಗೆ ಮಾಸ್ಟರ್‌ಪ್ಲಾನ್ ತಯಾರಾಗಿದ್ದು ಅದರ ಬಗ್ಗೆ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿ ದೆಯೇ ಎಂದು ನಾನು ತಿಳಿಯಬಯಸುತ್ತೇನೆ? ಹಾಗೆಯೇ ತೊಣ್ಣೂರು ಎಂದು ಒಂದು ಗ್ರಾಮ ವಿದೆ ಅಲ್ಲಿಗೆ ರಾಮಾನುಜಾಚಾರ್ಯರು ಬಂದು ನೆಲೆಸಿದ್ದರು. ಇಂತಹ ಐತಿಹಾಸಿಕ ಸ್ಥಳಗಳು, ಇಂತಹ ಪ್ರಸಿದ್ಧ ಸ್ಥಳಗಳಲ್ಲಿ ಟೂರಿಸಂ ಸೆಂಟರ್‌ಗಳನ್ನು ತೆರೆಯುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳು ತ್ತದೆಯೇ ?

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ ನಮ್ಮ ದೇಶದ ಸಂಸ್ಕೃತಿಯಲ್ಲಿ ದಶರಥ ಮಹಾರಾಜನು ಬಹಳ ಪ್ರಸಿದ್ಧಿಯನ್ನು ಪಡೆದಿದ್ದಾನೆ, ಆದ್ದರಿಂದ ಅವರ ಹೆಸರನ್ನು ಯಾವುದಾದ ರೊಂದು ಪುಣ್ಯ ಕ್ಷೇತ್ರದಲ್ಲಿ ಇರುವಂಥ ವ್ಯವಸ್ಥೆಯನ್ನು ನಮ್ಮ ಮಾನ್ಯ ಮಂತ್ರಿಗಳು ಮಾಡು ತ್ತಾರೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ನಾನು ಮಾತನಾಡುವಾಗ ಥಿಯೇಟರ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ.

ಶ್ರೀ ಎಂ. ರಘುಪತಿ.—ನಾವು ಥಿಯೇಟರ್ಸ್‌ಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಹೇಳಿದ್ದೇನೆ. ಎಸ್‌ಎಂಟಿಸಿಯ ಮುಖಾಂತರ ಎಲ್ಲಾ ಸೌಲಭ್ಯಗಳನ್ನು ಸಹ ಕಲ್ಪಿಸಿ ಕೊಡುತ್ತೇವೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈಗ ದುಡ್ಡು ಕೊಟ್ಟಿರುವವರಿಗೆ ದುಡ್ಡು ವಾಪಸ್ಸು ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಇನ್ನು ಟಿವಿ ಸೆಂಟರ್ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಈಗ ನಾವು ಒಂದು ಕಡೆ ಟಿವಿ ಸೆಂಟರ್ ಮಾಡಿದರೆ ಅದು ಸುಮಾರು ೪೦ ಕಿಲೋಮೀಟರ್‌ವರೆಗೂ ಮಾತ್ರ ವಿಸ್ತರಣೆಯಾಗುತ್ತದೆ. ನಾವು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಇನ್ನು ಮುಜರಾಯಿ ಇಲಾಖೆಯನ್ನು ನಮ್ಮ ಇಲಾಖೆಗೆ ಸೇರಿಸಿಕೊಳ್ಳಬೇಕೆಂದು ಹೇಳಿ ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಎರಡೂ ಇಲಾಖೆಗಳನ್ನು ಒಟ್ಟಾಗಿ ಸೇರಿಸಿದರೆ ಆಗ ನಾವು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಗ ನಾವು ಎಲ್ಲಿ ಪ್ರವಾಸಿ ಮಂದಿರಗಳು ಬೇಕೋ ಅಲ್ಲಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಈಗ ಕೆಲವು

ಪ್ರವಾಸಿ ಮಂದಿರಗಳು ಮುಜರಾಯಿ ಇಲಾಖೆಗೆ ಸೇರಿವೆ. ಅವುಗಳನ್ನು ನಾವು ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಇನ್ನು ಡಾಕ್ಯುಮೆಂಟರಿಯ ಬಗ್ಗೆ ಕೆಲವು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ನಾವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೆಲವು ಸಾಕ್ಷ್ಯರತಾ ಚಿತ್ರಗಳನ್ನು ತಯಾರು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತೆ ಸಬ್‌ಸಿಡಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನ್ಯಾಯವಾಗಿದ್ದರೆ ನಾವು ಖಂಡಿತ ಸಬ್‌ಸಿಡಿಯನ್ನು ಕೊಡುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ೧೯೭೮ನೇ ಇಸವಿಯಿಂದ ಸಬ್‌ಸಿಡಿಯನ್ನು ಒಂದು ಚಿತ್ರಕ್ಕೆ ಕೊಟ್ಟಿಲ್ಲ. ಅದಕ್ಕೆ ಸಂಬಂಧಪಟ್ಟಂತಹ ದಾಖಲೆಗಳು ನೆನ್ನೆಯ ದಿವಸ ಸಿಕ್ಕಿವೆ. ಆ ದಾಖಲೆಗಳನ್ನು ನಾನು ಮಾನ್ಯ ಮಂತ್ರಿಗಳಿಗೆ ಬೇಕಾದರೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಈ ಸದನವನ್ನು ತಮ್ಮ ವ್ಯವಹಾರಕ್ಕೆ ಬಳಸಿಕೊಳ್ಳಬೇಡಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಆ ಎಲ್ಲಾ ಸಲಹೆಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳಲಾಗುವುದು. ಇನ್ನು ಟಿಪ್ಪು ಸುಲ್ತಾನರ ಚಲನಚಿತ್ರ ಆ ಬಗ್ಗೆ ಕೇಂದ್ರ ಸರ್ಕಾರದವರು ನಿಲುವನ್ನು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ರಾಜ್ಯ ಸರ್ಕಾರ ನಿಲುವನ್ನು ತೆಗೆದುಕೊಳ್ಳುತ್ತದೆ ಎನ್ನುವ ಬಗ್ಗೆ ನಾನು ಹೇಳಿದ್ದೇನೆ. ಇದರ ಕಥೆಯನ್ನು ಶ್ರೀಮಾನ್ ಎಂ.ಎಸ್. ಸತ್ಯರವರು ಬರೆದಿದ್ದಾರೆ. ಆದ್ದರಿಂದ ಆದಷ್ಟು ಬೇಗ ನಾವು ಮುನಿರಾಬಾದ್‌ನಲ್ಲಿ ಅಥವಾ ಜಮಲಬಾದ್ ಎಲ್ಲವನ್ನೂ ಜ್ಞಾಪಕದಲ್ಲಿಟು ಕೊಂಡು ಚಿತ್ರೀಕರಣ ಪ್ರಾರಂಭ ಮಾಡಲಾಗುವುದು.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರಭಿವೃದ್ಧಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ನಗರಾಭಿವೃದ್ಧಿ ಹಾಗೂ ಬೆಂಗಳೂರು ಪ್ರಾಧಿಕಾರದ ಬಗ್ಗೆ ಇದುವರೆವಿಗೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿ ಅನೇಕ ಉಪಯುಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಯಾವ ರೀತಿಯಲ್ಲಿ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕು ಮತ್ತು ಯಾವ ರೀತಿಯಲ್ಲಿ ಆಡಳಿತವನ್ನು ನಡೆಸಬೇಕು ಎನ್ನುವ ಬಗ್ಗೆ ಕೂಡ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಗರಾಭಿವೃದ್ಧಿಯ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ಅನೇಕ ಲೋಪದೋಷಗಳನ್ನು ಸಹ ಅವರು ಎತ್ತಿ ತೋರಿಸಿಕೊಟ್ಟಿದ್ದಾರೆ. ನಾನು ನನ್ನ ಉತ್ತರವನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ನಮ್ಮ ಬೆಂಗಳೂರು ನಗರದ ನಗರಸಭೆಯ ಮತ್ತು ಪುರಸಭೆಗಳ ಚುನಾವಣೆಯ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಕುಂದುಕೊರತೆಗಳು ಮತ್ತು ಸಮಸ್ಯೆಗಳು ಉದ್ಭವಿಸಬೇಕಾದರೆ ಈ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ನಡೆಸದೇ ಇದ್ದದ್ದರಿಂದ ಎನ್ನತಕ್ಕಂಥದನ್ನು ತಾವೆಲ್ಲಾ ಅರ್ಥಮಾಡಿಕೊಳ್ಳಬೇಕು. ಇವತ್ತು ರಾಜ್ಯದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ಮಾಡಿದ್ದೇವೆ. ಇವತ್ತು ಎಲ್ಲಾ ನಗರಸಭೆ ಮತ್ತು ಪುರಸಭೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದಾರೆ. ಅವರು ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಏನೇನು ಕೆಲಸಕಾರ್ಯಗಳು ನಡೆಯಬೇಕು ಆ ಎಲ್ಲಾ ಕೆಲಸಕಾರ್ಯಗಳನ್ನು ಮಾಡುತ್ತಾರೆ. ಆಗ ಈ ಸಮಸ್ಯೆಗಳು ಉದ್ಭವಿಸುವುದಿಲ್ಲ. ಯಾವ ಕುಂದುಕೊರತೆಗಳೂ ಕೂಡ ಇರುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ನಗರಸಭೆ ಮತ್ತು ಪುರಸಭೆಗಳ ಆಡಳಿತವನ್ನು ಕೂಡ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಮತ್ತು ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸುಮಾರು ೧೦ ವರ್ಷಗಳಿಂದ ಈ ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ಮಾಡಿರಲಿಲ್ಲ. ಆದರೆ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ಚುನಾವಣೆಯನ್ನು ಮಾಡಬೇಕೆಂದು ನಾವು ಎಷ್ಟೋ ಸಾರಿ ಧರಣಿ ಸತ್ಯಾಗ್ರಹವನ್ನು ಮಾಡಿರುವುದು ಕೂಡ ಉಂಟು. ಆದರೆ ಆ ಸರ್ಕಾರ ಚುನಾವಣೆಯನ್ನು ಮಾಡಲಿಲ್ಲ. ಜನತಾ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಮುಖ್ಯವಾಗಿ ಈ ಕೆಲಸವನ್ನು ಮಾಡಿದೆ ಎಂದು ನಾನು ಹೇಳಬಯಸುತ್ತೇನೆ. ಮತ್ತೆ ಚುನಾವಣೆಯಲ್ಲಿ ಹಿಂದಿನ ಪದ್ಧತಿಯಂತೆ ಮಹಿಳೆಯವರಿಗೆ ಪ್ರಾತಿನಿಧ್ಯವಿರಲಿಲ್ಲ. ಆದರೆ ನಮ್ಮ ಸರ್ಕಾರ ಮಹಿಳೆಯರಿಗೂ ಕೂಡ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟಿದೆ. ಇವತ್ತು ಮಹಿಳೆಯರು ಕೂಡ ಚುನಾಯಿತರಾಗಿ ಬಂದಿದ್ದಾರೆ. ಆದರೆ ಹಿಂದೆ ಇದರ ಬಗ್ಗೆ ಅನು

ಮಾನವನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಮಹಿಳೆಯರೇ ಇಂದು ಮುಂದೆ ಬಂದು ನಮಗೆ ಟಿಕೆಟ್ ಕೊಡಿ ಎಂದು ಕೇಳುತ್ತಿದ್ದಾರೆ, ಮತ್ತು ೧೮ ವರ್ಷದ ಯುವಕ ಮತ್ತು ಯುವತಿಯರಿಗೆ ಮತದಾನ

(ಶ್ರೀ ಪಿ. ರಾಂದೇವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾಡುವ ಹಕ್ಕನ್ನು ಸಹ ಕೊಟ್ಟಿದ್ದೇವೆ. ಆದರೆ ಹಿಂದೆ ಆ ಒಂದು ಪದ್ಧತಿ ಇರಲಿಲ್ಲ. ಮತ್ತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅವರು ಬೇಕಾದರೆ ಮತವನ್ನು ಚಲಾವಣೆ ಮಾಡಬಹುದು. ನಾವು ಆಯ್ಕೆ ಮಾಡುವಾಗ ಯಾರು ಚುನಾವಣೆಗೋಸ್ಕರ ಕೆಲಸ ಮಾಡುವವರು ಇರುತ್ತಾರೆ ಅವರ ಅಭಿಪ್ರಾಯವನ್ನೆಲ್ಲ ತೆಗೆದುಕೊಂಡು ನಾವು ಯುವಕರಿಗೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇವೆ. ಹಾಗೆಯೇ ಆಯ್ಕೆಯಾಗಿರುವಂತಹ ಈ ಸ್ಥಳೀಯ ಸಂಸ್ಥೆಗಳಲ್ಲಿ ಬಹಳಷ್ಟು ಯುವಕರು ಪ್ರಾತಿನಿಧ್ಯ ಹೊಂದಿರುತ್ತಾರೆ. ಆದ್ದರಿಂದ ಈಗಿನ ಸ್ವರೂಪದಲ್ಲಿ ಮಹಿಳೆಯರಿಗೆ ಮತ್ತು ಯುವಕರಿಗೆ ಪ್ರಾತಿನಿಧ್ಯ ಹೆಚ್ಚಾಗಿರುವುದರಿಂದ ಇನ್ನು ಮುಂದೆ ಸ್ಥಳೀಯ ಸಂಸ್ಥೆಗಳು ಅದರಲ್ಲೂ ನಗರ ಸಭೆಗಳು, ಪುರಸಭೆಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪುರಸಭೆಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ತಿಳುವಳಿಕೆಯಿರುವಂತಹ ಬುದ್ಧಿವಂತ ಮತ್ತು ವಿದ್ಯಾವಂತ ಜನರೇ ಬರುವುದರಿಂದ ಅಲ್ಲಿರತಕ್ಕ ಸಮಸ್ಯೆಗಳಿಗೆ ಸಾಕಷ್ಟು ಪರಿಹಾರ ದೊರಕಬಹುದು ಎಂಬುದನ್ನು ನಾನು ತಮ್ಮ ಗಮನಕ್ಕೆ ತರಬೇಕಾಗುತ್ತದೆ.

ಇನ್ನು ಅಧ್ಯಕ್ಷರೇ ಚುನಾವಣೆ ಏನೋ ಆಯಿತು ಮತ್ತೆ ಚುನಾವಣೆ ಘೋಷಣೆ ಆದ ಪ್ರಯುಕ್ತ ಮತ್ತು ಅದೇ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಏನು ಅಭಾವ ಪರಿಹಾರದ ಕಾರ್ಯಕ್ರಮವಾಗಿ ಒಂದು ತೀರ್ಮಾನವನ್ನು ನಮ್ಮ ಇಲಾಖೆ ತೆಗೆದುಕೊಂಡಿದೆ. ಮುಖ್ಯವಾಗಿ ಈ ಸಭೆಯಲ್ಲಿ ಮಾತನಾಡಿದ ಸದಸ್ಯರೆಲ್ಲರೂ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುತ್ತಿದ್ದಾರೆ. ಆದ್ದರಿಂದ ಈ ವರ್ಷ ನಮ್ಮ ಸರ್ಕಾರ ಬಂದ ಮೇಲೆ ಅಭಾವ ಪರಿಹಾರ ಕಾರ್ಯಕ್ರಮದಲ್ಲಿ ನಾವು ಅನೇಕ ನಗರ ಪ್ರದೇಶಗಳಲ್ಲಿ ಕೊಳವೆ ಭಾವಿಗಳನ್ನು ತೆಗೆಯುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡು ಸುಮಾರು ೯೫೦ ಕೊಳವೆ ಬಾವಿಗಳನ್ನು ತೆಗೆಯುವುದಲ್ಲದೆ ಅನೇಕ ಪುರಸಭೆಗಳಲ್ಲೂ ಈ ಕೆಲಸವಾಗಿರುವುದರಿಂದ ಸಧ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಸಾಕಷ್ಟು ಸುಧಾರಿಸಲಾಗಿದೆ ಎಂಬ ಮಾಹಿತಿ ನಮಗೆ ಬಂದಿದೆ. ಈ ಎರಡು ಹೊಸ ತೀರ್ಮಾನಗಳ ಜೊತೆಗೆ ನಾವು ಬೇರೆ ಬೇರೆ ಇಲಾಖೆಗಳಲ್ಲಿ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸ್ಥಳೀಯ ವಿಚಾರಗಳನ್ನು ಸ್ಥಳದಲ್ಲಿಯೇ ಪರಿಶೀಲನೆ ಮಾಡಿದರೆ ಉತ್ತಮವೆಂದು ಏಪ್ರಿಲ್, ಮೇ ತಿಂಗಳಿನಲ್ಲಿ ನಾನು ಪ್ರವಾಸ ಮಾಡಿ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಭೇಟಿ ಕೊಟ್ಟು ಆ ಜಿಲ್ಲೆಯಲ್ಲಿರುವಂತಹ ಪ್ರತಿಯೊಂದು ಪುರಸಭೆ, ನಗರಸಭೆಗಳಿಗೆ ಆಯ್ಕೆಯಾಗಿರುವ ಅಧ್ಯಕ್ಷರು ಅಥವಾ ಆಡಳಿತಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಇವರೆಲ್ಲರ ಜೊತೆಯಲ್ಲಿ ಸಮಾಲೋಷನೆ ಮಾಡಿ ಆ ಜಿಲ್ಲೆಯಲ್ಲಿರುವಂಥ ಪುರಸಭೆಗಳ ಅನೇಕ ಸಮಸ್ಯೆಗಳನ್ನು ನಾವು ಅಲ್ಲಿಯೇ ಕುಳಿತು ವಿಚಾರ ಮಾಡಿರುವುದರಿಂದ ನನಗೆ ಅಲ್ಲಿನ ಬಹಳ ಸಮಸ್ಯೆಗಳು ಅರ್ಥವಾಯಿತು. ಆ ಸಮಯದಲ್ಲಿ ನಮ್ಮ ಎಲ್ಲಾ ಶಾಸಕರೂ ಮತ್ತು ಪುರಸಭೆಗಳ ಪ್ರತಿನಿಧಿಗಳು ಕೂಡ ಭಾಗವಹಿಸಿದ್ದರು. ಆ ಸಮಯದಲ್ಲಿ ಅಲ್ಲಿಯೇ ಆದಂಥ ಸಭೆಗಳ ಮುಖಾಂತರ ಬೇಕಾದಷ್ಟು ವಿಚಾರಗಳನ್ನು ಸ್ಥಳೀಯವಾಗಿ ವಿಚಾರ ಮಾಡುವುದಕ್ಕೆ ಸಾಧ್ಯವಾಯಿತು. ನಮ್ಮ ಮಾನ್ಯ ಮಿತ್ರರು ಹೇಳಿದಂತೆ ಬಿಜಾಪುರದಲ್ಲಿ ಒಂದು ಮಳಿಗೆ ಸುಟ್ಟುಹೋದ ಪ್ರಶ್ನೆ ಪ್ರವಾಸದ ಸಮಯದಲ್ಲಿ ಬಂತು. ಆ ಮಳಿಗೆ, ಇದಕ್ಕೆ ಹಿಂದೆ ಎರಡು ಮೂರು ಸಾರಿ ಸುಟ್ಟು ಹೋಗಿದ್ದು ಪ್ರತಿಯೊಂದು ಸಲವೂ ಇರುವ ಸ್ಥಳದಲ್ಲಿಯೇ ತಾತ್ಕಾಲಿಕವಾಗಿ ಒಂದು ಷೆಡ್ ಕಟ್ಟಿ ಅನಂತರಪುನಃ ಅಲ್ಲಿಯೇ ಹಾಕುತ್ತಿದ್ದರು. ಈ ಸಾರಿ ನಾನು ಹೋದಾಗ ಈ ಬಗ್ಗೆ ನಾನು ಹಾಗೂ ಪುರಸಭೆಯಲ್ಲಿ ಆಯ್ಕೆಯಾದ ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಇದಕ್ಕೆ ಒಂದು ಶಾಶ್ವತವಾದಂಥ ಪರಿಹಾರಕೊಡಬೇಕೆಂದು ತೀರ್ಮಾನ ಮಾಡಿದೆವು. ಆ ತೀರ್ಮಾನದಿಂದಾಗಿ ಬೇರೆ ಪುರಸಭೆಗಳು ಸಹ ಅದೇ ರೀತಿ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದೆಂದು ಅಭಿಪ್ರಾಯ ಬಂತು. ಹಿಂದೆ ಈ ಮಳಿಗೆ ಕಟ್ಟಿಸಲು ೮೦ ಲಕ್ಷ ರೂಪಾಯಿಗಳ ಅಂದಾಜು ಆಗಿದ್ದು, ಕಾರಣಾಂತರದಿಂದ, ಅದು ೬–೭ ವರ್ಷಗಳವರೆಗೆ ಆಗದೆ ಇದ್ದುದರಿಂದ ಇದು ಒಂದು ಕೋಟಿ ೨೦ ಲಕ್ಷ ರೂಪಾಯಿಯವರೆಗೆ ಹೋಯಿತು. ಅದನ್ನು ಇನ್ನೂ ಮುಂದುವರೆಸಿಕೊಂಡು ಹೋದರೆ ಈ ಅಂದಾಜು ಜಾಸ್ತಿಯಾಗುವುದೇ ಹೊರತು ಕಡಿಮೆಯಾಗುವುದಿಲ್ಲ. ಆದರೆ ಪುರಸಭೆಗಳಲ್ಲಿ ಸಂಪನ್ಮೂಲಗಳ ಕೊರತೆಯಿರುವುದರಿಂದ, ಒಂದು ಕೋಟಿ ೨೦ ಲಕ್ಷ ರೂಪಾಯಿಗಳನ್ನು ರೂಢಿಸಿಕೊಂಡು ಅದನ್ನು ಕೈ

ಕೊಳ್ಳಲು ಸಾಧ್ಯವಿಲ್ಲ. ಇದರ ಬಗ್ಗೆ ಅಲ್ಲಿಯ ಅಧಿಕಾರಿಗಳ ಜೊತೆ ಮತ್ತು ಮತ್ತಿತರ ಸಂಬಂಧ ಪಟ್ಟವರ ಜೊತೆ ಕುಳಿತು ಮಾತನಾಡಿದಾಗ ಒಂದು ಸಲಹೆ ಬಂತು. ಅದೇನೆಂದರೇ ಈಗ ಯಾರು ಮಳಿಗೆ ಉಪಯೋಗಿಸುತ್ತಾರೆಯೋ ಅವರಿಂದಲೇ ಸ್ವಲ್ಪ ಹಣವನ್ನು ಡೆಪಾಸಿಟ್ ರೂಪದಲ್ಲಿ ತೆಗೆದುಕೊಂಡರೆ ಅದನ್ನು ಮೂಲ ಬಂಡವಾಳವನ್ನಾಗಿ ಹಾಕಿಕೊಂಡು ಅನಂತರ ಫೈನಾನ್ಸ್ ಏಜೆನ್ಸಿಗಳಾದ ಬ್ಯಾಂಕಗಳ ಮುಖಾಂತರವಾಗಿ ಅಥವಾ ಇನ್ನಿತರ ಸಂಸ್ಥೆಗಳಿಂದ ಸಾಲ ತೆಗೆದುಕೊಂಡು ಒಂದನೆಯ ಹಂತ, ಎರಡನೆಯ ಹಂತದಲ್ಲಿ ಅದನ್ನು ಪೂರ್ತಿ ಮಾಡಬಹುದೆಂಬ ಅಭಿಪ್ರಾಯ ಬಂತು. ನಾನು ಪ್ರವಾಸಮಾಡಿದ ಸಮಯದಲ್ಲಿ ಸ್ಥಳದಲ್ಲಿಯೇ ಈ ರೀತಿಯ ತೀರ್ಮಾನ ತೆಗೆದುಕೊಂಡಿರುವುದ ರಿಂದ, ಸುಮಾರು ೧೫ ದಿವಸಗಳಲ್ಲಿ ಪ್ರತಿಯೊಬ್ಬರು ನಾವು ಇಂತಿಷ್ಟು ಹಣ ಕೊಡುತ್ತೇವೆಂದು ಹೇಳಿ ರುವುದರಿಂದ ಒಟ್ಟು ಸುಮಾರು ೩೫ ಲಕ್ಷ ರೂಪಾಯಿಗಳು ಮಳಿಗೆದಾರರಿಂದ ಡಿಪಾಸಿಟ್ ಮಾಡು ತ್ತೇವೆ ಎನ್ನುವ ಭರವಸೆ ಬಂತು. ಪುರಸಭೆಯವರು ಈ ಮಳಿಗೆಗಳನ್ನು ಕಟ್ಟುವುದಾದರೆ, ಅವುಗಳಿಗೆ ಈ ರೀತಿ ಹಣ ಕೊಡುತ್ತೇವೆಂಬ ವಾಗ್ದಾನ ಬಂದಿರವುದು ಇದು ನಿಜವಾಗಿಯೂ ಸಂತೋಷದ ವಿಚಾರ. ಇದಾದ ಮೇಲೆ ಸರ್ಕಾರದ ಮಂಜೂರಾತಿ ದೊರೆತು ಮೊದಲನೆಯ ಹಂತದ ಕಾರ್ಯಕ್ರಮ ಈಗಲೇ ಪ್ರಾರಂಭವಾಗುತ್ತದೆ. ಆಮೇಲೆ ಎರಡನೆಯ ಹಂತದ ಕಾರ್ಯಕ್ರಮವನ್ನು ತೆಗೆದು ಕೊಳ್ಳಬಹುದು. ಗುಲ್ಬರ್ಗ ಬೆಳಗಾಂಗಳಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ. ಅಲ್ಲಿಯೂ ಕೂಡ ಒಂದನೆಯ ಎರಡನೆಯ ಹಂತಗಳಲ್ಲಿ ಅವುಗಳನ್ನು ಮಾಡಬಹುದು. ಮೊದಲನೆಯ ಪ್ರಯತ್ನ ಮಾಡಿದ ಮೇಲೆ ಕೆಲವಾರು ನಗರಪ್ರದೇಶಗಳಿಂದ ಈ ರೀತಿಯ ಪ್ರಪೋಸಲ್ಸ್ ಬಂದಿವೆ. ಈ ರೀತಿ ಸಂಪನ್ಮೂಲಗಳನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಅವಕಾಶ ನಗರಸಭೆಗಳಿಗೂ ಉಂಟು ಅದೂ ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ.

ಆಮೇಲೆ ಶ್ರೀ ಧರ್ಮಸಿಂಗ್ ಮತ್ತು ಆಚಾರ್‌ರವರು ಪುರಸಭೆಗಳಿಗೆ ಬರಬೇಕಾದ ಸಂಪನ್ಮೂಲ ಗಳು ಅನೇಕ ಕಡೆ ಸರಿಯಾಗಿ ಬರುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಸರ್ಕಾರ ಆಕ್ಟ್ರಾಯ್ ರದ್ದು ಮಾಡುವ ತೀರ್ಮಾನ ತೆಗೆದುಕೊಂಡಾಗ ಸೇಲ್ಸ್ ಟ್ಯಾಕ್ಸ್ ಸರ್ಚಾರ್ಜು ಮೂಲಕ ಅಥವಾ ಎಂಟ್ರಿ ಟ್ಯಾಕ್ಸ್ ಮೂಲಕ ಅಥವಾ ಸರ್ಚಾರ್ಜು ಆನ್ ಮೊಟಾರ್ ವೆಹಿಕಲ್ಸ್ ಈ ಮೂರು ವಿಭಾಗಗಳಿಂದ ಆಕ್ಟ್ರಾಯ್‌ನಲ್ಲಿ ಆದ ನಷ್ಟವನ್ನು ಬರಬೇಕಾದ ಪ್ರಮಾಣದಲ್ಲಿ ತುಂಬುವುದಕ್ಕೆ ಸಾಧ್ಯ ವಾಗಿಲ್ಲವೆಂಬುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಆದರೂ ಕೂಡ, ಈ ವಿಚಾರಗಳನ್ನು ಸಂಪನ್ಮೂಲ ಗಳನ್ನು ವೃದ್ಧಿ ಮಾಡುವುದಕ್ಕೆ 'ಗುಲ್ಹಾತಿ ಕಮಿಟಿ' ರಚನೆ ಮಾಡಿ ಅವರೂ ಕೂಡ ಒಂದು ವರದಿ ಕೊಟ್ಟಿದ್ದಾರೆ. ಅವರು ಏನು ನೀವು ಎಂಟ್ರಿ ಟ್ಯಾಕ್ಸ್ ಕೆಲವು ಪದಾರ್ಥಗಳ ಮೇಲೆ ಹಾಕಿ ದ್ದೀರಿ ಅದನ್ನು ಇನ್ನೂ ಹೆಚ್ಚಿನ ಪದಾರ್ಥಗಳಿಗೆ ಹಾಕಿದರೆ ನಿಮಗೆ ಹೆಚ್ಚಿನ ಸಂಪನ್ಮೂಲಗಳು ಬರು ತ್ತದೆಯೆಂದು ಹೇಳಿದ್ದಾರೆ.

ಶ್ರೀ ವಿ.ಎಸ್. ಆಚಾರ್.—ಆಗಲೇ ಈ ತೆರಿಗೆಯನ್ನು ಹಾಕಿಬಿಟ್ಟಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಸೇಲ್ಸ್ ಟ್ಯಾಕ್ಸ್ ಸರ್ಚಾರ್ಜ್, ಎಂಟ್ರಿ ಟ್ಯಾಕ್ಸ್, ಸರ್ಚಾರ್ಜ್ ಆನ್ ಮೋಟಾರ್ ವೆಹಿಕಲ್ಸ್ ಇವುಗಳ ಮುಖಾಂತರವಾಗಿ ಸಾಧ್ಯವಾದಷ್ಟು ಮಟ್ಟಿಗೆ ಸಂಪನ್ಮೂಲ ಗಳು ಬರುವುದಿದ್ದರೂ ನಗರಸಭೆಗಳ ಅಭಿವೃದ್ಧಿ ಕಾರ್ಯಗಳಿಗೆ ಸರಿಯಾದ ಪ್ರಮಾಣದಲ್ಲಿ ಅದು ಸಾಕಾಗುತ್ತಾ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಜನಸಂಖ್ಯೆ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಕ್ಕೂ ನಗರ ಪ್ರದೇಶಕ್ಕೂ ಯಾವ ಪ್ರಮಾಣದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಬೆಳೆದಿದೆ ಎಂದು ಹೇಳು ವುದಾದರೆ, ೧೯೬೧ರಲ್ಲಿ ನಗರ ಪ್ರದೇಶದ ಜನಸಂಖ್ಯೆಯು ಗ್ರಾಮಾಂತರ ಪ್ರದೇಶದ ಜನಸಂಖ್ಯೆಗಿಂತ ೧೭.೯೮ ರಷ್ಟಿತ್ತು ಹೀಗಿದ್ದುದು ೧೯೭೧ರಲ್ಲಿ ಸುಮಾರು ೨೪.೩೧ ಪರ್ಸೆಂಟ್ ಆಯಿತು ಅಂದರೆ, ಗ್ರಾಮಾಂತರ ಪ್ರದೇಶದಿಂದ ಹೆಚ್ಚಿನ ಪ್ರಮಾಣದಲ್ಲಿ ಜನರು ನಗರಪ್ರದೇಶಕ್ಕೆ ಬಂದಿದ್ದರು ಎಂದು ತಿಳಿದುಬರುತ್ತದೆ. ೧೯೮೧ರಲ್ಲಿ ಜನಗಣತಿಯ ಪ್ರಕಾರ ಕಂಡು ಬಂದಿರುವಂತೆ ಈ ಪ್ರಮಾಣ ೨೯.೯೧. ಈ ರೀತಿ ಶೇಕಡಾ ೩೦ರಷ್ಟು ಹೆಚ್ಚು ಜನ ಇವತ್ತು ನಗರಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಮತ್ತು ಈ ಪ್ರಮಾಣ ಮುಂದೆ ಹೆಚ್ಚಾಗುತ್ತಲೇ ಹೋಗುತ್ತದೆ ಎನ್ನುವುದಕ್ಕೆ ಈ ಮಾಹಿತಿಯೇ ಸಾಕಾಗುತ್ತದೆ. ಹೀಗಿರುವಾಗ ನಾನು ಮೊದಲೇ ಹೇಳಿದಹಾಗೆ ೬೧ರಿಂದ ೭೧ರಲ್ಲಿ. ಅಥವಾ ೭೧ರಿಂದ ೮೧ರಲ್ಲಿ ನಮ್ಮ ಈ ಮಹಾನಗರದಲ್ಲಿ ಕೂಡ ಈ ಪ್ರಮಾಣ ಶೇಕಡಾ ೬೦ರಷ್ಟು ಹೆಚ್ಚಾಯಿತು. ಹಾಗೆಯೇ ೨೫ ನಗರ ಪ್ರದೇಶಗಳಲ್ಲಿ ಶೇಕಡಾ ೩೦ರಷ್ಟು ಹೆಚ್ಚಾಯಿತು. ಇದನ್ನು ನೋಡಿದಾಗ ಈ ಪ್ರಮಾಣ ಹೆಚ್ಚಾಗುತ್ತಿರುವಾಗ ನಗರ ಪ್ರದೇಶಗಳಲ್ಲಿ ಆಗುತ್ತಿರುವ ಅನೇಕ ಸಂಪನ್ಮೂಲಗಳನ್ನು ವೃದ್ಧಿ ಮಾಡ

ಬೇಕು, ಅಭಿವೃದ್ಧಿ ಕಾರ್ಯಗಳು ಹೆಚ್ಚು ಆಗಬೇಕು ಎಂದು ಹೇಳುವಾಗ ಸ್ಥಳೀಯವಾಗಿ ಪುರಸಭೆಗಳ ಜವಾಬ್ದಾರಿ ಎಷ್ಟು ಇರುತ್ತದೆಯೋ ಸರ್ಕಾರ ಮತ್ತು ಬೇರೆ ಸಂಸ್ಥೆಗಳ ಜವಾಬ್ದಾರಿ ಕೂಡ ಅಷ್ಟೇ ಇರುತ್ತದೆ. ಕಾರಣ, ನಗರಪ್ರದೇಶಗಳಲ್ಲಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಜನರು ಬಂದು ಜೀವನ ಮಾಡು ವಂತಹ ಪ್ರವೃತ್ತಿ ಬೆಳೆಯುತ್ತಿದೆ ಎಂಬ ಅಂಶವನ್ನು ನಾವು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗು ತ್ತದೆ. ಅಷ್ಟೇ ಅಲ್ಲ, ಈಗ ಮೂರು ವರ್ಷಗಳಲ್ಲಿ ನಾವು ಎಷ್ಟು ಮಾತ್ರ ಕ್ರಮ ತೆಗೆದುಕೊಂಡಿ ದ್ದೇವೆ ಎಂದರೆ ನೀರು ಸೌಭ್ಯ ಮತ್ತು ಒಳಚರಂಡಿಗಾಗಿ ೧೯೮೧–೮೨ರಲ್ಲಿ ೯.೯ ಕೋಟಿ ರೂಪಾಯಿ ಯಷ್ಟು ಹಣ ಖರ್ಚಾಯಿತು. ೧೯೮೨–೮೩ರಲ್ಲಿ ೧೦.೮೩ ಕೋಟಿ ಮತ್ತು ಈ ವರ್ಷದಲ್ಲಿ ೧೬.೩೬ ಕೋಟಿ ರೂಪಾಯಿಗಳ ಅಂದಾಜು ಹಾಕಿಕೊಂಡಿದ್ದೇವೆ. ಈಗ ನಾವು ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ಆಕ್ಟ್ರಾಯ್ ಅನುದಾನವು ೧೯೮೧–೮೨ರಲ್ಲಿ ೨೭.೬೭ ಕೋಟಿ ೧೯೮೨–೮೩ರಲ್ಲಿ ೩೦.೬೦ ಕೋಟಿ ಮತ್ತು ಈ ವರ್ಷ ೩೪ ಕೋಟಿಯಷ್ಟು ಆಗುತ್ತದೆ. ಅಭಿವೃದ್ಧಿ ಕಾರ್ಯಗಳ ಅನುದಾನವು ಮೊದಲನೇ ವರ್ಷ ೧.೯೪ ಕೋಟಿ ಇದ್ದರೆ, ೧೯೮೨–೮೩ರಲ್ಲಿ ೨ ಕೋಟಿ ಮತ್ತು ಈ ವರ್ಷ ಕೂಡ ೨ ಕೋಟಿ ಇದೆ. ೧೯೮೧–೮೨ ರಲ್ಲಿ ಒಟ್ಟು ಈ ಇಲಾಖೆಯಲ್ಲಿ ಅಭಿವೃದ್ಧಿ ಕಾರ್ಯಗಳ ಬಾಬುಗಳಿಗೆ ಖರ್ಚಾಗಿರುವುದು ೪೨.೯೩ ಕೋಟಿ, ೧೯೮೨–೮೩ರಲ್ಲಿ ೫೦.೧೯ ಕೋಟಿ ಮತ್ತು ಈಗ ೧೯೮೩–೮೪ರಲ್ಲಿ ಅಂದಾಜು ಹಾಕಿಕೊಂಡಿರುವುದು ೬೦.೪೦ ಕೋಟಿ ರೂಪಾಯಿಗಳು. ಸುಮಾರು ಹೋದ ವರ್ಷಕ್ಕಿಂತ ಈ ವರ್ಷ ಹತ್ತು ಕೋಟಿಯಷ್ಟು ಹೆಚ್ಚಿನ ಹಣವನ್ನು ವೆಚ್ಚ ಮಾಡುವಂತಹ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗುಲ್ಹಾತಿ ಕಮೀಷನ್‌ನಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್‌ನ ಶೇಕಡಾ ೨೨ ಪರ್ಸೆಂಟ್ ತೆಗೆದುಕೊಳ್ಳಬೇಕು ಎಂದು ಇದೆ, ೧೯೮೩–೮೪ರಲ್ಲಿ ೬೪ ಕೋಟಿ ರೂಪಾಯಿಯಷ್ಟು ಮೋಟಾರ್ ವೆಹಿಕಲ್ ಟ್ಯಾಕ್ಸ್ ಬರುವಂತಹ ನಿರೀಕ್ಷೆ ಇದೆ. ಈ ಕಮಿಟಿಯ ಶಿಫಾರಸ್ಸನ್ನು ತೆಗೆದುಕೊಂಡರೆ ಶೇಕಡಾ ಎರಡರಷ್ಟಾದರೂ ನಮಗೆ ಬರಬೇಕಾಗಿರುವುದಾಗಿ ಕಂಡುಬರುತ್ತದೆ. ಅದೇ ರೀತಿ ಮನರಂಜನಾ ತೆರಿಗೆ– ಇದರಲ್ಲಿ ಸರ್‌ಚಾರ್ಜ್ ಮತ್ತು ವೃತ್ತಿ ತೆರಿಗೆಯಿಂದ ಬರಬೇಕಾಗಿರುವಂತಾದ್ದು ಈ ವರ್ಷದಲ್ಲಿ ವೃತ್ತಿ ತೆರಿಗೆಯಿಂದ ೧೧.೫೦ ಕೋಟಿ ರೂಪಾಯಿಗಳನ್ನು ಅಂದಾಜನ್ನು ಮಾಡಲಾಗಿದೆ. ಇದರಲ್ಲಿ ಬರಬೇಕಾಗಿರುವ ಬಾಕಿ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿಲ್ಲವೆಂಬುದು ನನಗೆ ಗೊತ್ತು. ಇದು ಶೇಕಡಾ ೬೫ರಷ್ಟು ಬಂತೆಂದರೆ ನಮಗೆ ೬ ರಿಂದ ೮ ಕೋಟಿಯಷ್ಟಾದರೂ ಹೆಚ್ಚು ಬರುತ್ತದೆ. ಈ ರೀತಿ ಗುಲ್ಹಾತಿ ಕಮೀಷನ್ ಶಿಫಾರಸ್ಸು ಪ್ರಕಾರ ಮಾಡಿದರೆ ಅನೇಕ ವಿಚಾರಗಳಲ್ಲಿ ನಮಗೆ ೧೨.೪೮ ಕೋಟಿಯಷ್ಟು ಹೆಚ್ಚು ಪುರಸಭೆಗಳಿಗೆ ಬರುವ ಅವಕಾಶವಾಗುತ್ತದೆ ಎನ್ನುವ ಮಾಹಿತಿ ಇದೆ. ಈಗ ಗುಲ್ಹಾತಿ ಕಮಿಟಿಯ ಶಿಫಾರಸ್ಸಿನಂತೆ ಲೋಕಲ್ ಫೈನಾನ್ಸ್ ಕಮಿಟಿಯನ್ನು ಮಾಡಿದ್ದೇವೆ. ಇವರು ನಾಲ್ಕು ವರ್ಷಗಳಲ್ಲಿ ಸಂಪನ್ಮೂಲಗಳನ್ನು ರಿವ್ಯೂ ಮಾಡಿ ಯೋಗ್ಯ ರೀತಿಯ ಸಲಹೆ ಕೊಡುವ ಬಗ್ಗೆ ಈ ವರ್ಷ ಫಾದರ್ ಜಾಕೋಬ್ ಅವರ ನಾಯಕತ್ವದಲ್ಲಿ ಇದನ್ನು ರಚನೆ ಮಾಡಿದ್ದೇವೆ. ನಮ್ಮ ಸ್ನೇಹಿತರಾದ ಶ್ರೀ ಧರ್ಮಸಿಂಗ್ ಅವರು ಗುಲ್ಹಾತಿ ಕಮಿಟಿಯ ಶಿಫಾರಸ್ಸು ಇದ್ದಾಗ ಮತ್ತೊಂದು ಕಮಿಷನ್ ಏಕೆ ಎಂದು ಪ್ರಶ್ನೆ ಹಾಕಿದರು. ಅದಕ್ಕೆ ಉತ್ತರವಾಗಿ ಹೇಳುವುದಾದರೆ ಗುಲ್ಹಾತಿ ಕಮಿಟಿಯ ಶಿಫಾರಸ್ಸಿನ ಮೇಲೆಯೇ ಈ ಒಂದು ಕಮಿಷನನ್ನು ನಾವು ರಚನೆ ಮಾಡಲಾಗಿದೆಯೆಂದು ಅವರ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಸಂಪನ್ಮೂಲಗಳನ್ನು ಸರ್ಕಾರದಿಂದಾಗಲೀ ಅಥವಾ ಸ್ಥಳೀಯವಾಗಲೀ ಅವುಗಳನ್ನು ವೃದ್ಧಿ ಮಾಡಬೇಕಾಗಿರುವುದು ಎಲ್ಲರ ಕರ್ತವ್ಯವಾಗಿದೆ. ಪುರಸಭೆ ಗಳಲ್ಲಿ ಮನೆಕಂದಾಯವನ್ನು ಸರಿಯಾಗಿ ಹಾಕಿಲ್ಲ. ಎರಡೂ ಕಡೆಯಲ್ಲೂ ಒಂದೇ ಪ್ರಮಾಣದ ಆಸ್ತಿ ಇದ್ದರೂ, ಒಂದು ಕಡೆ ಕಡಿಮೆ ಕಂದಾಯ ಹಾಕುತ್ತಾರೆ, ಮತ್ತೊಂದು ಕಡೆ ಹೆಚ್ಚಿನ ಕಂದಾಯ ಹಾಕುತ್ತಾರೆ. ಹಾಕುವ ಕಂದಾಯ ಕೂಡ ಆವರೇಜ್ ೪೦ರಿಂದ ೫೦ರಷ್ಟನ್ನು ಕಲೆಕ್ಟ್ ಮಾಡು ವುದಕ್ಕೂ ಕೂಡ ಲೋಪದೋಷಗಳು ಸ್ಥಳೀಯವಾಗಿದೆ. ಮತ್ತು ಕುಡಿಯುವ ನೀರಿನ ದರಗಳ ಬಗ್ಗೆ ಹಾಕಿರುವಂಥಾದ್ದನ್ನು ಕೂಡ ವಸೂಲಿ ಮಾಡುವುದಕ್ಕೆ ಹೋದಾಗಲೂ ಕೂಡ ಅದರಲ್ಲಿಯೂ ಕೂಡ ಲೋಪದೋಷಗಳಾಗುತ್ತಿವೆ, ಅನೇಕ ಕಡೆ ಮೀಟರ್ಸ್ ಇಲ್ಲ. ಮೀಟರ್ಸ್ ಇಲ್ಲದೇ ಇರು ವುದರಿಂದ ಲಂಪಸಂ ಇಷ್ಟು ಎಂದು ಹಾಕಿರುತ್ತಾರೆ. ಅದನ್ನೂ ಕೂಡ ಕಟ್ಟಿರುವುದಿಲ್ಲ. ಸ್ಥಳೀಯ ವಾಗಿ ಯಾವ ಯಾವ ಕಂದಾಯ ಅಥವಾ ಟ್ಯಾಕ್ಸ್ ವಸೂಲು ಮಾಡಬೇಕು ಎಂದು ಇರುತ್ತದೋ ಅದರಿಂದ ನಾವು ಪುರಸಭೆಗಳ ಸಂಪನ್ಮೂಲವನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ ಎನ್ನುವುದು ಎಲ್ಲರ ಗಮನಕ್ಕೂ ಬಂದಿರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿನ ಲೋಪದೋಷಗಳು ಎಂದರೆ ಅರ್ಥ ಏನು?

ಶ್ರೀ ಎಂ. ಚಂದ್ರಶೇಖರ್.—ಏನು ಎಂದರೆ ಆಯ್ಕೆಯಾಗಿರುವ ಸಮಿತಿಯಲ್ಲಿ ರಾಜಕೀಯ ಬರುತ್ತವೆ. ಹೆಚ್ಚಿಗೆ ಮಾಡುವುದಕ್ಕೆ ಹೋದಾಗ ನಿಮಗೆಲ್ಲಾ ಓಟು ಕೊಟ್ಟಿಲ್ಲವೆ, ನಮಗೆಲ್ಲಾ ಏತಕ್ಕಾಗಿ ಹೆಚ್ಚಿಗೆ ಮಾಡುತ್ತೀರಿ ಎಂದು ಬರುತ್ತದೆ. ಅಧಿಕಾರಿಗಳು ಇದ್ದಾಗ ಭ್ರಷ್ಟಾಚಾರ ಎಂದು ಬರುತ್ತದೆ, ಇವೆರೆಡನ್ನೂ ಸರಿಪಡಿಸದ ಹೊರತು ಸ್ಥಳೀಯವಾಗಿ ನಾವು ಅಧಿಕಾರಿಗಳಿಂದ ಭ್ರಷ್ಟಾಚಾರವೆಂದು ಅಥವಾ ಇನ್ನೊಂದು ಎಂದು ಎಂದರೂ ಕೂಡ ಅದನ್ನು ನಾವು ವಸೂಲು ಮಾಡಬೇಕಾಗಿದೆ. ವಸೂಲು ಮಾಡುವುದಕ್ಕೆ ಹೋದಾಗ ದುರುಪಯೋಗ ಎಂದು ಎನ್ನುತ್ತಾರೆ. ಎರಡನೆಯದಾಗಿ ಪುರಸಭೆಗಳಲ್ಲಿ ಆಯ್ಕೆಯಾಗಿರುವ ಜನತಾ ಪ್ರತಿನಿಧಿಗಳು ಅವರೂ ಕೂಡ ಇಂತಹ ವಿಚಾರದ ಬಗ್ಗೆ ಸರಿಯಾದ ರೀತಿಯಲ್ಲಿ ತೀವ್ರವಾದ ಕ್ರಮವನ್ನು ತೆಗೆದುಕೊಂಡು ಅವುಗಳನ್ನು ವಸೂಲು ಮಾಡುವುದಕ್ಕೆ ಹೋಗುವುದಿಲ್ಲ, ಎನ್ನತಕ್ಕಂಥಾದ್ದು ಕೂಡ ನನ್ನ ಗಮನಕ್ಕೆ ಬರುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಇಷ್ಟು ವರ್ಷಗಳ ಕಾಲ ತಮಗೂ ಗೊತ್ತಿದ್ದ ಹಾಗೆ ಅಡ್ಮಿನಿಸ್ಟ್ರೇಟರ್ಸ್‌ನ ಆಡಳಿತವೇ ನಡೆಯುತಿತ್ತು ಎಲ್ಲಾ ಪುರಸಭೆಗಳಲ್ಲೂ ಹಾಗೂ ಕಾರ್ಪೊರೇಷನ್‌ಗಳಲ್ಲೂ ಬೇರೆಯವರು ಯಾರೂ ಇರಲಿಲ್ಲ. ಮುಖ್ಯವಾಗಿ ಅವರದ್ದೇ ಇದು.

ಶ್ರೀ ಎಂ. ಚಂದ್ರಶೇಖರ್.—ಜನತಾ ಪ್ರತಿನಿಧಿಗಳು ಆಯ್ಕೆಯಾಗಿರುವಂತಹ ಸಂದರ್ಭದಲ್ಲಿ ಪೂರ್ಣವಾಗಿ ಈಗ ಎಲ್ಲಾ ಕಡೆ ಬರುತ್ತಿದ್ದಾರೆ. ಅವರು ಪೂರ್ಣವಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಸ್ಥಳೀಯವಾಗಿ ಸಂಪನ್ಮೂಲವನ್ನು ಹೆಚ್ಚಿಗೆ ಮಾಡಿಕೊಳ್ಳಬಹುದು. ಮತ್ತು ಮಳಿಗೆಗಳ ಬಾಡಿಗೆಯ ಬಗ್ಗೆ ಕೂಡ ೩ ವರ್ಷಗಳಿಗೊಂದು ಸಾರಿ, ಅಥವಾ ೫ ವರ್ಷಗಳಿಗೊಂದು ಸಾರಿ ಹೆಚ್ಚು ಮಾಡಬೇಕಾಗಿ ಬರುತ್ತದೆ. ಅದಕ್ಕಾಗಿ ಆಕ್ಷನ್ ಮಾಡಬೇಕಾಗಿ ಬರುತ್ತದೆ ಅಥವಾ ರಿವೈಸ್ ಮಾಡಬೇಕಾಗಿಬರುತ್ತದೆ. ಆ ಸಮಯದಲ್ಲೂ ಕೂಡ ಸಾಮಾನ್ಯವಾಗಿ ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ. ಅಧಿಕಾರಿಗಳ ಮತಿಯಿಂದ ಇದು ಆಗಬಹುದು. ಅಥವಾ ಆಯ್ಕೆಯಾಗಿರತಕ್ಕಂತಹ ಸದಸ್ಯರಿಂದ ಆಗಬಹುದು. ಏನಾದರೊಂದು ಕಾರಣಗಳಿಂದ ಮಳಿಗೆಗಳ ಬಾಡಿಗೆಯನ್ನೂ ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕೆ ಇಬ್ಬರೂ ಜವಾಬ್ದಾರರು. ಸ್ಥಳೀಯವಾಗಿ ಸಂಪನ್ಮೂಲವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕು. ಹಾಗೆ ಆಕ್ಟ್ರಾಯ್ ತೆರಿಗೆಯನ್ನು ರದ್ದು ಮಾಡಿದ್ದರಿಂದ ಸರ್ಕಾರ ಪರಿಹಾರವನ್ನು ಕೊಡಬೇಕಾದುದು ಜವಾಬ್ದಾರಿ ಇದೆ. ಆದ್ದರಿಂದ ಕೊಡಬೇಕಾದ ಅನುದಾನಗಳು ಹೆಚ್ಚಿಗೆ ಆಗಬೇಕಾಗಿರುವುದು ಬಹಳ ಮುಖ್ಯವಾದ ವಿಚಾರ. ಇವೆರಡೂ ಆದಮೇಲೆ ಮುಂದೆ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಯೋಚನೆ ಮಾಡುವುದಕ್ಕೆ ಹೋಗಬೇಕು. ಇವುಗಳಲ್ಲಿ ಮೊದಲನೆಯದಾಗಿ ತೆಗೆದುಕೊಳ್ಳಬೇಕಾಗಿರುವಂತಹ ಕಾರ್ಯಕ್ರಮ ಎಂದರೆ ಕುಡಿಯುವ ನೀರಿನ ಕಾರ್ಯಕ್ರಮ, ಕುಡಿಯುವ ನೀರಿನ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದಾರೆ. ಇದು ಮುಖ್ಯವಾದ ಸಮಸ್ಯೆಯೂ ಕೂಡ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ೧೯೭೫ರಲ್ಲಿ ರಚನೆಯಾಯಿತು. ಅದರ ಕಾರ್ಯಕ್ರಮಗಳು ತಮ್ಮ ಗಮನಕ್ಕೆ ಈಗಾಗಲೇ ಬಂದಿವೆ. ನಾನು ಅದರ ಬಗ್ಗೆ ಬಹಳ ಸೂಕ್ಷ್ಮವಾಗಿ ಹೇಳುವುದಾದರೆ ಅದು ೪-೫ ಮುಖ್ಯವಾದ ಯೋಜನೆಗಳನ್ನು ಹಾಕಿಕೊಂಡಿರುತ್ತದೆ. ಪೈಪ್ಡ್ ವಾಟರ್ ಸಪ್ಲೈ ಅದು ಒಂದು ಯೋಜನೆ. ಈ ಯೋಜನೆಯ ಮುಖಾಂತರ ೨೦ ಸಾವಿರಕ್ಕೆ ಕಡಿಮೆ ಇರುವಂತಹ ಸುಮಾರು ೧೪೩ ಪಟ್ಟಣಗಳಿಗೆ ಪೈಪ್ಡ್ ವಾಟರ್ ಸಪ್ಲೈಯನ್ನು ಮಾಡಬೇಕಾಗಿದೆ ಈಗಾಗಲೇ ೧೦೩ ನಗರ ಪ್ರದೇಶಗಳಲ್ಲಿ ಈ ಯೋಜನೆ ಕಾರ್ಯಗತವಾಗಿದೆ. ಇನ್ನು ಮಿಕ್ಕವುಗಳಿಗೆ ಆಗಬೇಕಾಗಿದೆ. ಮಿಕ್ಕ ಪಟ್ಟಣಗಳು ಎಂದರೆ ೧೯೭೧ನೇ ಇಸವಿಯ ಜನಸಂಖ್ಯೆ ಆಧಾರದ ಮೇಲೆ ಮಾಡತಕ್ಕಂತಹವುಗಳು. ಈಗ ಮತ್ತೆ ಅವುಗಳನ್ನೆಲ್ಲಾ ಪರಿಷ್ಕರಣ ಮಾಡಬೇಕಾಗುತ್ತದೆ. ಮೂರು ಹಂತಗಳಲ್ಲಿ ತೆಗೆದುಕೊಳ್ಳಬೇಕಾಗಿ ಬರುತ್ತದೆ. ಏನೇ ಆದರೂ ೧೯೭೧ರ ಜನಸಂಖ್ಯೆಗನುಗುಣವಾಗಿ ಏನು ಯೋಜನೆಗಳನ್ನು ತೆಗೆದುಕೊಳ್ಳಬೇಕೋ ಅವುಗಳಲ್ಲಿ ಎಲ್ಲಾ ನಗರಗಳಿಗೂ ಪೈಪ್ಡ್ ವಾಟರ್ ಸಪ್ಲೈ ಮಾಡುವುದಕ್ಕಾಗುತ್ತದೆ. ಆದರೂ ಈ ವರ್ಷ ೩ ಪಟ್ಟಣ ಪ್ರದೇಶಗಳಿಗೆ ಎಂದರೆ ಮಾಲೂರು, ಚಿತ್ತಾಪುರ, ಹಾಗೂ ಬ್ಯಾಡಗಿ ಇವುಗಳಿಗೆ ಕಾರ್ಯಕ್ರಮಗಳನ್ನು ಪೂರ್ಣ ಮಾಡುತ್ತೇವೆ. ಮತ್ತು ಹೊಸದಾಗಿ ಸುಮಾರು ೬ ನಗರಗಳಿಗೆ ಈ ಯೋಜನೆಯ ಪ್ರಕಾರವಾಗಿ ನೀರು ಸರಬರಾಜು ಮಾಡತಕ್ಕಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಎರಡನೆಯದಾಗಿ ಜೀವವಿಮಾ ಇಲಾಖೆಯಿಂದ ಈ ಯೋಜನೆಗಳಿಗೆ ಸಹಾಯ ಬರುತ್ತದೆ. ಎಲ್‌ಐಸಿ ಅಸಿಸ್ಟೆನ್ಸ್‌ನಲ್ಲಿ ಸುಮಾರು ೬೫ ನಗರ ಪ್ರದೇಶಗಳು ೨೦ ಸಾವಿರ ಜನಸಂಖ್ಯೆಗಿಂತ ಮೇಲೆ ಇದೆ, ಅಂತಹ ನಗರಗಳಲ್ಲಿ ಅದರಲ್ಲೂ ಎರಡು ಭಾಗಗಳನ್ನಾಗಿ ಮಾಡಿ ನೀರು ಸರಬರಾಜು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಇದರಲ್ಲೂ ಮಹಾನಗರ ಸಭೆಗಳು ಹಾಗೂ ದೊಡ್ಡ ನಗರಗಳನ್ನು ತೆಗೆದುಕೊಂಡು ೪ ಅನ್ನು ಬೋರ್ಡ್ ಸ್ಕೀಂಗಳು ಎಂದು ಮಂಡಲಿಯ ಮತಿಯಿಂದ

ಮಾಡುವಂತಹದ್ದು. ಮಿಕ್ಕ ೯೧ ಪುರಸಭೆಗಳಿಗೆ ಪುರಸಭೆಯ ಭಾಗದಿಂದ ತೆಗೆದುಕೊಂಡು ಸಾಲದ ರೂಪದಲ್ಲಿ ಅವರಿಂದ ವಸೂಲಿ ಮಾಡಬೇಕಾಗಿ ಬರುತ್ತದೆ. ಈ ಯೋಜನೆಗೂ ಎಲ್ಐಸಿಯವರಿಂದ ಸಾಲ ಸಿಕ್ಕುತ್ತದೆ,

ಶ್ರೀ ಕೆ.ಹೆಚ್. ರಂಗನಾಥ್.—ನೀವು ಅವರಿಗೆ ಗ್ರಾಂಟನ್ನು ಕೊಟ್ಟು ಬದುಕಿಸುತ್ತಿದ್ದೀರಿ ಮತ್ತೆ ಅವರು ನಿಮ್ಮಿಂದ ಸಾಲ ಪಡೆದು, ಆ ಹಣವನ್ನು ನಿಮಗೆ ವಾಪಸ್ಸು ಕೊಡುವುದು ಯಾವ ರೀತಿ ? ತಮ್ಮಿಂದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಏನೂ ರಹ ಇಲ್ಲದೇ ಇರುವ ಪರಿಸ್ಥಿತಿ ಇರುವಾಗ, ಅನುದಾನವನ್ನು ಕೊಡುತ್ತಿದ್ದೀರಿ. ಮತ್ತೆ ಅವರಿಗೆ ಸರ್ಕಾರದವರು ಸಾಲ ಕೊಟ್ಟರೆ, ಆ ಸಾಲವನ್ನು ಯಾವಾಗ ತೀರಿಸುವುದು ?

ಶ್ರೀ ಎಂ. ಚಂದ್ರಶೇಖರ್.—ಸಂಪನ್ಮೂಲಗಳನ್ನು ಸ್ಥಳೀಯವಾಗಿ ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಸರ್ಕಾರ ಅವುಗಳಿಗೆ ಸಹಾಯವನ್ನು ನೀಡುತ್ತಿದೆ. ಆದರೂ ಅವರು ಸಂಪನ್ಮೂಲವನ್ನು ಹೆಚ್ಚಿಗೆ ಮಾಡಿಕೊಳ್ಳುವಂತಹದ್ದರ ಕಡೆ ಕಾರ್ಯಕ್ರಮಗಳೂ ಜಾಸ್ತಿಯಾಗಬೇಕು.

ಶ್ರೀ ಕೆ.ಹೆಚ್. ರಂಗನಾಥ್.—What are the items on which they should take and get the money ? ಅದನ್ನು ಹೇಳಿ ತಾವು.

ಛೇರ್ಮನ್.—ಕುಡಿಯುವ ನೀರು ಕಮರ್ಷಿಯಲ್ ಪರ್ಪಸ್ ಎಂದು ಇರಬಹುದು.

ಶ್ರೀ ಕೆ.ಹೆಚ್. ರಂಗನಾಥ್.—ನಿಮಗೆ ಕಷ್ಟ ಇಲ್ಲ. ಕಾವೇರಿ ೩ನೇ ಸ್ಟೇಜ್‌ಗೆ ೨೫೦ ಕೋಟಿ ರೂಪಾಯಿಗಳೆಂದು ಹೇಳಿ ರಾಜ್ಯದ ಎಲ್ಲಾ ದುಡ್ಡನ್ನು ನಿಮಗೆ ಕೊಟ್ಟಾಯಿತು. ನಮಗೆ ೫೦೦–೬೦೦ ಗ್ಯಾಲನ್ ನೀರು ಸಿಕ್ಕುತ್ತದೆ. ನಮಗೆ ಬೋರ್‌ವೆಲ್ ಹಾಕಿಬಿಟ್ಟಿದ್ದೀವಿ ಎಂದು ನೀವು ಹೇಳಿಬಿಡುತ್ತೀರಿ. ನಾವು ಆ ಬೋರ್‌ವೆಲ್‌ಗಳನ್ನು ಅದುಮ ಬೇಕಾಗಿದೆ, ಸಣ್ಣ ಸಣ್ಣ ಪುರಸಭೆಗಳಲ್ಲಿ ಹಣ ಇಲ್ಲದೇ ಇರುವಾಗ ಅದಕ್ಕೆ ಏನಾದರೊಂದು ಕಾಂಪರೆನ್ಸೀವ್ ಆಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಎಲ್ಐಸಿಯಿಂದ ಸಾಲ ಕೊಡುತ್ತಾರೆ. ೧೦ ಪರ್ಸೆಂಟ್ ನೀರು ಕೊಡುತ್ತೇವೆ. ತದನಂತರ ಪೂರ್ಣಾವಧಿ ನೀರನ್ನು ಒದಗಿಸುತ್ತೇವೆ ಎಂದರೆ ಏನು ಅರ್ಥ ? ಮಾನ್ಯ ಮಂತ್ರಿಗಳಿಗೆ ಇದು ಅರ್ಥವಾಗತಕ್ಕಂತಹ ಸಮಸ್ಯೆ. ಸ್ವತಃ ಅವರು ತಜ್ಞರು ಇದ್ದಾರೆ, ಎಂದರೆ ಇಂಜಿನಿಯರ್ ಇದ್ದಾರೆ. ತಾವೂ ಸಹ ನಡೆದು ಬಂದ ದಾರಿಯಲ್ಲೇ ನಡೆದುಕೊಂಡು ಹೋಗುವುದಾದರೆ ನಾವು ಯಾರಿಗೂ ನೀರನ್ನು ಕೊಡದೇ ಇರತಕ್ಕಂತಹ ಪರಿಸ್ಥಿತಿ ಬರುತ್ತದೆ. ಯಾರೇ ಆಗಲಿ ಒಳ್ಳೆಯ ನೀರನ್ನು ಕೊಡಬೇಕಾಗುತ್ತದೆ. ಪ್ರೊಟೆಕ್ಟೆಡ್ ವಾಟರ್‌ನ್ನು ಕೊಡಬೇಕೆಂಬ ತತ್ವವನ್ನು ನೀವು ಒಪ್ಪಿಕೊಳ್ಳುತ್ತೀರಿ. ಆದರೆ ಆ ಒಂದು ಗುರಿಯನ್ನು ಮುಟ್ಟುವುದಕ್ಕೆ ವ್ಯವಸ್ಥಿತವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದು ೧೦ ವರ್ಷದ್ದೋ, ೧೫ ವರ್ಷದ್ದೋ ಅಥವಾ ೫ ವರ್ಷದ್ದೋ ಎಂದು, ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ ಅದನ್ನು ಫೇಸ್ಡ್ ಪ್ರೋಗ್ರಾಂ ಎಂದು ಮಾಡಬೇಕು. ಯಾವುದೇ ಸರ್ಕಾರ ಬರಲಿ ಇದನ್ನು ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಈಗ ತಾವು ಏನು ಹೇಳುತ್ತೀರಿ, ಎಂದರೆ ೨೦ ಸಾವಿರಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಇರುವಂತಹ ೯೫ ಪುರಸಭೆಗಳಲ್ಲಿ ಕೇವಲ ೪–೫ಕ್ಕೆ ಮಾತ್ರ ಈ ರೀತಿ ವ್ಯವಸ್ಥೆ ಮಾಡುತ್ತೇವೆ, ಉಳಿದವುಗಳಿಗೆ ಸಾಲ ತೆಗೆದುಕೊಂಡು ವ್ಯವಸ್ಥೆ ಮಾಡಿಕೊಡಬೇಕಾಗಿದೆ ಎಂದು ಸಾಲವನ್ನು ಸರ್ಕಾರದಿಂದ ಕೊಡುತ್ತೀರಿ. ಆದರೆ ಆ ಸಾಲವನ್ನು ತೀರಿಸುವ ಬಗೆ ಹೇಗೆ ? ಹಣ ಎಲ್ಲಿದೆ ? ಉದಾಹರಣೆಗೆ ನಮ್ಮ ಪುರಸಭೆಯನ್ನೇ ತೆಗೆದುಕೊಳ್ಳಿ. ನಾವು ೮೬–೮೭ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರು ಮಾಡಿದ್ದೆವು. ಅದಕ್ಕೆ ೧೦ ಪರ್ಸೆಂಟ್ ಹಣವನ್ನು ಪುರಸಭೆಯವರು ಕೊಡಬೇಕು ಎಂದು ಇತ್ತು. ಅದನ್ನು ಕೊಡುವುದಕ್ಕಾಗದೆ ಅದು ಅರ್ಧದಲ್ಲಿ ನಿಂತುಕೊಂಡಿದೆ. ಇದನ್ನು ನನ್ನ ದೃಷ್ಟಿಯಿಂದ ಮಾತನಾಡುತ್ತಿಲ್ಲ. ೨೪೫ ಪುರಸಭೆಗಳಲ್ಲಿ ೨೦ ಸಾವಿರ ಜನಸಂಖ್ಯೆ ಇರುವಲ್ಲಿಯೂ ಎಷ್ಟು ವರಮಾನ ಬರುತ್ತಿದೆ ? ಎಂಬುದರ ಬಗ್ಗೆ ಸೈಂಟಿಫಿಕ್ ಆಗಿ ಯೋಚನೆ ಮಾಡಿ, ಅದಕ್ಕೊಂದು ಪ್ಲಾನ್ ತಯಾರು ಮಾಡಿ ೧೦ ಅಥವಾ ೫ ವರ್ಷದಲ್ಲಿ ಎಲ್ಲಾ ಪುರಸಭೆಗಳಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ೧೦ ವರ್ಷಗಳಲ್ಲಿ ಎಂದರೂ ಕೂಡ ಅದು ಬಹಳ ನಿಧಾನದ ಯೋಜನೆಯಾಗುತ್ತದೆ. ಇಲ್ಲದಿದ್ದರೆ ನಾವು ಹಳೆಯ ದಾರಿಯಲ್ಲೇ ನಡೆದುಕೊಂಡು ಬಂದಹಾಗೆ ಆಗುತ್ತದೆ. ಸಾಲವನ್ನು ಕೊಟ್ಟರೆ ಯಾವ ರೀತಿ ತೀರಿಸುವುದು ? ೨ ಲಕ್ಷ ರೂಪಾಯಿಗಳ ಸಾಲ ಕೊಟ್ಟಿರಿ ಎಂದು ಇಟ್ಟುಕೊಳ್ಳೋಣ. ಅಲ್ಲಿ ಮನೆ ಕಂದಾಯ ಕೂಡ

ಬರುವುದಿಲ್ಲ. ಈಗ ನಿಮ್ಮ ಬೆಂಗಳೂರಿನಲ್ಲಿ ಏಕೆ ಕಂದಾಯವನ್ನು ವಸೂಲಿ ಮಾಡುವುದಿಲ್ಲ? ಇಲ್ಲಿ ಒತ್ತಾಯ ಜಾಸ್ತಿ ಎಂಬು ಧಾರಾಳವಾಗಿ ಹಣವನ್ನು ಕೊಡುತ್ತೀರಿ. ಏಕೆ ಕೊಡುತ್ತಿದ್ದೀರಿ? ಬೇರೆ ಬೇರೆ ಸಣ್ಣ ಸಣ್ಣ ಪುರಸಭೆಗಳ ಗತಿ ಏನಾಗಬೇಕೆಂದು ಯೋಚನೆ ಮಾಡಿದ್ದೀರಾ? ಅವುಗಳಿಗೂ ಏನಾದರೊಂದು ವ್ಯವಸ್ಥೆಯನ್ನು ಮಾಡಿ. ಇಲ್ಲದಿದ್ದರೆ ಸಣ್ಣ ಸಣ್ಣ ಪುರಸಭೆಗಳನ್ನು ಏಕೆ ಮಾಡಿದ್ದೀರಿ? ಇದರ ಬಗ್ಗೆ ತಾವು ಯೋಚನೆ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಬೋರ್ಡ್ ಸ್ಕೀಂನಲ್ಲಿ ತೆಗೆದುಕೊಂಡಿರುವಂತಹ ಕಾರ್ಯಕ್ರಮಕ್ಕೂ ಕೂಡ ೧೦ ಪರ್ಸೆಂಟ್ ಹಣವನ್ನು ಸಂಬಂಧಪಟ್ಟ ಪುರಸಭೆಯವರು ಕೊಡಬೇಕಾಗುತ್ತದೆ. ಉಳಿದ ೯೦ ಪರ್ಸೆಂಟ್ ಸಾಲವೇ.

ಶ್ರೀ ಕೆ.ಹೆಚ್. ರಂಗನಾಥ್.—ನನ್ನ ಅಭಿಪ್ರಾಯವೇನೆಂದರೆ, ತಾವು ಯೋಚನೆ ಮಾಡಿ, ವ್ಯವಸ್ಥಿತವಾದ ಕಾರ್ಯಕ್ರಮವನ್ನು ಪ್ಲಾನ್‌ನ್ನು ತಯಾರು ಮಾಡಿ. ತಾವು ಹಿಂದಿನವರು ನಡೆದು ಬಂದ ದಾರಿಯಲ್ಲೇ ಹೋದರೆ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ. ಬಿಜಾಪುರದ ಜನರು ಹೇಳುತ್ತಿದ್ದರು. ವಿಶ್ವೇಶ್ವರಯ್ಯನವರು ಇದ್ದಂತಹ ಕಾಲದಲ್ಲಿ ಏನೊಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದರೂ ಅದೇ ವ್ಯವಸ್ಥೆ ಇನ್ನೂ ಅಲ್ಲಿದೆ. ಹೊಸದಾಗಿ ಪೈಪನ್ನೂ ಕೂಡ ಹಾಕುವುದಕ್ಕಾಗಿಲ್ಲ. ಡ್ರೈನೇಜ್ ಸಿಸ್ಟಂನ್ನು ಇಂಟರ್‌ಡ್ಯೂಸ್ ಮಾಡಿದ್ದರೂ ಕೂಡ ಅಲ್ಲಿ ಅದನ್ನು ಜಾರಿಗೆ ಕೊಡುವುದಕ್ಕಾಗಿಲ್ಲ. ನೀರನ್ನು ಒದಗಿಸತಕ್ಕಂತಹ ವಿಚಾರದಲ್ಲಿ ಆದ್ಯತೆ ಮೊದಲು ಮಾಡಬೇಕಾಗುತ್ತದೆ. ದಿವಂಗತ ದೇವರಾಜ ಅರಸ್‌ರವರ ಕಾಲದ ಹಿಂದೆ ಇದ್ದಂತಹ ಹಣಕಾಸಿನ ಸಚಿವರ ಹೇಳಿಕೆಯನ್ನು ತಾವು ಓದಿ. ಹಿಂದೆ ಹಣಕಾಸಿನ ಸಚಿವರಾಗಿದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆಕ್ಟ್ರಾಯಿಯನ್ನು ತೆಗೆಯಬೇಕೆಂದು ಎಂದು ಮಾಡಿದ್ದರು. ಅದರಂತೆ ತೆಗೆದದ್ದು ಆಯಿತು. ಅದನ್ನು ಮತ್ತೆ ಅದನ್ನು ರೀ-ಇಂಟರ್‌ಡ್ಯೂಸ್ ಮಾಡುವುದಕ್ಕೆ ದೊಡ್ಡ ವಿರೋಧ ಇದೆ. ಇಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ನಾವು ಮತ್ತೆ ತಯಾರು ಮಾಡಬೇಕು, He enunciated the policy. Your Hon'ble Chief Minister himself make up his mind, because it was his policy. It was he who made the policy statement in one of the budget speeches abolishing the octri—ತದನಂತರ ಮುಂದೆ ಜಾರಿಗೆ ಕೊಟ್ಟಿದ್ದು ಆಯಿತು, ಈಗ ಬಂದಿರುವ ಪರಿಸ್ಥಿತಿ ಏನೆಂದರೆ ಹಿಂದಕ್ಕೆ ಹೋಗುವುದೋ ಅಥವಾ ಮುಂದಕ್ಕೆ ಹೋಗುವುದೋ, ಮುಂದುವರಿಸಿಕೊಂಡು ಹೋಗುವುದಾದರೆ ಏನು ಮಾಡುವುದು? ಅದಕ್ಕೆ ಏನಾದರೂ ಈ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಇಂತಿಷ್ಟು ಪರ್ಸೆಂಟ್ ತೆಗೆದು ಇಡುವುದು ಎಂದು ಮಾಡಿ.

SRI RAMACHANDRA RAO.—It is an expert opinion.

ಶ್ರೀ ಕೆ.ಹೆಚ್. ರಂಗನಾಥ್.—ಪ್ರೊಟೆಕ್ಟೆಡ್ ವಾಟರನ್ನು ವ್ಯವಸ್ಥೆ ಮಾಡುವುದಕ್ಕೆ ಆದ್ಯತೆ ಕೊಡಬೇಕೋ, ಕೊಡಬಾರದೋ? ಕೊಡಬೇಕು ಎಂದು ತೀರ್ಮಾನ ತೆಗೆದುಕೊಳ್ಳುವುದಾದರೆ ಅತಿ ಶೀಘ್ರವಾಗಿ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಸಾಲವನ್ನು ಸರ್ಕಾರ ಕೊಡುವುದಾದರೆ, ಅದನ್ನು ತೀರಿಸುವುದಾದರೂ ಹೇಗೆ?

ಡಾ|| ವಿ.ಎಸ್. ಆಚಾರ್.—ಗುಲ್ವಾಡಿ ಆಯೋಗವನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಪಕ್ಕದ ಮನೆಯಲ್ಲಿ ಯಾರಾದರೂ ಸತ್ತು ಹೋಗಿ ಸ್ವಲ್ಪ ವಿವಾದಕ್ಕೆ ಒಳಗಾದರೆ ಅದಕ್ಕೊಂದು ಕಮೀಷನ್ ಮಾಡುವುದು ಮಾತೆತ್ತಿದರೆ ಒಂದೊಂದು ಕಮೀಷನ್. ತಮಗೆ ಮನಸ್ಸಿಗೆ ಹೊಳೆಯದೆ ಇರುವಂತಹದ್ದು ಈ ಕಮೀಷನ್ನಿಗೆ ಹೊಳೆಯುತ್ತದೆಯೋ?

ಶ್ರೀ ಎಂ. ಚಂದ್ರಶೇಖರ್.—ಕಮೀಷನ್ ಮಾಡುವುದು ೪ ವರ್ಷಕ್ಕೆ ಒಂದು ಸಾರಿ. ಆ ರೀತಿ ನಿಯಮ ಇದೆ. ೪ ವರ್ಷಕ್ಕೊಂದು ಸಾರಿ ಆವೊತ್ತಿನ ಪರಿಸ್ಥಿತಿಯನ್ನು ತೆಗೆದುಕೊಂಡು ಸ್ಟಡಿ ಮಾಡಿ ಸಂಪನ್ಮೂಲವನ್ನು ಹೆಚ್ಚು ಮಾಡುವುದಕ್ಕೆ ಸಲಹೆ ಕೊಡುವುದಕ್ಕೆ ಮಾಡುವಂತಹ ಕಮೀಷನ್ ನಮ್ಮದು.

ಶ್ರೀ ಕೆ.ಹೆಚ್. ರಂಗನಾಥ್.—ನಮ್ಮ ಚಿತ್ರದುರ್ಗ ಜಿಲ್ಲಾ ಕೇಂದ್ರಕ್ಕೆ ೬೫–೬೬ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಎಲ್.ಐ.ಸಿ. ಯಿಂದ ಸಾಲವನ್ನು ಕೊಡಿಸಿ, ಹಿರಿಯೂರ್ ಟೌನ್‌ನಿಂದ ಚಿತ್ರದುರ್ಗ ಜಿಲ್ಲಾ ಕೇಂದ್ರಕ್ಕೆ ೨೫ ಮೈಲಿ ಅಂತರ ಇದೆ. ಅಲ್ಲಿಗೆ ನೀರನ್ನು ತೆಗೆದುಕೊಂಡು ಹೋಗ ತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೆವು. ಈಗ ಅವರು ತೆಗೆದುಕೊಂಡಿರುವ ಹಣಕ್ಕೆ ಬಡ್ಡಿ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಹಾಗಿದ್ದರೆ ಏನು ಮಾಡುವುದು? ಇದರ ಬಗ್ಗೆ ತಾವೇನಾದರೂ ಯೋಚನೆ ಮಾಡಿದ್ದೀರಾ? ಇಂಥಾ ಒಂದು ಕಷ್ಟದಲ್ಲಿ ರಾಜ್ಯದಲ್ಲಿ ಹಲವಾರು ಮುನಿಸಿಪಾಲಿಟಿಗಳು ಇವೆ, ನಗರ ಸಭೆಗಳು ಇವೆ. ಅವರು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕಾಗಲಿ ಅಥವಾ ಅವರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ಮರುಪಾವತಿ ಮಾಡುವ ಬಗ್ಗೆ ತಾವೇನು ಯೋಚನೆ ಮಾಡಿದ್ದೀರಾ ತಾವು ಹೇಳಬಹುದು. ಇದಕ್ಕೆ ಒಂದು ಸಮಿತಿ ಮಾಡುತ್ತೇವೆ. ಅವರು ಏನು ದುಡ್ಡು ಖರ್ಚು ಮಾಡುತ್ತಾರೋ ಅದಕ್ಕೆ ತಕ್ಕಂತೆ ಸಂಪನ್ಮೂಲಗಳು ಬರುವ ಹಾಗೆ ಅವರು ಒಂದು ರಿಪೋರ್ಟ್ ಕೊಡುತ್ತಾರೆ ಎಂದು. ನಾವು ಸಹ ಎಷ್ಟೋ ಸಮಿತಿಗಳನ್ನು ನೋಡಿದ್ದೇವೆ. ಅವರು ಇದನ್ನೆಲ್ಲಾ ಪರಿಶೀಲಿಸಿ ವರದಿ ಕೊಡುವ ಹೊತ್ತಿಗೆ, ಅದನ್ನು ಸರ್ಕಾರ ಜಾರಿಗೆ ತರುವವರೆಗೆ ಅಲ್ಲಿಯವರೆಗೂ ಅವರಿಗೆ ನೀರೇ ಸಿಕ್ಕುವುದಿಲ್ಲ. ಆಗುವ ಪರಿಣಾಮ ಇಷ್ಟೇ.

ಶ್ರೀ ಎಂ. ಚಂದ್ರಶೇಖರ್.—ನಾನು ಈ ವಿಚಾರವನ್ನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಜನಸಂಖ್ಯೆಗನುಗುಣವಾಗಿ ಇಂತಹ ಸಮಸ್ಯೆಗಳು ಬಂದೇ ಬರುತ್ತವೆ. ಈವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿಯೂ ಹೆಚ್ಚು ಜನಸಂಖ್ಯೆ ಇದೆ. ಹಾಗೆಯೇ ನಗರ ಪ್ರದೇಶಗಳಲ್ಲೂ ಸಹ ಹೆಚ್ಚು ಜನಸಂಖ್ಯೆ ಇದೆ. ಆದರೆ ನಗರ ಪ್ರದೇಶದವರು ಅದಕ್ಕೆ ತಕ್ಕಂತೆ ಸಂಪನ್ಮೂಲಗಳನ್ನು ಒದಗಿಸಿಕೊಂಡು ಆ ಜನರಿಗೆ ತಕ್ಕ ಅನುಕೂಲತೆಗಳನ್ನು ಪಡೆಯುತ್ತಿದ್ದಾರೆ. ನಾವು ಈಗ ಗ್ರಾಮಾಂತರ ಪ್ರದೇಶಕ್ಕೆ ಏನು ಹಣ ಕೊಡುತ್ತಿದ್ದೇವೋ ಅದು ಬಹಳ ಕಡಿಮೆ, ಆದುದರಿಂದ ಅಲ್ಲಿ ಅಭಿವೃದ್ಧಿ ಅಷ್ಟಾಗಿ ಆಗುತ್ತಾ ಇಲ್ಲ. ಆದುದರಿಂದ ನಾವು ಏನು ಮಾಡುತ್ತಿದ್ದೇವೆ ಎಂದರೆ ನಮಗೆ ಬರತಕ್ಕಂಥಾ ಸಂಪನ್ಮೂಲಗಳಲ್ಲಿ ಹಣ ಉಳಿಸಿ ಅದನ್ನು ಎಲ್ಲಾ ಕಡೆಯೂ ಹಂಚಬೇಕಾಗಿದೆ. ೧೦ ಸಾವಿರ ಜನಸಂಖ್ಯೆ ಇರತಕ್ಕಂಥಾ ಗ್ರಾಮೀಣ ಪ್ರದೇಶಕ್ಕೆ ಶೇಕಡಾ ೩೦ರಷ್ಟು, ಮತ್ತು ಉಳಿದದ್ದನ್ನು ನಗರ ಪ್ರದೇಶಗಳಿಗೆ ಬರುತ್ತದೆ ಎನ್ನುವುದು ನಮ್ಮ ಒಂದು ಅಭಿಪ್ರಾಯ ಇದೆ. ಒಟ್ಟು ನಮಗೆ ಬರತಕ್ಕಂಥಾ ಸಂಪನ್ಮೂಲಗಳನ್ನು ಈ ರೀತಿ ಹಂಚಬೇಕಾಗಿದೆ, ಜೊತೆಗೆ ಪಬ್ಲಿಕ್ ಒಪಿನಿಯನ್ ಸಹ ಇದರ ಬಗ್ಗೆ ಕ್ರೋಢೀಕರಿಸಬೇಕಾಗಿದೆ. ಈವೊತ್ತಿನ ದಿವಸ ೨೦ ಸಾವಿರ ಜನಸಂಖ್ಯೆ ಇದ್ದರೂ ಕೂಡ ಅದೇನೂ ಒಂದು ದೊಡ್ಡ ನಗರವಲ್ಲ, ಅದು ಒಂದು ದೊಡ್ಡ ಹಳ್ಳಿ ಎನ್ನುವ ಒಂದು ಭಾವನೆ ನಾವು ಇಟ್ಟುಕೊಂಡಿರತಕ್ಕಂಥದ್ದು. ಈ ದೊಡ್ಡ ದೊಡ್ಡ ಮಹಾ ನಗರಸಭೆಗಳನ್ನು ಬಿಟ್ಟು ಬೇರೆ ಬೇರೆ ಗ್ರಾಮಾಂತರ ಪ್ರದೇಶಗಳಿಗೂ ಇತರೆ ಪಟ್ಟಣಗಳಿಗೂ ಹೋಲಿಸಿ ನೋಡುವುದಾದರೆ ಆರ್ಥಿಕ ಪರಿಸ್ಥಿತಿಯಲ್ಲಿ ಹೋಲಿಸಿದರೆ ಏನೂ ವ್ಯತ್ಯಾಸ ಕಂಡುಬರುವುದಿಲ್ಲ ಆದುದರಿಂದ ಅದು ೧೦ ಸಾವಿರ ಪ್ರಜಾಸಂಖ್ಯೆಯೇ ಆಗಿರಲಿ, ೨೦ ಸಾವಿರ ಪ್ರಜಾಸಂಖ್ಯೆಯೇ ಆಗಿರಲಿ ಎಲ್ಲಾ ಕಡೆಗೂ ನಮ್ಮಲ್ಲಿರತಕ್ಕಂಥ ಸಂಪನ್ಮೂಲಗಳನ್ನು ಹಂಚಿ ಪ್ರತಿಯೊಂದು ಗ್ರಾಮಾಂತರ ಪ್ರದೇಶಕ್ಕೂ ನೀರು ಕೊಡಬೇಕು ಎನ್ನುವ ಉದ್ದೇಶ ಇದೆ, ಇದರ ಜೊತೆಗೆ ಸಾರ್ವಜನಿಕರ ಅಭಿಪ್ರಾಯವನ್ನೂ ಸಹ ಪಡೆಯಬೇಕು, ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದ ಜನತೆಯೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆ, ಹಾಗೆ ಮಾಡಿದರೆ ಗ್ರಾಮಾಂತರ ಪ್ರದೇಶದ ಜನತೆಯ ಸಮಸ್ಯೆಯನ್ನು ನಿವಾರಿಸುವುದಕ್ಕೆ ಸಾಧ್ಯ.

ಎರಡನೆಯದಾಗಿ, ಸ್ಥಳೀಯ ಸಂಸ್ಥೆಗಳೂ ಕೂಡ ಸ್ಥಳೀಯವಾಗಿ ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಅದರಿಂದ ಆ ನಗರ ಪ್ರದೇಶವನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆ. ಆ ಜನರೂ ಕೂಡ ಇದಕ್ಕೆ ಮನ್ನಣೆ ಕೊಟ್ಟರೆ ಆಗ ಮಾತ್ರ ನಮ್ಮ ಕಾರ್ಯಕ್ರಮಗಳು ಸಾಧ್ಯವಾಗುತ್ತವೆ. ಡಾ|| ಆಚಾರ್‌ರವರು ನಗರ ಪ್ರದೇಶದ ಅಧ್ಯಕ್ಷರಾಗಿ ತಮ್ಮ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಯಾವ ರೀತಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯಾವ ರೀತಿಯಾಗಿ ಸಂಪನ್ಮೂಲಗಳನ್ನು ದೊರಕಿಸಿಕೊಳ್ಳಬೇಕು ಎನ್ನುವುದರಲ್ಲಿ ಅವರಿಗೆ ಚೆನ್ನಾಗಿ ಅನುಭವ ಇದೆ. ಹಾಗಿದ್ದರೆ ಅವರಿಗೆ ಏನು ಸಾಲವನ್ನು ನಾವು ಕೊಡುತ್ತೇವೋ ಅದನ್ನು ತೀರಿಸುವುದು ಕಷ್ಟವಾಗುವುದಿಲ್ಲ. ಅವರಿಗೆ ಯಾವರೀತಿ ಮಾಡಬೇಕು ಎಂದು ಗೊತ್ತಿರುವಾಗ ಅದೇ ರೀತಿಯಾಗಿ ಬೇರೆಯವರು ಮಾಡದೇ ಇರುವುದಕ್ಕೆ ಕಾರಣ ಏನು? ಬೇರೆಯವರಿಗೆ ಹಾಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ? ಆ ಹೊತ್ತಿಗೆ ಯಾರ್ಯಾರು ಅಲ್ಲಿ ಒಂದು ಅಧಿಕಾರ ಸ್ಥಾನದಲ್ಲಿದ್ದು ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಅವರ ಮೇಲೆ ಇದು ಅವಲಂಬಿಸಿರುತ್ತದೆ. ಈ ಒಂದು ದಿಸೆಯಲ್ಲಿ ನಡೆಯುವುದಾದರೆ ಎಲ್ಲರೂ ಕೂಡ ೧೦೦ಕ್ಕೆ ೧೦೦ರಷ್ಟು

ಸ್ಥಳೀಯವಾಗಿ ಇರತಕ್ಕಂಥಾ ಸಮಸ್ಯೆಗಳನ್ನು ಪರಿಹಾರ ಮಾಡಿಕೊಂಡು ಅನುಕೂಲಗಳನ್ನು ಮಾಡಿಕೊಳ್ಳಬಹುದು.

ಮೂರನೆಯದಾಗಿ. ಹೇಳುವುದಾದರೆ ೪೫ ಸಾವಿರ ಪ್ರಜಾಸಂಖ್ಯೆ ಇರುವ ೯೫ ಪಟ್ಟಣಗಳ ಪೈಕಿ ೪ ಪಟ್ಟಣಗಳಿಗೆ ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕರ್ನಾಟಕ ನಗರ ಪೂರೈಕೆ ಮತ್ತು ಒಳಚರಂಡಿ ಮಂಡಲಿ ತೆಗೆದುಕೊಂಡಿದೆ. ಇನ್ನು ಉಳಿದ ೯೧ ಪುರಸಭೆಗಳಿಗೆ ಎಲ್.ಐ.ಸಿ. ಯಿಂದ ಸಾಲ ಪಡೆದು ಆ ಯೋಜನೆಯನ್ನು ಕೈಗೊಳ್ಳಬೇಕಾಗಿದೆ. ಇದರಲ್ಲಿ ೩೧ ಪುರಸಭೆಗಳಲ್ಲಿ ಈ ಕಾರ್ಯ ಪೂರ್ಣಗೊಂಡಿದೆ. ಅದಕ್ಕೆ ನಾವೂ ಸಹ ಹಣ ಕೊಟ್ಟಿದ್ದೇವೆ. ನಾವು ಆಕ್ಟ್ರಾಯಿ ತೆಗೆದುದ್ದರಿಂದ ಕೆಲವು ಪುರಸಭೆಗಳಲ್ಲಿ ತಮ್ಮ ವಿದ್ಯುಚ್ಛಕ್ತಿಯ ದರವನ್ನು ಕಟ್ಟುವುದಕ್ಕೆ ದುಡ್ಡು ಇರುವುದಿಲ್ಲ ಎನ್ನುವುದು ಗೊತ್ತಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ವಿದ್ಯುಚ್ಛಕ್ತಿಯನ್ನು ಹೇಗೆ ಮಾರಾಟ ಮಾಡುತ್ತಿದ್ದಾರೆ ಅನ್ನುವುದು ಗೊತ್ತಿದೆ. ಆ ರೀತಿ ಮಾಡಿದರೆ ಮಾತ್ರ ಇದರಲ್ಲಿ ಓವರ್‌ಹೆಡ್ಸ್ ಸಿಕ್ಕುತ್ತದೆ, ಎಕ್ಸೆಸ್ ಬರುವುದಿಲ್ಲ. ಅದು ತಮಗೆ ಗೊತ್ತಿದೆಯೇ ?

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಚಂದ್ರಶೇಖರ್.—ಆ ವಿಚಾರಕ್ಕೆ ನಾನು ಮುಂದೆ ಬರುತ್ತೇನೆ. ಈ ವರ್ಷ ಶಿಡ್ಲಘಟ್ಟ, ಯಾದಗಿರ್, ಚಿಕ್ಕಬಳ್ಳಾಪುರ ಮತ್ತು ಶಹಾಬಾದ್ ಈ ೪ ನಗರಗಳಿಗೆ ನೀರು ಸರಬರಾಜು ಯೋಜನೆ ಮಂಜೂರಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಂಡರ್ ಗ್ರೌಂಡ್ ಸೂಯರೇಜ್ ಬೋರ್ಡ್ ವಿಚಾರವಾಗಿ ಹೇಳುವುದಾದರೆ ಇದು ೧೯೭೧ರಲ್ಲಿ ಪ್ರಾರಂಭವಾಯಿತು. ಈ ಬೋರ್ಡ್ ಈಗ ೩೧ ನಗರ ಪ್ರದೇಶಗಳಲ್ಲಿ ಈ ಕೆಲಸ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿ ೧೬ ನಗರ ಪ್ರದೇಶಗಳಲ್ಲಿ ಈ ಕಾರ್ಯ ಆಗಿದೆ, ಇನ್ನು ೧೫ ಪುರಸಭೆಗಳಲ್ಲಿ ಆಗಬೇಕು ಈ ಕೆಲಸ ಮಾಡಬೇಕಾದರೆ ಅಲ್ಲಿ ಕೊನೆಯ ಪಕ್ಷ ೨೦–೨೫ ಗ್ಯಾಲನ್ ನೀರು ಬರಬೇಕು. ಹಾಗಾದರೆ ಈ ಒಳಚರಂಡಿ ಯೋಜನೆಯನ್ನು ಸಮರ್ಪಕವಾಗಿ ಮಾಡಬಹುದು. ಈಗ ತೆಗೆದುಕೊಂಡಿರುವ ಕಡೆಗಳಲ್ಲಿ ಕೆಲವು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಇನ್ನು ೧೦ ವರ್ಷಗಳಲ್ಲಿ ಎಲ್ಲಾ ಕಡೆಯೂ ಇದರ ಕೆಲಸ ಮುಕ್ತಾಯವಾಗುವ ಹಾಗೆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ.

ಇನ್ನು ಈ ಮಂಡಲಿಯ ಒಂದು ಸ್ಕೀಂ ಬಗ್ಗೆ ಹೇಳಬೇಕಾದರೆ ಮುಖ್ಯ ಮಹಾನಗರ ಪ್ರದೇಶವಾದ ಮಂಗಳೂರು, ಬೆಳಗಾಂ, ಗುಲ್ಬರ್ಗಾ ಜೊತೆಗೆ ಬಳ್ಳಾರಿ ಈ ೪ ಕಡೆಗಳಲ್ಲಿ ಈ ಒಂದು ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಹೀಗೆ ಇನ್ನೂ ಕೆಲವಾರು ಯೋಜನೆಗಳು ಇವೆ. ನೀವು ಹೇಳಿದ ಹಾಗೆ ಈ ಪ್ರಸ್ತುತ ವ್ಯವಸ್ಥೆಯಲ್ಲಿ ನೀರು ಸರಬರಾಜು ಮತ್ತು ಅದರ ವಿತರಣೆ ಎರಡನ್ನು ಕೂಡ ಈ ಮಂಡಲಿಯೇ ವಹಿಸಬೇಕಾಗಿದೆ. ಇದರ ಜೊತೆಗೆ ನಾವು ಇದರ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದೇವೆ ಎನ್ನುವುದನ್ನು ಆಮೇಲೆ ಹೇಳುತ್ತೇನೆ. ಈಗ ಕುಡಿಯುವ ನೀರಿನ ಸರಬರಾಜು ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಇರುವುದು ಗದಗ-ಬೆಟಗೇರಿ ವಿಚಾರ. ಬೇರೆ ರೂಪದಲ್ಲಿ ಎಂದರೆ ಕೊಳವೆ ಬಾವಿಗಳ ಮುಖಾಂತರ ನೀರು ಸರಬರಾಜು ಮಾಡಿದರೆ ಅದು ಕುಡಿಯುವುದಕ್ಕೆ ಅಷ್ಟು ಯೋಗ್ಯವಾದುದಲ್ಲ ಎಂದು ಡಾಕ್ಟರ್‌ಗಳು ಹೇಳಿದ್ದಾರೆ. ಇಂತಹ ಕೊಳವೆ ಬಾವಿಗಳು ನಮ್ಮಲ್ಲಿ ಅನೇಕ ಇವೆ. ಜನಸಂಖ್ಯೆಗೆ ತಕ್ಕಂತೆ ನೀರಿನ ಸರಬರಾಜು ಮಾಡಬೇಕಾಗುತ್ತದೆ. ಸುತ್ತ ಮುತ್ತ ಗ್ರಾಮಗಳಲ್ಲಿ ಕುಡಿಯುವ ನೀರು ಸರಿಯಾದ ರೀತಿಯಲ್ಲಿ ಇಲ್ಲದೇ ಇರುವುದರಿಂದ ಇದಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ನಾವು ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಯಾವುದಾದರೂ ಬೇರೆ ಸ್ವರೂಪವನ್ನು ಕೊಟ್ಟು ಪರಿಹಾರ ಮಾಡಬೇಕು ? ಈ ೪ ಕಡೆಗಳಲ್ಲಿ ಈಗ ಏನು ಒಂದು ಯೋಜನೆಯನ್ನು ತೆಗೆದುಕೊಂಡಿದ್ದೇವೆ ಅಲ್ಲಿಗೆ ಬೈಲಾಟರಲ್ ಅಸಿಸ್ಟೆನ್ಸ್‌ನಿಂದಲಾದರೂ ಮಾಡಬೇಕು ಎಂದು ಮಾಡಿದ್ದೇವೆ. ಜೊತೆಗೆ ಹೊರ ರಾಷ್ಟ್ರಗಳಿಂದ ಇದಕ್ಕೆ ಏನು ಸಾಲ ಸಿಕ್ಕುತ್ತದೋ ಅದನ್ನೂ ಸಹ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ಕೆಲವು ಗ್ರಾಮಾಂತರ ಪ್ರದೇಶಗಳು ಮತ್ತು ಪಟ್ಟಣಗಳನ್ನೂ ಸೇರಿಸಿಕೊಂಡಂತೆ ಒಂದು ಸಮಗ್ರ ಯೋಜನೆಯನ್ನು ಹಾಕಿದ್ದೇವೆ. ಈ ಒಂದು ಸಮಗ್ರ ಯೋಜನೆ ರಾಷ್ಟ್ರಮಟ್ಟದಲ್ಲಿ ಮಾಡಲು ಯೋಜನಾ ಇಲಾಖೆಯ ಮತ್ತು ಆರ್ಥಿಕ ಇಲಾಖೆಯವರ ಅಭಿಪ್ರಾಯಗಳನ್ನು ತೆಗೆದುಕೊಂಡು ಇದರ ಕ್ಲಿಯರೆನ್ಸ್‌ಗಾಗಿ

ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದಕ್ಕೆ ಕ್ಲಿಯರೆನ್ಸ್ ಬರುವ ವರ್ಷ ಬರುತ್ತದೋ ಅಥವಾ ಈ ವರ್ಷವೇ ಬರುತ್ತದೋ ಯಾವಾಗ ಬರುತ್ತದೋ ಗೊತ್ತಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳು ಎಲ್ಲಾ ಭಾಗದಲ್ಲಿಯೂ ಈ ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳಬೇಕೆನ್ನುವುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ತುಂಗಭದ್ರಾ ವಾಟರ್ ಯೋಜನೆ ಅದೇನಾಯಿತು ? ಇದರ ಬಗ್ಗೆ ಎಲ್. ಐ. ಸಿ.ಯವರು ೬ ಕೋಟಿ ರೂಪಾಯಿಗಳ ಸಾಲ ಕೊಡುವುದಕ್ಕೆ ಸರ್ಕಾರ ಅದಕ್ಕೆ ಗ್ಯಾರಂಟಿಯಾಗಿ ನಿಲ್ಲಬೇಕು ಎಂದು ಹಿಂದೆ ಇವೆಲ್ಲಾ ತೀರ್ಮಾನವಾಗಿತ್ತು. ಈಗ ಏನಾಗಿದೆ ?

ಶ್ರೀ ಎಂ. ಚಂದ್ರಶೇಖರ್.—ಅದು ತೀರ್ಮಾನ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ವರ್ಲ್ಡ್ ಬ್ಯಾಂಕ್‌ನವರು ಮತ್ತು ಬೇರೆ ಬೇರೆ ರಾಷ್ಟ್ರದವರಿಂದ ಸಾಲ ಪಡೆಯಬೇಕಾದರೆ ಅವರು ಆಗ ಏನೇನು ಕಂಡೀಷನ್ ಹಾಕುತ್ತಾರೋ ? ಅದಕ್ಕೆ ನಾವೇನು ಇಂಟರೆಸ್ಟ್ ಕೊಡಬೇಕಾಗುತ್ತದೆಯೋ ಇಂಟರೆಸ್ಟನ್ನು ಮುನಿಸಿಪಾಲಿಟಿಯವರು ಕೊಡುವುದಕ್ಕಾಗುತ್ತದೆಯೋ ?

ಶ್ರೀ ಎಂ. ಚಂದ್ರಶೇಖರ್.—ಆಗ ಅವರಿಗೆ ನಾವು ಅನುದಾನವಾಗಿ ಏನು ಕೊಡುತ್ತೇವೆ ಅದರ ಮುಖಾಂತರವಾಗಿ ಕೊಡಬೆಕಾಗುತ್ತದೆ ಇದರ ಜೊತೆಗೆ ಕೇಂದ್ರ ಸರ್ಕಾರದವರನ್ನು ಸಹ ನೀವೆಷ್ಟು ಹಾಕಿಕೊಳ್ಳಬೇಕು ಎಂದು ಹೇಳಬೇಕಾಗುತ್ತದೆ. ಗದಗ ಬೆಟಗೇರಿಯ ತುಂಗಭದ್ರಾ ವಾಟರ ಸ್ಕೀಂ ಬಗ್ಗೆ ೭.೧ ಕೋಟಿ ರೂಪಾಯಿಗಳ ಅಂದಾಜು ಆಗಿದೆ. ಇದಕ್ಕೆ ಎಲ್.ಐ.ಸಿ.ಯವರು ಹಣಕೊಡುವ ಬಗ್ಗೆ ಸ್ವಲ್ಪ ತಕರಾರು ಇತ್ತು. ಈ ೯೫ ಪಟ್ಟಣಗಳಿಗೂ ನೀರು ಪೂರೈಕೆ ಮಾಡಲು ಅವರಿಂದ ಸಾಲ ತೆಗೆದುಕೊಂಡರೆ ನೀರಿನ ದರ ಜಾಸ್ತಿಯಾಗುತ್ತದೆ. ಆಗ ೧೦೦೦ ಗ್ಯಾಲನ್ ನೀರನ್ನು ಬಳಸುವುದಾದರೆ ೧೫–೧೬ ರೂಪಾಯಿಗಳ ಖರ್ಚು ಬೀಳುತ್ತದೆ. ನಾವು ನೇರವಾಗಿ ಅಷ್ಟು ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ ಎಂದು ತಡೆ ಹಾಕಿದ್ದರು. ಈಗ ನಾವು ಏನು ಮಾಡಿದ್ದೇವೆ ಎಂದರೆ ಕೆಲವು ಕಡೆಗಳಲ್ಲಿ ಕಾಮಗಾರಿಗಳ ಕೆಲಸ ಅಲ್ಲಿ ಮಾಡಬೇಕಾಗಿರುವುದರಿಂದ ಆ ಪ್ರದೇಶಗಳನ್ನು ಬಿಟ್ಟು ಬರೀ ನಗರಕ್ಕೆ ಸೀಮಿತವಾಗಿರುವ ಹಾಗೆ ಒಂದು ಯೋಜನೆ ಹಾಕಿಕೊಂಡು ಅದಕ್ಕೆ ಇಷ್ಟು ಎಂದು ಒಂದು ಅಂದಾಜು ಮಾಡಿದ್ದೇವೆ. ಆ ಪ್ರಕಾರ ೧೦೦೦ ಗ್ಯಾಲನ್‌ಗೆ ಈಗ ೬½—೭ ರೂಪಾಯಿಗಳು ಆಗುವ ಹಾಗೆ ಮಾಡಿದ್ದೇವೆ. ಈಗ ಈ ಒಂದು ಯೋಜನೆಯ ಪ್ರಕಾರ ಬೋರ್ಡ್‌ನವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ಯಾವಯಾವುದನ್ನು ತೆಗೆದುಕೊಳ್ಳಬೇಕು, ಹೇಗೆ ತೆಗೆದುಕೊಳ್ಳಬೇಕು, ಯಾವರೀತಿಯಾಗಿ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ ? ಈಗ ಸದ್ಯದಲ್ಲಿ ನಾವು ಗದಗ–ಬೆಟಗೇರಿ ಇದಕ್ಕೆ ಆದ್ಯತೆಯನ್ನು ಕೊಡಬೇಕೆನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬೋರ್ಡ್ ಈ ಸ್ಕೀಂನ್ನು ಆದಷ್ಟು ಬೇಗ ತೆಗೆದುಕೊಳ್ಳುವಂತೆ ಪ್ರಯತ್ನ ಮಾಡೋಣ.

ಇದಲ್ಲದೆ ಅಭಾವ ಪರಿಹಾರ ಕಾರ್ಯಕ್ರಮ, ಈಗ ಇರುವಂಥ ಅಭಿಪ್ರಾಯದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಬಡವರಿಗೆ, ಹಿಂದುಳಿದವರಿಗೆ ನೇರವಾದ ಪರಿಹಾರ ಸಿಕ್ಕಿಲ್ಲ. ಎಂದರೆ ಅವರಿಗೆ ನೀರು ಸಿಕ್ಕಿಲ್ಲ, ಸಿಕ್ಕದೆ ಇದ್ದ ಪಕ್ಷದಲ್ಲಿ ಸರ್ಕಾರದವರು ಏನೊಂದು ಕ್ರಮವನ್ನು ಕೈಗೊಂಡಿಲ್ಲ ಎಂದು ಇದೆ. ಇದುವರೆಗೂ ಸರ್ಕಾರದವರು ಕೈಗೊಂಡ ಪರಿಹಾರ ಕಾರ್ಯಕ್ರಮಗಳಲ್ಲಿ ನಗರ ಪ್ರದೇಶಗಳನ್ನು ಸೇರಿಸಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಆರ್ಥಿಕವಾಗಿ ಹಿಂದುಳಿದ ಜನ ಇದ್ದೇ ಇರುತ್ತಾರೆ. ಅವರಿಗೆ ಕುಡಿಯುವ ನೀರು ದೊರೆಯದೇ ಇರುವುದು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಕುಡಿಯುವ ನೀರು ದೊರೆಯದೇ ಇರುವುದು ಒಂದೇ ಆಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೊಳವೆ ಬಾವಿಗಳಲ್ಲಿ ನೀರು ಒಣಗಿ ಹೋದರೆ ನಗರದ ಬಾವಿಗಳಲ್ಲಿಯೂ ನೀರು ಒಣಗಿಹೋಗುತ್ತದೆ. ಆದರೂ ಸಹ ಇದು ಆದ್ಯತೆಯ ಕಾರ್ಯಕ್ರಮವಾಗಿರುವುದರಿಂದ ಸರ್ಕಾರದಿಂದ ಹಣವನ್ನು ಗ್ರಾಮಾಂತರ ಜನರಿಗೆ ಕೊಟ್ಟಿದ್ದೇವೆ. ನಗರ ಪ್ರದೇಶಗಳನ್ನು, ಪಟ್ಟಣ ಪ್ರದೇಶಗಳನ್ನು ಈ ಯೋಜನೆಯ ಬಾಬತ್ತಿನಲ್ಲಿ ಸೇರಿಸುವ ಪ್ರಯತ್ನ ಮಾಡುತ್ತೇವೆ. ರಾಜ್ಯದಲ್ಲಿ ಸುಮಾರು ೨೪೦.೦೭ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕೊಳವೆ ಬಾವಿಗಳನ್ನು ಅನೇಕ ನಗರಗಳಲ್ಲಿ ಮಾಡಿದ್ದೇವೆ. ಸುಮಾರು ೯೬೫ ಕೊಳವೆ ಬಾವಿಗಳನ್ನು ತೆಗೆಯಿಸಿ ೮೧೩ ಬೋರ್‌ವೆಲ್‌ಗಳು ಸಕ್ಸಸ್‌ಫುಲ್ ಆಗಿವೆ. ಇದರಲ್ಲಿ ೩೩೦ ಬಾವಿಗಳು ಬಹಳ ಫಲಪ್ರದವಾಗಿದೆ. ಇವುಗಳಲ್ಲಿ ಸುಮಾರು ೧,೨೦೦–೧,೫೦೦ ಗ್ಯಾಲನ್‌ವರೆಗೆ ನೀರು ದೊರೆಯುತ್ತಿದೆ. ನಾವು ರಾಜ್ಯದಲ್ಲಿ ಪ್ರವಾಸ ಮಾಡಿದಂಥ ಸಮಯದಲ್ಲಿ

ಒಂದು ತೀರ್ಮಾನವನ್ನು ಇವುಗಳ ಬಗ್ಗೆ ತೆಗೆದುಕೊಂಡಿದ್ದೇವೆ. ಅದೇನೆಂದರೆ, ಮತ್ತೊಂದು ಬಾವಿಗೆ ಹಣವನ್ನು ಖರ್ಚುಮಾಡುವ ಬದಲು ಈ ಫಲಪ್ರದವಾದ ಬಾವಿಗಳಿಗೆ ಪಂಪ್‌ಸೆಟ್ಟನ್ನು ಹಾಕಿದರೆ ಒಳ್ಳೆಯದು ಎಂದು. ಈ ಬಾವಿಗಳಿಂದ ಬರತಕ್ಕ ನೀರನ್ನು ಜನರು ಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಇದರಿಂದ ಸಹಾಯಕವಾಗುತ್ತದೆ, ಈ ದೃಷ್ಟಿಯಲ್ಲಿ ನಾವು ಸುಮಾರು ೬೦ ಪಂಪುಗಳನ್ನು ರಾಜ್ಯದಲ್ಲಿ ಈಗಾಗಲೇ ಹಾಕಿದ್ದೇವೆ. ಮಿಕ್ಕ ಕಡೆಗಳಲ್ಲಿ ಸಬ್‌ಮರ್ಸಿಬಲ್ ಪಂಪ್‌ಗಳನ್ನು ಹಾಕುವುದಕ್ಕೆ ಸೂಕ್ತ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ನಗರ ಪ್ರದೇಶಗಳಲ್ಲಿಯೂ ಸಹ ಬಾವಿಗಳನ್ನು ತೆಗೆಯುವುದಕ್ಕೆ ಮಾಡಿರುವ ಕ್ರಮ ಇಲ್ಲಿ ಬಹಳ ಸಹಾಯ ಮಾಡಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ನಗರ ನೈರ್ಮಲ್ಯದ ಯೋಜನೆಯ ಬಗ್ಗೆ ನಮ್ಮಲ್ಲಿ ಅನೇಕ ಸ್ಕೀಂಗಳು ಇವೆ. ಸ್ಕಾವೆಂಜ್ ಎಲಿಮಿನೇಷನ್ ಪ್ರೋಗ್ರಾಂ, ಇದು ಕೇಂದ್ರ ಸರ್ಕಾರದ ಹೊಸ ಯೋಜನೆ. ಈ ಯೋಜನೆಯನ್ವಯ ಕೇಂದ್ರ ಸರ್ಕಾರದಿಂದ ಶೇಕಡ ೫೦ ಪರ್ಸೆಂಟ್ ಹಣ ಗ್ರಾಂಟ್ ರೂಪದಲ್ಲಿ ಬರುತ್ತದೆ. ಉಳಿದ ಹಣವನ್ನು ಹುಡ್ಕೋದಿಂದ ಪಡೆದು ಅದರ ಮುಖಾಂತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಸುಮಾರು ೨೦ ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ಕೆಲವು ಕಡೆ ಶೌಚಕ್ಕೆ ನೀರೂ ಕೂಡ ಇರುವುದಿಲ್ಲ. ಇದಕ್ಕೋಸ್ಕರ ನಾವು ಒಂದು ಹೊಸ ಯೋಜನೆಯನ್ನು ಎಂದರೆ 'ಪೂರ್‌ಫ್ಲಷ್ ಲೆಪಟರಿ' ಕಾರ್ಯಕ್ರಮವನ್ನು ನಾವು ಜಾರಿಗೆ ಕೊಟ್ಟಿದ್ದೇವೆ. ಈ ವರ್ಷದಿಂದ ಇದು ಸುಮಾರು ೪ ಪಟ್ಟಣಗಳಲ್ಲಿ, (ಬಸವಕಲ್ಯಾಣ, ತಿಪಟೂರು, ಕುಶಾಲನಗರ ಮತ್ತು ನಂಜನಗೂಡು) ಈ ನಾಲ್ಕು ಪಟ್ಟಣಗಳಲ್ಲಿ ಸುಮಾರು ೪೧.೨೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಲೆಪಟರೀಸ್ ಕಟ್ಟುವುದಕ್ಕೆ ಆದೇಶ ಕೊಟ್ಟಿದ್ದೇವೆ. ಇದಲ್ಲದೆ, ೧೯೮೧–೯೧ನ್ನು ವಾಟರ್‌ಸಪ್ಲೈ ಮತ್ತು ನೈರ್ಮಲ್ಯದ ಡಿಕೇಡ್ ಎಂದು ಮಾಡಿದ್ದಾರೆ. ಇದೂ ಸಹ ವರ್ಲ್ಡ್ ಬ್ಯಾಂಕ್ ಪ್ರೋಗ್ರಾಂ. ಎಲ್ಲಿ ಅಂಡರ್‌ಗ್ರೌಂಡ್ ಯೋಜನೆಯನ್ನು ಅಳವಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಂಥ ೧೫ ಪಟ್ಟಣಗಳಲ್ಲಿ ಸರ್ವೆ ಮಾಡಿ ಒಂದು ಪ್ರಾಜೆಕ್ಟನ್ನು ಮಂಜೂರಾತಿಗೋಸ್ಕರ ಕೇಂದ್ರಕ್ಕೆ ಕಳುಹಿಸಿದ್ದೇವೆ. ಇದಕ್ಕೆ ಮಂಜೂರಾತಿ ಸಿಕ್ಕುವುದನ್ನು ನೋಡಿಕೊಂಡು ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ.

ಇದಲ್ಲದೆ, ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಪ್ರೋಗ್ರಾಂ, ಇದು ಸ್ಮಾಲ್ ಮತ್ತು ಮಿಡಿಯಂ ಟೌನ್‌ಗಳಿಗೆ ಸಂಬಂಧಿಸಿದ್ದು, ಯಥಾಪ್ರಕಾರ ಕೇಂದ್ರ ಸರ್ಕಾರದಿಂದ ೫೦ ಪರ್ಸೆಂಟ್ ಅನುದಾನ ಬರತಕ್ಕ ಕಾರ್ಯಕ್ರಮ ಇದು. ಇದರಲ್ಲಿ ಹೊಸದಾಗಿ ಬಡಾವಣೆಗಳನ್ನು, ರಸ್ತೆಗಳನ್ನು ಮಾಡತಕ್ಕದ್ದು ಇದೆ. ಮತ್ತು ಮಳಿಗೆಗಳನ್ನು ಕಟ್ಟತಕ್ಕದ್ದಕ್ಕೆ ಮಾತ್ರ ಈ ಯೋಜನೆ ಸೀಮಿತವಾಗಿದೆ. ಇದು ಡಿಕೇಡ್ ಪ್ರೋಗ್ರಾಂನಲ್ಲಿ ಬಂದಿರುವುದರಿಂದ ಇಲ್ಲಿಯೂ ಕೂಡ ಪೂರ್‌ಫ್ಲಷ್ ಲೆಪಟರೀಸ್‌ಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇದರಲ್ಲಿ ಹುಮ್ನಾಬಾದ್, ಮಾಗಡಿ, ಕನಕಪುರ, ಚಿತ್ರದುರ್ಗ. ಷಹಪುರ, ತುಮಕೂರು ನಗರಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆಮೇಲೆ ಬೈಲಾಟರಲ್ ಅಸಿಸ್ಟೆನ್ಸ್‌ನಲ್ಲಿ ಕುಮಟಾ–ಹೊನ್ನಾವರ ಅದರ ಸುತ್ತಮುತ್ತಲಿರುವ ಹತ್ತು ಹಳ್ಳಿಗಳು, ಸಂಕೇಶ್ವರ–ಹುಕ್ಕೇರಿ ಅದರ ಸುತ್ತಮುತ್ತಲಿರುವ ೧೧ ಹಳ್ಳಿಗಳು, ಉಡುಪಿ ಮತ್ತು ಅದರ ಸುತ್ತಮುತ್ತಲಿರುವ ೨೦ ಹಳ್ಳಿಗಳು, ಇಂಟರ್‌ಗ್ರೇಟೆಡ್ ವಾಟರ್‌ಸಪ್ಲೈ ಮತ್ತು ಅಂಡರ್‌ಗ್ರೌಂಡ್ ಡ್ರೈನೇಜ್ ಯೋಜನೆಯಲ್ಲಿ ಮೈಸೂರು ಸಿಟಿಯನ್ನು ತೆಗೆದುಕೊಂಡಿದ್ದೇವೆ. ಇಲ್ಲಿ ಅಂಡರ್‌ಗ್ರೌಂಡ್ ಯಾವುದೋ ಕಾಲದಲ್ಲಿ ಮಾಡಿದ್ದು ಅಷ್ಟು ಸರಿಯಾಗಿಲ್ಲದ ಕಾರಣ ಇದನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಡಿಸ್ಟ್ರಿಬ್ಯೂಷನ್ ಲೈನ್ಸ್ ಯದ್ವಾತದ್ವಾ ಇದ್ದುದರಿಂದ ಈ ಒಂದು ಸ್ಕೀಂನ್ನು ನಾವು ತೆಗೆದುಕೊಂಡಿದ್ದೇವೆ.

ಈ ಯೋಜನೆಗಳಲ್ಲದೆ ಮತ್ತೊಂದು ಯೋಜನೆಯೂ ಕೂಡ ನಮ್ಮಲ್ಲಿದೆ. ಅದರಲ್ಲಿ ನಗರ ಪ್ರದೇಶಗಳಿಗೆ ಹೇಗೆ ಬೈಲ್ಯಾಟರಲ್ ಸ್ಕೀಂ ಇದೆಯೋ ಹಾಗೆ ಗ್ರಾಮಾಂತರ ಪ್ರದೇಶಗಳಿಗೂ ಒಂದು ಯೋಜನೆ ಇದೆ. ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ನೈರ್ಮಲೀಕರಣದ ವ್ಯವಸ್ಥೆ ಇವುಗಳನ್ನು ಮಾಡುವುದು. ಈ ಯೋಜನೆಗೆ ಕೇಂದ್ರ ಸರ್ಕಾರದ ಹಾಗೂ ವರ್ಲ್ಡ್ ಬ್ಯಾಂಕ್‌ನ ಸಹಾಯಧನ ಸಿಕ್ಕುವ ಅವಕಾಶ ಹೆಚ್ಚಾಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಇಂಡಿಯಾಕ್ಕೆ ವರ್ಲ್ಡ್ ಬ್ಯಾಂಕ್ ಸಹಾಯವನ್ನು ನಿಲ್ಲಿಸುತ್ತೇವೆಂದು ಪತ್ರಿಕೆಯಲ್ಲಿ ಬಂದಿದೆ. ಇದೇ ಸಹಾಯವನ್ನು ಅವರು ಚೈನಾಕ್ಕೆ ಕೊಡುತ್ತಾರೆ. ಇನ್ನು ವರ್ಲ್ಡ್ ಬ್ಯಾಂಕ್ ಸಹಾಯ ಎನ್ನುವುದನ್ನು ನಿಲ್ಲಿಸುವ ನಿರ್ಣಯವನ್ನು ಸರ್ಕಾರದವರು ಮಾಡಲೇಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಯೋಜನೆಯೇನೋ ಇದೆ. ನಗರಗಳಲ್ಲಿ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ ಇದ್ದೇ ಇದೆ, ಹಾಗೆಯೇ ಗ್ರಾಮಾಂತರಗಳಲ್ಲಿ ಪಿಎಚ್‌ಇ ಇದೆ. ಇವೆರಡನ್ನೂ ಮರ್ಜ್ ಮಾಡಿ ಒಂದು ಮಂಡಳಿಯನ್ನು ಏನಾದರೂ ಮಾಡಿ ಸಹಾಯಧನವನ್ನು ಹೆಚ್ಚಾಗಿ ಪಡೆಯತಕ್ಕ ವಿಚಾರವನ್ನೂ ಕೂಡ ನಾವು ಮಾಡುತ್ತಿದ್ದೇವೆ, ಇದೇ ರೀತಿಯಾಗಿ ತಮಿಳು ನಾಡು, ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಗುಜರಾತ್ ಮತ್ತು ರಾಜಾಸ್ಥಾನ ರಾಜ್ಯಗಳಲ್ಲಿ ಒಂದೇ ಒಂದು ಮಂಡಳಿಯ ಮುಖಾಂತರವಾಗಿ ಈ ಎರಡು ಕಾರ್ಯಕ್ರಮಗಳು ನಡೆಯುವ ವ್ಯವಸ್ಥೆ ಇದೆ. ತಮಿಳುನಾಡಿನಲ್ಲಿ ಈಗಾಗಲೇ ವರ್ಲ್ಡ್ ಬ್ಯಾಂಕ್‌ನಿಂದ ೧೪೯ ಕೋಟಿ ರೂಪಾಯಿಗಳನ್ನು ಈ ಯೋಜನೆಯನ್ನಯ ತೆಗೆದುಕೊಂಡಿದ್ದಾರೆ. ಮಧುರೈ, ಸೇಲಂ, ಕೊಯಂಬತ್ತೂರು ಇಂಥ ದೊಡ್ಡ ದೊಡ್ಡ ಪಟ್ಟಣಗಳಿಗೆ ನೀರಿನ ವ್ಯವಸ್ಥೆಯನ್ನು ಮಾಡುವುದು ಅಲ್ಲಿದೆ. ಈ ಯೋಜನೆಯಲ್ಲಿ ನಾವು ನಮ್ಮ ಹಳ್ಳಿಗಳಿಗೆ ನೀರು ಸರಬರಾಜು ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಇದನ್ನೂ ಕೂಡ ನಾವು ಪರಿಶೀಲನೆ ಮಾಡುತ್ತಿದ್ದೇವೆ, ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು ಎನ್ನುವುದನ್ನು ಯೋಚಿಸಿ ಎರಡು ಮಂಡಳಿಗಳನ್ನು ಒಂದು ಮಾಡಿ ಕಾರ್ಯಕ್ರಮ ಮಾಡಿದರೆ ಪರಿಸ್ಥಿತಿ ಉತ್ತಮವಾಗುತ್ತದೆ ಎಂದು ಇದನ್ನೂ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವುದನ್ನೂ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ.

ಕುಡಿಯುವ ನೀರಿನ ನಗರ ಸರಬರಾಜು ಮತ್ತು ಒಳಚರಂಡಿ ಯೋಜನೆ ಕಾರ್ಯಾಚರಣೆ ನಮ್ಮ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿದೆ. ನಗರ ಯೋಜನೆಯಲ್ಲಿ ಮುಖ್ಯವಾಗಿ ನಗರದ ಹೊರ ಪ್ರದೇಶದ ಒಂದು ನಕ್ಷೆಯನ್ನು (ಒ.ಡಿ.ಪಿ.) ತೆಗೆಯತಕ್ಕದ್ದು ಮತ್ತು ಕಾಂಪ್ರಹೆನ್ಸೀವ್ ಪ್ಲಾನ್ ಮಾಡತಕ್ಕದ್ದು. ಈ ಎರಡನ್ನು ಮಾಡಿ ವ್ಯವಸ್ಥಿತವಾದ ರೀತಿಯಲ್ಲಿ ನಗರದ ಬೆಳವಣಿಗೆ ಆಗಬೇಕು ಎನ್ನುವ ಕಾರ್ಯಕ್ರಮ ಇದೆ. ಇದರ ಜೊತೆಗೆ ಇಂಟರ್‌ಗ್ರೇಡ್ ಅರ್ಬನ್ ಡೆವಲಪ್‌ಮೆಂಟ್ ಪ್ಲಾನ್‌ನ್ನು ಕೇಂದ್ರಸರ್ಕಾರದ ನೆರವಿನಿಂದಾಗಿ ಅವರಿಂದ ಒಂದಿಷ್ಟು ಹಣವನ್ನು ಪಡೆಯುತ್ತೇವೆ.

ಅದರಲ್ಲಿ ನಮ್ಮ ರಾಜ್ಯದಲ್ಲಿ ೧೬ ಪಟ್ಟಣಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ ೧೬ ಪಟ್ಟಣಗಳಲ್ಲಿ ಯೋಜನಾ ಪ್ರಾಜೆಕ್ಟ್ ಬಾಬ್ತು ೯೭೭.೭೧ ಲಕ್ಷ ಮತ್ತು ಆಗಲೆ ೧೮೨ ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಇದನ್ನು ಸೇರಿಸಿದರೆ, ಮೊದಲು ಮತ್ತು ಎರಡನೇಯ ಕಂತಿನಿಂದ ೨೧೭ ಲಕ್ಷ ತೆಗೆದುಕೊಂಡು ನಾವು ಖರ್ಚು ಮಾಡಿರುವುದು ಎಷ್ಟು ಎಂದರೆ ೮೧.೬ ಕೋಟಿ. ಇದರಲ್ಲಿ ಮೂರು ಕೆಲಸಗಳಿವೆ. ಬಡಾವಣೆಗಳನ್ನು ಮಾಡುವುದು, ರಸ್ತೆಗಳನ್ನು ಮಾಡುವುದು ಮತ್ತು ಮಳಿಗೆಗಳನ್ನು ಮಾಡುವುದು. ಬಡಾವಣೆಗಳನ್ನು ಮಾಡುವುದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದಾಗಿ ಲ್ಯಾಂಡ್ ಅಕ್ವಿಸಿಷನ್ ಸಮಸ್ಯೆ ಇರುವುದರಿಂದ ಈ ಬಗ್ಗೆ ಸಮರ್ಪಕವಾದ ರೀತಿಯಲ್ಲಿ ಕಾರ್ಯಚಟುವಟಿಕೆ ೨-೩ ವರ್ಷಗಳಿಂದ ಆಗಿಲ್ಲ. ಇನ್ನು ಕೇವಲ ಎರಡು ವರ್ಷ ಇದೆ. ಈ ವರ್ಷದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನೈರ್ಮಲ್ಯದ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡರೆ ಈಗ ಏನು ಬರುತ್ತಾ ಇದೆ ಅದನ್ನು ಉಪಯೋಗ ಮಾಡಿಕೊಳ್ಳಬಹುದು. ಇದುವರೆಗೆ ಕೇವಲ ೮೧.೬೩ ಲಕ್ಷ ಮಾತ್ರ ವೆಚ್ಚವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಸುಮಾರು ೧೨೬.೮೩ ಹೆಕ್ಟೇರ್ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ಆರ್ಥಿಕವಾಗಿ ಹಿಂದುಳಿದವರ ಕುಟುಂಬಗಳಿಗೆ ೪೦ ಪುರಸಭೆಗಳಲ್ಲಿ ನಿವೇಶನಗಳನ್ನು ಹಂಚುವುದಕ್ಕೆ ವ್ಯವಸ್ಥೆಯಾಗಿದೆ. ಇದೇ ಇಲಾಖೆಗೆ ಸಂಬಂಧಪಟ್ಟಂತೆ ನಾನು ಬೆಂಗಳೂರು ನಗರದ್ದು ಹೇಳಬೇಕಾಗಿ ಬರುತ್ತಿದೆ. ಬೆಂಗಳೂರಿನಲ್ಲಿ ೧೯೭೨ರಲ್ಲಿ ಒ.ಡಿ.ಪಿ. ಮಾಡಿದ್ದರು. ಆಗ ಬೆಂಗಳೂರು ನಗರಕ್ಕೆ ಇಷ್ಟು ಪ್ರಮಾಣದ ಜನಸಂಖ್ಯೆ ಇರುತ್ತದೆ ಎಂದು ಮಾಡಿದ್ದರು. ಈಗ ನೋಡಿದಾಗ ಬೆಂಗಳೂರು ನಗರ ಅದು ಮೀರಿ ಹೋಗಿದೆ. ಆ ಒ.ಡಿ.ಬಿ.ಗೆ ತಕ್ಕಂತೆ ಸಿ.ಡಿ.ಪಿ. ಮಾಡಿ ಗ್ರೀನ್ ಬೆಲ್ಟ್ ಹಸಿರುಪಟ್ಟಿ ಎಂದು ನಿಗದಿ ಮಾಡಿತ್ತು. ಇವತ್ತಿನ ಪರಿಸ್ಥಿತಿ ನೋಡಿದರೆ, ಬೆಂಗಳೂರಿನ ಜನಸಂಖ್ಯೆ, ಮೀರಿ ಹೋಗಿದೆ ಮತ್ತು ಆ ಹಸಿರು ನಕ್ಷೆ ಏನಿದೆ ಆ ಪ್ರದೇಶದಲ್ಲಿ ಹೋದರೆ ಹಸಿರು ಕಣ್ಣಿಗೆ ಕಾಣುತ್ತಾ ಇಲ್ಲ. ಆದುದರಿಂದ ಪ್ರಾಧಿಕಾರದವರು ಹೊಸದಾದ ಸಿ.ಡಿ.ಪಿ.ಯನ್ನು ಮಾಡುತ್ತಾ ಇದ್ದಾರೆ. ಅದನ್ನು ಮಾಡಿದಾಗ ಈ ಹಸಿರು ಪಟ್ಟಿ ಪ್ರದೇಶ ಹೆಚ್ಚಾಗುತ್ತದೆ, ಸ್ವಲ್ಪ ನಗರಪ್ರದೇಶ ವಿಸ್ತರಣೆ ಕೂಡ ಆಗುತ್ತದೆ. ಇಂಥಾ ಒಂದು ನಗರ ಯೋಜನೆಯ ಕಾರ್ಯಕ್ರಮ ಇದೆ. ಹಾಗೆಯೇ ಟೌನ್ ಪ್ಲಾನಿಂಗ್, ಸಿ.ಐ.ಟಿ.ಬಿ. ಎಲ್ಲಾ ನಗರದ್ದೂ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಾ ನಗರಗಳಲ್ಲಿಯೂ ಗ್ರೀನ್ ಬೆಲ್ಟ್ ಇದೆಯೇ.

ಶ್ರೀ ಎಂ. ಚಂದ್ರಶೇಖರ್.—ಈಗ ಸಧ್ಯಕ್ಕೆ ಬೆಂಗಳೂರು ನಗರಕ್ಕೆ ಮಾತ್ರ ಇದೆ.

ಡಾ|| ವಿ. ಎಸ್. ಆಚಾರ್ಯ.—ಬೇರೆ ಬೇರೆ ಕಡೆ ಇದೆ.

ಶ್ರೀ ಎಂ. ಚಂದ್ರಶೇಖರ್.—ಶೇಕಡ ೨೫ರಷ್ಟು, ೩೦ರಷ್ಟು ಪ್ರದೇಶಗಳನ್ನು ಗಿಡಮರಗಳನ್ನು ಬೆಳೆಯುವುದಕ್ಕೋಸ್ಕರ ಇಡಬೇಕು ಎಂದು ಇರುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಇದನ್ನು ಮಾಡದೇ ಹೋದರೆ ಈ ತಾಪತ್ರಯವನ್ನು ಅಲ್ಲಿಯೂ ಅನುಭವಿಸಬೇಕಾಗಿ ಬರುತ್ತದೆ.

ಶ್ರೀ ಎಂ. ರಾಮಪ್ಪ.—ಬಿಸಿಲು ಜಾಸ್ತಿ, ಇರುವ ಬಳ್ಳಾರಿಯಲ್ಲಿ ಏನಾದರೂ ಮಾಡುತ್ತೀರೊ?

ಶ್ರೀ ಎಂ. ಚಂದ್ರಶೇಖರ್.—ಬಳ್ಳಾರಿ, ರಾಯಚೂರುಗಳಲ್ಲಿ ಮಾಡಬೇಕಾಗಿರುವುದೇ ಇಷ್ಟು ನಗರ ಯೋಜನಾ ಕಾರ್ಯಕ್ರಮಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮುಂದೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಲಿಯ ಕಾರ್ಯಚಟುವಟಿಕೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೮೦೫ ಕೊಳಚೆ ಪ್ರದೇಶಗಳು ಇವೆ ಎಂದು ಐಡೆಂಟಿಫೈ ಆಗಿದೆ, ಇದು ತಮ್ಮ ಗಮನಕ್ಕೂ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್.—ವರದಿಯಲ್ಲಿ ೭೯೮ ಎಂದು ಇದೆ.

ಶ್ರೀ ಎಂ. ಚಂದ್ರಶೇಖರ್.—ಅದು ಹಳೆಯದು, ನಾನು ಹೇಳಿವುದು ಹೊಸದಾದ ಸಂಖ್ಯೆ. ತಮಗೆ ಗೊತ್ತಿರುವ ಹಾಗೆ ಈ ಮಂಡಲಿಗೆ ಒಂದು ವರ್ಷದಿಂದ ಅಧ್ಯಕ್ಷರು ಇರಲಿಲ್ಲ. ಈ ಸರ್ಕಾರ ಬಂದಮೇಲೆ ಅನುಭವಿ ಅಧ್ಯಕ್ಷರನ್ನು ನಾವು ಮಾಡಿದ್ದೇವೆ. ಅವರು ಹಿಂದಿನ ಶಾಸನಸಭಾ ಸದಸ್ಯರು ಬೆಂಗಳೂರು ನಗರದವರೇ. ಅವರು ಈ ಸಮಸ್ಯೆಯನ್ನು ಚೆನ್ನಾಗಿ ಅರಿತಂಥವರು. ಅವರು ಲೇಟೆಸ್ಟ್ ಮಾಹಿತಿಯನ್ನು ತೆಗೆದುಕೊಂಡು ಈ ಮಾಹಿತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ೮೦೫ ಎಂದು ಇದೆ. ಬೆಂಗಳೂರು ನಗರದಲ್ಲಿ ೨೯೨, ಮೈಸೂರಿನಲ್ಲಿ ೧೭, ಮಂಗಳೂರಿನಲ್ಲಿ ೧೭, ಹುಬ್ಬಳ್ಳಿ-ಧಾರವಾಡದಲ್ಲಿ ೬೩, ಬೆಳಗಾಂನಲ್ಲಿ ೭ ಈ ಮಹಾನಗರಗಳಲ್ಲಿ ಇಷ್ಟು ಇವೆ.

ಶ್ರೀ ಕೆ. ಹೆಚ್. ರಂಗನಾಥ್.—ಮೊದಲು ೧೯೬೫-೬೬ರಲ್ಲಿ ೬೩ ಇದೆ. ನಾನು ನಿನ್ನೆ ಯಶವಂತಪುರಕ್ಕೆ ಹೋಗಿದ್ದೆ. ಸ್ಲಂ ಬೋರ್ಡ್ ಅಧ್ಯಕ್ಷರೂ ಕೂಡ ಅಲ್ಲಿಗೆ ಹೋಗಿದ್ದಾರೆ. ಒಂದು ಮನೆ ಬಿದ್ದು ಹೋಗಿ ಅಲ್ಲಿರುವವರು ಸತ್ತುಹೋಗಿದ್ದಾರೆ. ತಾವೂ ಕೂಡ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆದರೆ ತಮ್ಮ ಇಂಜಿನಿಯರ್ಸ್ ಈ ಕೆಲಸದ ಬಗ್ಗೆ ಆಸಕ್ತಿ ವಹಿಸುತ್ತಾ ಇಲ್ಲ ಎನ್ನುವುದನ್ನು ಸ್ವತಃ ನೋಡಲಿಕ್ಕೆ ಇದು ಒಂದು ಮಾದರಿ. ತಾವು ಆಗಾಗ ಇಂತಹ ಜಾಗಗಳಿಗೆ ಹೋದರೆ ಒಳ್ಳೆಯದು ಎಂದು ಕಾಣುತ್ತದೆ. ಇಲ್ಲದೆ ಹೋದರೆ ನೀವು ಅವರು ಮಾಡಿದ್ದಾರೆಂದು ಬಿಟ್ಟುಬಿಟ್ಟರೆ ಜನರಿಗೆ ತೊಂದರೆಯಾಗುತ್ತದೆ. ನಾನು ನಿನ್ನೆ ಬೆಳಿಗ್ಗೆ ಹೋಗಿದ್ದೆ. ಅಲ್ಲಿ ಇಷ್ಟಿಷ್ಟು ಜಾಗ ಇದೆ, ಒಬ್ಬ ಮನುಷ್ಯ ಕೂಡ ಓಡಾಡುವ ಹಾಗಿಲ್ಲ, ಅದರ ಕೆಳಗೆ ಚರಂಡಿ ಮಾಡಿದ್ದಾರೆ, ಆ ನೀರು ಮೇಲೆ ಬಂದು ಮನೆಗೆ ನುಗ್ಗಿದೆ. ಅದು ಮಾನ್ಯ ರಾಮದೇವ್ ಅವರ ಕ್ಷೇತ್ರ. ಅಲ್ಲಿ ರಾತ್ರಿ ಮಲಗಿದ್ದವರ ಪೈಕಿ ಗಂಡ ಸತ್ತು ಹೋದ. ಈ ಪರಿಸ್ಥಿತಿ ಅಲ್ಲಿ ಆಗಿದೆ. ಈ ೨೯೦ ಪ್ರದೇಶದಲ್ಲಿ ಎಷ್ಟು ಈ ಬೋರ್ಡಿಗೆ ಬರುತ್ತದೋ ಗೊತ್ತಿಲ್ಲ ಮೊದಲು ಜಯನಗರಕ್ಕೆ ಹೋದಾಗ ಒಂದು ಗುಡಿಸಲೂ ಇರಲಿಲ್ಲ, ಈಗ ವಿಪರೀತ ಗುಡಿಸಲುಗಳು ಬಂದು ಬಿಟ್ಟಿದೆ. ನೀವು ದಿನವೂ ಗುಡಿಸಲು ತೆಗೆಯಲಿಕ್ಕೆ ಆಗುವುದಿಲ್ಲ. ಅಧಿಕಾರಿಗಳು ಏನು ಮಾಡುತ್ತಾರೆ. ಎಷ್ಟು ಪ್ರದೇಶಕ್ಕೆ ಒಬ್ಬರು ಅಧಿಕಾರಿಯನ್ನು ಹಾಕಿದ್ದೀರಿ, ಅವರ ಜವಾಬ್ದಾರಿ ಏನು, ಅವರ ಅಕೌಂಟಬಿಲಿಟಿ ಇದೆಯೋ ಇಲ್ಲವೇ ಒಂದು ವೇಳೆ ಇದ್ದರೆ ಅವರಿಗೆ ಏನು ಶಿಕ್ಷೆ ವಿಧಿಸಿದ್ದೀರಿ ? ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡರೆ ಮಾತ್ರ ಇದು ನಿಲ್ಲುತ್ತದೆ. ತಮಗೆ ಗೊತ್ತಿರುವ ಹಾಗೆ ಇದನ್ನು ಹಾಕಿಸುವವರು ಕೆಲವರು ಇದ್ದಾರೆ, ತೆಗೆಸುವವರೂ ಕೆಲವರಿದ್ದಾರೆ, ಅದೆಲ್ಲಾ ಬೇರೆ ಇದೆ. ಅಧಿಕಾರಿಗಳೂ ಇವರ ಜೊತೆಗೆ ಶಾಮೀಲಾದರೆ ಕಷ್ಟವಾಗುತ್ತದೆ, ಆದುದರಿಂದ ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಕರೆಯುತ್ತೀರೋ ಸ್ಲಂ ಇಂಪ್ರೂವ್‌ಮೆಂಟ್ ಬೋರ್ಡ್ ಎಂದು ಕರೆಯುತ್ತೀರೋ ? ಏಕೆಂದರೆ ಸ್ಲಂ ಕ್ಲಿಯರೆನ್ಸ್‌ನಲ್ಲಿ ಇಂಪ್ರೂವ್‌ಮೆಂಟ್ ಎಂದು ಇದೆ. ಅದನ್ನು ಕಿತ್ತು ಹಾಕುವುದು ಸಾಧ್ಯವಿಲ್ಲ, ೬೦ ಇದ್ದದ್ದು ೨೮೦ ಆಗಿದೆ. ಮಾನ್ಯ ರಂಗನಾಥ್‌ರವರ ಪಕ್ಷವಾದರೂ ಕೂಡ ಸ್ಲಂ ಕ್ಲಿಯರೆನ್ಸ್ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಪಕ್ಷ ಇದ್ದರೂ ಆಗುವುದಿಲ್ಲ. ಯಾವ ಪಕ್ಷ ಇದ್ದರೂ ಸ್ಲಂ ಕ್ಲಿಯರೆನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಈಗಿನ ವ್ಯವಸ್ಥೆಯಲ್ಲಿ ಯಾರು ಬಂದರೂ ಆಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮೇಲ್ವಿಚಾರಣೆ ನೋಡತಕ್ಕವರು ಸರಿಯಾಗಿ ಇದ್ದರೆ ಯಾರು ಬಂದರೂ ಆಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಉತ್ತರ ಕೊಡಬೇಕು. ನೀವೇನಾದರೂ ಬಂದರೆ ಸ್ಲಂ ಕ್ಲಿಯರೆನ್ಸ್ ಆಗುತ್ತದೆಯೇ ?

ಶ್ರೀ ಕೆ.ಹೆಚ್. ರಂಗನಾಥ್.—ನೀವು ಬಂದರೆ ನಮ್ಮನ್ನೇ ಕ್ಲಿಯರ್ ಮಾಡುತ್ತೀರಿ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮಂಥವರು ಕ್ಲಿಯರ್ ಮಾಡುವುದಿಲ್ಲ, ಆ ಕಡೆಯವರು ಕ್ಲಿಯರ್ ಮಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಇದರ ಅಧ್ಯಕ್ಷರು ಸಿಕ್ಕಿದ್ದರು. ಅವರ ಶ್ರದ್ಧೆ ನಿಷ್ಠೆ ಬಗ್ಗೆ ನಾನು ಮರು ಮಾತು ಆಡುವುದಿಲ್ಲ, ಅವರು ನನಗೆ ಪರಿಚಯಸ್ಥರು. ಮೊನ್ನೆ ತಾನೆ ಕೆಲವು ನೌಕರರುಗಳನ್ನು ಹಂಗಾಮಿಯಾಗಿ ತೆಗೆದುಕೊಂಡರು. ಅಲ್ಲಿ ಡಿಪಾರ್ಟ್‌ಮೆಂಟ್ ಎಂದು ಇಲ್ಲ, ಬೇರೆ ಕಡೆಯಿಂದ ಡಪ್ಯುಟೇಷನ್ ಬಂದಿರುತ್ತಾರೆ. ಕಾರ್ಪೊರೇಷನ್‌ಗೆ, ಬಿ.ಡಿ.ಎ.ಗೆ ಸ್ಲಂ ಬೋರ್ಡ್‌ಗೆ ಡೆಪ್ಯುಟೇಷನ್ ಬರತಕ್ಕವರು ಉದ್ದೇಶ ಏನು ಎಂದು ತಮಗೆ ಗೊತ್ತಿರಬಹುದು. ಅವರ ಪ್ರೆಷರ್ ಎಷ್ಟಿರುತ್ತದೆ ಎಂದು ತಮಗೆ ಗೊತ್ತಿರಬಹುದು. ಏನಾದರೂ ಸ್ವಲ್ಪ ಗಿಟ್ಟಿಸೋಣ ಎಂದು ಬರುತ್ತಾರೆಯೇ ಹೊರತು ಅಲ್ಲಿ ಏನಾದರೂ ಸರಿ ಮಾಡೋಣ ಎನ್ನತಕ್ಕ ಅಭಿಪ್ರಾಯದಿಂದ ಬರುವುದಿಲ್ಲ.

ಒಬ್ಬ ಸದಸ್ಯರು.—ಪಾವಗಡದ ತೋಳಗಳು ಬೆಂಗಳೂರು ನಗರಕ್ಕೆ ಡೆಪ್ಯುಟೇಷನ್ ಬರುತ್ತವೆ.

ಶ್ರೀ ಕೆ.ಹೆಚ್. ರಂಗನಾಥ್.—ಇದಕ್ಕೆ ಕಾರಣ ಮೊದಲೇ ಇಷ್ಟು ದಿವಸದಲ್ಲಿ ಅದನ್ನು ಸರಿ ಮಾಡಬೇಕು ಎನ್ನತಕ್ಕ ಪ್ರೋಗ್ರಾಂ, ಪ್ಲಾನ್ ಇಲ್ಲದೇ ಇರುವುದು. ಮತ್ತು ಆಸಕ್ತಿ ಇಲ್ಲದೇ ಇರತಕ್ಕಂಥಾದ್ದು. ಆದುದರಿಂದ ಆ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳಿದ್ದರೆ ಅವರಿಂದ ಕೆಲಸ ತೆಗೆದುಕೊಳ್ಳಲಿಕ್ಕೆ ಆಗುತ್ತದೆ. ಆದುದರಿಂದ ತಾವು ಇದರ ಬಗ್ಗೆ ಗಮನ ಹರಿಸುವುದು ಸೂಕ್ತ.

ಶ್ರೀ ಎಂ. ಎಸ್. ಕೃಷ್ಣನ್.— ಹಿಂದೆ ಒಬ್ಬರು ಇದರ ಅಧ್ಯಕ್ಷರಾಗಿದ್ದರು. ಅವರು ಸ್ಲಂ ಕ್ಲಿಯರೆನ್ಸ್ ಮಾಡುವುದಕ್ಕೆ ಬದಲು ಸ್ಲಂ ಲಾರ್ಡ್‌ಗಳನ್ನು ಹೆಚ್ಚಿಸಿದ್ದರು. ಆ ಲಾರ್ಡ್‌ಗಳಿಗೆಲ್ಲ ಇವರು ಲಾರ್ಡ್ ಆಗಿದ್ದರು. ಡೈನಾಮಿಕ್ ಪರ್ಸನಾಲಿಟಿಯನ್ನು ಛೇರ್ಮನ್ ಆಗಿ ಮಾಡಿದ್ದೀರಿ. ಅವರು ಲಾರ್ಡ್ ಆಗಿ ಎಲ್ಲಾ ಲಾರ್ಡ್‌ಗಳನ್ನು ಹೊಡೆದು ಹಾಕಲಿ, ಸಂತೋಷ.

ಡಾ|| ವಿ. ಎಸ್. ಆಚಾರ್ಯ.— ಇದರ ಬಗ್ಗೆ ಒಂದು ಇಂಟಿಗ್ರೇಟೆಡ್ ಪ್ರಾಜೆಕ್ಟ್ ಬೇಕು. ದಾವಣಗೆರೆಗೆ ಹೋದರೆ ಅಲ್ಲಿ ಎಷ್ಟೋ ವರ್ಷಗಳಿಂದ ನೀರಿನ ವ್ಯವಸ್ಥೆ ಇಲ್ಲ. ನಿವೇಶನಗಳು ಬಹಳ ದಿವಸಗಳಿಂದ ಹಾಗೇ ಉಳಿದಿವೆ, ವಿತರಣೆಯಾಗಿಲ್ಲ. ಆದ್ದರಿಂದ, ಇದಕ್ಕೋಸ್ಕರ ೫ ವರ್ಷದ ಒಂದು ಯೋಜನೆಯನ್ನು ಹಾಕಿ ಅದಕ್ಕೆ ಒಂದು ಬ್ಲೂ ಪ್ರಿಂಟನ್ನು ತಯಾರು ಮಾಡಿದರೆ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸಬಹುದು, ಮತ್ತೆ ಹೊಸದಾಗಿ ಸ್ಲಂಗಳು ಹುಟ್ಟದಂತೆ ಮಾಡಬಹುದು.

ಶ್ರೀ ಎಂ. ರಾಮಪ್ಪ.— ನಾನು ಬಳ್ಳಾರಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಉಪಾಧ್ಯಕ್ಷರು.— ಮಂತ್ರಿಗಳ ಉತ್ತರ ಆದಮೇಲೆ ಹೇಳಿ.

ಶ್ರೀ ಎಂ. ರಾಮಪ್ಪ.— ಹೊರಗೆ ಹೋಗಿ ಎಂದರೆ ಹೋಗುತ್ತೇನೆ. ೫೧ ರೂಪಾಯಿಗಳು ತೆಗೆದುಕೊಳ್ಳುವುದಕ್ಕೆ ಬಂದಿದ್ದೇನೆಂದು ತಿಳಿದುಕೊಂಡಿದ್ದರೆ ಮನೆಗೆ ಹೋಗುತ್ತೇನೆ. ನಮ್ಮ ಕ್ಷೇತ್ರದ ಬಗ್ಗೆ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು.— ತಾವು ತಪ್ಪು ತಿಳಿದುಕೊಳ್ಳುತ್ತೀರಲ್ಲ!

ಶ್ರೀ ಎಂ. ರಾಮಪ್ಪ.— ನಮ್ಮಲ್ಲಿ ಸ್ಲಂ ಬೋರ್ಡ್ ಕಛೇರಿ ಇದೆ, ಆದರೆ ಸಾಕಷ್ಟು ಅಧಿಕಾರಿಗಳು ಇಲ್ಲ. ಇದ್ದವರಿಗೂ ಸರಿಯಾದ ವಸತಿ ಸೌಕರ್ಯ ಇಲ್ಲ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಏನಿದ್ದಾರೆ ಅವರು ಎರಡು ಜಿಲ್ಲೆಗಳನ್ನು ನೋಡಿಕೊಳ್ಳಬೇಕು. ಅವರು ಬಸ್ಸಿನಲ್ಲಿ ಓಡಾಡಬೇಕಾಗಿದೆ. ಅವರಿಗೆ ಸರಿಯಾದ ವಸತಿ ಸೌಕರ್ಯ ಮಾಡಿಕೊಡುತ್ತೀರಾ ಇಲ್ಲವೆ? ನೀವು ಅಲ್ಲಿಗೆ ಹೋದಾಗ ಮಾಡಿಕೊಡುತ್ತೇವೆಂದು ಹೇಳುತ್ತೀರಿ, ನಂತರ ೬ ತಿಂಗಳಾದರೂ ಅವರ ಮುಖವನ್ನು ನೋಡುವುದಿಲ್ಲ. ಹೀಗಾಗಿ ಅವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದರ ಬಗ್ಗೆ ಏನಾದರೂ ಮಾಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.— ಕೃಷ್ಣನ್‌ರವರು ಕೊಳಚೆ ಪ್ರದೇಶದ ಅಭಿವೃದ್ಧಿ ಮತ್ತು ಕೊಳಚೆ ನಿರ್ಮೂಲನದ ಬಗ್ಗೆ ಹೇಳಿದರು...

ಶ್ರೀ ಕೆ. ಹೆಚ್. ರಂಗನಾಥ್.— ಕೊಳಚೆ ನಿರ್ಮೂಲನ ಮತ್ತು ಅಭಿವೃದ್ಧಿ ಎಂದರೆ ಏನು? ಅವರಿಗೆ ಕೊಟ್ಟಿರತಕ್ಕ ನಿವೇಶನಗಳು ಏನಿವೆ ಅಲ್ಲಿ ರಸ್ತೆ ವ್ಯವಸ್ಥೆ ಮಾಡಬೇಕು, ನೀರಿನ ವ್ಯವಸ್ಥೆ ಮಾಡಬೇಕು. ಈಗ ಅಲ್ಲಿರತಕ್ಕ ರಸ್ತೆಗಳಲ್ಲಿ ಮನುಷ್ಯರು ಕೂಡ ಓಡಾಡುವುದಕ್ಕೆ ಆಗುವುದಿಲ್ಲ. ಕೊನೆಯಪಕ್ಷ ಗಾಡಿಗಳಾದರೂ ಓಡಾಡುವಂಥ ವ್ಯವಸ್ಥೆ ಇರಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಅಲ್ಲಿ ೬ ಅಡಿ ರಸ್ತೆ ಇದೆ, ೧೫ ಅಡಿ ರಸ್ತೆ ಮಾಡಬೇಕೆಂದರೆ ಒಂದು ರೋ ಮನೆ ಹೋಗುತ್ತದೆ. ಅಂಥವರನ್ನು ಬೇರೆ ಕಡೆಗೆ ಸ್ಥಳಾಂತರಿಸಿ ರಸ್ತೆಯನ್ನು ಮಾಡಬೇಕಾಗುತ್ತದೆ. ೧೦೦ ಕುಟುಂಬ ಇರಬೇಕಾದ ಕಡೆ ೨೦೦ ಕುಟುಂಬಗಳು ಇರುತ್ತವೆ. ಅಲ್ಲಿ ೧೦೦ಕ್ಕೆ ಮಾತ್ರ ವ್ಯವಸ್ಥೆ ಇದೆ. ಉಳಿದವರಿಗೆ ಸ್ಥಳ ನೀಡಬೇಕಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.— ಕೊಳಚೆ ಪ್ರದೇಶಗಳು ಹೇಗೆ ಬರುತ್ತವೆಂದರೆ, ಎಲ್ಲಿ ವರ್ಕ್ ಷಾಪ್‌ಗಳು ಇರುತ್ತವೆ ಅಲ್ಲಿ ಜನ ನೆಲೆಸುತ್ತಾರೆ, ಅಲ್ಲೇ ಉಳಿದುಬಿಡುತ್ತಾರೆ. ಅದನ್ನು ಈಗ ನಿವಾರಣೆ ಮಾಡುತ್ತೇವೆಂದು ಸರ್ಕಾರ ಹೊರಟಿದೆ. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿರತಕ್ಕ ನೌಕರರಿಗೆ ಬೇಕಾದ ವಸತಿ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ ಅದನ್ನು ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ತೆಗೆದುಕೊಂಡು ಹೌಸಿಂಗ್ ಸ್ಕೀಂನಲ್ಲಿ ಮನೆ ಕಟ್ಟತಕ್ಕ ಕೆಲಸ ಮಾಡಿಲ್ಲ. ಹಾಲಿ ಇರತಕ್ಕವರನ್ನು ಷಿಫ್ಟ್ ಮಾಡುವುದೆಂದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ನಿಮ್ಮ ಪೌರ ಕಾರ್ಮಿಕರು ಅಲ್ಲಿ ವಾಸವಾಗಿದ್ದಾರೆ. ರಾಜಾಜಿನಗರದಲ್ಲಿ ವಾಸ ಮಾಡುವವರನ್ನು ಕಂಟೋನ್‌ಮೆಂಟ್‌ಗೆ ತೆಗೆದುಕೊಂಡು ಹಾಕಿದರೆ ಅವರು ಅಲ್ಲಿಂದಿಲ್ಲಿಗೆ ಓಡಾಡಿಕೊಂಡು ಕೆಲಸ ಮಾಡಲು ಕಷ್ಟವಾಗುತ್ತದೆ. ಅವರು ತಮ್ಮ ಅನುಕೂಲತೆಗಳನ್ನು ನೋಡಿಕೊಳ್ಳುವುದರಲ್ಲಿ ತೊಡಗಿದರೆ ಕೆಲಸ ಕುಂಠಿತವಾಗುತ್ತದೆ. ಇದಕ್ಕೆ ಏನಾದರೂ ಒಂದು ವ್ಯವಸ್ಥಿತವಾದ ಯೋಜನೆ ಮಾಡುವುದು ಯೋಗ್ಯ.

ಶ್ರೀ ಎಂ. ಚಂದ್ರಶೇಖರ್.— ಇದಕ್ಕೂ ಒಂದು ಯೋಜನೆ ಇದೆ. ನಮಗೆ ಮತ್ತು ಕೃಷ್ಣನ್‌ರವರಿಗೆ ಇದರ ಬಗ್ಗೆ ಅನುಭವ ಇದೆ. ಬಹುಶಃ ತಮಗೂ ಇರಬಹುದು. ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶದ ನಿವಾಸಿಗಳ ಮನೋಭಾವ ಏನೆಂದರೆ ಅವರಿಗೆ ಅಂತಸ್ತಿನ ಮನೆಗಳನ್ನು ಕಟ್ಟಿ ಕೊಟ್ಟರೆ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ಯಾರೋ ಒಬ್ಬರಿಬ್ಬರು ಹೋಗಲಿಲ್ಲವೆಂದರೆ ಆ ಯೋಜನೆಯನ್ನು ಬದಲಾವಣೆ ಮಾಡುವುದು ಬೇಡ.

ಶ್ರೀ ಎಂ. ಚಂದ್ರಶೇಖರ್.—ಮೊದಲು ಅಲಾಟ್ ಮಾಡಿಸಿಕೊಳ್ಳುತ್ತಾರೆ. ನಂತರ ಅದನ್ನು ಯಾರಿಗಾದರೂ ಬಾಡಿಗೆಗೆ ಕೊಟ್ಟು ಯಥಾಪ್ರಕಾರ ಅವರು ಕೊಳಚೆ ಪ್ರದೇಶಗಳಲ್ಲಿರುತ್ತಾರೆ. ಕಾರಣ ಗ್ರಾಮಾಂತರ ಪ್ರದೇಶಗಳಿಂದ ವಲಸೆ ಬಂದಂತಹ ಜನ ಅವರು. ಗ್ರಾಮೀಣ ಜೀವನವನ್ನು ನಗರ ಪ್ರದೇಶಗಳಲ್ಲೂ ನಡೆಸಬೇಕೆಂಬುದು ಅವರ ಆಸೆಯಾಗಿರುತ್ತದೆ. ಅವರು ಕುರಿ, ಕೋಳಿ, ಹಸುಗಳನ್ನು ಕಟ್ಟಿಕೊಳ್ಳಬೇಕು. ಬಹು ಅಂತಸ್ತಿನ ಕಟ್ಟಡಕ್ಕೆ ಹೋದರೆ ಅವನ್ನೆಲ್ಲ ಅಲ್ಲಿ ಹೇಗೆ ಕಟ್ಟಿಕೊಳ್ಳುವುದು ಎಂದು ಅವರ ಸಮಸ್ಯೆ. ನೆಲದಲ್ಲೇ ನಮಗೆ ಜಾಗ ಕೊಡಿ, ನಾವು ಮೇಲೆ ಹೋಗುವುದಿಲ್ಲ ಎನ್ನುತ್ತಾರೆ. ಅವರು ಇರುವ ಪ್ರದೇಶವನ್ನು ಇಂಪ್ರೂವ್ ಮಾಡುವ ಸಲುವಾಗಿ ಅವರನ್ನು ಷಿಫ್ಟ್ ಮಾಡಲೇ ಬೇಕೆಂದರೆ ಅದಕ್ಕೆ ಅವರ ಒಪ್ಪಿಗೆಯಾದರೆ ಅವರಿಗೆ ಹತ್ತಿರ ಪ್ರದೇಶದಲ್ಲಿರತಕ್ಕ ಬಿ.ಡಿ.ಎ. ಲ್ಯಾಂಡನ್ನು

ಅಲಾಟ್ ಮಾಡಿಸಿ ಬಡಾವಣೆ ಮಾಡುವ ಒಂದು ಕಾರ್ಯಕ್ರಮ ಇದೆ. ಅವರು ಬಹು ಅಂತಸ್ತಿನ ಮನೆಗಳಿಗೆ ಹೋಗುತ್ತೇವೆಂದರೆ ಹುಡ್ಕೋ ಕಾರ್ಯಕ್ರಮ ಇದೆ. ಅದು ಕೊಳಚೆ ನಿರ್ಮೂಲನ ಕಾರ್ಯಕ್ರಮದಲ್ಲಿ ಬರುತ್ತದೆ. ೨೦೦ ಕುಟುಂಬಗಳಿಗೆ ಮನೆಗಳ ವ್ಯವಸ್ಥೆ ಮಾಡುವುದು ಹುಡ್ಕೋ ಕಾರ್ಯಕ್ರಮದಲ್ಲಿ ಬರುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.— ಅದರಲ್ಲಿ ಕುರಿ, ಕೋಳಿ ಸಾಕಣೆ ಹೇಗಾಗುತ್ತದೆ?

ಶ್ರೀ ಎಂ. ಚಂದ್ರಶೇಖರ್.— ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಜನರ ಭಾವನೆ ಅದಾಗಿದೆ. ಜಯನಗರ ಪ್ರದೇಶದಲ್ಲಿ ಹುಡ್ಕೋ ಯೋಜನೆಯಲ್ಲಿ ೯೦ ಲಕ್ಷ ರೂಪಾಯಿಗಳ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ೪–೫ ವರ್ಷಗಳಾದರೂ ಇವತ್ತಿಗೂ ಅದಕ್ಕೆ ಒಪ್ಪಿಗೆ ದೊರೆತಿಲ್ಲ. ಈ ಒಂದು ಕೆಲಸವನ್ನು ಇಂಪ್ರೂವ್‌ಮೆಂಟ್ ಸ್ಕೀಂನಲ್ಲಿ ೧೯೮೨ನೇ ಮಾರ್ಚ್‌ವರೆಗೆ ೫೩ ಪ್ರದೇಶಗಳಲ್ಲಿ ಮಾಡಲಾಗಿದೆ. ಇದರಿಂದ ೧೪೯೦೦ ಜನರಿಗೆ ಅನುಕೂಲವಾಗುತ್ತದೆ; ಅದರಲ್ಲಿ ೧೯ನ್ನು ಬೆಂಗಳೂರಿನಲ್ಲಿ ಮಿಕ್ಕದ್ದನ್ನು ಹೊರಗಡೆ ಮಾಡಿದ್ದೇವೆ. ಈ ವರ್ಷ ೫೭ ಸಾವಿರ ಜನರಿಗೆ ಉಪಯೋಗವಾಗುವ ರೀತಿಯಲ್ಲಿ ೧೧೯ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಒಂದು ಕುಟುಂಬಕ್ಕೆ ೧೫೦ ರೂಪಾಯಿಗಳ ರೀತಿಯಲ್ಲಿ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಅವರು ೭೮ ಸಾವಿರ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ೧೦೫ ಲಕ್ಷ ರೂಪಾಯಿಗಳನ್ನು ಕೊಡುವ ಸೂಚನೆ ಇರುವುದರಿಂದ ಈ ವರ್ಷದಲ್ಲಿ ಒಟ್ಟು ೧೨೫ ಸಾವಿರ ಜನರಿಗೆ ಇಂಪ್ರೂವ್‌ಮೆಂಟ್ ಸ್ಕೀಂನಲ್ಲಿ ಈ ರಾಜ್ಯದಲ್ಲಿ ವ್ಯವಸ್ಥೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೌಸಿಂಗ್ ಬೋರ್ಡ್ ಬಗ್ಗೆ ಆಗಲೇ ಹೇಳಿದ ಹಾಗೆ ಹುಡ್ಕೋ ಯೋಜನೆಯಲ್ಲಿ ೧೯ ಯೋಜನೆಗಳು ಮಂಜೂರಾಗಿವೆ.

ಶ್ರೀ ಎಂ. ಎಸ್. ಕೃಷ್ಣನ್.— ಕೇಂದ್ರ ಸರ್ಕಾರದಿಂದ ೧೫೦ ರೂಪಾಯಿಗಳನ್ನು ಕುಟುಂಬ ಒಂದಕ್ಕೆ ಎಂದು ಏನು ಕೊಡುತ್ತಿದ್ದಾರೆ ಅದು ಲ್ಯಾಪ್ಸ್ ಆಗಬಾರದು, ಅದನ್ನು ಲ್ಯಾಪ್ಸ್ ಆಗುವುದಕ್ಕೆ ಬಿಡಬಾರದು. ಹುಡ್ಕೋ ಸ್ಕೀಮಿನಲ್ಲಿ ಅಂತಸ್ತಿನ ಮನೆಗಳನ್ನು ಕಟ್ಟುವ ೧೯ ಯೋಜನೆಗಳು ಮಂಜೂರಾತಿ ಆಗಿದೆ. ೧೯ರಲ್ಲಿ ಬೆಂಗಳೂರು ನಗರದಲ್ಲಿ ೯, ಹೊರಗಡೆ ೧೦ ಯೋಜನೆಗಳಿವೆ. ಎಂದರೆ ಇದರಲ್ಲಿ ೬೩೮೦ ಕುಟುಂಬಗಳಿಗೆ ಆಗುವಷ್ಟು ವಸತಿ ಯೋಜನೆ ಆಗಿದೆ ಮಾರ್ಚ್ ೧೯೮೨ರವರೆಗೆ ೭೮೨ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದ್ದು ಮೈಸೂರಿನಲ್ಲಿ ೩೮೦ ಕುಟುಂಬಗಳಿಗೆ ಮತ್ತು ಹುಬ್ಬಳ್ಳಿಯಲ್ಲಿ ೪೦೨ ಕುಟುಂಬಗಳಿಗೆ ತೆಗೆದುಕೊಂಡಿದೆ. ಇನ್ನೂ ೨೨೦ ಕುಟುಂಬಗಳಿಗೆ ಮನೆಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಆಗುತ್ತಿವೆ, ಈ ವರ್ಷ ಒಟ್ಟು ೨೫೦೦ ಕುಟುಂಬಗಳಿಗೆ ಆಗುವಂಥ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಸ್ಲಂಕ್ಲಿಯರೆನ್ಸ್ ಬೋರ್ಡಿನವರು ಹೌಸಿಂಗ್ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸ್ಟಾಫ್ ಕೊರತೆ ಇದೆ. ಅಡ್ಮಿನಿಸ್ಟ್ರೇಟೀವ್ ಮಾತ್ರವಲ್ಲ ಸರಿಯಾದ ಇಂಜಿನಿಯರುಗಳು ಕೂಡ ಅಲ್ಲಿ ಇಲ್ಲ. ನಾನು ಅನೇಕ ವೇಳೆ ನಗರಪ್ರದೇಶಗಳಿಗೆ ಭೇಟಿ ಕೊಟ್ಟಾಗ ಮೊದಲು ಕೊಳಚೆ ಪ್ರದೇಶಗಳಿಗೆ ಭೇಟಿ ಕೊಟ್ಟು ನಂತರ ಅಧಿಕಾರಿಗಳ ಹತ್ತಿರ ಚರ್ಚೆ ಮಾಡುತ್ತಿದ್ದೆ. ಕಾಮಗಾರಿಗಳು ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಸಮರ್ಪಕವಾಗಿ ನಡೆಯುತ್ತಿಲ್ಲ. ಹಾಸನದಲ್ಲಿ ಇರುವ ಎಕ್ಸಿಕ್ಯುಟೀವ್ ಇಂಜಿನಿಯರ್ ಶಿವಮೊಗ್ಗದಲ್ಲೂ ಕೆಲಸ ಮಾಡಬೇಕು. ಹೀಗಾಗಿ ಸೂಪರ್‌ವಿಷನ್ ಸರಿಯಾಗಿಲ್ಲದೇ ಇರುವುದರಿಂದ ಕೆಲಸಕಾರ್ಯಗಳು ಸಮರ್ಪಕವಾಗಿ ಆಗುತ್ತಿಲ್ಲ. ಈಗ ಕೊಳಚೆ ನಿರ್ಮೂಲನಾ ಮಂಡಳಿಯವರು ಸಿಬ್ಬಂದಿಯನ್ನು ಕೂಡಾ ಜಾಸ್ತಿ ಮಾಡಬೇಕೆಂದು ಬೇಡಿಕೆ ಇಟ್ಟಿದ್ದಾರೆ.

ಶ್ರೀ ಪಿ.ಶಿ. ಗೋವಿಂದರಾಜು.— ಅಶೋಕನಗರದಲ್ಲಿ ರಾವ್‌ಬಹದ್ದೂರ್ ವೆಂಕಟಸ್ವಾಮಿ ನಾಯ್ಡು ಕಲ್ಯಾಣ ಮಂಟಪದಲ್ಲಿ ಕೊಳಚೆಪ್ರದೇಶದ ಜನರನ್ನೆಲ್ಲಾ ತಂದುಹಾಕಿದ್ದಾರೆ. ಚುನಾವಣೆ ಸಮಯದಲ್ಲಿ ಸ್ಲಂ ಬೋರ್ಡಿನವರು ಆ ರೀತಿ ಮಾಡಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ನನಗೆ ಗೊತ್ತಿದೆ ಅದು. ಮನೆಗಳನ್ನು ಕೆಡುವುದಕ್ಕೆ ಹೋದಾಗ ಟ್ರಾನ್ಸಿಟ್ ಕ್ಯಾಂಪ್ ಮಾಡುವಾಗ ಈ ರೀತಿಯಾಗಿದೆ.

ಡಾ|| ವಿ.ಎಸ್. ಆಚಾರ್ಯ.—ಸ್ಲಂ ಜನರನ್ನು ಛತ್ರಕ್ಕೆ ತಂದು ಬಿಟ್ಟರೆ ಸ್ಲಂ ಕ್ಲಿಯರೆನ್ಸ್ ಆದ ಹಾಗಾಯಿತು.

ಶ್ರೀ ಎಂ. ಚಂದ್ರಶೇಖರ್.—ಟ್ರಾನ್ಸಿಟ್ ಕ್ಯಾಂಪ್ ಹಾಕಿರಬಹುದು. ಆ ರೀತಿ ಛತ್ರವಲ್ಲಿ ತಂದುಹಾಕುವ ಅವಶ್ಯಕತೆ ಇಲ್ಲ. ಅದೇನು ಎಂಬುದನ್ನು ನಾನು ವಿಚಾರ ಮಾಡುತ್ತೇನೆ. ''ಸುಲಭ ಶೌಚಾಲಯ'' ಎಂದು ಬಿಹಾರದಲ್ಲಿ ಪ್ರಾರಂಭ ಆಗಿದ್ದು ಅದನ್ನು ನಾವು ಇಲ್ಲಿ ಮಾಡುತ್ತಿದ್ದೇವೆ.

ಶ್ರೀ ಕೆ.ಎಚ್. ರಂಗನಾಥ್.—ನಾನು ಮಲ್ಲೇಶ್ವರದಲ್ಲಿ ಒಂದು ಕಡೆ ನೋಡಿದೆ. ಇಂಗ್ಲೀಷ್‌ನಲ್ಲಿ ಬರೆಯುವಾಗ ಸುಲಭ ಶೌಚಾಲಯಕ್ಕೆ 'SULABH' ಎಂದು ಬರೆದಿದ್ದಾರೆ. ಕನ್ನಡದಲ್ಲಿ ತರ್ಜುಮೆ ಮಾಡುವಾಗಲೂ ಸುಲಭ್ ಎಂದು ಬರೆದಿದ್ದಾರೆ. ''ಭ'' ಅರ್ಧಾಕ್ಷರ ಮಾಡಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅದು ಹಿಂದಿ ಪದ. ಕನ್ನಡದಲ್ಲಿ ಅದನ್ನು ಉಪಯೋಗಿಸಿಕೊಂಡಿದ್ದಾರೆ. ಸಾರ್ವಜನಿಕ ಶೌಚಗೃಹಗಳನ್ನು ಮತ್ತು ಯೂರಿನಲ್‌ಗಳನ್ನು ನೋಡಿಕೊಳ್ಳುವುದಕ್ಕೆ ಆ ಸಂಸ್ಥೆ ಇದೆ. ೧೦ ಪೈಸೆ ಕೊಟ್ಟರೆ ಲ್ಯಾವೆಟರಿಗೆ ಹೋಗುವುದಕ್ಕೆ ಅವಕಾಶವಿದೆ. ಸ್ನಾನಗೃಹಗಳು ಕೂಡ ಇವೆ. ಅವರೇ ಟವಲ್, ಸೋಪ್ ಕೊಡುತ್ತಾರೆ. ಬಸ್‌ಸ್ಟ್ಯಾಂಡ್ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ಹೊರಗಡೆಯಿಂದ ಬರುವ ಸಾಮಾನ್ಯ ಜನರು ಅದನ್ನು ಉಪಯೋಗಿಸಿಕೊಳ್ಳಬಹುದು.

ಶ್ರೀ ಕೆ.ಹೆಚ್. ರಂಗನಾಥ್.—ಮೊದಲು ಕನ್ನಡಕ್ಕೆ ಬೋರ್ಡ್‌ನ್ನು ಬದಲಾಯಿಸಿ.

ಶ್ರೀ ಎಂ.ಎಸ್. ಕೃಷ್ಣನ್.—ಎಲ್ಲಿ ಕೊಳಚೆ ಪ್ರದೇಶಗಳಿವೆ ಅಲ್ಲಿಯೂ ಕೂಡ 'ಸುಲಭ ಶೌಚಾಲಯ' ಮಾಡಬೇಕು ಎಂದು ಹೇಳುತ್ತಿದ್ದಾರೆ. ಕೊಳಚೆ ಪ್ರದೇಶದಲ್ಲಿರುವ ಜನ ಕಾಸು ಕೊಟ್ಟು ಕಕ್ಕಸ್ಸಿಗೆ ಹೋಗುವುದು ಕಷ್ಟ.

ಶ್ರೀ ಎಂ. ಚಂದ್ರಶೇಖರ್.—ತಲಾ ೧೦ ಪೈಸೆ ಎಂದರೆ ಒಂದು ಕುಟುಂಬಕ್ಕೆ ತಿಂಗಳಿಗೆ ೫–೧೦ ರೂಪಾಯಿಗಳು ಆಗುತ್ತದೆ. ಇಲ್ಲಿ ನೀರು, ಸೋಪು ಎಲ್ಲಾ ಕೊಡುತ್ತಾರೆ. ಸ್ಲಂಗಳಲ್ಲಿ ವಾಸ ಮಾಡುವವರೆಲ್ಲಾ ಆರ್ಥಿಕವಾಗಿ ಕೆಳಮಟ್ಟದವರು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ದುಡ್ಡು ಕೊಡದಿದ್ದರೆ ಲ್ಯಾವೆಟರಿಗೆ ಹೋಗುವುದಕ್ಕಾಗಾವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಈ ಕಾರ್ಯಕ್ರಮವನ್ನು ನಗರ ಪ್ರದೇಶಗಳಲ್ಲಿ ಬಸ್ ಸ್ಟ್ಯಾಂಡಿನಲ್ಲಿ. ರೈಲ್ವೆ ಸ್ಟೇಷನ್‌ನಲ್ಲಿ, ಷಾಪಿಂಗ್ ಕಾಂಪ್ಲೆಕ್ಸ್ ಇರುವ ಕಡೆಗಳಲ್ಲಿ ಮಾಡುವ ಯೋಜನೆ ಇದೆ. ಈ ಕೆಲಸವನ್ನು ಇಲಾಖೆ ತೆಗೆದುಕೊಳ್ಳುತ್ತಿದೆ. ನಗರ ಭೂಮಿತಿಯಲ್ಲಿ ಕಾಯಿದೆಯನುಸಾರವಾಗಿ ಆಗಿರುವ ಕಾರ್ಯಕ್ರಮಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ೧೯೭೬ರಲ್ಲಿ ಈ ಕಾಯಿದೆ ಬಂದಮೇಲೆ, ಬೆಂಗಳೂರು, ಮೈಸೂರು ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮತ್ತು ಮಂಗಳೂರು ಈ ನಗರ ಪ್ರದೇಶಗಳಲ್ಲಿ ಭೂಮಿತಿ ಪ್ರಕಾರ ಘೋಷಣೆ ಮಾಡಿರುವ ಭೂಮಿಯನ್ನು ಹೇಳುತ್ತೇನೆ. ಬೆಂಗಳೂರು ನಗರದ ಬಗ್ಗೆ ಹೇಳುವುದಾದರೆ ಘೋಷಣೆ ಮಾಡುವಂಥ ವ್ಯಕ್ತಿಗಳು ೧೬,೩೫೪. ಜಮೀನಿನ ವಿಸ್ತೀರ್ಣ ಒಟ್ಟು ೧೭ ಕೋಟಿ ೮೭ ಲಕ್ಷ ಚದರ ಮೀಟರ್‌ಗಳು. ಅದರಲ್ಲಿ ೪೨೯೯ ವಿಲೇವಾರಿಯಾಗಿ ೭,೫೪,೪೮೭ ಚದರಮೀಟರ್ ಪ್ರದೇಶವನ್ನು ಘೋಷಿಸಲಾಗಿದೆ. ಅದು ಸರ್ಕಾರದ ವಶಕ್ಕೆ ಬರಬೇಕು. ಸರ್ಕಾರದ ವಶಕ್ಕೆ ತೆಗೆದುಕೊಂಡಿರುವುದು ೪,೬೯,೯೫೦ ಚದರ ಮೀಟರ್‌ಗಳು. ೩,೧೬,೪೦೩ ಚದರಮೀಟರ್ ಪ್ರದೇಶ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಅಲಾಟ್ ಮಾಡಿದೆ. ಮೈಸೂರಿನಲ್ಲಿ ೬,೫೭,೦೦೦ ಚದರಮೀಟರ್‌ಗಳು ಹುಬ್ಬಳ್ಳಿ–ಧಾರವಾಡದಲ್ಲಿ ,೮೦.೩೭೯೮ ಚದರಮೀಟರ್‌ಗಳು, ಬೆಳಗಾವಿಯಲ್ಲಿ ೫,೦೨,೧೨೮ ಚದರಮೀಟರ್‌ಗಳು ಸರ್ಕಾರದವಶಕ್ಕೆ ಬಂದಿದೆ ಅವುಗಳನ್ನು ನಾನಾ ಇಲಾಖೆಗಳಿಗೆ ಅಲಾಟ್ ಮಾಡಿದ್ದಾರೆ. ಈ ರೀತಿ ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಕೆಲಸ ಆಗಿದೆ. ಬೆಂಗಳೂರು ನಗರಕ್ಕೆ ಆಗಿರುವಂತೆ ಪ್ರಮಾದ ಬೇರೆ ಹೊರಗಡೆ ಆಗಬಾರದು ಎಂದು ಹಸಿರು ಪಟ್ಟಿ ಎಂದು ಘೋಷಣೆ ಮಾಡಿ ಕೇವಲ ಜಮೀನುಗಳನ್ನು ವಸಪಡಿಸಿಕೊಂಡು ಅರಣ್ಯ ಇಲಾಖೆಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅವರು ಗಿಡಮರಗಳನ್ನು ಬೆಳೆಸುತ್ತಾರೆ. ಬಿ.ಡಿ.ಎ. ನವರು ಅಕ್ವೈರ್ ಮಾಡಿಕೊಂಡುಮಾಡುವ ತರಹ ಇದೂ ಆಗುತ್ತದೆ. ಯಾರು ಯಾರು ಭೂಮಿತಿ ಶಾಸನದ ವ್ಯಾಪ್ತಿಯಲ್ಲಿ ಬರುತ್ತಾರೆ, ಯಾರು ತೋಟಗಳನ್ನು ಇಟ್ಟುಕೊಂಡು ಬೆಂಗಳೂರು ನಗರದ ಹೊರಗಡೆ ತೆಂಗು, ಮಾವು, ದ್ರಾಕ್ಷಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೋ ಅವರಿಗೆ ಜೀವನೋಪಾಯಕ್ಕೆ ಅದು ಬೇಕು ಎಂದು ಹೇಳಿದರೆ ಉಳಿಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಭೂಮಿಯ ಸ್ಥಿತಿಯನ್ನು ಬೇರೆ ರೀತಿಯಾಗಿ ಪರಿವರ್ತನೆ ಮಾಡದೆ ಹಾಗೆಯೇ ಉಳಿಸಿಕೊಂಡು ಹೋದರೆ ಅಂಥ ಜಮೀನನ್ನು ಅವರ ವಶದಲ್ಲೇ ಇಟ್ಟುಕೊಳ್ಳಲು ಬಿಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಆ ರೀತಿ ಸ್ವಂತ ಉಪಯೋಗಕ್ಕಾಗಿ ಉಳಿಸಿಕೊಳ್ಳು

ತ್ತೇವೆ ಎಂದರೆ ಅಂಥವರಿಗೆ ವಿನಾಯಿತಿ ಕೊಡುವ ಕಾರ್ಯಕ್ರಮವನ್ನು ಬೆಂಗಳೂರು ನಗರದಲ್ಲಿ ಮಾತ್ರವಲ್ಲ ಎಲ್ಲಾ ಮಹಾನಗರಗಳಲ್ಲೂ ಆ ರೀತಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಲ್ಯಾಂಡ್ ಉಪಯೋಗ ಏನಿದೆ ಅದನ್ನೇ ಬದಲಾವಣೆ ಮಾಡಿ ಮನೆ ಕಟ್ಟಬೇಕೆಂದಿದ್ದರೆ ಅಲ್ಲಿ ಕಾಂಪ್ಲೆಕ್ಸ್ ಕಟ್ಟುತ್ತಾರೆ. ಸಿನೆಮಾ ಮಂದಿರಗಳನ್ನು ಕಟ್ಟುತ್ತಾರೆ. ಸಿನೆಮಾ ಮಂದಿರಗಳನ್ನು ಕಟ್ಟುತ್ತಾರೆ. ಈ ರೀತಿ ಮಾಡಲು ಹಿಂದೆ ಬಿ.ಡಿ. ಎ.ನವರೇ ದಾರಿ ತೋರಿಸುತ್ತಾರಂತೆ, ಇದಕ್ಕೆ ತಾವು ಏನು ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ನಾನು ಈಗ ಅರ್ಬನ್ ಲ್ಯಾಂಡ್ ಸೀಲಿಂಗ್ ಬಗ್ಗೆ ಹೇಳಿ ಆಮೇಲೆ ಬಿ.ಡಿ.ಎ. ಬಗ್ಗೆ ಬರುತ್ತೇನೆ. ಕೃಷಿಕರು ತೋಟ ಮಾಡುವ ಹಾಗಿದ್ದರೆ ಅವರಿಗೆ ವಿನಾಯಿತಿ ಕೊಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಬೆಂಗಳೂರು ಮತ್ತು ಹೊರಗಡೆ ಎಷ್ಟು ದಿವಸ ಹಸಿರಾಗೇ ಇಟ್ಟುಕೊಳ್ಳುತ್ತಾರೋ ಅಲ್ಲಿವರೆಗೆ ಅದು ಇರುತ್ತದೆ. ಅನಂತರ ಬದಲಾವಣೆ ಮಾಡುವಾಗ ಯಥಾಪ್ರಕಾರ ಈ ಕಾನೂನು ಅನ್ವಯ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಜಾಗ ತಮಗೆ ಕೊಡಬೇಕು ಎಂದು ಹೇಳಿ ದೊಡ್ಡ ದೊಡ್ಡ ಮಹನೀಯರು ತೆಂಗಿನ ಗಿಡಗಳನ್ನೋ, ದ್ರಾಕ್ಷಿ ತೋಟವನ್ನೋ ಬೆಳೆಸುತ್ತಾರೆ. ಇದೊಂದು ರೋಗದ ರೀತಿ ಇದೆ.

ಶ್ರೀ ಎಂ. ಚಂದ್ರಶೇಖರ್.—ತೋಟಗಾರಿಕೆ ಮಾಡಬೇಕೆಂದರೆ ಅವರಲ್ಲಿ ಆ ಜಮೀನನ್ನು ಬಿಟ್ಟಿರುತ್ತೇವೆ. ಅನಧಿಕೃತವಾಗಿ ಅದು ಆಗಿದ್ದರೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಬರುತ್ತದೆ. ಇದಿಷ್ಟು ವ್ಯವಸಾಯದ ಬಗ್ಗೆ ಆದರೆ, ಇನ್ನು ಕೈಗಾರಿಕೆಗಳಿಗೋಸ್ಕರ ಮತ್ತು ಬೇರೆ ಸಂಘ ಸಂಸ್ಥೆಗಳಿಗೋಸ್ಕರ ಇದ್ದ ಜಮೀನನ್ನು ತೆಗೆದುಕೊಂಡಿದ್ದೇವೆ. ಒಟ್ಟು ೩ ಕೋಟಿ ೪೦ ಲಕ್ಷ ೭೦ ಲಕ್ಷ ಸಾವಿರ ಸ್ಕ್ವಯರ್ ಮೀಟರ್ ಜಮೀನನ್ನು ರಾಜ್ಯಾದಂತ ತೆಗೆದುಕೊಂಡು ೭೬ ಲಕ್ಷ ೨೯, ೫೬೧ ಚದರ ಮೀಟರ್ ಭೂಮಿಯನ್ನು ಕೃಷಿ ಉಪಯೋಗಕೋಸ್ಕರವಾಗಿ ವಿನಾಯಿತಿ ಕೊಟ್ಟಿದ್ದೇವೆ. ಮತ್ತು ೨,೪೪,೪೩೪ ಚದರ ಮೀಟರ್ ಭೂಮಿಯನ್ನು ಕೈಗಾರಿಕೆಗಳಿಗೋಸ್ಕರ ಎಂದು ಮತ್ತು ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ೯.೩೦,೭೧೪ ಚದರ ಮೀಟರ್ ಭೂಮಿ ಕೊಡಲಾಗಿದೆ. ಇನ್ನೂ ಹಾರ್ಡ್‌ಷಿಪ್ ಕೇಸಸ್ ಎಂದರೆ, ೨ ಎಕರೆ ಜಮೀನು ಇಟ್ಟುಕೊಂಡು ಅದರಿಂದಲೇ ಅವರ ಸಂಸಾರವನ್ನು ಸಾಗಿಸಬೇಕಾಗುತ್ತದೆ. ಅಲ್ಲಿ ತೋಟ ಮಾಡಿಕೊಂಡು ಅದರ ಮೇಲೆ ಸಾಲಸೋಲ ಮಾಡಿರುತ್ತಾರೆ. ಇಂತಹ ಹಾರ್ಡ್‌ಷಿಪ್ ಕೇಸಸ್‌ಗಳಿಗೆ ವಿನಾಯಿತಿ ಆಗಿರುವುದು ಸುಮಾರು ೫೨,೬೫,೬೨೫ ಚದರ ಮೀಟರ್‌ಗಳು. ಇನ್ನು ಬೆಂಗಳೂರು ನಗರದ ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಗರದಲ್ಲಿ ಯಾವ ಯಾವ ಸ್ಥಳ ವಾಸಕ್ಕೆ, ವಾಣಿಜ್ಯಕ್ಕೆ ಯೋಗ್ಯ ಇದೆ ಎಷ್ಟು ಅಗಲ ರಸ್ತೆ ಇರಬೇಕು ಎಂಬ ಬಗ್ಗೆ, ಫ್ಲೋರ್ ಏರಿಯಾ ಎಷ್ಟು ಇರಬೇಕು, ಎಷ್ಟು ಎತ್ತರದ ಕಟ್ಟಡಗಳು ಇರಬೇಕು ಎನ್ನುವ ಬಗ್ಗೆ ಹಿಂದಿನ ಮುನಿಸಿಪಲ್ ಬೈಲಾದಲ್ಲಿ ಇರಲಿಲ್ಲ ಆದುದರಿಂದ ಇವತ್ತು ಅನೇಕ ಕಡೆ ಎತ್ತರದ ಕಟ್ಟಡಗಳು ಬಂದಿವೆ. ಹಿಂದೆ ೧ ಪ್ಲಸ್ ೧೯ ಅಂತಸ್ತಿನವರೆಗೆ ಕೊಡುವ ಅವಕಾಶ ಇತ್ತು. ಎಂತಹ ಸ್ಥಳಗಳಲ್ಲಿ ಎತ್ತರದ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶ ಕೊಡಬಾರದು ಎಂದಿತ್ತೋ ಅಲ್ಲೆಲ್ಲಾ ಕೊಟ್ಟಿರುವುದು ಗಮನಕ್ಕೆ ಬಂದಿದೆ. ಈಗ ಬೈಲಾವನ್ನು ಪರಿಷ್ಕರಣ ಮಾಡಿ ಹೊಸ ಬೈಲಾವನ್ನು ಮಾಡಿದ್ದು ಹೋದ ತಿಂಗಳು ೧೦ನೇ ತಾರೀಖು ಕಾರ್ಪೊರೇಷನ್‌ನಲ್ಲಿ ಕೊಟ್ಟಿದ್ದೇವೆ. ೩ ತಿಂಗಳಲ್ಲಿ ಸ್ಟ್ಯಾಚ್ಯುಟರಿ ಪೇಪರ್ ಇದರ ಪ್ರಕಾರ ಹೊರಕ್ಕೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಪೊರೇಷನ್‌ನವರು ಮಾಡಿರುವುದು ಸರಿಯಲ್ಲವೆಂದು ಹೈಕೋರ್ಟಿನವರು ಒಂದು ತೀರ್ಮಾನ ಕೊಟ್ಟಿದ್ದಾರೆ. ಅಲ್ಲಿ ಯಾವುದೇ ಕಾಯಿದೆ ಕಾನೂನು ನೋಡದೆ ಕಟ್ಟಡಗಳನ್ನು ಕಟ್ಟಿರುತ್ತಾರೆ. ಈ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ಇದುವರೆವಿಗೂ ಎಷ್ಟು ಕಟ್ಟಡಗಳಿವೆ ಅವರು ಪರವಾನಗಿ ಕೊಟ್ಟಿದ್ದಾರೆ, ಹಿಂದಿನ ಬೈಲಾ ಪ್ರಕಾರ ಕಟ್ಟಡಗಳು ಆಗಿವೆಯೋ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇದೆಲ್ಲಾ ಸರ್ಕಾರದ ಗಮನದಲ್ಲಿ ಇದೆ. ಆದರೆ ಇನ್ನು ಮುಂದೆ ಏನು ಹೊಸ ಬೈಲಾ ಬರುತ್ತದೆ ಅದರ ಪ್ರಕಾರ ಬೆಂಗಳೂರು ನಗರವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೈಕೋರ್ಟಿನ ತೀರ್ಮಾನ ಏನು ಬಂದಿದೆ ಅದನ್ನು ಜಾರಿಗೊಳಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಅದು ಬಂದಿದೆ. ಆ ಬಗ್ಗೆ ವಿಚಾರಣೆ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಫ್ಲೋರ್ ಏರಿಯಾ ರೇಷಿಯೋ ಸರಿ ಇಲ್ಲ, ಸೆಟ್‌ಬ್ಯಾಕ್ ಸರಿಯಿಲ್ಲ, ೧ ಪ್ಲಸ್ ೪ರ ರೀತ್ಯ ಕಟ್ಟಬೇಕೆಂದು ನಿಯಮ ಇದ್ದರೂ ಅದು ಕೂಡಾ ಆಗಿಲ್ಲ. ಇದನ್ನು ತಡೆಗಟ್ಟಲು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಈ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಕೋರ್ಟ್ ತೀರ್ಮಾನಕ್ಕೆ ಅಪಮಾನ ಮಾಡಿದಹಾಗೆ ಆಗುತ್ತದೆ. ಇದೆಲ್ಲಾ ಇದ್ದರೂ ೨೬ ಹೈರೈಸ್ಡ್ ಬಿಲ್ಡಿಂಗ್ಸ್ ಎದ್ದಿವೆ.

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ಸದಾಶಿವನಗರದ ನಾಗರೀಕರು ಕೋರ್ಟಿಗೆ ಹೋಗಿದ್ದಾರೆ. ಅದು ಗಮನಕ್ಕೆ ಬಂದಿದ್ದು ಡಿಸೆಂಬರ್ ೮೨ರಲ್ಲಿ ಡಿವಿಜನಲ್ ಕಮಿಷನರ್ ಮಟ್ಟದಲ್ಲಿ ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದಾರೆ. ಅದರ ವರದಿ ಏನು ಇದೆ ಎಂಬುದನ್ನು ತರಿಸಿ ನೋಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇವತ್ತು ಕೆಲವು ಕಟ್ಟಡಗಳಲ್ಲಿ ಕಾರ್ ಸ್ಟ್ಯಾಂಡ್‌ಗೋಸ್ಕರ ಜಾಗ ಬಿಟ್ಟ ಕಡೆ ಷಾಪಿಂಗ್ ಕಾಂಪ್ಲೆಕ್ಸ್ ಮಾಡಿದ್ದು, ಕಾರುಗಳೆಲ್ಲಾ ರಸ್ತೆಯಲ್ಲಿ ನಿಂತಿರುತ್ತವೆ. ಡಿಸೆಂಬರ್‌ನಲ್ಲಿ ಸಮಿತಿ ಮಾಡಿದ್ದರೆ ಈಗ ಸೆಪ್ಟೆಂಬರ್ ಆಯಿತು, ಇದುವರೆವಿಗೂ ಅವರು ಏನೂ ಕ್ರಮ ಕೈಗೊಳ್ಳಲಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ತನಿಖಾ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಆ ಬಗ್ಗೆ ಏನಾಗಿದೆ ಎಂದು ತಿಳಿದು ನಂತರ ತಮಗೆ ತಿಳಿಸುತ್ತೇನೆ. ಈಗ ಹೊಸದಾಗಿ ಬೆಂಗಳೂರು ನಗರವನ್ನು ೩ ಭಾಗಗಳಾಗಿ ವಿಂಗಡಿಸಿದ್ದೇವೆ. ಮೊದಲನೆಯದಾಗಿ ಇಂಟೆನ್‌ಸೀವ್‌ಲಿ ಡೆವಲಪ್ಡ್ ಏರಿಯಾ ಏನು ಇದೆ ಅದರಲ್ಲಿ ಹೆಚ್ಚು ಎಂದರೆ ೧ ಪ್ಲಸ್ ೨ ಅಂತಸ್ತು ಕಟ್ಟಡ ಬರಬೇಕೆಂದು ಮಾಡಿದ್ದೇವೆ. ಮತ್ತು ಸೆಂಟ್ರಲ್ ಅಡ್ಮಿನಿಸ್ಟರ್ಡ್ ಏರಿಯಾ ಎಂದು ಮಾಡಿದ್ದು ಅದರಲ್ಲಿ ೧ ಪ್ಲಸ್ ೩ ಫ್ಲೋರ್ಸ್ ಬರುತ್ತವೆ. ಇದಕ್ಕೆಲ್ಲಾ ನಕ್ಷೆ ಸಿದ್ಧವಾಗಿದೆ. ಇನ್ನು ಮೂರನೆಯದಾಗಿ ''ಬಿ'' ಗ್ರೂಪ್ ಇದರಲ್ಲಿ ಔಟ್ ಕಟ್ಸ್ ಬರುತ್ತದೆ. ಇಲ್ಲಿ ೮ ಅಂತಸ್ತುಗಳವರೆವಿಗೂ ಮನೆಯನ್ನು ಕಟ್ಟಬಹುದು. ಇಲ್ಲಿ ಊರಿಗೆ ತೊಂದರೆಯಾಗುವುದಿಲ್ಲ. ಹೊಸ ಬಡಾವಣೆಗಳಲ್ಲಿ ಈ ಅವಕಾಶವನ್ನು ಕಲ್ಪಿಸಲಾಗಿದೆ. ಮುಂದುವರಿದ ರಾಷ್ಟ್ರಗಳಲ್ಲಿಯೂ ಇಂಥ ಒಂದು ವ್ಯವಸ್ಥೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಬಹು ಅಂತಸ್ತು ಕಟ್ಟಡಗಳ ಬಗ್ಗೆ ಚರ್ಚೆ ನಡೆದಿದೆ. ೫ ಮಹಡಿಗಳ ಮೇಲೆ ಕಟ್ಟುವುದು ಬೇಡ ಎಂದು. ಇದರ ಬಗ್ಗೆ ಸೆಮಿನಾರುಗಳು ಆಗಿವೆ. ತಾವು ೮ ಮಹಡಿಗಳವರೆಗೂ ಅವಕಾಶ ಕೊಡುತ್ತೇವೆಂದು ಹೇಳಿದರೆ ಹೇಗೆ ? ಪ್ರಾಕೃತಿಕ ಸಮತೋಲಿನ ಬಗ್ಗೆಯೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಮಾಕ್ಸಿಮಮ್ ಇಷ್ಟರವರೆಗೆ ಹೋಗಬಹುದು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಇಂಥ ಕಟ್ಟಡಗಳು ಬರುವಕಡೆ ವಿಮಾನ ಸಂಚಾರದ ಬಗ್ಗೆ ಏನಾದರೂ ಯೋಚನೆ ಮಾಡಲಾಗಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಯೋಚನೆ ಮಾಡಲಾಗಿದೆ. ಇಂಥ ಕಟ್ಟಡಗಳನ್ನು ವಾಣಿಜ್ಯ ಪ್ರದೇಶಗಳಲ್ಲಿ ಮಾತ್ರ ಕಟ್ಟಬೇಕಾಗಿದೆ. ರಸ್ತೆಗಳು ದೊಡ್ಡದಾಗಿರಬೇಕು ಮತ್ತು ಸಾಕಷ್ಟು ಅಗಲವಾಗಿರಬೇಕು. ಜೊತೆಗೆ ಪ್ರಾಧಿಕಾರದಲ್ಲಿ ನಕಾಶೆಯನ್ನು ಮಂಜೂರು ಮಾಡಿಸಬೇಕು. ನಕಾಶೆ ಜೊತೆಗೆ ಅಗ್ನಿಶಾಮಕ ಇಲಾಖೆ ವಿದ್ಯುಚ್ಛಕ್ತಿ ಇಲಾಖೆ, ಹಾಗೂ ನೀರು ಸರಬರಾಜು ಇಲಾಖೆಗಳಿಂದ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಪಡೆದಿರಬೇಕು ಅದರ ಕಾಪಿಗಳನ್ನು ನಕಾಶೆ ಜೊತೆ ಲಗತ್ತಿಸಿರಬೇಕು ಎಂದು ಬೈಲಾದಲ್ಲಿ ಹೇಳಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ವಾಸದ ಏರಿಯಾದಲ್ಲಿ ಮೂರು ಮಹಡಿಗಳವರೆಗೆ ಎಂದು ಹೇಳಿದ್ದೀರಿ. ವಾಣಿಜ್ಯ ಪ್ರದೇಶಗಳಲ್ಲಿ ೮ ಅಂತಸ್ತಿನ ಮನೆಗಳಿಗೆ ಏತಕ್ಕೆ ಅವಕಾಶ ಕೊಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಹೊಸದಾಗಿ ಬಡಾವಣೆಯಾಗುವಂಥ ಪ್ರದೇಶಗಳಲ್ಲಿ ಕಟ್ಟುವಂಥ ಕಟ್ಟಡಗಳು.

ಶ್ರೀ ಪಿ. ರಾಂದೇವ್.—ಸ್ವಾಮಿ, ೧೯೮೧ ರಿಂದ ಇಲ್ಲಿಯವರೆಗೆ ಸುಮಾರು ೧೫೩ ಬಹು ಅಂತಸ್ತಿನ ಕಟ್ಟಡಗಳಿಗೆ ಲೈಸೆನ್ಸ್ ಕೊಡಲಾಗಿದೆ. ಅವರಲ್ಲಿ ೧೩೦ ನಾಲ್ಕು ಅಂತಸ್ತಿನ ಮನೆಗಳು, ೨೩ ಐದು ಅಂತಸ್ತಿನ ಮನೆಗಳು, ಒಂದೊಂದು ೭ ಮತ್ತು ೮ ಅಂತಸ್ತಿನ ಮನೆಗಳು ಎಂದು ಹೇಳಿದ್ದೀರಿ. ಇವುಗಳಲ್ಲಿ ಬೈಲಾಗೆ ವಿರುದ್ಧವಾಗಿ ಎಷ್ಟು ಮನೆಗಳನು ಕಟ್ಟಿದ್ದಾರೆ? ಅನಧಿಕೃತವಾಗಿ ಕಟ್ಟಿರುವ ಮನೆಗಳೆಷ್ಟು ಎಂಬುದನ್ನು ವಿಚಾರಣೆ ನಡೆಸಲು ೧೭-೨-೮೨ ರಂದು ವಿಚಾರಣಾಧಿಕಾರಿಗಳನ್ನು ನೇಮಿಸಲಾಗಿತ್ತು. ಇದರಲ್ಲಿ ೩೩ ನಿರ್ದಿಷ್ಟ ಪ್ರಕರಣಗಳನ್ನು ಸಿ. ಓ. ಡಿ. ಗೆ ಕಳುಹಿಸಲಾಗಿದೆ. ಇದರಲ್ಲಿ ಗಂಗಾರಾಮ್ ಕಟ್ಟಡವು ಸೇರಿದೆಯೋ ?

ಶ್ರೀ ಎಂ. ಎಸ್. ಕೃಷ್ಣನ್.—ತಾವು ಈಗ ಏನು ಲೈಸೆನ್ಸ್ ಕೊಟ್ಟಿದ್ದೀರಿ, ಅವರಿನ್ನೂ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಲ್ಲದಿರುವುದರಿಂದ ಹೊಸ ಬೈಲಾವನ್ನು ಅಳವಡಿಸುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ಚಂದ್ರಶೇಖರ್.—ಹಿಂದಿನ ನಿಯಮದ ಪ್ರಕಾರ ೮ ಅಂತಸ್ತಿನ ಮನೆಗಳು ಬಂದಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮಾನ್ಯ ಮುಖ್ಯಮಂತ್ರಿಗಳು ಇನ್ನು ಎರಡು ತಿಂಗಳು ಯಾವುದೇ ಕಟ್ಟಡಗಳನ್ನು ಕಟ್ಟುವುದಕ್ಕೆ ನಿರ್ಬಂಧ ಮಾಡಿ ಕಟ್ಟಡಗಳು ಸುರಕ್ಷತೆಯ ಬಗ್ಗೆ ವರದಿ ಕೊಡಲು ಒಂದು ಸಮಿತಿಯನ್ನು ಮಾಡಿದ್ದಾರೆ. ಇದು ಲೈಸೆನ್ಸ್‌ದಾರರಿಗೆ ಅಪ್ಲೈ ಆಗುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್.—ಇನ್ನು ೨-೩ ತಿಂಗಳು ಇದೆ. ಅಷ್ಟರಲ್ಲಿ ಅದೂ ಆಗುತ್ತದೆ.

ಡಾ|| ವಿ.ಎಸ್. ಆಚಾರ್ಯ.—ಕ್ವಾಲಿಟಿ ಆಫ್ ಕನಸ್ಟ್ರಕ್ಷನ್ ಬಗ್ಗೆ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಬೈಲಾದಲ್ಲಿ ಒಂದು ಕ್ಲಾಸ್ ಸೇರಿಸುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಚಂದ್ರಶೇಖರ್.—ಬೈಲಾದಲ್ಲಿ ಅದು ಇದೆ.

> "The owner has to mark out and excavate the foundation only after the prior permission of the authorised officer of the Corporation and at regular intervals, before the complection of the building, the authorities of the Corporation have power to inspect and check any deviation."

ಹೊಸ ಬೈಲಾ ಪ್ರಕಾರ ಬೆಂಗಳೂರು ನಗರದ ಒಳ ಪ್ರದೇಶದಲ್ಲಿ ಯೋಜಿತ ರೀತಿಯಲ್ಲಿ ಕಟ್ಟಡಗಳು ಬರಬೇಕೆಂಬ ದೃಷ್ಟಿಯಿಂದ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಪಿ. ರಾಂದೇವ್.—ಹೊಸ ಬೈಲಾವನ್ನು ನಗರ ಶಾಸಕರು ಕೂಡ ನೋಡಿಲ್ಲ. ಚಿಕ್ಕಪೇಟೆಯಲ್ಲಿ ೭-೮ ಅಂತಸ್ತಿನ ಕಟ್ಟಡಗಳನ್ನು ಕಟ್ಟುತಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಸುಗ್ರೀವಾಜ್ಞೆಯ ಮೂಲಕ ತಂದು ಈ ರೀತಿ ಕಟ್ಟಡಗಳನ್ನು ನಿಲ್ಲಿಸುವುದಕ್ಕೆ ಏನು ತೊಂದರೆ ಇದೆ ಸ್ವಾಮಿ ?

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವುದನ್ನು ವಾರ್ಷಿಕ ವರದಿಯಲ್ಲಿ ಹೇಳಿದ್ದೇವೆ. ಪ್ರೋಗ್ರಾಂ ಆಫ್ ವರ್ಕ್ಸ್‌ಗೆ ಸಂಬಂಧಪಟ್ಟಂತೆ ಒಂದು ಪಟ್ಟಿ ಮಾಡುತ್ತಾರೆ. ಪಟ್ಟಿಯಲ್ಲಿ ಸೇರಿದ್ದರೆ ಇವತ್ತಲ್ಲ ನಾಳೆ ಆ ಕೆಲಸ ಆದೇ ಆಗುತ್ತದೆ. ಈ ವಿಚಾರದಲ್ಲಿ ಕೂಡ ಕ್ರಮ ತೆಗೆದುಕೊಳ್ಳುತ್ತೇನೆ. ಹಿಂದಿನ

ವರ್ಷಗಳಿಗಿಂತಲೂ ಹೆಚ್ಚಿನ ಕಾರ್ಯಕ್ರಮಗಳು, ಕಾಮಗಾರಿಗಳು ಈ ವರ್ಷದಲ್ಲಿ ಬೆಂಗಳೂರು ಕಾರ್ಪೊರೇಷನ್ ವತಿಯಿಂದ ಆಗಿದೆ. ರಾಜಾಜಿನಗರ ಕಾಂಪ್ಲೆಕ್ಸ್, ಹೋಲ್‌ಸೇಲ್ ಮಾರ್ಕೆಟ್ ಇವೆಲ್ಲಾ ಆಗಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಹೋದ ವರ್ಷದ್ದು ಹೇಳುತ್ತಿದ್ದೀರಿ.

ಶ್ರೀ ಎಂ ಚಂದ್ರಶೇಖರ್.—ಕಲಾಸಿಪಾಳ್ಯಂ ವೆಜಿಟಬಲ್ ಮಾರ್ಕೆಟ್ ೭ ವರ್ಷದಿಂದ ಹಾಗೆ ಇತ್ತು, ಈ ವರ್ಷ ಕಂಪ್ಲೀಟ್ ಮಾಡಿದ್ದೇವೆ. ಇನ್ನು ೧೮ ಪರಸೆಂಟ್ ಗ್ರಾಂಟ್‌ನಲ್ಲಿ ಪೌರ ಕಾರ್ಮಿಕರಿಗೆ ಮನೆಗಳನ್ನು ಕಟ್ಟುವ ವಿಚಾರದಲ್ಲಿ ಮತ್ತು ಹಾಸ್ಟಲುಗಳನ್ನು ಕಟ್ಟುವ ವಿಚಾರ ದಲ್ಲಿ ಬೆಂಗಳೂರು ನಗರದಲ್ಲಿ ಕೆಲಸ ಆಗಿದೆ. ಬೆಂಗಳೂರು ನೀರು ಸರಬರಾಜಿನ ಬಗ್ಗೆ ಹೇಳ ಬೇಕೆಂದರೆ ೧೯೮೧ ರಲ್ಲಿ ೨೯.೧೫ ಲಕ್ಷ ಜನಸಂಖ್ಯೆಗೆ ಈ ಒಂದು ಸಮಯದಲ್ಲಿ ಅರ್ಕಾವತಿ ಅಲ್ಲದೆ ಮೊದಲನೇಯ ಸ್ಟೇಜ್ ಕಾವೇರಿ ನೀರು ಇತ್ತು. ಈಗ ೧೯೮೩-೮೪ರಲ್ಲಿ ಬೆಂಗಳೂರು ನಗರದಲ್ಲಿ ೩೩ ಲಕ್ಷ ಜನಸಂಖ್ಯೆ ಇರಬಹುದು. ಈಗ ಎರಡನೇ ಸ್ಟೇಜಿನ ಹಂತ ಈ ವರ್ಷದಲ್ಲಿ ಕೊನೆಯಾಗು ತ್ತದೆ. ಆದ್ದರಿಂದ, ೪೩೫ ಮಿಲಿಯನ್ ಲೀಟರಸ್ ಪರ್ ಡೇ ಅದು ಬರುವಂತೆ ತಲಾ ೭೪ ಲೀಟರ್ಸ್ ಪರ್ ಡೇ ಬರುವಂಥ ವ್ಯವಸ್ಥೆ ಇದೆ. ೧೯೮೩-೮೪ ಸೆಕೆಂಡ್ ಸ್ಟೇಜ್ ಪೂರ್ತಿ ಆದಮೇಲೆ ಈ ಹತ್ತು ವರ್ಷಗಳಲ್ಲಿ ಜನಸಂಖ್ಯೆ ೭.೫, ೭.೬ರಷ್ಟು ಹೆಚ್ಚಾಗಿದೆ ಎಂದು ನೋಡಿದ್ದೇವೆ. ಬೆಂಗಳೂರು ನಗರದಲ್ಲಿ ಗ್ರೋತ್ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಇಂಡಸ್ಟ್ರಿಗಳನ್ನು ಹೊರಗೆ ಹಾಕುವುದ ರಿಂದ, ಮೇಜರ್ ಇಂಡಸ್ಟ್ರಿಗಳು ಇಲ್ಲಿ ಬರುವುದಿಲ್ಲ. ಸಣ್ಣ ಸಣ್ಣ ಕೈಗಾರಿಕೆಗಳು ಮಾತ್ರ ಬರುತ್ತವೆ. ಸುತ್ತಮುತ್ತ ೩೦-೪೦ ಮೈಲಿ ದೂರದಲ್ಲಿರುವ ನಗರವನ್ನು ಅಭಿವೃದ್ಧಿ ಮಾಡಿದರೆ ಕೈಗಾರಿಕೆಗಳು ಅಲ್ಲಿ ಹೋಗುತ್ತವೆ ಎಂಬ ಭಾವನೆಯ ಮೇಲೆ ಜನಸಂಖ್ಯೆ ಕಡಿಮೆಯಾಗುತ್ತದೆಂದು ಇದ್ದೇವೆ. ೧೯೯೧ಕ್ಕೆ ಬೆಂಗಳೂರು ನಗರದಲ್ಲಿ ೫೩.೭೪ ಲಕ್ಷ ಜನಸಂಖ್ಯೆ ಆಗಬಹುದು. ಎರಡನೇ ಹಂತದ ನೀರು ಕೊನೆ ಆಯಿತು ಎಂದರೆ, ೭೬ ಲೀಟರ್ಸ್‌ನಿಂದ ೪೬ ಲೀಟರ್ಸ್‌ಗೆ ಇಳಿಯುತ್ತದೆ ಆದ್ದರಿಂದ ಈಗ ಮೂರನೆಯ ಸ್ಟೇಜಿನಿಂದ ನೀರನ್ನು ತರಬೇಕೆಂದಿದ್ದೇವೆ. ಈ ಮೂರನೆಯ ಹಂತದ ನೀರು ಬಂತು ಎಂದರೆ, ಇವೊತ್ತು ಏನು ಪರಿಸ್ಥಿತಿ ಇದೆ. ೭೪ ಲೀಟರ್ಸ್ ಪ್ರತಿ ವ್ಯಕ್ತಿಗೆ ಪ್ರತಿ ದಿವಸ ಬರುತ್ತದೆ. ಅದು ೧೯೯೧ರಲ್ಲಿ ೫೩.೭೪ ಲೀಟರ್ಸ್ ನೀರು ಜನರಿಗೆ ಸಿಕ್ಕುತ್ತದೆ. ಇವೊತ್ತು ಎಷ್ಟು ಸಿಕ್ಕುತ್ತದೆ ಆಗಲೂ ಅಷ್ಟೇ ಸಿಕ್ಕುತ್ತದೆ. ೨೫೦ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ತೆಗೆದುಕೊಂಡು ಪೂರ್ತಿ ಮಾಡಿದರೂ ಇವೊತ್ತಿನ ಪರಿಸ್ಥಿತಿ ಅವೊತ್ತಿಗೂ ಅಷ್ಟೇ ಇರುತ್ತದೆ. ಬೆಂಗಳೂರು ನಗರದ ೩೦ ಲಕ್ಷ ಜನರಿಗೆ ೨೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಎಲ್ಲಿ ಸಾಧ್ಯ ಎನ್ನುವುದು ಅಭಿಪ್ರಾಯ ಇರುವುದರಿಂದ, ಇದರ ತೀವ್ರತೆಯನ್ನು ನಿಮ್ಮ ಗಮನಕ್ಕೆ ತರಬೇಕಾಗಿದೆ. ೨೦೦೧ಕ್ಕೆ ಬೆಂಗಳೂರು ನಗರದಲ್ಲಿ ೮೭ ಲಕ್ಷ ಜನಸಂಖ್ಯೆ ಆಗಬಹುದು. ಅವೊತ್ತಿನ ಅಂದಾಜನ್ನು ಲೆಕ್ಕ ಹಾಕಿದರೆ ತಲಾ ೩೦ ಲೀಟರ್ಸ್ ನೀರು ಬರಬಹುದು. ಅಂಡರ್‌ಗ್ರೌಂಡ್‌ಗೆ ೨೦-೨೫ ಗ್ಯಾಲನ್ಸ್ ಎಂದರೆ ಕೊನೆಯ ಪಕ್ಷ ಒಳಚರಂಡಿಯಲ್ಲಿ ನೀರು ಹರಿಯಬೇಕು. ಎಂದರೂ ಸಾಧ್ಯವಿಲ್ಲ. ಕೇವಲ ೩೦ ಲೀಟರ್ಸ್ ಬರುತ್ತದೆ. ಮೂರನೆಯ ಸ್ಟೇಜ್ ತೆಗೆದುಕೊಂಡರೆ ೫೦ ಲೀಟರ್ಸ್ ನೀರು ಬರುತ್ತದೆ ಬೆಂಗಳೂರಿನ ಜನಸಂಖ್ಯೆ ಕಡಿಮೆ ಮಾಡುತ್ತೇವೆಂದು ತೀರ್ಮಾನ ತೆಗೆದುಕೊಂಡರೆ ಕೇವಲ ೪.೩ ಪರ್‌ಸೆಂಟ್ ಹೆಚ್ಚಾಗುತ್ತದೆ. ಮೂರನೆ ಹಂತದ ಯೋಜನೆ ತೆಗೆದುಕೊಂಡರೂ ಕೂಡ ಸರಿಯಾಗಿ ನೀರನ್ನು ಒದಗಿಸುವುದು ಕಷ್ಟ ಇದೆ. ಈ ಬಗ್ಗೆ ಸರ್ಕಾರದ ಗಮನಕ್ಕೂ ಬಂದಿದೆ. ಇದಕ್ಕೂ ಸಂಪನ್ಮೂಲಗಳನ್ನು ಹಾಕಬೇಕಾಗಿ ಬಂದಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಯಗಚಿ ಬಗ್ಗೆ ಹೇಳಿದ್ದೇನೆ, ಅದರ ಬಗ್ಗೆ ಎಕ್ಸಾಮಿನ್ ಮಾಡಿ ದ್ದೀರಾ? ಏಕೆಂದರೆ, ಆ ವಿಚಾರದಲ್ಲಿ ರಿಟೈರ್ಡ್ ಚೀಫ್ ಇಂಜಿನಿಯರ್ ಒಂದು ಆರ್ಟಿಕಲ್ ಬರೆ ದಿದ್ದಾರೆ. ಅವರು ವಿಷಯ ತಿಳಿದುಕೊಂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಯಗಚಿ, ವಾಣಿವಿಲಾಸ್‌ಗೆ ಸೇಸಬೇಕೆಂದು ವಿಶ್ವೇಶ್ವರಯ್ಯ ನವರು ಮಾಡಿ ಅದನ್ನು ಬೇಡ ಎಂದು ಈಗ ಬಿಡಲಾಗಿದೆ. ಅದನ್ನು ಇನ್ನು ಬೆಂಗಳೂರಿಗೆ ತರಲಿಕ್ಕೆ ಆಗುತ್ತದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ತೊರೆಕಾಡನಹಳ್ಳಿಯಿಂದ ಪಂಪ್‌ಮಾಡಿ ದುಡ್ಡು ವೇಸ್ಟ್ ಮಾಡುವ ಬದಲು ಇದರ ಬಗ್ಗೆ ಎಕ್ಸಾಮಿನ್ ಮಾಡಿ ನೋಡಿ ಟೆಕ್ನಿಕಲಿ ಫಿಸಿಬಲ್ ಇದ್ದರೆ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಯಗಚಿ ನೀರಿನ ಬಗ್ಗೆ ಬೇರೆಯವರಿಗೆ ಅನಾನುಕೂಲ ಆಗದೇ ಇದ್ದರೆ ನೋಡೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ದೇವೇಗೌಡರು ಇದ್ದರೆ, ಇದರ ಬಗ್ಗೆ ಮಾತನಾಡಲಿಕ್ಕೆ ಬಿಡುತ್ತಾ ಇರಲಿಲ್ಲ. ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಅನೇಕ ವರ್ಷಗಳಿಂದ ಪ್ರಯತ್ನ ಇದೆ.

ಶ್ರೀ ಎಂ. ಚಂದ್ರಶೇಖರ್.—ಅರ್ಕಾವತಿ ತಿಪ್ಪಗೊಂಡನಹಳ್ಳಿ ನಾಲ್ಕನೆಯ ಸ್ಟೇಜ್, ಅದು ಸರ್ಕಾರದ ಪರಿಶೀಲನೆಯಲ್ಲಿದೆ. ತಿಪ್ಪಗೊಂಡನಹಳ್ಳಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆ ಇಲ್ಲದೆ ಇದ್ದರೆ ಉತ್ತಮವಾದ ಪರಿಸ್ಥಿತಿ ಇಲ್ಲ. ನಾಲ್ಕು ವರ್ಷಕ್ಕೆ ಒಂದು ಸಾರಿ ನೀರಿನ ಪ್ರಮಾಣ ಕಡಿಮೆಯಾಗಿ ಕೆರೆ ಒಣಗುವ ಪರಿಸ್ಥಿತಿ ಇದೆ ಎಂದು ಅಂಕಿ ಅಂಶದ ಪ್ರಕಾರ ಇದೆ. ಮಳೆಗಾಲದಲ್ಲಿ ಹೆಚ್ಚು ನೀರು ಬಂದು ಸೇರಿದರೆ, ಮತ್ತೊಂದು ಎಕ್ಸ್‌ಟ್ರಾ ಲೈನ್ ಹಾಕಿಕೊಂಡರೆ ಮೂರ್ನಾಲ್ಕು ವರ್ಷಕ್ಕೆ ಆಗುವಷ್ಟು ನೀರು ಬರಬಹುದು. ಅರ್ಕಾವತಿ ನಾಲ್ಕನೆಯ ಹಂತ ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನು ಈಗ ಇರುವ ಎರಡನೆಯ ಹಂತದ್ದು ಪ್ರಶ್ನೆ ಮುಖಾಂತರ ಉತ್ತರ ತಿಳಿಸಿದ್ದೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ೧೯೭೮-೭೯ರಲ್ಲಿ ಇದಕ್ಕೆ ಹದಿನಾರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರು. ಕಾವೇರಿ ಯೋಜನೆ ಬೇಗ ಆಗಲಿ ಎಂದು ಈ ಹಣವನ್ನು ಅದಕ್ಕೆ ಸೇರಿಸಿ ಇದನ್ನು ಮುಂದಕ್ಕೆ ಹಾಕಿದರು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಇನ್ನು ಕೊನೆಯದಾಗಿ ಬಿಡಿಎ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್—ನಾನು ಈಗಾಗಲೇ ಹೇಳಿದಂತೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದಲ್ಲದೆ ಕಳೆದವಾರ ಡಿವಿಜನ್ ವೈಸ್ ನಮ್ಮ ಸದಸ್ಯರನ್ನು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷರು ಒಂದು ಸಭೆಯನ್ನು ಕರೆದು ಚರ್ಚೆಮಾಡಲಾಗಿದೆ. ನೀರನ್ನು ಒದಗಿಸುವ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೀರೋ ಅವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಇನ್ನು ಬಿ. ಡಿ. ಎ.ನಲ್ಲಿ ಯೋಜನಾ ಕಾರ್ಯಕ್ರಮಗಳನ್ನು ಮುಖ್ಯವಾಗಿ ಇಟ್ಟುಕೊಳ್ಳಬೇಕಾಗಿತ್ತು. ಪ್ಲಾನಿಂಗ್ ಅಥಾರಿಟಿ ಮೊದಲು ಅನಂತರ ಸೈಟ್‌ಗಳ ಹಂಚಿಕೆಗೆ ಆದ್ಯತೆ ಇರಬೇಕಾಗಿತ್ತು. ಆದರೆ ಈ ಎರಡರಲ್ಲೂ ವಿಫಲವಾಗಿವೆ ಎಂದು ತಾವುಗಳು ಹೇಳುತ್ತಿದ್ದೀರಿ. ಇವತ್ತು ಅಲ್ಲಿ ಸರಿಯಾದ ಪ್ಲಾನಿಂಗ್ ಇಲ್ಲದೆ ಬೆಂಗಳೂರು ನಗರದಲ್ಲಿ ಬಡಾವಣೆಗಳ ಲೆಕ್ಕದಲ್ಲಿ ಆಗಬೇಕಾದ ರೀತಿ ನಿವೇಶನಗಳಿಗೂ ಮತ್ತು ಅವಶ್ಯಕತೆ ಇರತಕ್ಕ ನಿವೇಶನಗಳಿಗೂ ಅಜಗಜಾಂತರ ವ್ಯತ್ಯಾಸ ಇದೆ, ಒಂದಕ್ಕೆ ಹತ್ತರಷ್ಟು ಬೇಡಿಕೆ ಇದೆ. ಈಗಿನ ಪರಿಸ್ಥಿತಿಯಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡುವ ಪರಿಸ್ಥಿತಿ ಬಂದಿತೋ ಏನೋ ಎಂದು ನನಗನಿಸುತ್ತದೆ. ಭೂಸ್ವಾಧೀನ ವಿಚಾರದಲ್ಲಿ ಹೇಳುವುದಾದರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಮೊದಲು ೧ ಎಕರೆಗೆ ೧೨ ಸಾವಿರ ರೂಪಾಯಿಗಳು ಎಂದು ಮಾಡಿತ್ತು. ಅದನ್ನೂ ಕೂಡ ಪೂರ್ತಿ ಕೊಡುವುದಿಲ್ಲ. ಈಗ ಸ್ವಲ್ಪ ಹಣವನ್ನು ಕೊಟ್ಟು ಉಳಿದುದನ್ನು ಸರ್ಟಿಫಿಕೇಟ್ ಕೊಡುತ್ತೇವೆ. ಇದರಿಂದಾಗಿ ಅನೇಕ ಭೂಮಾಲೀಕರು ತಮ್ಮ ಜಮೀನನ್ನು ಬೇರೆಯವರಿಗೆ ಕೊಟ್ಟಿದರು. ಅದು ನೋಟಿಫಿಕೇಷನ್ ಕೂಡ ಆಗಿದೆ. ಆದರೂ ಕೂಡ ಆ ಜಮೀನನ್ನು ಪರಭಾರೆ ಮಾಡಿದ್ದಾರೆ. ಆ ಜಮೀನನ್ನು ಬೇರೆಯವರು ತೆಗೆದುಕೊಂಡಿದ್ದಾರೆ. ನಾವು ಅಕ್ವಿಸಿಷನ್‌ಗೆ ಹೋದಾಗ ಇದಕ್ಕೆ ಮೊದಲೇ ಅವರು ಮಾರಾಟ ಮಾಡಿದ್ದಾರೆ ಎನ್ನುವುದು ತಿಳಿಯಿತು. ಇವತ್ತು ಬೆಂಗಳೂರು ನಗರದಲ್ಲಿ ಭೂಮಿಯ ಬೆಲೆ ಹೆಚ್ಚು ಆಗಿದೆ. ಒಂದು ಎಕರೆಗೆ ೧ ಲಕ್ಷ ೫೦ ಸಾವಿರ ರೂಪಾಯಿಗಳವರೆಗೆ ಹೀಗೆ ಇವೆ. ಆದರೆ ಕೊಡುತ್ತಿರುವ ಪರಿಹಾರ ಸಾಲದು ಎನ್ನುವ ದೃಷ್ಟಿಯಿಂದ ಬಿ.ಡಿ.ಎ.ನವರು ಸಾಕಷ್ಟು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾತ್ತಿಲ್ಲ. ಇದನ್ನು ಗಮನಿಸಿ ಸರ್ಕಾರದವರು ಒಂದು ಸೂಚನೆಯನ್ನು ಬಿ. ಡಿ. ಎ.ನವರ ಮುಂದಿಟ್ಟಿದ್ದೇವೆ. ಅವರು ಅದನ್ನು ಪರಿಶೀಲಿಸುತ್ತಿದ್ದಾರೆ ಮತ್ತು ಇನ್ನೂ ಸ್ವಲ್ಪ ಹೆಚ್ಚಿನ ಹಣವನ್ನು ಭೂಮಾಲೀಕರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮಾರ್ಕೆಟ್ ವ್ಯಾಲ್ಯು ಏನಿದೆ ಅದರ ಪ್ರಕಾರ ಕೊಡುವುದಕ್ಕಾಗದಿದ್ದರೂ ಸಾರ್ವಜನಿಕರ ದೃಷ್ಟಿಯನ್ನು ನಾವು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ೨-೩ ಎಕರೆ ಜಮೀನು ಇಟ್ಟುಕೊಂಡಿರುವವರಿಂದ ನಾವು ತೆಗೆದು

ಕೊಂಡರೆ ಅವರಿಗೆ ಮುಂದೆ ಜೀವನಕ್ಕೆ ತೊಂದರೆಯಾಗಬಹುದೆಂದು ತಿಳಿದು ಜಮೀನು ತೆಗೆದುಕೊಳ್ಳುವಾಗ ನೆಗೋಸಿಯೇಷನ್ ಮುಖಾಂತರ ಪ್ರಯತ್ನ ಮಾಡಬೇಕೆಂದು ಹೇಳಿದ್ದೇವೆ.

ಇನ್ನೊಂದು ಸೂಚನೆ ಏನೆಂದರೆ, ಹಳ್ಳಿಯಲ್ಲಿ ಒಂದು ಕುಟುಂಬ ಇರುತ್ತದೆ. ಅವನ ಪಕ್ಕದ ಜಮೀನು ಅವರಿಗೇ ಸೇರಿದ್ದು ಅದನ್ನು ನಾವು ತೆಗೆದುಕೊಳ್ಳುತ್ತೇವೆ. ಆಮೇಲೆ ಅವನಿಗೆ ಅಥವಾ ಅವನ ಮನೆಯುವರಿಗೆ ನಿವೇಶನ ಬೇಕಾಗುತ್ತದೆ. ಆಗ ಅವರ ಮನೆಯುವರ ಹೆಸರೂ ಕೂಡ ನಮ್ಮ ಲಿಸ್ಟ್‌ನಲ್ಲಿ ಬರುತ್ತದೆ. ಆದ್ದರಿಂದ ಅವರ ಜಮೀನನ್ನು ತೆಗೆದುಕೊಳ್ಳುವಾಗ ಪ್ರತಿಯೊಂದು ಕುಟುಂಬಕ್ಕೂ ಒಂದೊಂದು ಸೈಟು ಮತ್ತು ಸ್ವಲ್ಪ ಹಣ ಕೊಡುತ್ತೇವೆಂದು ಹೇಳಿದರೆ ಅವರು ತಮ್ಮ ಜಮೀನನ್ನು ಕೊಡಬಹುದು. ಈ ದೃಷ್ಟಿಯನ್ನು ಇಟ್ಟುಕೊಂಡು ಮಾಡುವುದಾದರೆ ಅಲ್ಲಿ -ಬೇರೆ ರೀತಿಯ ಅವ್ಯವಹಾರ ಆಗುವುದನ್ನು ತಪ್ಪಿಸಬಹುದೆಂದು ಬಿ.ಡಿ.ಎ.ನವರಿಗೆ ಹೇಳಿದ್ದೇವೆ.

ಇನ್ನು ಎರಡನೆಯದಾಗಿ, ಕೆಲವರಿಗೆ ಬದಲಿ ನಿವೇಶನವನ್ನೂ ಕೊಡುವ ವಿಚಾರ ಇದೆ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ನನ್ನ ಗಮನಕ್ಕೆ ಒಂದು ಫೈಲ್ ಬಂದಿದ್ದು ಅದರಲ್ಲಿ ೨೫೦ ನಿವೇಶನಗಳನ್ನು ಇಂತಿಂಥವರಿಗೆ ಇಂತಿಂಥ ಕಡೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅವರ ಹತ್ತಿರ ಪೊಸಿಷನ್ ಸರ್ಟಿಫಿಕೇಟ್ ಕೂಡ ಇರುತ್ತದೆ. ಆದರೆ ಸ್ಥಳದಲ್ಲಿ ಹೋಗಿ ನೋಡಿದರೆ ಅಲ್ಲಿ ಬೇರೆಯವರು ಆ ಸ್ಥಳವನ್ನು ವಶಪಡಿಸಿಕೊಂಡಿರುತ್ತಾರೆ. ಇಲ್ಲದಿದ್ದರೆ ಅದು ಹಳ್ಳವಾಗಿರುತ್ತದೆ ಅಥವಾ ನೀರು ನಿಂತಿರುತ್ತದೆ. ಇಂಥ ಕಾರಣದಿಂದಾಗಿ ಅವನಿಗೆ ನಿವೇಶನ ಸಿಕ್ಕಿರುವುದಿಲ್ಲ. ಕೆಲವರು ನನ್ನ ಹತ್ತಿರ ಬಂದು, ನನಗೆ ಹತ್ತಾರು ವರ್ಷದಿಂದ ಒಂದು ನಿವೇಶನವೂ ಸಿಕ್ಕಿಲ್ಲ. ಆದ್ದರಿಂದ ಒಂದು ಬದಲಿ ನಿವೇಶನವನ್ನು ಕೇಳಿದರೂ ಕೊಡಲಿಲ್ಲವೆಂದು ಹೇಳುತ್ತಿರುತ್ತಾರೆ. ಇನ್ನೊಂದು ಹೊಸ ಬಡಾವಣೆಯನ್ನು ತೆಗೆದುಕೊಂಡು ಕೊಡೋಣವೆಂದರೆ ಅದೂ ಕೂಡ ಆಗುವುದಿಲ್ಲ. ಇನ್ನು ಕೆಲವು ರೀಕನ್ವೆ ಆಗಿರುವುದಿಲ್ಲ. ಕೆಲವರು ಸ್ವಲ್ಪ ರಸ್ತೆಗಳನ್ನು ಬಿಟ್ಟು. ತಾವೇ ಲೇಔಟ್ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಕೆಲವು ಬಡಾವಣೆಗಳಲ್ಲಿ ರಸ್ತೆಗಳು ಅಗಲವಾಗಿರುವುದಿಲ್ಲ. ಕೊಳಚೆ ಪ್ರದೇಶಗಳಲ್ಲಿರುವಂತೆ ರಸ್ತೆಗಳ ಮಧ್ಯದಲ್ಲೇ ಮನೆಗಳು ಬಂದಿರುತ್ತವೆ, ಅಂಥ ಸಂದರ್ಭದಲ್ಲಿ ಆ ಜಮೀನನ್ನು ಬಿ. ಡಿ. ಎ. ನವರು ತೆಗೆದುಕೊಂಡ ಅದನ್ನು ರೀಕನ್ವೆ ಮಾಡುವಾಗ ನೇರವಾಗಿ ರಸ್ತೆ ಮಾಡಬೇಕು, ಇಲ್ಲದಿದ್ದರೆ ಪೌರ ಸೌಲಭ್ಯಕ್ಕೋಸ್ಕರ ಸ್ವಲ್ಪ ಸ್ಥಳವನ್ನು ಕಾದಿರಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಈ ಜನರಿಗೆ ನಿವೇಶನಗಳನ್ನು ಕೊಡಬೇಕು, ಬದಲಿ ನಿವೇಶನಗಳನ್ನು ಕೊಡುವುದಕ್ಕೆ ಒಂದು ಲಿಸ್ಟ್ ಇದೆ.

ಇದಲ್ಲದೆ ಅನೇಕ ಸಾರಿ ಎಂದರೆ ೧೦–೧೫ ಸಾರಿ ಪ್ರಯತ್ನ ಮಾಡಿದರೂ ಕೂಡ ಸೈಟು ಸಿಕ್ಕಿರುವುದಿಲ್ಲ. ಇಂಥ ಸಮಸ್ಯೆಗಳು ಬಹಳ ಇವೆ.

ಶ್ರೀ ಕೆ. ಹೆಚ್. ರಂಗನಾಥ್.—ನಿಮ್ಮ ಲಾಟರಿ ಸಿಸ್ಟಂನಲ್ಲಿ ಅವನಿಗೆ ಕೊನೆಗೂ ನಿವೇಶನ ಸಿಕ್ಕದಿದ್ದರೆ ಅವನು ಏನು ಮಾಡಬೇಕು ?

ಶ್ರೀ ಎಂ. ಚಂದ್ರಶೇಕರ್.—ಈಗ ಬದಲಿ ನಿವೇಶನಗಳನ್ನು ಕೊಡುವಂಥಾದ್ದು ಸಾವಿರಾರು ಇವೆ. ಆದರೆ ಇದರಲ್ಲಿ ಬಗ್ಗೆ ನಿರ್ದಿಷ್ಟವಾಗಿ ಈ ರೀತಿಯಾಗಿಯೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮತ್ತು ಅನೇಕ ಸಾರಿ ಪ್ರಯತ್ನ ಮಾಡಿದರೂ ಸೈಟು ಸಿಕ್ಕದಿರುವವರಿದ್ದರೆ ಅವರಿಗೂ ಒಂದು ಸೈಟನ್ನು ಕೊಡಬೇಕಾಗುತ್ತದೆ. ಹಿಂದಿನ ಸರ್ಕಾರದಲ್ಲಿ ಕೆಲವರು ರಿಜಿಸ್ಟ್ರೇಷನ್ ಮಾಡಿಕೊಂಡಿರುವವರಿಗೂ ಕೊಡಬೇಕಾಗುತ್ತದೆ.

ಇನ್ನೊಂದು ವಿಚಾರ ಎಂದರೆ ಅನೇಕ ಖಾಸಗಿ ಬಡಾವಣೆಗಳಲ್ಲಿ ರೀಕನ್ವೆ ಮಾಡಲು ಮನವಿಗಳು ಬಂದಿವೆ. ಬನಶಂಕರಿ, ರಾಜಾಜಿನಗರ, ಹೆಣ್ಣೂರು, ಬಾಣಸವಾಡಿ ಮುಂತಾದ ರಸ್ತೆಗಳಲ್ಲಿ ೨೫x೩೦ ಅಡಿ ರಸ್ತೆಗಳನ್ನು ಬಿಟ್ಟು ಮನೆಗಳನು ಅನಧಿಕೃತವಾಗಿ ಕಟ್ಟಿಕೊಂಡಿದ್ದಾರೆ. ಅಂಥ ಪ್ರದೇಶವನ್ನು ಆಗಾಗ ರೀಕನ್ವೆ ಮಾಡಿದ್ದೇವೆ. ಇನ್ನು ಮುಂದೆ ಇಂಥಾದ್ದನ್ನು ರೀಕನ್ವೆ ಮಾಡುವಾಗ ಅವರಿಂದ ಬೆಟರ್‌ಮೆಂಟ್ ಛಾರ್ಜಸ್‌ನ್ನು ತೆಗೆದುಕೊಂಡು ಈ ಪ್ರದೇಶಗಳನ್ನೂ ಕೂಡ ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ರೀಕನ್ವೆ ಮಾಡದೇ ಇರುವುದರಿಂದ ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ದೀಪದ ವ್ಯವಸ್ಥೆ ಇಲ್ಲ, ಒಳಚರಂಡಿ ವ್ಯವಸ್ಥೆ ಇಲ್ಲ, ಅವರು ಒಳ್ಳೊಳ್ಳೆಯ ಮನೆಗಳನ್ನು ಕಟ್ಟಿಕೊಂಡಿದ್ದರೆ ಅದೊಂದು ದೊಡ್ಡ ಸಮಸ್ಯೆಯಾಗಿರುತ್ತದೆ. ಇದನ್ನು ತೀವ್ರವಾಗಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ.

ಮುಖ್ಯವಾಗಿ ಗ್ರೀನ್ ಬೆಲ್ಟ್ ವಿಚಾರದಲ್ಲಿ ಹೊಸದಾಗಿ ಸಿ.ಡಿ.ಪಿ. ಆಗಿರುವುದರಲ್ಲಿ ಅಂಕಿಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಡೆಲ್ಲಿ ಡೆವಲಪ್‌ಮೆಂಟಲ್ ಅಥಾರಿಟಿ ಪ್ರಕಾರ ಬೆಂಗಳೂರು ಮೆಟ್ರೋಪಾಲಿಟನ್ ಏರಿಯಾ ಎಂದು ೫೦೦ ಸ್ಕ್ವೇಯರ್ ಕಿಲೋಮೀಟರ್ ಆದರೂ ಇರಬೇಕೆಂದು ಇದ್ದರೂ, ೧೨ ಸಾವಿರ ಕಿಲೋಮೀಟರ್ ಡೆವಲಪ್ ಮಾಡುವುದು ಎಂದು ಅಂದಾಜು ಮಾಡಿ ೨೪೬ ಸ್ಕ್ವೇಯರ್ ಮೀಟರ್ ಗ್ರೀನ್ ಬೆಲ್ಟ್ ಉಳಿಸಬೇಕೆಂದು ತೀರ್ಮಾನವಾಗಿದೆ. ಎಂದರೆ ಶೇಕಡ ೪೨.೨ರಷ್ಟು ಗ್ರೀನ್ ಬೆಲ್ಟಾಗಿ ಬಿಡಬೇಕೆಂದು ಇದ್ದೇವೆ. ಇದಾದಮೇಲೆ ಕಾಂಪ್ರಹೆನ್‌ಸೀವ್ ಡೆವಲಪ್‌ಮೆಂಟ್ ೨೦೦೧ ವರ್ಷಕ್ಕೆ ನಗರ ಬೆಳೆದರೆ ಯಾವರೀತಿ ಇರುತ್ತದೆ ಎಂಬುದನ್ನು ಅಂದಾಜು ಮಾಡಿ ನೋಡಿದಾಗ ಆ ಸಮಯದಲ್ಲಿ ೫೦೦ ಸ್ಕ್ವೇಯರ್ ಮೀಟರ್ ಎಂದು ಇಟ್ಟುಕೊಂಡರೂ ಕೂಡ ಡೆವಲಪ್‌ಮೆಂಟ್ ಆಗಿರುವ ಏರಿಯಾ ಈಗಿನ ಪರಿಸ್ಥಿತಿಯಲ್ಲಿ ೩೩೯ ಸ್ಕ್ವೇಯರ್ ಕಿಲೋಮೀಟರ್ ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ತಿಳಿದುಬರುತ್ತದೆ. ಒಟ್ಟು ಗ್ರೀನ್ ಬೆಲ್ಟ್ ಎಂದು ತೀರ್ಮಾನವಾದುದರಲ್ಲಿ ಶೇಕಡಾ ೩೬ಕ್ಕೆ ಇವತ್ತು ಇಳಿದಿದೆ, ಗ್ರೀನ್‌ಬೆಲ್ಟ್ ಮಾಡಬೇಕೆಂದು ಪ್ರಾಮಾಣಿಕವಾದ ನಿರೀಕ್ಷೆಯನ್ನು ಇಟ್ಟುಕೊಂಡು ಕಾರ್ಯ ನಿರ್ವಹಿಸುವುದಕ್ಕಾಗಿ ಪರಿಷ್ಕೃತವಾಗಿ ಇರತಕ್ಕಂಥ ಸಿ.ಡಿ.ಪಿ. ಏನು ಆಗಿದೆ, ಅದು ಬೆಂಗಳೂರು ನಗರದ ಒಂದು ವಿಸ್ತೀರ್ಣವನ್ನು ನೋಡಿಕೊಂಡು ಈ ಮಹಾನಗರ ಮೆಟ್ರೋಪಾಲಿಟನ್ ಏರಿಯಾ ಎಂದು ಇದ್ದಾಗ್ಯೂ ಈವತ್ತಿನದಿವಸ ಇರುವ ಡೆವಲಪ್‌ಮೆಂಟ್ ಏರಿಯಾ ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಆಗಿ ನಗರ ಬೆಳೆದರೂ ಅದಕ್ಕೂ ಸೀಮಿತವಾಗಿ ಅಷ್ಟು ಪಾಪ್ಯುಲೇಷನ್‌ಗೂ ನಾವು ಯೋಜನೆ ಮಾಡಿದ್ದೇವೆ ಶೇಕಡಾ ೫೨ರಷ್ಟು ಗ್ರೀನ್‌ಬೆಲ್ಟ್ ಮಾಡುವ ಸಲುವಾಗಿ ಹೊಸದಾಗಿ ಸಿ.ಡಿ.ಪಿ. ರಚನೆ ಮಾಡಿದ್ದು ಇದನ್ನು ಮಾಡತಕ್ಕಂಥ ಜವಾಬ್ದಾರಿಯು ಅವರದಾಗಿದೆ. ಇನ್ನು ಮೇಲಾದರೂ ಗ್ರೀನ್‌ಬೆಲ್ಟ್ ಮಾಡುವುದಕ್ಕೆ ಸರ್ಕಾರ ಡೆಲ್ಲಿಯಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಅದರಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಗ್ರೀನ್ ಬೆಲ್ಟ್ ಎಂದರೆ ಅಗ್ರಿಕಲ್ಚರ್ ತೋಟಗಳನ್ನು ಉಳಿಸಿಕೊಳ್ಳುವುದು, ಪ್ರತಿಯೊಂದು ಹಳ್ಳಿಯಲ್ಲೂ ಇರತಕ್ಕಂಥ ಗ್ರೀನ್‌ಬೆಲ್ಟನ್ನು ಉಳಿಸಿಕೊಂಡು ಹೋಗುವಂಥ ಯೋಚನೆ ಮಾಡಿದ್ದೇವೆ ಮತ್ತೊಂದು ವಿಚಾರವೆಂದರೆ ಕಾಡನ್ನು ನಾವೇ ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಖುಷ್ಕಿ ಜಮೀನನ್ನು ಸರ್ಕಾರ ವಶಕ್ಕೆ ತೆಗೆದುಕೊಂಡು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬೇರೆ ರೀತಿಯಲ್ಲಿ ಕಾಡುಮರಗಳನ್ನು ಬೆಳೆಸುವ ಯೋಜನೆಯನ್ನು ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಲೀಸಿಂಗ್ ಪ್ರಶ್ನೆ ಬಂದಾಗ ಅವರೆ ರಿಜಿಸ್ಟರ್ ಮಾಡಿಕೊಂಡು ಬಿಡುತ್ತಾರೆ, ಈ ರೀತಿ ರಿಜಿಸ್ಟರ್ ಮಾಡುವುದನ್ನು ತಡೆಗಟ್ಟುವ ಪ್ರಯತ್ನ ಮಾಡಿದ್ದೀರಾ?

ಶ್ರೀ ಎಂ. ಚಂದ್ರಶೇಖರ್.— ತಾವು ಹೇಳಿದಹಾಗೆ ಲೀಸಿಂಗ್ ಬಗ್ಗೆ ಕಾನೂನು ಮಾಡಿದಲ್ಲಿ ಅಚಾತುರ್ಯವಾಗುತ್ತದೆ. ಸರ್ಕಾರಿ ಜಮೀನನ್ನು ಯಾವುದೇ ಕಾರಣದಿಂದ ಅನ್‌ಆತರೈಸ್ಡ್ ಆಗಿ ಒತ್ತುವರಿ ಮಾಡಿಕೊಂಡಿದ್ದಲ್ಲಿ, ಡೆಲ್ಲಿಯಲ್ಲಿ, ಬಾಂಬೆಯಲ್ಲಿ, ಮಹಾರಾಷ್ಟ್ರದಲ್ಲಿ ಜೈಲಿನಲ್ಲಿ ಸಜಾ ಆಗುವಂಥ ರೀತಿಯಲ್ಲಿ ಇಲ್ಲಿಯೂ ಮಾಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಇದನ್ನು ಪಂಚಾಯಿತಿಗಳ ವ್ಯಾಪ್ತಿಗೂ ಕೂಡ ಬರುವಂತೆ ಮಾಡಿ.

ಶ್ರೀ ಎಂ. ಚಂದ್ರಶೇಖರ್.— ಈರೀತಿ ಕಾನೂನು ಮಾಡಿದರೆ ಸಾರ್ವಜನಿಕರ ಜವಾಬ್ದಾರಿ ಇರುತ್ತದೆ, ಭಯವೂ ಇರುತ್ತದೆ. ಆಗ ಸರಿಯಾಗಿ ನೋಡಿಕೊಳ್ಳುತ್ತಾರೆ, ಸರ್ಕಾರದ ಉದ್ದೇಶವೂ ಕೂಡ ಅದೇ ಆಗಿದೆ.

'ಈಗ ಬಿ.ಡಿ.ಎ. ವಿಚಾರದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ' ಸ್ವಾಮಿ ಬೆಂಗಳೂರು ನಗರದಲ್ಲಿ ೪೫ ಖಾಸಗಿ ಗೃಹ ನಿರ್ಮಾಣ ಸಹಕಾರಿ ಸಂಘಗಳು ಇವೆ. ಈವತ್ತು ೪೫ ಸಂಘಗಳದು ಬೇಡಿಕೆ ಇರುತ್ತದೆ. ಸುಮಾರು ೪,೫೦೦ ಎಕರೆ ೪೫ ಖಾಸಗಿ ಗೃಹ ನಿರ್ಮಾಣ ಮಂಡಲಿಯದಾಗಿದ್ದು ಇದರಲ್ಲಿ ಅನೇಕ ಕೇಂದ್ರ ಸರ್ಕಾರದ ಉದ್ಯಮಿಗಳ ಸಹಕಾರಿ ಸಂಘಗಳು ಮತ್ತು ಬ್ಯಾಂಕ್ ನೌಕರರದು, ರಾಜ್ಯ ಸರ್ಕಾರದ ನೌಕರರದು ಹಾಗೂ ಡಿಫೆನ್ಸ್ ಈರೀತಿಯಾಗಿ ನ್ಯಾಯವಾಗಿ ಬೆನಿಯನ್ ಆಗಿ ಇರತಕ್ಕಂಥ ಅನೇಕ ಸಹಕಾರಿ ಸಂಘಗಳು ಇರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಒಂದು ಒಳ್ಳೆಯ ವಿಚಾರವೇನೆಂದರೆ ಸಹಕಾರ ಸಂಘಗಳ ಮುಖಾಂತರ ಅವರು ನಿವೇಶನಗಳನ್ನು ತೆಗೆದುಕೊಳ್ಳುವುದಲ್ಲದೆ, ಅವರಿಗೆ ಆರ್ಥಿಕವಾದಂಥ ಸಹಾಯವನ್ನು ನೀಡುವುದಕ್ಕಾಗಿ ಮತ್ತು ಮನೆಗಳನ್ನು ಕಟ್ಟಿಸಿಕೊಡುವುದಕ್ಕೋಸ್ಕರವಾಗಿ ಆಯಾ ಸಂಸ್ಥೆಗಳು ಸಹಾಯ ಮಾಡುತ್ತಿವೆ. ಇವರುಗಳ ಮುಖಾಂತರ ಹಂಚಿರ

ತಕ್ಕಂಥದ್ದು ಸುಮಾರು ೫೦ ಸಾವಿರ ಸೈಟುಗಳಿರುತ್ತವೆ. ೪,೫೦೦ ಎಕರೆಗಳಲ್ಲಿ ಸುಮಾರು ೫೦ ಸಾವಿರ ಸೈಟುಗಳನ್ನು ಹಂಚಿರತಕ್ಕಂಥದ್ದು ಸಂಘ ಸಂಸ್ಥೆಗಳ ಈ ಉದ್ದೇಶ ಒಳ್ಳೆಯದಾಗಿರುತ್ತದೆ. ಮತ್ತು ಅವರದೇ ಸಂಪನ್ಮೂಲಗಳು ಇರುವುದಕ್ಕೆ ಬಿ.ಡಿ.ಎ. ಏನು ಮಾಡಬೇಕೆಂದು ಯೋಚನೆ ಮಾಡ ಬೇಕಾಗಿರುತ್ತದೆ, ಅನೇಕ ವರ್ಷಗಳಿಂದ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಹಕಾರಿ ಸಂಘ ಗಳು ಬೆಂಗಳೂರು ನಗರದಲ್ಲಿ ವಸತಿ ಸೌಕರ್ಯವನ್ನು ಪೂರೈಸುತ್ತಾ ಇರುವುದರಿಂದ ಈಗಿನ ಸಿ.ಡಿ.ಪಿ. ನೋಡಿಕೊಂಡು, ಗ್ರೀನ್‌ಬೆಲ್ಟ್‌ನಲ್ಲಿ ಯಾವುದೇ ಸಂಸ್ಥೆಗಳು ಬಾರದೆ ಇದ್ದ ಪಕ್ಷದಲ್ಲಿ ಮತ್ತು ನ್ಯಾಯ ಬದ್ಧವಾಗಿ ಇದ್ದಾಗ ಅವರ ಆಸ್ತಿಗಳನ್ನು ಮತ್ತು ಅರ್ಜಿಗಳನ್ನು ಪರಿಶೀಲನೆ ಮಾಡಬೇಕು ಮತ್ತು ಒಂದುರೀತಿಯಾದ ತೀರ್ಮಾನವನ್ನೂ ಕೂಡ ತೆಗೆದುಕೊಳ್ಳಬೇಕಾಗುತ್ತದೆಂದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.— ತಮ್ಮಲ್ಲಿ ಒಂದು ವಿನಂತಿ ಏನೆಂದರೆ ಈ ಸೊಸೈಟಿಗಳು ಎಂದು ಏನು ಇರುತ್ತವೆ ದಯುವಿಟ್ಟು ಅದರ ಬಗ್ಗೆ ತಾವು ಬಹಳ ಹುಶಾರಾಗಿರಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಯಾವ ಯಾವ ಕಡೆಗಳಿಂದ ವಿಚಾರಣೆ ಮಾಡಬೇಕು, ಪರಿಸ್ಥಿತಿ ಏನು ಆದರ ಬಯೋಡಾಟಾ ತರಿಸಿಕೊಂಡು ವಿಚಾರಣೆ ಮಾಡುತ್ತೇವೆ. ಮಾಡುವ ಜವಾಬಾರಿ ನಮ್ಮದು ಇದೆ. ಈರೀತಿ ಮಾಡುತ್ತಿದ್ದಾರೆಂದು ನಮಗೂ ತಿಳಿದುಬಂದಿರುತ್ತದೆ. ಸೂಕ್ತವಾದ ನಿರ್ದೇಶನ ಕೊಡ ಕೊಟ್ಟಿದ್ದೇವೆ. ಇನ್ನು ನೆಲ್ಸಾನ್ ಫೈನಾನ್ಸ್ ಸ್ಕೀಮ್ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಇರುವ ಅಂಶ ವನ್ನು ತಿಳಿಸುತ್ತಿದ್ದೇನೆ. ಇದು ಸರಿಯಾದ ರೀತಿಯಲ್ಲಿ ಆಗುತ್ತಿದೆಯೋ ಇಲ್ಲವೋ ಎನ್ನುವುದನ್ನು ಪರಿ ಶೀಲನೆ ಮಾಡುತ್ತೇನೆ. ಏತಕ್ಕೆಂದರೆ ಇದು ಪಿ.ಎ.ಸಿ. ಮುಂದೆ ಇರುವುದರಿಂದ ಅವರು ಏನು ವರದಿ ಯನ್ನು ಕೊಡುತ್ತಾರೆ ಅದನ್ನು ಪರಿಶೀಲನೆ ಮಾಡಿ ಅದಕ್ಕೆ ತಕ್ಕಂಥ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಮೂಲಕ ತಮಗೆ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನು ಬಿ.ಡಿ.ಎ. ವೈಟ್ ಪೇಪರ್ ವಿಚಾರದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಬಹಳಷ್ಟು ಪ್ರಯತ್ನ ನಡೆಯುತ್ತಾ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಒಂದು ಶ್ವೇತಪತ್ರವನ್ನು ಹೊರಡಿಸುತ್ತೇವೆಂದು ಕಳೆದ ಸೆಷನ್ ನಲ್ಲಿ ಹೇಳಿದ್ದೀರಿ, ಮಾನ್ಯ ಅಧ್ಯಕ್ಷರೇ ಇದನ್ನು ಮಾಡದೇ ಹೋದರೆ ಸರ್ಕಾರಕ್ಕೆ ಕಳಂಕ ಬರುತ್ತದೆ. ಸರ್ಕಾರ ಎಲ್ಲೋ ತಪ್ಪುಗಳನ್ನು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಅನುಮಾನಕ್ಕೆ ಆಸ್ಪದ ವಾಗುತ್ತದೆ. ಆದ್ದರಿಂದ ಆದಷ್ಟು ತ್ವರಿತವಾಗಿ ಶ್ವೇತಪತ್ರವನ್ನು ಹೊರಡಿಸಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ದಿನಗೂಲಿ ಕೆಲಸಗಾರರ ಬಗ್ಗೆ ಮತ್ತು ಬಿನ್ನಿಪೇಟೆಯ ಬಗ್ಗೆ ತಾವು ಏನೂ ಹೇಳಲಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಶ್ವೇತಪತ್ರ ಹೊರಡಿಸುವ ಬಗ್ಗೆ ತಾವು ಈಗಾಗಲೇ ಬಹಳ ಕಾಲವನ್ನು ತೆಗೆದುಕೊಂಡಿದ್ದೀರಿ. ಬಿಡಿಎ ವ್ಯವಹಾರಗಳನ್ನು ನೋಡಿದಾಗ ಅಲ್ಲಿ ಕಾನೂನುಬಾಹಿರ ವಾಗಿ ಏನೇನೋ ನಡೆದಿದೆ, ಬಹಳ ಅನ್ಯಾಯಗಳು ನಡೆದಿವೆ ಎಂದು ತಾವು ಇಲ್ಲಿ ಪದೇ ಪದೇ ಹೇಳಿದ ಮೇಲೂ ಸಹ ಈ ಬಗ್ಗೆ ಒಂದು ಶ್ವೇತಪತ್ರವನ್ನು ಏತಕ್ಕೆ ಹೊರಡಿಸಲಿಲ್ಲ ? ತಪ್ಪು ಮಾಡಿರ ತಕ್ಕಂಥವರು, ಕಾನೂನಿಗೆ ವಿರುದ್ಧವಾಗಿ ದುರ್ಲಾಭ ಪಡೆದುಕೊಂಡಿರುವವರು ಈ ಕಡೆ ಇದ್ದಾರೆಂದು ತಾವು ಮೊದಲು ತಿಳಿದುಕೊಂಡಿದ್ದಿರಿ. ಆದರೆ ಈಗ ಅಂತಹ ಕೆಲವರು ಆ ಕಡೆಯೂ ಇದ್ದಾರೆಂದು ತಮಗೆ ತಿಳಿದ ಮೇಲೆ ಆದನ್ನು ಮುಚ್ಚಿಡಬೇಕೆಂದುಕೊಂಡು ಶ್ವೇತಪತ್ರವನ್ನು ಹೊರಡಿಸಲು ಹಿಂದೆಗೆಯುತ್ತಿದ್ದೀರಿ ಎನ್ನತಕ್ಕಂಥ ವರದಿ ಕೂಡ ಬಂದಿದೆ. ಕಾನೂನುಬಾಹಿರವಾಗಿ ಯಾರೇ ಅನುಕೂಲ ಪಡೆದಿರಲಿ, ತಾವು ಒಂದು ಕಾಲದ ಮಿತಿ ಇಟ್ಟು ಶ್ವೇತಪತ್ರವನ್ನು ಯಾವಾಗ ಮತ್ತು ಎಷ್ಟು ದಿವಸಗಳಲ್ಲಿ ಹೊರಡಿಸುತ್ತೀರಿ ಎಂಬುದನ್ನು ಹೇಳಬೇಕು ? ಈ ಇಲಾಖೆಯ ಬೇಡಿಕೆಗಳಿಗೆ ಉತ್ತರ ಕೊಡುವಾಗ ಇದರ ಬಗ್ಗೆಯೂ ಸಹ ಸರ್ಕಾರದ ಅಂತಿಮ ತೀರ್ಮಾನ ಹೊರಬರಬೇಕು.

ಶ್ರೀ ಎಂ. ಚಂದ್ರಶೇಖರ್.—ತಾ ೪–೧೨–೧೯೮೨ ರಿಂದ ತಾ|| ೧೦–೧–೮೩ರ ವರೆಗೆ ಅಲ್ಲಿ ಆಗಿರುವಂತಹ ಪ್ರಕರಣಗಳ ಬಗ್ಗೆ ವಿವರವಾದಂಥ ತನಿಖೆಯಾಗಬೇಕೆಂಬುದು ಇಲ್ಲಿ ಮುಖ್ಯವಾದಂಥ ಅಂಶ.

ಶ್ರೀ ಎಸ್. ಸೂರ್ಯನಾರಾಯಣರಾವ್.—೩೦ ಕೋಟಿ ರೂಪಾಯಿಗಳ ಎರಡು ಕಂಟ್ರಾಕ್ಟ್ ಕೊಟ್ಟಿರುವ ಬಗ್ಗೆಯೂ ಸಹ ತಾವು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಈ ವಿಚಾರ ಈಗ ಪಿಎಸಿ ಅವರ ಮುಂದಿದೆ. ಸ್ಪ್ರೇ ಸೈಟ್‌ಗಳನ್ನು ಹಂಚಲು ಕೆಲವು ನಿಯಮಗಳಿರುತ್ತವೆ. ಇದರಂತೆ ಒಂದು ಸಮಿತಿ ಮೂಲಕ ಇಂತಹ ಸೈಟ್‌ಗಳನ್ನು ಹಂಚಬೇಕಾಗುತ್ತದೆ. ಆದ್ದರಿಂದ ಈಗ ೨೨೫ ಇಂತಹ ಸೈಟ್‌ಗಳನ್ನು ಏನು ಹಂಚಲಾಗಿದೆ, ಇವುಗಳನ್ನು ಹಂಚುವಾಗ ನಿಯಮಗಳನ್ನು ಪಾಲನೆ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಸೈಟ್‌ಗಳನ್ನು ಪಡೆದವರಿಂದ ಸಮಜಾಯಿಷಿ ಕೇಳಿದ್ದೇವೆ, ಈಗ ಸಮಜಾಯಿಷಿ ಕೊಟ್ಟಂತಹ ಪತ್ರಗಳು ಬಂದಿವೆ ಈಗ ಸರ್ಕಾರ ಅವುಗಳನ್ನು ಒಂದೊಂದಾಗಿ ನೋಡುತ್ತಿದೆ. ಇನ್ನು ಎರಡನೆಯದು ರೀಕನ್ವೇಗೆ ಸಂಬಂಧಪಟ್ಟದ್ದು.

ಶ್ರೀ ಎಸ್. ಬಂಗಾರಪ್ಪ.—ತಾವು ಈ ತರಹ ಉತ್ತರ ಕೊಟ್ಟರೆ ಹೇಗೆ ? ತಾವು ಶ್ವೇತ ಪತ್ರವನ್ನು ಯಾವಾಗ ಹೊರಡಿಸುತ್ತೀರಿ ಎಂಬುದನ್ನ ಮಾತ್ರ ಹೇಳಿ ?

ಶ್ರೀ ಎಂ. ಚಂದ್ರಶೇಖರ್.—ನಾನು ಒಂದೊಂದಾಗಿ ಹೇಳುತ್ತಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನಿಮ್ಮ ಉತ್ತರದಿಂದ ನಮಗೆ ತೃಪ್ತಿಯಾಗಲಿಲ್ಲ. ಏಕೆಂದರೆ, ಈಗ ಯಾರಿಗೆ ಸೈಟ್‌ಗಳನ್ನು ಹಂಚಲಾಗಿದೆಯೋ ಅವರಿಂದಲೇ ಸಮಜಾಯಿಷಿ ಕೇಳಿದ್ದೀರಿ, ಇದು ಸರಿಯಾದ ಕ್ರಮವೇ ? ಕಾನೂನಿಗೆ ವಿರುದ್ಧವಾಗಿ ಯಾರು ಯಾರಿಗೆ ಸೈಟ್‌ಗಳನ್ನು ಕೊಡಲಾಗಿದೆ ಎಂಬ ಬಗ್ಗೆ ಸರ್ಕಾರದ ಹತ್ತಿರ ಮಾಹಿತಿ ಇಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ಸರ್ಕಾರದ ಹತ್ತಿರ ವಿವರಗಳಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಿದ್ದರೆ ಕಾನೂನು ಪ್ರಕಾರ ಯಾರಿಗೆ ಕೊಟ್ಟಿಲ್ಲವೋ ಅಂತಹವರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬಹುದಲ್ಲ ?

ಶ್ರೀ ಎಂ. ಚಂದ್ರಶೇಖರ್.—ಕೊಟ್ಟಿರುವ ಸೈಟನ್ನು ರದ್ದು ಮಾಡಬೇಕಾದರೂ ಸಹ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ನೋಟೀಸ್ ಕೊಡುವುದು ಎರಡನೇ ಪ್ರಶ್ನೆ. ಇಲ್ಲಿ ಸೈಟ್‌ಗಳ ಹಂಚಿಕೆ ನ್ಯಾಯಬಾಹಿರವಾಗಿದೆಯೋ ಅಥವಾ ನ್ಯಾಯಯುತವಾಗಿದೆಯೋ ಎಂಬುದನ್ನು ತಾವು ಹೇಳಬೇಕು. ಇದರ ನಂತರ ನೋಟೀಸ್ ಕೊಡುವ ಪ್ರಶ್ನೆ ಬರುತ್ತದೆ. ಈ ಮೊದಲು ಶ್ರೀ ಜಾಲಪ್ಪನವರು ಬಿಡಿಎ ಸದಸ್ಯರಾಗಿದ್ದರು. ಇದರ ಜೊತೆಗೆ ಶ್ರೀ ಲಕ್ಷ್ಮೀಸಾಗರ್ ಅವರಿಗೂ ಸಹ ಸೈಟ್ ಕೊಟ್ಟಿರುವ ವಿಚಾರ ಇದರಲ್ಲಿದೆ. ಆದ್ದರಿಂದ ಶ್ವೇತಪತ್ರ ಹೊರಡಿಸಿದರೆ ಇವರಿಗೆಲ್ಲಾ ತೊಂದರೆಯಾಗಬಹುದೆಂದುಕೊಂಡು ದಿನಗಳು ಹೋದಂತೆ ಇದನ್ನೆಲ್ಲಾ ಸರಿಪಡಿಸಬೇಕೆಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೇನೋ ಎನ್ನತಕ್ಕಂಥ ಅನುಮಾನ ಜನರಿಗೆ ಬರುತ್ತದೆ. ಆದ್ದರಿಂದ ಯಾರ ಮೇಲೋ ಗೂಬೆ ಕೂರಿಸುವುದಕ್ಕೆ ಬದಲು ಅಲ್ಲಿ ಯಾರು ಯಾರಿಂದ ಏನೇನು ಅನ್ಯಾಯ ನಡೆದಿದೆ ಎಂಬುದನ್ನು ಹೇಳಿಬಿಡಿ. ಅನಂತರ ನೀವು ನೋಟೀಸ್ ಕೊಡಲು ಪ್ರಯತ್ನ ಮಾಡಿ. ಈ ಬಿಡಿಎ ಪ್ರಕರಣವನ್ನು ನೀವು ಚುನಾವಣಾ ಸಮಯದಲ್ಲಿಯೂ ಉಪಯೋಗ ಮಾಡಿಕೊಂಡಿದ್ದೀರಿ. ಇದರ ನಂತರವೂ ಉಪಯೋಗ ಮಾಡಿಕೊಂಡಿದ್ದೀರಿ. ಜನರಲ್ಲಿರುವ ಸಂಶಯವನ್ನು ಹೋಗಲಾಡಿಸಲು ಸತ್ಯಾಂಶವನ್ನು ಹೊರಗಿಡಿ. ಇದಕ್ಕೆ ತಾವು ಏತಕ್ಕೆ ಹೆದರುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಆದಷ್ಟು ಬೇಗ ಶ್ವೇತಪತ್ರವನ್ನು ಈ ಸದನದ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂದರೆ ಯಾವಾಗ ಇಡುತ್ತೀರಿ ? ಈಗಾಗಲೇ ೮ ತಿಂಗಳು ಮುಗಿದಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನನಗೆ ತಿಳಿದು ಬಂದಂತೆ ಎಲ್ಲವೂ ತಯಾರಾಗಿದೆ. ಪ್ರಿಂಟ್ ಮಾತ್ರ ಆಗಬೇಕಾಗಿದೆ. ಆದ್ದರಿಂದ ಜಾಗ್ರತೆ ಪ್ರಿಂಟ್ ಮಾಡಿಸಿ ನಮಗೆ ಈ ಅಧಿವೇಶನ ಮುಗಿಯುವುದರೊಳಗಾಗಿ ಕೊಟ್ಟರೆ ಮುಂದಿನ ಅಧಿವೇಶನದೊಳಗಾಗಿ ಅದರಲ್ಲಿರುವುದನ್ನು ನೋಡಿಕೊಳ್ಳುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಯಾವಾಗ ಮಂಡಿಸಲಾಗುತ್ತದೆಂಬುದನ್ನು ಈಗ ಸಧ್ಯಕ್ಕೆ ನಾನು ಹೇಳುವ ಸ್ಥಿತಿಯಲ್ಲಿ ಇಲ್ಲ. ಈ ಬಗ್ಗೆ ನಾಳೆ ಈ ಮನೆಗೆ ತಿಳಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ವೇತಪತ್ರವನ್ನು ಪ್ರಕಟ ಮಾಡಿದರೆ ಸರ್ಕಾರಕ್ಕೆ ಏನಾದರೂ ಅನಾನುಕೂಲವಾಗುವುದಿದ್ದರೆ ಇಲ್ಲವೇ ಗೊಂದಲ ಸ್ಥಿತಿ ಉಂಟಾಗುವುದಿದ್ದರೆ ಅದನ್ನಾದರೂ ಹೇಳಿ?

ಶ್ರೀ ಎಂ. ಚಂದ್ರಶೇಖರ್.—ಗೊಂದಲ ಸ್ಥಿತಿ ಏನೂ ಇಲ್ಲ. ವಿಷಯಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡು ಜವಾಬ್ದಾರಿಯುತವಾಗಿ ಇಡೋಣವೆಂದಿದ್ದೇವೆ. ಅದನ್ನು ಪ್ರಕಟ ಮಾಡುತ್ತೇವೆ. ಅದರಲ್ಲಿ ಯಾವ ಅನುಮಾನವೂ ಬೇಕಾಗಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಅಧಿಕಾರಿಗಳೊಬ್ಬರ ವರ್ಗದ ಬಗ್ಗೆ ತಾವು ಏನೂ ಹೇಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಅದು ಸಣ್ಣ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ಅದು ಸಣ್ಣ ವಿಚಾರವಲ್ಲ. ಕಂಟ್ರಾಕ್ಟರ್‌ಗೆ ಬಡ್ಡಿ ಇಲ್ಲದೆ ಒಂದು ಕೋಟಿ ರೂಪಾಯಿಗಳನ್ನು ಅಡ್ವಾನ್ಸ್ ರೂಪದಲ್ಲಿ ಕೊಡಲು ಸಾಧ್ಯವಿಲ್ಲವೆಂದು ಬಿ.ಡಿ.ಎ. ಫೈನಾನ್ಸಿಯಲ್ ಮೆಂಬರ್ ಹೇಳಿದ್ದರಿಂದ ತಾವು ವರ್ಗ ಮಾಡಿದ್ದೀರಿ. ಅವರು ಇರುವಂತಹ ರೂಲ್ಸ್‌ನ್ನು ಕೋಟ್ ಮಾಡಿ. ಅದರ ಪ್ರಕಾರ ಕೊಡಲು ಬರುವುದಿಲ್ಲವೆಂದು ಹೇಳಿದ್ದಕ್ಕಾಗಿ ವರ್ಗ ಮಾಡಿದ್ದೀರಿ. ಇಲ್ಲಿ ನಾನು ಆ ಅಧಿಕಾರಿಗಳ ಹೆಸರನ್ನು ಹೇಳಬಯಸುವುದಿಲ್ಲ. ನಮ್ಮಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ. ಬಿ.ಡಿ.ಎ. ಮತ್ತು ರಾಜ್ಯದ ಹಿತದೃಷ್ಟಿಯಿಂದ ಸಲಹೆ ಕೊಡತಕ್ಕಂಥ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಇಂತಹ ಒಳ್ಳೆಯ ಅಧಿಕಾರಿಗಳನ್ನು ಕಾರಣ ತಿಳಿಸದೆ ಬೇರೆ ಕಡೆ ವರ್ಗ ಮಾಡುವುದು ಸರಿಯೇ? Where the matter involves severel crores of rupees if you say that the transfer of an Officer is a triveal matter, I am sorry, I am yet to understand that kind of argument.

ಶ್ರೀ ಎಂ.ಎಸ್. ಕೃಷ್ಣನ್.—ಅಧಿಕಾರಿಗಳನ್ನು ವರ್ಗ ಮಾಡುವಂತಹ ಅಧಿಕಾರ ನಿಮಗಿದೆ. ಆದರೆ ಅಧಿಕಾರಿಗಳ ಮೇಲೆ ಗೂಬೆ ಕೂರಿಸಿ ಬೇರೆ ಕಡೆಗೆ ವರ್ಗ ಮಾಡುವುದು ಸರಿಯಾದ ಕ್ರಮವಲ್ಲ.

ಶ್ರೀ ಎಂ. ಚಂದ್ರಶೇಖರ್.—ಈ ಕಾರಣಕ್ಕಾಗಿ ನಾವು ವರ್ಗ ಮಾಡಿಲ್ಲ. ಒಬ್ಬರನ್ನು ಒಂದು ಜಾಗದಲ್ಲಿ ಕೆಲವು ವರ್ಷಗಳ ಕಾಲ ಇಡುತ್ತೇವೆ. ಆನಂತರ ವರ್ಗ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ವಾದವೂ ಸರಿಯಲ್ಲ. ಬಡ್ಡಿ ಇಲ್ಲದೆ ಒಂದು ಕೋಟಿ ರೂಪಾಯಿಗಳನ್ನು ಏತಕ್ಕೆ ಕೊಡುತ್ತೀರಿ ಎಂದು ಕೇಳಿದ ಕಾರಣದಿಂದ ಇವರನ್ನು ವರ್ಗ ಮಾಡಿದ್ದು ಸರಿಯಾದ ಕ್ರಮವಲ್ಲ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರುಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ ಅವುಗಳನ್ನು ಗಮನದಲ್ಲಿಡಲಾಗುತ್ತದೆ. ಮಾನ್ಯ ಸದಸ್ಯರುಗಳು ನನ್ನ ಬೇಡಿಕೆಗೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಮಾತನಾಡುತ್ತಾ ಬೆಂಗಳೂರುನಗರ ಕಾರ್ಪೊರೇಷನ್‌ನಲ್ಲಿ ಪೌರಕಾರ್ಮಿಕರ ನೇಮಕಾತಿಯನ್ನು ಯಾವ ರೀತಿ ಮಾಡಿದ್ದಾರೆ. ೧೨೦೦ ಜನ ಪೌರಕಾರ್ಮಿಕರನ್ನು ನೇಮಕ ಮಾಡಿದ್ದಾರೆ? ದಿನಗೂಲಿಯ ಮೇಲೆ ಅಂಟಿಲ್ ಫರ್ದರ್ ಆರ್ಡರ್ಸ್ ಎಂದು ನೇಮಕ ಮಾಡಿದ್ದಾರೆ. ಇದರ ಔಚಿತ್ಯವೇನು? ಹಿಂದೆ ೧೬ ಸಾವಿರ ಜನ ಪೌರಕಾರ್ಮಿಕರ ಹುದ್ದೆಗೆ ಅರ್ಜಿ ಹಾಕಿಕೊಂಡಿದ್ದಾರೆ. ಅರ್ಜಿ ಹಾಕಿಕೊಂಡು ಇವರಿಗೆ ಇಂಟರ್‌ವ್ಯೂ ಕೂಡ ಆಗಿದೆ. ಲಿಸ್ಟ್ ಫೈನಲೈಸ್ ಕೂಡ ಆಗಿತ್ತು, ಫೈನಲೈಸ್ ಮಾಡಿ ಅಪಾಯಿಂಟ್‌ಮೆಂಟ್ ಮಾಡುವುದು ಕಾರ್ಪೊರೇಷನ್ ಕಮಿಷನರ್‌ಗೆ ಅಧಿಕಾರವಿತ್ತು. ಆ ಒಂದು ಪ್ರಪೋಸಲ್ ಏನಿತ್ತು ಅದನ್ನು ಇವರು ಮಾಡಿಲ್ಲ. ಈಗ ತಾತ್ಕಾಲಿಕವಾಗಿ ಅಪಾಯಿಂಟ್ ಮಾಡಬೇಕಾದರೂ ಹಿಂದಿನ ಲಿಸ್ಟ್ ಫೈನಲೈಸ್ ಆಗಬೇಕು. ಹಿಂದೆ ಯಾವ ಜನ ಇಂಟರ್‌ವ್ಯೂಗೆ ಬಂದಿದ್ದರು ಆ ಲಿಸ್ಟ್‌ನೊಳಗೆ ನೇಮಕಾತಿ ಮಾಡಬೇಕು. ಅದರ ಪ್ರಕಾರ ಅಡ್ಮಿನಿಸ್ಟ್ರೇಟರ್ ಕೂಡ ಹಿಂದಿನ ಅರ್ಜಿಗಳನ್ನು ಫೈನಲೈಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಆ ಒಂದು ರಿಕ್ರೂಟ್‌ಮೆಂಟ್ ಕಮಿಟಿಯೊಳಗೆ ಕಾರ್ಪೊರೇಷನ್ ಡೆಪ್ಯುಟಿ ಕಮಿಷನರ್ ಮತ್ತು ಅಡ್ಮಿನಿಸ್ಟ್ರೇಟರ್ ಅಧ್ಯಕ್ಷರಾಗಿದ್ದರು. ಅವರು ಲಿಸ್ಟ್ ಫೈನಲೈಸ್ ಮಾಡಿದ ಮೇಲೆ ತಾವು ೧೨೦೦ ಜನರನ್ನು ನೇಮಕ ಮಾಡತಕ್ಕಂತಹ ಅವಶ್ಯಕತೆ ಏನಿತ್ತು? ಎರಡನೆಯದಾಗಿ, ಇದೇ ಪ್ರಕಾರ ಸುಮಾರು ಕ್ಲಾಸ್–೧

ಪೋಸ್ಟ್‌ಗಳಾದ ಡಾಕ್ಟರ್ಸ್‌ಗಳು ಇಂಜಿನಿಯರ್ಸ್‌ಗಳು, ಕ್ಲಾರ್ಕ್‌ಗಳು, ವರ್ಕ್ಸ್ ಇನ್ಸ್‌ಪೆಕ್ಟರುಗಳನ್ನು ಕಮಿಷನರ್ ನೇಮಕ ಮಾಡಲಿಕ್ಕೆ ಏನು ಕಾರಣ? ಡಾಕ್ಟರುಗಳು ೧೦ ಜನ, ಅಸಿಸ್ಟೆಂಟ್ ಇಂಜಿನಿಯರ್‌ಗಳು ೨೦ ಜನ, ಕ್ಲಾರ್ಕ್‌ಗಳು ೩೭ ಜನ, ೩೫–೪೦ ಜನ ವರ್ಕ್ಸ್ ಇನ್ಸ್‌ಪೆಕ್ಟರುಗಳನ್ನು ತಾತ್ಕಾಲಿಕವಾಗಿ ಕಮಿಷನರ್ ನೇಮಕ ಮಾಡಲಿಕ್ಕೆ ಕಾರಣವೇನು? ನೇಮಕ ಮಾಡಿಕೊಳ್ಳಬಾರದೆಂದು ಹೆಚ್.ಯು.ಡಿ. ಸೆಕ್ರೆಟರಿಯವರು ಡಿ.ಒ. ಲೆಟರ್ ಬರೆದಿದ್ದರೂ ಅದನ್ನು ಉಲ್ಲಂಗಿಸಿ ನೇಮಕ ಮಾಡಲಿಕ್ಕೆ ಏನು ಕಾರಣ? Recruitment authority is a Committee under the Deputy Commissioner (Administration.)

ಬೆಂಗಳೂರು ನಗರ ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್ ಮತ್ತು ಕಮಿಷನರ್ ಈ ರೀತಿ ನೇಮಕ ಮಾಡಲಿಕ್ಕೆ ಅಧಿಕಾರವಿಲ್ಲ. ದಿನಗೂಲಿಯ ಮೇಲೆ ಕೆಲಸ ಮಾಡುವವರು ಇದ್ದರೂ ಸಹ ಎಂಪ್ಲಾಯ್‌ಮೆಂಟ್‌ನಿಂದ ಲಿಸ್ಟ್ ತರಿಸಿ ನೇಮಕ ಮಾಡುತ್ತಾರೆ. ಕಾನೂನನ್ನು ಉಲ್ಲಂಘನೆ ಮಾಡಿ ನೇಮಕ ಮಾಡತಕ್ಕ ಔಚಿತ್ಯವೇನು ಎಂದು ಮಾನ್ಯ ಧರ್ಮಸಿಂಗ್‌ರವರು ಕೇಳಿದ್ದಾರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. Then, regularisation of four high rise apartments *i.e.*, M/s Bhakatavaram Company, Rajath Enter prises, M/s Shariff and Bhatia—ಶ್ರೇಷ್ಠ ನ್ಯಾಯಾಲಯದವರು ಇದನ್ನು ಕೊಡಬಾರದು ಅಕ್ರಮವಾಗಿ ಕಟ್ಟಿದ್ದಾರೆಂದು ಇದ್ದರೂ ಕೂಡ ಈ ಕಮಿಷನ್‌ರವರು ಮುಖ್ಯ ಇಂಜಿನಿಯರ್‌ರವರ ಶಿಫಾರಸ್ಸು ಇಲ್ಲದೆ, ಕಾನೂನು ಇಲಾಖೆಯ ಶಿಫಾರಸ್ಸನ್ನು ಕೂಡ ಉಲ್ಲಂಘನೆ ಮಾಡಿಕೊಂಡು ಆಕ್ಯುಪೇಷನ್ ಸರ್ಟಿಫಿಕೇಟ್ ಕೊಟ್ಟದ್ದು ಇದೆಯೆ? ಕೊಟ್ಟಿದ್ದರೆ ಅವರಿಗೆ ಯಾವ ಅಧಿಕಾರವಿದೆ? ಇದು ಅಕ್ರಮವಾಗುವುದಿಲ್ಲವೆ? ಇಲ್ಲಿ ಕಾರ್ ಪಾರ್ಕಿಂಗ್ ಇನ್ನಿತರ ಫರ್ದರ್ ಕನ್‌ಸ್ಟ್ರಕ್ಷನ್‌ಗೆ ಕೂಡ ರಜತ್ ಎಂಟರ್‌ಪ್ರೈಸಸ್‌ಗೆ ಹುಕುಂ ಕೊಟ್ಟಿದ್ದಾರೆ. ಹೀಗಿರುವಾಗ ಅದು ಅನ್ ಆಥರೈಸ್ಡ್ ಆಗುವುದಿಲ್ಲವೆ? ಇದರ ಮೇಲೆ ಜ್ಯುಡಿಷಿಯಲ್ ಎನ್‌ಕ್ವಾಯಿರಿ ಆಗಬೇಕೆಂದು ಹೇಳಿದ್ದಾರೆ. ಶ್ರೇಷ್ಠ ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘನೆ ಮಾಡಿ ಫರ್ದರ್ ಕನ್‌ಸ್ಟ್ರಕ್ಷನ್‌ಗೆ ಅವಕಾಶ ಕೊಟ್ಟು ಆಕ್ಯುಪೇಷನ್ ಸರ್ಟಿಫಿಕೇಟ್ ಕೂಡ ಕೊಟ್ಟಿದ್ದಾರೆ, ಇದನ್ನೆಲ್ಲಾ ಮಾಡುವುದಕ್ಕೆ ಅವರಿಗೆ ಅಧಿಕಾರವಿತ್ತೆ? ಬೇಸ್‌ಮೆಂಟ್ ಫ್ಲೋರ್‌ನಲ್ಲಿ ಕಾರ್ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕಾಗಿತ್ತು. ಅದನ್ನು ಟೆನೆಂಟ್‌ಗೆ ಕೊಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆಕ್ಯುಪೇಷನ್ ಸರ್ಟಿಫಿಕೇಟ್ ಕೊಟ್ಟಂತಹ ಒಂದು ಕ್ರಮವನ್ನು ನಾವು ಪ್ರಶ್ನೆ ಮಾಡಿದ್ದೇವೆ, ಅದರ ಬಗ್ಗೆ ಜ್ಯುಡಿಶಿಯಲ್ ಎನ್‌ಕ್ವಾಯಿರಿ ಮಾಡಬೇಕೆಂದು ಕೇಳಿದ್ದೇವೆ. ಅದರ ಬಗ್ಗೆ ಯಾವ ಉತ್ತರವನ್ನು ಕೊಟ್ಟಿಲ್ಲ, ಇದರ ಬಗ್ಗೆ ತಾವೇನು ಹೇಳುತ್ತೀರಾ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ೧೨೦೦ ಪೌರ ಕಾರ್ಮಿಕರನ್ನು ಅವರು ಹೇಳಿದ ಹಾಗೆ ದಿನಗೂಲಿಯ ಮೇಲೆ ಈಗ ನೇಮಕ ಮಾಡಿಕೊಂಡಿದ್ದೇವೆ. ಖಾಯಂ ಮಾಡುವುದು ಬೇರೆ ವಿಚಾರ. ಈಗ ಇರತಕ್ಕ ಸಾವಿರ ಜನರಲ್ಲಿ ನಾನಾ ವರ್ಗದ ಜನ ಇದ್ದಾರೆ. ಎಲ್ಲರಿಗೂ ಪೌರಕಾರ್ಮಿಕರ ಕೆಲಸವನ್ನು ಕೊಟ್ಟಾಗ ಎಲ್ಲರೂ ಆ ಕೆಲಸ ಮಾಡುತ್ತಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಒಂದೆರಡು ತಿಂಗಳು ಯಾವರೀತಿ ಕೆಲಸ ಮಾಡುತ್ತಾರೆಂದು ನೋಡುತ್ತೇವೆ. ಈಗ ಆಯ್ಕೆಯಾಗಿರುವವರೆಲ್ಲರೂ ಕೂಡ ಪಟ್ಟಿಯಲ್ಲಿರತಕ್ಕವರು, ಹೊರಗಿನವರು ಯಾರೂ ಇಲ್ಲ. ಪ್ರತಿಯೊಬ್ಬರೂ ಕೂಡ ಪಟ್ಟಿಯಲ್ಲಿರುವವರು ಪ್ರತಿಯೊಬ್ಬರೂ ಕೂಡ ಪೌರಕಾರ್ಮಿಕರ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಾರೆಂದು ಹೇಳುವುದು ಕಷ್ಟ. ಹಿಂದಿನ ಕಾಲದಿಂದಲೂ ಈ ಕೆಲಸವನ್ನು ಹರಿಜನ–ಗಿರಿಜನರು ಮಾಡುತ್ತಿದ್ದರು. ಈಗ ಬೇರೆ ಜನ ಆ ಕೆಲಸ ಮಾಡುವುದಕ್ಕೆ ಸಿದ್ಧರಾಗಿದ್ದೇವೆ, ಬರುತ್ತೇವೆಂದು ಹೇಳುತ್ತಾರೆ. ನಿಯಮಗಳ ಪ್ರಕಾರ ನೇಮಕಾತಿ ಮಾಡುವಾಗ ಎಷ್ಟು ಮಾತ್ರ ಹೊಂದಿಕೊಂಡು ಕೆಲಸ ಮಾಡುತ್ತಾರೆಂದು ನೋಡಬೇಕು. ಆಯ್ಕೆಯಾಗಿರುವವರು ತಾತ್ಕಾಲಿಕವಾಗಿ ಕೆಲಸ ಮಾಡುತ್ತಾರೆ. ಆಯ್ಕೆಯಾಗಿರುವವರಲ್ಲಿ ಬಿ.ಸಿ.ಎಂ. ೨೭೦, ಬಿ.ಸಿ.ಟಿ. ೧೫೭ ಬಿ.ಟಿ. ೨೨, ಬಿ.ಎಸ್.ಟಿ. ೨೬, ಎಸ್.ಸಿ. ೪೭೨, ಎಸ್.ಟಿ. ೨೦, ಜಿ.ಎಂ. ೩೩ ಈ ರೀತಿ ೧ ಸಾವಿರ ಜನರನ್ನು ಪೌರಕಾರ್ಮಿಕರನ್ನಾಗಿ ನೇಮಕ ಮಾಡಲಾಗಿದೆ. ಎಲ್ಲಾ ವರ್ಗದವರು ಪೌರಕಾರ್ಮಿಕರ ಕೆಲಸ ಮಾಡುತ್ತೇವೆಂದು ಮುಂದೆ ಬಂದಿರತಕ್ಕದ್ದು ಇದೊಂದು ಹೊಸ ವಿಚಾರ. ಕಾರಣ ಇಷ್ಟೆ, ಇವತ್ತು ಬೆಂಗಳೂರು ನಗರದಲ್ಲಿ ನೌಕರಿ ಸಿಗುವುದು ಬಹಳ ಕಷ್ಟ. ಇವತ್ತಿನ ಪರಿಸ್ಥಿತಿಯಲ್ಲಿ ಜನರಲ್ ಮೆರಿಟ್‌ನವರು ಎಲ್ಲರೂ ಕೂಡ ಪೌರಕಾರ್ಮಿಕರ ಕೆಲಸ ಮಾಡಲಿಕ್ಕೆ ಬರುತ್ತೇವೆಂದಾಗ

ಅವರು ಎಷ್ಟು ಮಾತ್ರ ಹೊಂದಿಕೊಂಡು ಹೋಗುತ್ತಾರೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಏನೋ ಆತುರದಲ್ಲಿ ಸಂಬಳ ಬರುತ್ತದೆಂದು ಉದ್ಯೋಗ ಸಿಗುತ್ತದೆಂದು ಯಾವುದೋ ಒಂದು ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅವರು ನಿರುದ್ಯೋಗಿಗಳಾಗಿಯೇ ಇರುವ ಪ್ರಮೇಯವಿಲ್ಲ, ಅವರಿಗೆ ಕೆಲಸ ಕೊಡಬೇಕಾಗಿದೆ ಕೊಟ್ಟಿದ್ದೇವೆ. ಅವರು ಹೇಗೆ ಕೆಲಸ ಮಾಡುತ್ತಾರೆ ಅದನ್ನು ನೋಡಿಕೊಂಡು ಯಾರು ಪಟ್ಟಿಯಲ್ಲಿದ್ದಾರೆ ಅವರನ್ನೇ ಮುಂದುವರಿಸಿಕೊಂಡು ಹೋಗುತ್ತೇವೆ, ನಂತರ ಅವರನ್ನು ಖಾಯಂ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಪ್ಲೈ ಮಾಡಿದವರನ್ನು ಸೆಲೆಕ್ಟ್ ಮಾಡಿಕೊಂಡು ಇವತ್ತು ದಿನಗೂಲಿಯ ಮೇಲೆ ನೇಮಕ ಮಾಡುವಂತಹ ನೀತಿಯನ್ನು ಅನುಸರಿಸಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅಪ್ಲೈ ಮಾಡಿರುವವರನ್ನೇ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪೌರಕಾರ್ಮಿಕರನ್ನು ತೆಗೆದುಕೊಳ್ಳುವಾಗ ಬಹುತೇಕವಾಗಿ ಹರಿಜನರನ್ನು ತೆಗೆದುಕೊಳ್ಳುವಂತಹ ಸಂಪ್ರದಾಯವಿದೆ. ಈಗ ತಾವು ೧೨೦೦ ಜನಗಳಲ್ಲಿ ಹರಿಜನರನು ೪೭೨ ಜನರನ್ನು ಸೆಲೆಕ್ಟ್ ಮಾಡಿದ್ದೀರಿ. ಸೆಲೆಕ್ಷನ್ ಲಿಸ್ಟ್ ಕಂಪ್ಲೀಟ್ ಆಗಿರುವಾಗ ಹರಿಜನರನ್ನು ಅದರಲ್ಲಿ ಸೆಲೆಕ್ಟ್ ಆಗಿರುವಾಗ ಅದನ್ನು ಬಿಟ್ಟು ಪ್ರತ್ಯೇಕವಾಗಿ ದಿನಗೂಲಿಯ ಮೇಲೆ ಅಪಾಯಿಂಟ್ ಮಾಡತಕ್ಕ ಅವಶ್ಯಕತೆ ಏನಿತ್ತು?

ಶ್ರೀ ಎಂ. ಚಂದ್ರಶೇಖರ್.—ಪೌರಕಾರ್ಮಿಕರಾಗಿ ಹರಿಜನರು-ಗಿರಿಜನರು ಅವರೇ ಇರಬೇಕೆ? ಬೇರೆಯವರು ಕೂಡ ಆ ಕೆಲಸ ಮಾಡುತ್ತೇವೆಂದು ಹೇಳಿದಾಗ ಬೇಡವೆಂದು ಹೇಳುತ್ತೀರಾ? ಬೇರೆ ಜನ ಸಹ ಆ ಕೆಲಸ ಮಾಡುವುದಕ್ಕೆ ಸಿದ್ಧರಾಗಿದ್ದೇವೆ ಬರುತ್ತೇವೆ ಎಂದಾಗ ನಿಯಮಗಳ ಪ್ರಕಾರ ಮಾಡಿದ್ದೇವೆ. ಅವರು ಕೂಡ ಬರುತ್ತೇವೆ ಅಂದಾಗ ಅವರನ್ನು ನೇಮಕ ಮಾಡಿದ್ದೇವೆ. ಭಕ್ತಾವರ್ ಕಂಪೆನಿಯ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಸುಪ್ರೀಂಕೋರ್ಟಿನಲ್ಲಿ ಇದರ ಬಗ್ಗೆ ಒಂದು ತೀರ್ಮಾನವಾಗಿದೆ. ಏನೆಂದರೆ ಮೂರು ಫ್ಲೋರ್‌ಗಳವರೆಗೂ ಕಟ್ಟಬೇಕಾಗಿದ್ದು ಅದರ ಮೇಲೆ ಹೆಚ್ಚುವರಿ ಫ್ಲೋರ್‌ಗಳನ್ನು ಕಟ್ಟಲಿಕ್ಕೆ ಏನು ಅವಕಾಶ ಕೊಟ್ಟಿದ್ದಾರೆ, ಅದು ಒಂದು ಕಂಡಿಷನ್ ಮೇಲೆ ಕೊಡಬೇಕೆಂದು ಹೇಳಿದ್ದಾರೆ, ಅದು ಈ ರೀತಿ ಇದೆ ಅದನ್ನು ಓದುತ್ತೇನೆ.

The appellants are further permitted to allow occupants to occupy the various flats on 4th. 5th, 6 h. 7th and 8th floors on such terms as they think fit either on lease or leave and licence or ownership basis or in any other capicity whatsoever but subject to their obtaining and filing an undertaking from each one of the occupants stating that he has been apprised of the pending litigation and that he will vacate the premises in his occupation without any objection whatsoever in case he is required to do so under the orders of the court and that he shall not claim any compensation for such vacating the premises in his occupation.

The Muncipal and other authorities dealing with sewerage, electricity, water and issuance of completion certificate shall not withhold the requisite connections and shall not withhold the issuance of completion certificate merely on the ground that this litigation is pending in this court of that there is a High court judgement in the matter. However the authorities would be at liberty to consider and dispose of all applications made in that behalf on their own merits in accordance with law irrespective of the pendency of the litigation. ಆ ಒಂದು ಸೂಚನೆ ಮೇಲೆ ನಾವು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ನಾನು ಕಡೆಯಲ್ಲಿ ಬಂದಿದ್ದೇನೆ. ನಾನು ಭಾಷಣ ಮಾಡಬೇಕಾಗಿತ್ತು. ಆದರೆ ಮಾಡಲಿಲ್ಲ. ಈಗ ಕ್ಲಾರಿಫಿಕೇಷನ್ಸ್ ಕೇಳುವುದಕ್ಕಾದರೂ ಅವಕಾಶ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರವನ್ನು ಹೇಳಿದ್ದಾರೆ. ಕ್ಲಾರಿಫಿಕೇಷನ್ಸ್ ಕೇಳುವುದಕ್ಕೂ ಕೂಡ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಮಾನ್ಯ ಮಂತ್ರಿಗಳು ಎಲ್ಲಾ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆಂದು ಹೇಳಿದರು. ಆದರೆ ಚಿಕ್ಕಮಾರೇನಹಳ್ಳಿಯ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ.

ಉಪಾಧ್ಯಕ್ಷರು.—ಮಾನ್ಯ ಎಂ. ಎಸ್. ಕೃಷ್ಣನ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅವರಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಾವು ಬೆಳಗ್ಗೆ ೯ ಗಂಟೆಗೆ ಬಂದು ಕುಳಿತು ಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ನಾನು ಕೂಡ ಬೆಳಗ್ಗೆ ೯ ಗಂಟೆಗೆ ಬಂದು ಕುಳಿತು ಕೊಂಡಿದ್ದೆ. ಆದರೆ ಈಗ ತಾನೆ ಊಟ ಮಾಡಿಕೊಂಡು ಬರುವುದಕ್ಕೆ ಹೋಗಿದ್ದೆ.

ಉಪಾಧ್ಯಕ್ಷರು.—ಪ್ರಸ್ಥಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

"೩೧ನೇ ಮಾರ್ಚಿ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಕ್ರಮಾಂಕ ೩೧ ಮತ್ತು ೩೨ ಹಾಗೂ ೨೬ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂಬ ಪ್ರಸ್ಥಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ."

ಪ್ರಸ್ತಾವವು ಅಂಗೀಕೃತವಾಗಿದೆ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ : ೩೧

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೩೯,೬೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೮.೨೯,೨೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : ೩೨

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚಿ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರಪಾಲಿಕೆಗಳು ಮತ್ತು ಪಂಚಾಯಿತಿಗಳಿಗೆ ಅನುದಾನಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೩೮,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ; ೨೬

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚಿ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೭.೨೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೩.೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಧಾರವಾಡ ನಗರದಲ್ಲಿನ ಕೊಳಚೆ ಪ್ರದೇಶಗಳ ಬಗ್ಗೆ

೪೦೮ (೨೨೦) ಶ್ರೀ ಎಸ್. ಆರ್. ಮೋರೆ (ಧಾರವಾಡ).—ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಧಾರವಾಡ ನಗರದಲ್ಲಿ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ?

ಆ) ತೇಜಸ್ವಿ ನಗರ ಮತ್ತು ಮೃತ್ಯುಂಜಯ ನಗರದ ನಡಾಫ್ ಗಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಇ) ಕೊಳಚೆ ನಿರ್ಮೂಲನಕ್ಕೆ ಕ್ರಮ ಜರುಗಿಸಲು ಸರ್ಕಾರದವರಿಗೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು .—

ಅ) ೧೭.

ಆ) ತೇಜಸ್ವಿ ಹೌಸಿಂಗ್ ಸೊಸೈಟಿ ಪಕ್ಕದಲ್ಲಿರುವ ಲಕುಮನಹಳ್ಳಿ ಕೊಳಚೆ ಪ್ರದೇಶವನ್ನು ೧೯೮೩-೮೪ ರಲ್ಲಿ ಅಭಿವೃದ್ಧಿಪಡಿಸುವ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.

ಮೃತ್ಯುಂಜಯ ನಗರದ ನಡಾಫ ಗಲ್ಲಿಯನ್ನು ಕೊಳಚೆ ಪ್ರದೇಶವೆಂದು ಘೋಷಿಸಿರುವುದಿಲ್ಲವಾದ್ದರಿಂದ ಈ ಪ್ರದೇಶದಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ತ್ವರಿತವಾಗಿ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ: ೪೦೯ (೨೨೧)

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದಂಥ ಉತ್ತರ ಬಂದಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮೇಲಿನ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಸರ್ಕಾರಿ ಮರಗಳನ್ನು ಕಡಿಯುತ್ತಿರುವುದು

೪೧೧ (೧೭೩) ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿಯಲ್ಲಿ ಸರ್ಕಾರಿ ಮರಗಳನ್ನು ಕಡಿದಿರುವ ಬಗ್ಗೆ ೧೯೭೮ನೇ ಸಾಲಿನಿಂದ ಈ ತಹಲ್‌ವರೆವಿಗೂ ತಹಸೀಲದಾರರಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು. ಆ ಪೈಕಿ ಎಷ್ಟು ಅರ್ಜಿಗಳನ್ನು ತಹಸೀಲ್‌ದಾರರು ಮುಂದಿನ ನಡವಳಿಕೆಗಾಗಿ ಪೋಲೀಸ್ ಇಲಾಖೆಗೆ ರವಾನಿಸಿದ್ದಾರೆ?